www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ರಿಕೆಟ್ ಸಂಭ್ರಮ

ಭಾರತ–ಪಾಕಿಸ್ತಾನದ ನಡುವೆ ನಡೆಯಲಿರುವ ಟ್ವೆಂಟಿ–20 ವಿಶ್ವಕಪ್ ಕ್ರಿಕೆಟ್ ಪಂದ್ಯಕ್ಕೂ ಮುನ್ನ ಅಹಮದಾಬಾದ್‌ನಲ್ಲಿ ಶನಿವಾರ ಕ್ರಿಕೆಟ್ ಪ್ರೇಮಿಗಳಿಬ್ಬರು ಮೈಮೇಲೆ ಉಭಯ ದೇಶಗಳ ರಾಷ್ಟ್ರಧ್ವಜದ ಬಣ್ಣಗಳನ್ನು ಬಳಿದುಕೊಂಡು ಗಮನ ಸೆಳೆದರು



ಕಂಪ್ಯೂಟರ್ ಉಚಿತ ಶಿಕ್ಷಣ

ಬೆಂಗಳೂರು: ಮಲ್ಲೇಶ್ವರದ ಕೆನರಾ ಬ್ಯಾಂಕ್ ಮಾಹಿತಿ ತಂತ್ರಜ್ಞಾನ ತರಬೇತಿ ಸಂಸ್ಥೆಯು ನಿರುದ್ಯೋಗಿ ಯುವಕ ಮತ್ತು ಯುವತಿಯರಿಗೆ ಕಂಪ್ಯೂಟರ್ ಉಚಿತ ತರಬೇತಿ ನೀಡಲಿದೆ.

ಅ.25ರಿಂದ ತರಬೇತಿ ಪ್ರಾರಂಭವಾಗಲಿದೆ. ಕನಿಷ್ಠ ಎಸ್ಸೆಸ್ಸೆಲ್ಸಿ ಉತ್ತೀರ್ಣರಾದವರು ತರಬೇತಿ ಪಡೆದುಕೊಳ್ಳಬಹುದು. ಆಸಕ್ತರು ಸಂಸ್ಥೆಯಲ್ಲಿ ನಡೆಯುವ ನೇರ ಸಂದರ್ಶನದಲ್ಲಿ ಭಾಗವಹಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಕೆನರಾ ಬ್ಯಾಂಕ್ ಮಾಹಿತಿ ತಂತ್ರಜ್ಞಾನ ತರಬೇತಿ ಸಂಸ್ಥೆ, ಚಿತ್ರಾಪುರ ಭವನ, ಮಲ್ಲೇಶ್ವರ. ಸಂಪರ್ಕ: 9448538107.

ರಾಜ್ಯದ ಅತಿ ಹಿಂದುಳಿದ ಸಮುದಾಯಗಳ ಮಠಾಧೀಶರ ಸಭೆ

‘ಹಿಂದುಳಿದ ವರ್ಗಕ್ಕೆ ಪಂಚಮಸಾಲಿ ಸೇರಿಸಿದರೆ ಹೋರಾಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಿಂದುಳಿದ ವರ್ಗಗಳ ಪ್ರವರ್ಗ 2 (ಎ)ಗೆ ಸೇರಿಸಬೇಕೆಂಬ ವೀರಶೈವ ಪಂಚಮಸಾಲಿ ಸಮುದಾಯದ ಒತ್ತಡಕ್ಕೆ ಮಣಿದರೆ ಸರ್ಕಾರಕ್ಕೆ ಬಿಸಿ ಮುಟ್ಟಿಸಬೇಕಾಗುತ್ತದೆ’ ಎಂದು ಕಾಂಗ್ರೆಸ್ ಮುಖಂಡ ಸಿ.ಎಸ್. ದ್ವಾರಕಾನಾಥ್ ಎಚ್ಚರಿಸಿದರು.

ರಾಜ್ಯದ ಅತಿ ಹಿಂದುಳಿದ ಸಮುದಾಯಗಳ ಮಠಾಧೀಶರನ್ನು ಒಳಗೊಂಡ ಸಭೆಯಲ್ಲಿ ಮಾತನಾಡಿದ ಅವರು, ‘ವೀರಶೈವ ಪಂಚಮಸಾಲಿ ಸಮಾಜದ ಮಠಾಧೀಶರು ಈ ಹೋರಾಟದ ಮುಂಚೂಣಿಯಲ್ಲಿ ವಹಿಸಿರುವುದು ದುರಾದೃಷ್ಟಕರ. ಅತೀ ಹಿಂದುಳಿದ ಸಮುದಾಯಗಳು ಆರ್ಥಿಕವಾಗಿ ಮತ್ತು ರಾಜಕೀಯವಾಗಿ ದುರ್ಬಲವಾಗಿವೆ ಎಂದು ಭಾವಿಸಿ ಸರ್ಕಾರ ಈ ಒತ್ತಡಕ್ಕೆ ಮಣಿದರೆ ಸುಮ್ಮನಿರುವುದಿಲ್ಲ’ ಎಂದರು.



ಸಭೆಯಲ್ಲಿ ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಹೊಸದುರ್ಗ ಕುಂಚಿಟಿಗ ಮಹಾಸಂಸ್ಥಾನದ ಶಾಂತವೀರ ಸ್ವಾಮೀಜಿ, ಭಗೀರಥ ಪೀಠದ ಪುರುಷೋತ್ತಮಾನಂದ ಪುರಿ ಸ್ವಾಮೀಜಿ, ಎಂ.ಸಿ. ವೇಣುಗೋಪಾಲ್ ಮತ್ತು ಸಿ.ಎಸ್. ದ್ವಾರಕಾನಾಥ್ ಭಾಗವಹಿಸಿದ್ದರು

‘ಎಲ್ಲಾ ರೀತಿಯಲ್ಲೂ ಬಲಿಷ್ಠವಾಗಿರುವ ಪಂಚಮಸಾಲಿ ಸಮುದಾಯದಲ್ಲಿ ಭೂಮಾಲೀಕರು, ಕೈಗಾರಿಕೋದ್ಯಮಿಗಳು, ಪ್ರಬಲ ರಾಜಕಾರಣಿಗಳಿದ್ದಾರೆ. ಕುಶಲಕರ್ಮಿ, ಕುಲ ಕಸುಬುಗಳನ್ನು ನಂಬಿ ಬದುಕುತ್ತಿರುವ ಅತೀ ಹಿಂದುಳಿದ ಸಮುದಾಯಗಳ ಜತೆ ಪ್ರಬಲ ಸಮುದಾಯವನ್ನು ಸೇರಿಸುವುದು ದೊಡ್ಡ ಅನ್ಯಾಯ’ ಎಂದರು.

ವಿಧಾನ ಪರಿಷತ್ತಿನ ಮಾಜಿ ಸದಸ್ಯ ಎಂ.ಸಿ. ವೇಣುಗೋಪಾಲ್, ‘ತಮಗೆ ಎದುರಾಗುತ್ತಿರುವ ಈ ಅಪಾಯವನ್ನು ಮನಗಂಡು ಅತಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯಿಂದ ಹೋರಾಟಗಳನ್ನು ಹಮ್ಮಿಕೊಳ್ಳಲಾಗಿದೆ. ಹೈಕೋರ್ಟ್‌ಗೂ ಮೊರೆ ಹೋಗಿದ್ದೇವೆ’ ಎಂದು ಹೇಳಿದರು.

‘ಅವಕಾಶ ವಂಚಿತ ಸಮುದಾಯಗಳನ್ನು ಪ್ರತಿನಿಧಿಸುವುದು ಈ ಜಾಗೃತ ವೇದಿಕೆಯ ಉದ್ದೇಶ. ಒಂದನೇ ಪ್ರವರ್ಗದಲ್ಲಿರುವ 95 ಜಾತಿಗಳು, ಎರಡನೇ ಪ್ರವರ್ಗದಲ್ಲಿರುವ 102 ಸಮುದಾಯಗಳು ಅತ್ಯಂತ ಅನ್ಯಾಯಕ್ಕೆ ಒಳಗಾಗಿವೆ. ಪಂಚಮಸಾಲಿಗಳ ಬೇಡಿಕೆ ಪರಿಶೀಲಿಸಲು ನ್ಯಾಯಮೂರ್ತಿ ಸುಭಾಷ್ ಅಡಿ ನೇತೃತ್ವದಲ್ಲಿ ಸಮಿತಿ ರಚಿಸಿರುವುದು ಅವೈಜ್ಞಾನಿಕ ಮತ್ತು ಅಸಂವಿಧಾನಿಕ’ ಎಂದರು.


ಜಾಗೃತ ವೇದಿಕೆಯ ಉಪಾಧ್ಯಕ್ಷ ರಮೇಶ್, ಕೆ.ಎಸ್. ದುಶ್ಯಂತ್, ನರಸಿಂಹ ಮೂರ್ತಿ, ಎಚ್.ಪಿ. ರಾಜಶೇಖರ್, ಎಸ್.ಆರ್. ಯಲ್ಲಪ್ಪ ಇದ್ದರು.

ಸುದ್ದಿ 2 ನಿಮಿಷ

ಸಿಐಎಸ್‌ಸಿಇ: 10,12ನೇ ತರಗತಿ ಆಫ್‌ಲೈನ್ ಪರೀಕ್ಷೆ ನಿಗದಿ

ನವದೆಹಲಿ (ಪಿಟಿಐ): ಕೌನ್ಸಿಲ್ ಫಾರ್ ಇಂಡಿಯನ್ ಸ್ಕೂಲ್ ಸರ್ಟಿಫಿಕೇಟ್ ಎಕ್ಸಾಮಿನೇಷನ್ (ಸಿಐಎಸ್‌ಸಿಇ) 10 ಮತ್ತು 12ನೇ ತರಗತಿಯ ಮೊದಲ ಅವಧಿಯ ಪರೀಕ್ಷೆಗಳನ್ನು ಆಫ್‌ಲೈನ್‌ನಲ್ಲಿ ನಡೆಸಲಿದ್ದು, ಪರಿಷ್ಕೃತ ವೇಳಾಪಟ್ಟಿಯನ್ನು ಶನಿವಾರ ಪ್ರಕಟಿಸಿದೆ.

10ನೇ ತರಗತಿಯ ಐಸಿಎಸ್‌ಇ ಪರೀಕ್ಷೆಗಳು ನವೆಂಬರ್ 29ರಿಂದ ಡಿಸೆಂಬರ್ 16ರವರೆಗೆ ಮತ್ತು 12ನೇ ತರಗತಿ ಪರೀಕ್ಷೆಗಳು (ಐಎಸ್‌ಸಿ) ನವೆಂಬರ್ 12ರಿಂದ ಡಿಸೆಂಬರ್ 20ರವರೆಗೆ ನಡೆಯಲಿವೆ ಎಂದು ಸಿಐಎಸ್‌ಸಿಇ ಮುಖ್ಯ ಕಾರ್ಯನಿರ್ವಾಹಕ ಗೆರ್ರಿ ಅರಾಥೂನ್ ತಿಳಿಸಿದ್ದಾರೆ.



‘ವಿದ್ಯಾರ್ಥಿಗಳು ಮತ್ತು ಪೋಷಕರು ಉಲ್ಲೇಖಿಸಿರುವ ಅನಿಯಮಿತ ವಿದ್ಯುತ್ ಸರಬರಾಜು, ನೆಟ್‌ವರ್ಕ್ ಮತ್ತು ಬ್ಯಾಂಡ್‌ವಿಡ್ತ್ ಸಮಸ್ಯೆಗಳ ಕಾರಣದಿಂದಾಗಿ ಆನ್‌ಲೈನ್ ಪರೀಕ್ಷೆಗಳನ್ನು ಕೈಬಿಡಲಾಗಿದೆ. ಪರೀಕ್ಷೆಗಳನ್ನು ಆಯಾ ಶಾಲೆಗಳಲ್ಲಿ ಆಫ್‌ಲೈನ್ ಮೋಡ್‌ನಲ್ಲಿ ನಡೆಸಲು ನಿರ್ಧರಿಸಲಾಗಿದೆ. ವಿವರವಾದ ಮಾರ್ಗಸೂಚಿಗಳನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು’ ಎಂದು ಅರಾಥೂನ್ ಹೇಳಿದರು.

ಶಿಕ್ಷಕರ ವರ್ಗ: ಪರಿಷ್ಕೃತ ವೇಳಾಪಟ್ಟಿ

ಬೆಂಗಳೂರು: 2020–21ನೇ ಸಾಲಿನ ಶಿಕ್ಷಕರ (ಪ್ರಾಥಮಿಕ ಹಾಗೂ ಪ್ರೌಢ) ವರ್ಗಾವಣೆಯ ಪರಿಷ್ಕೃತ ವೇಳಾಪಟ್ಟಿಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆ ಪ್ರಕಟಿಸಿದೆ.

2019– 20ನೇ ಸಾಲಿನಲ್ಲಿ ಕಡ್ಡಾಯ ಹಾಗೂ ಹೆಚ್ಚುವರಿ ವರ್ಗಾವಣೆಗೆ ಒಳಗಾದ ಪ್ರಾಥಮಿಕ ಶಿಕ್ಷಕರಿಗೆ ಆನ್‌ಲೈನ್ ಕೌನ್ಸೆಲಿಂಗ್ ಇದೇ 26ರಿಂದ, ಪ್ರೌಢ ಶಿಕ್ಷಕರಿಗೆ ಇದೇ 28ರಿಂದ ಆರಂಭವಾಗಲಿದೆ.

ಜೂನ್ 30ರಂದು ಹೊರಡಿಸಿದ್ದ ವರ್ಗಾವಣೆ ಅಧಿಸೂಚನೆಗೆ ನೀಡಿದ್ದ ತಡೆಯಾಜ್ಞೆಯನ್ನು ಕರ್ನಾಟಕ ಆಡಳಿತ ನ್ಯಾಯಮಂಡಳಿ (ಕೆಎಟಿ) ಇತ್ತೀಚೆಗೆ ತೆರವುಗೊಳಿಸಿತ್ತು. ಹೀಗಾಗಿ ಇದೀಗ ಪರಿಷ್ಕೃತ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದೆ.

ಐದು ವರ್ಷ ಪೂರ್ಣಗೊಳಿಸಿದ ಸಿಆರ್‌ಪಿ (ಸಮೂಹ ಸಂಪನ್ಮೂಲ ವ್ಯಕ್ತಿ) ಮತ್ತು ಬಿಆರ್‌ಪಿಗಳ (ಕ್ಷೇತ್ರ ಸಂಪನ್ಮೂಲ ವ್ಯಕ್ತಿ) ಕೌನ್ಸೆಲಿಂಗ್ ಮೊದಲ ಹಂತ ನ. 2ರಿಂದ, ಎರಡನೇ ಹಂತ ಜ. 18ರಿಂದ, ಮೂರು ವರ್ಷ ಪೂರ್ಣಗೊಳಿಸಿದ ಸಿಆರ್‌ಪಿ ಮತ್ತು ಬಿಆರ್‌ಪಿಗಳ ಕೌನ್ಸೆಲಿಂಗ್ ಮೊದಲ ಹಂತ ಡಿ. 2ರಿಂದ, ಎರಡನೇ ಹಂತ ಜ. 30ರಿಂದ ನಡೆಯಲಿದೆ.

ಜಿಲ್ಲೆಯೊಳಗಿನ ಕೋರಿಕೆ ವರ್ಗಾವಣೆ ಕೌನ್ಸೆಲಿಂಗ್ ಮೊದಲ ಹಂತದ ನ. 24ರಿಂದ ಡಿ. 2ವರೆಗೆ, ಎರಡನೇ ಹಂತ ಜ. 19ರಿಂದ 27ರವರೆಗೆ ನಡೆಯಲಿದೆ. ಜಿಲ್ಲೆಯೊಳಗಿನ ಪರಸ್ಪರ ವರ್ಗಾವಣೆಗೆ ಮೊದಲ ಹಂತ ನ. 19, ಎರಡನೇ ಹಂತ ಜ.19, ವಿಭಾಗದ ಒಳಗೆ ಒಂದು ಘಟಕದಿಂದ ಮತ್ತೊಂದು ಘಟಕಕ್ಕೆ ಡಿ. 16ರಿಂದ ಕೌನ್ಸೆಲಿಂಗ್ ನಡೆಯಲಿದೆ.

1857ಕ್ಕೂ ಮೊದಲೇ ನಡೆದಿತ್ತು ಕಿತ್ತೂರು ಸಂಗ್ರಾಮ: ಜಯಬಸವ ಮೃತ್ಯುಂಜಯ ಸ್ವಾಮೀಜಿ

‘ಸಿಪಾಯಿ ದಂಗೆ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದಲ್ಲಿ ಸಿಪಾಯಿ ದಂಗೆ ಗಿಂತ 32 ವರ್ಷಗಳು ಮೊದಲೇ ಕಿತ್ತೂರು ಸಂಗ್ರಾಮ ನಡೆದಿದೆ. ಹಾಗಾಗಿ, 1857ರಲ್ಲಿ ಬ್ರಿಟಿಷರ ವಿರುದ್ಧ ನಡೆದ ಹೋರಾಟ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವಲ್ಲ’ ಎಂದು ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಜಗದ್ಗುರು ಮಹಾಪೀಠದ ಜಯಬಸವ ಮೃತ್ಯುಂಜಯ ಸ್ವಾಮೀಜಿ ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನಗರದಲ್ಲಿ ಶನಿವಾರ ಹಮ್ಮಿಕೊಂಡ ಕಿತ್ತೂರು ರಾಣಿ ಚನ್ನಮ್ಮ ಜಯಂತ್ಯೋತ್ಸವ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ‘ಬ್ರಿಟಿಷರ ವಿರುದ್ಧ ನಡೆದ 1857ರ ದಂಗೆಯನ್ನು ಪ್ರಥಮ ಸ್ವಾತಂತ್ರ್ಯ ಹೋರಾಟ ಎಂದು ಸಂಸತ್ತಿನಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. 1824ರಲ್ಲಿಯೇ ಕಿತ್ತೂರು ರಾಣಿ ಚನ್ನಮ್ಮ ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದ್ದರು. ಹಾಗಾಗಿ, ಕಿತ್ತೂರು ಸಂಗ್ರಾಮವನ್ನು ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎಂದು ಮಾರ್ಪಾಡು ಮಾಡಬೇಕಿದೆ. ಈ ಬಗ್ಗೆ ರಾಜ್ಯ ಸರ್ಕಾರವೂ ಧ್ವನಿಯೆತ್ತಬೇಕು’ ಎಂದು ಆಗ್ರಹಿಸಿದರು.



ಕಿತ್ತೂರು ರಾಣಿ ಚನ್ನಮ್ಮ ಅವರ ಪ್ರತಿಮೆಗೆ ಜಯಬಸವ ಮೃತ್ಯುಂಜಯ ಸ್ವಾಮೀಜಿ ಮಾಲಾರ್ಪಣೆ ಮಾಡಿದರು. (ಎಡದಿಂದ ಬಲಕ್ಕೆ) ಇಲಾಖೆಯ ಜಂಟಿ ನಿರ್ದೇಶಕ ಬಲವಂತರಾವ್ ಪಾಟೀಲ್, ಎಸ್. ರಂಗಪ್ಪ ಹಾಗೂ ಬಿ.ಎಸ್. ನಟರಾಜ್ ಇದ್ದರು – ಪ್ರಜಾವಾಣಿ ಚಿತ್ರ

‘ಸಂಸತ್ತಿನ ಮುಂಭಾಗ ವಿಶ್ವಗುರು ಬಸವಣ್ಣನ ಪ್ರತಿಮೆ ಹಾಗೂ ಸ್ವಾಭಿಮಾನದ ಪ್ರತಿಕವಾದ ಚನ್ನಮ್ಮನ ಪ್ರತಿಮೆಯಿದೆ. ಕೇಂದ್ರ ಸರ್ಕಾರವು ಮುಂದಿನ ವರ್ಷದಿಂದ ಕಿತ್ತೂರು ರಾಣಿ ಚನ್ನಮ್ಮನ ಪ್ರತಿಮೆಗೂ ಮಾಲಾರ್ಪಣೆ ಮಾಡುವ ಮೂಲಕ ಜಯಂತಿಯನ್ನು ಆಚರಿಸಬೇಕು. ಆಗ ಇವರ ಬಗ್ಗೆ ಹಿಂದಿ ಭಾಷೆ ಬಳಸುವ ಜನರಿಗೂ ತಿಳಿಯಲಿದೆ’ ಎಂದರು.

ವಿಚಾರಧಾರೆ ಅಳವಡಿಸಿಕೊಳ್ಳಿ: ಕೊಪ್ಪಳದ ಕನ್ನಡ ಉಪನ್ಯಾಸಕ ಶಿವಾನಂದ ಮೇಟಿ, ‘ಭಾರತದ ಇತಿಹಾಸದಲ್ಲಿ ಬ್ರಿಟಿಷರ ವಿರುದ್ಧ ಮೊಟ್ಟ ಮೊದಲು ಹೋರಾಡಿದ ಮಹಿಳೆ ಚನ್ನಮ್ಮ. ಧೀರ ಮಾತೆಯ ವಿಚಾರ ಗಳನ್ನು ಅಳವಡಿಸಿಕೊಂಡು ಸಾಗಿದರೆ ದೇಶ ಇನ್ನಷ್ಟು ಬಲಿಷ್ಠವಾಗಲಿದೆ. ಒಬ್ಬ ಮಹಿಳೆಯಲ್ಲಿ ಎಷ್ಟು ಗಟ್ಟಿತನ ಇರುತ್ತದೆಯೋ, ಅಷ್ಟೇ ಹೃದಯವಂತಿಕೆಯೂ ಇರುತ್ತದೆ ಎನ್ನುವುದಕ್ಕೆ ಚನ್ನಮ್ಮ ಉತ್ತಮ ಉದಾಹರಣೆ. ಅವರ ಜಯಂತಿ ಯನ್ನು ಒಂದು ದಿನ ಆಚರಿಸಿ, ಮರೆಯಬಾರದು’ ಎಂದು ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಎಸ್. ರಂಗಪ್ಪ, ‘ಚನ್ನಮ್ಮ ಸ್ವಾಭಿಮಾನದ ಸಂಕೇತ. ದತ್ತು ಮಕ್ಕಳಿಗೆ ಉತ್ತರಾಧಿಕಾರದ ಹಕ್ಕಿಲ್ಲ ಎಂಬ ನೀತಿಯನ್ನು ವಿರೋಧಿಸಿ, ಬ್ರಿಟಿಷರ ವಿರುದ್ಧ ಸಮರ ಸಾರಿದರು. ಅವರು ನಾಡಿನ ಸಮಸ್ತ ಸ್ವಾತಂತ್ರ್ಯ ಹೋರಾಟಗಾರರ ಕಣ್ಮಣಿಯಾಗಿ ನಿಲ್ಲುತ್ತಾರೆ’ ಎಂದು ಹೇಳಿದರು.

‘ರಾಜಧಾನಿಯಲ್ಲಿ ಮಹಿಳಾ ಸೌಧ ಕಟ್ಟಿ’

‘ಮಹಿಳೆಯರು ಇಂದಿಗೂ ರಾತ್ರಿ ಹೊತ್ತು ನಿರ್ಭೀತಿಯಿಂದ ಓಡಾಡುವುದು ಕಷ್ಟ. ಬೆಂಗಳೂರಿನಲ್ಲಿ ದುಡಿಯುತ್ತಿರುವ ವಿವಿಧ ಪ್ರದೇಶದ ಮಹಿಳೆಯರಿಗೆ ಆಶ್ರಯ ನೀಡಲು ಚನ್ನಮ್ಮನ ಹೆಸರಿನಲ್ಲಿ ಮಹಿಳಾ ಸೌಧ ಕಟ್ಟಬೇಕು. ಅಲ್ಲಿ ಆಶ್ರಯದ ಜೊತೆಗೆ ಸ್ವಾವಲಂಬಿ ಜೀವನ ನಡೆಸಲು ಉದ್ಯೋಗದ ವಿವಿಧ ಕ್ಷೇತ್ರಗಳಲ್ಲಿ ತರಬೇತಿ ನೀಡಬೇಕು. ಈ ಬಗ್ಗೆ ಮುಖ್ಯಮಂತ್ರಿಗೆ ಮನವಿ ಮಾಡುವೆ. ಮುಂದಿನ ಅಕ್ಟೋಬರ್ 23ರೊಳಗೆ ಸರ್ಕಾರ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು’ ಎಂದು ಜಯಬಸವ ಮೃತ್ಯುಂಜಯ ಸ್ವಾಮೀಜಿ ಒತ್ತಾಯಿಸಿದರು.

‘ಚನ್ನಮ್ಮ ಅವರು ಎಷ್ಟೇ ಕಷ್ಟ ಬಂದರೂ ಬ್ರಿಟಿಷರಿಗೆ ಕಪ್ಪ ಕಾಣಿಕೆ ನೀಡಲಿಲ್ಲ. ಒಂದು ವೇಳೆ ಅವರು ಹೊಂದಾಣಿಕೆ ಮಾಡಿಕೊಂಡು, ಕಪ್ಪ ಕಾಣಿಕೆ ನೀಡಿದ್ದರೆ ಕಿತ್ತೂರು ಸಂಸ್ಥಾನ ಪಾಳು ಕೊಂಪೆಯಾಗುತ್ತಿರಲಿಲ್ಲ. ಮೈಸೂರು ಅರಮನೆಗಿಂತ ಹೆಚ್ಚು ಝಗಮಗಿಸುತ್ತಿತ್ತು. ಆದರೆ, ಅವರು ಹೇಡಿಯಾಗಿ, ಗುಲಾಮರಾಗಿ ಬದುಕಲು ಸಿದ್ಧವಿರಲಿಲ್ಲ. ಬ್ರಿಟಿಷರು ಕೂಡ ದೇಶವನ್ನು ಬಿಟ್ಟುಹೋಗುವಾಗ ಚನ್ನಮ್ಮನ ಬಗ್ಗೆ ಗುಣಗಾನ ಮಾಡಿದ್ದಾರೆ’ ಎಂದು ಹೇಳಿದರು.

ಬಿಜೆಪಿಯ ‘ರಿಯಾಕ್ಷನ್’ ಹೆಚ್ಚುತ್ತಿದೆ: ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಖ್ಯಮಂತ್ರಿಯ ‘ಆಕ್ಷನ್’ ಗೆ ಬಿಜೆಪಿಯ ಸಮಾಜಘಾತುಕ ಪಡೆಯ ‘ರಿಯಾಕ್ಷನ್’ ಹೆಚ್ಚುತ್ತಿದೆ’ ಎಂದು ಕಾಂಗ್ರೆಸ್ ಟ್ವೀಟ್ ಮಾಡಿದೆ.

‘ನಾವು ಕತ್ತಿ ಹಿಡಿದರೆ ನಿಮಗೆ ಶವ ಹೂಳಲು ಜಾಗ ಇರುವುದಿಲ್ಲ’ ಎಂದು ತುಮಕೂರಿನಲ್ಲಿ ವಿಶ್ವ ಹಿಂದೂ ಪರಿಷತ್ ರಾಜ್ಯ ಸಂಚಾಲಕ ಬಸವರಾಜ್ ಹೇಳಿಕೆ ನೀಡಿದ್ದರು.

‘ಪ್ರಜಾವಾಣಿ’ಯಲ್ಲಿ ಪ್ರಕಟವಾದ ಈ ವರದಿಯನ್ನೂ ಟ್ವೀಟ್ ಜೊತೆ ಟ್ಯಾಗ್ ಮಾಡಿ ಕಾಂಗ್ರೆಸ್ ಆಕ್ರೋಶ ವ್ಯಕ್ತಡಿಸಿದೆ.

‘ಸರ್ಕಾರಕ್ಕೆ ಈ ಸಮಾಜ ವಿರೋಧಿ ಸಂಘಟನೆಗಳ ನಿಯಂತ್ರಣ ಸಾಧ್ಯವಿಲ್ಲವೇ ಅಥವಾ ಸರ್ಕಾರವೇ ಇವರ ಬೆಂಬಲಕ್ಕೆ ನಿಂತಿದೆಯೇ ಎಂದು ಮುಖ್ಯಮಂತ್ರಿ ಸ್ಪಷ್ಟಪಡಿಸಬೇಕು’ ಎಂದೂ ಒತ್ತಾಯಿಸಿದೆ.

‘ರಾಮರಾಜ್ಯ ಎಂದು ಬೊಗಳೆ ಬಿಡುವ ಬಿಜೆಪಿ ಆಡಳಿತದಲ್ಲಿ ಜನಸಾಮಾನ್ಯರಿಗೆ ರಕ್ಷಣೆ ಇಲ್ಲವೇ’ ಎಂದೂ ಕಾಂಗ್ರೆಸ್ ಟ್ವೀಟ್‌ನಲ್ಲಿ ಪ್ರಶ್ನಿಸಿದೆ.



ಕೆಆರ್‌ಐಡಿಎಲ್ ಅಧ್ಯಕ್ಷ ಎಂ.ರುದ್ರೇಶ್ (ಬಲದಿಂದ ಎರಡನೆಯವರು) ಮತ್ತು ಜೆಎಸ್‌ಎಸ್ ಮಹಾವಿದ್ಯಾಪೀಠದ ಜಂಟಿ ನಿರ್ದೇಶಕ (ಟಿಇಡಿ) ಎಚ್.ಆರ್ ಮಹಾದೇವಸ್ವಾಮಿ ಮಾತುಕತೆಯಲ್ಲಿ ತೊಡಗಿದ್ದರು. (ಎಡದಿಂದ) ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಅಕಾಡೆಮಿಯ ಸಿವಿಲ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಬಿ.ಎಸ್.ಸಂತೋಷ್ ಮತ್ತು ಗಂಗಾಧರ ಸ್ವಾಮಿ ಇದ್ದರು –ಪ್ರಜಾವಾಣಿ ಚಿತ್ರ

‘ಹೊಸ ತರಬೇತಿ ನೀತಿ ಜಾರಿಗೆ ತೀರ್ಮಾನ’

ಬೆಂಗಳೂರು: ‘ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮದಲ್ಲಿ (ಕೆಆರ್‌ಐಡಿಎಲ್) ಹೊಸ ತರಬೇತಿ ನೀತಿ ಜಾರಿಗೊಳಿಸಲು ನಿರ್ಧರಿಸಲಾಗಿದೆ. ಇನ್ನೊಂದು ತಿಂಗಳಲ್ಲಿ ಈ ಕುರಿತ ಕರಡು ಸಿದ್ಧಪಡಿಸಲಾಗುತ್ತದೆ. ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಅಕಾಡೆಮಿ ತಜ್ಞರು ಇದಕ್ಕೆ ಕೈಜೋಡಿಸಲಿದ್ದಾರೆ’ ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕ ಗಂಗಾಧರ ಸ್ವಾಮಿ ತಿಳಿಸಿದರು.

ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಅಕಾಡೆಮಿ, ಸೆಂಟರ್ ಫಾರ್ ಇಂಟರ್‌ಡಿಸಿಪ್ಲಿನರಿ ರೀಸರ್ಚ್, ಸಿವಿಲ್ ಎಂಜಿನಿಯರಿಂಗ್ ವಿಭಾಗ ಮತ್ತು ಕೆಆರ್‌ಐಡಿಎಲ್ ಸಹಯೋಗದಲ್ಲಿ ಕೆಆರ್‌ಐಡಿಎಲ್‌ನ ಎಂಜಿನಿಯರ್‌ಗಳಿಗಾಗಿ ಹಮ್ಮಿಕೊಳ್ಳಲಾಗಿದ್ದ ತಾಂತ್ರಿಕ ತರಬೇತಿ ಕಾರ್ಯಕ್ರಮದಲ್ಲಿ ಶನಿವಾರ ಅವರು ಮಾತನಾಡಿದರು.

‘ನಿಗಮದಲ್ಲಿ ಕೆಲಸ ಮಾಡುವ ಎಂಜಿನಿಯರ್‌ಗಳಿಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ತರಬೇತಿ ನೀಡಲು ಉದ್ದೇಶಿತ ನೀತಿ ಸಹಾಯಕವಾಗಲಿದೆ. ನಮ್ಮ ಎಂಜಿನಿಯರ್‌ಗಳನ್ನು ವಿದೇಶಗಳಿಗೆ ಕಳುಹಿಸಿ ಅಲ್ಲಿ ಅಳವಡಿಸಲಾಗಿರುವ ವ್ಯವಸ್ಥೆಯ ಅಧ್ಯಯನ ಕೈಗೊಳ್ಳಲೂ ಈ ನೀತಿ ನೆರವಾಗಲಿದೆ’ ಎಂದರು.

ಕೆಆರ್‌ಐಡಿಎಲ್ ಅಧ್ಯಕ್ಷ ಎಂ.ರುದ್ರೇಶ್, ‘ಈ ಹಿಂದೆ ಕಟ್ಟುತ್ತಿದ್ದ ಕಟ್ಟಡ, ಸೇತುವೆ, ನಿರ್ಮಿಸಲಾಗುತ್ತಿದ್ದ ರಸ್ತೆಗಳು ಸುದೀರ್ಘ ಕಾಲ ಬಾಳಿಕೆ ಬರುತ್ತಿದ್ದವು. ಆ ಮಟ್ಟಿಗಿನ ಬದ್ಧತೆ ಆಗಿನ ಎಂಜಿನಿಯರ್‌ಗಳಿಗೆ ಇತ್ತು. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ನಿರ್ಮಾಣವಾದ 20 ವರ್ಷಗಳಲ್ಲೇ ಮನೆ ಹಾಗೂ ಕಟ್ಟಡಗಳು ಕುಸಿಯುತ್ತಿವೆ. ಕೆಲವೇ ತಿಂಗಳುಗಳಲ್ಲಿ ರಸ್ತೆಗಳು ಹಾಳಾಗಿ ಹೋಗುತ್ತಿವೆ. ಹೀಗಾಗಿ ಗುಣಮಟ್ಟಕ್ಕೆ ಆದ್ಯತೆ ನೀಡಬೇಕು’ ಎಂದು ಕಿವಿಮಾತು ಹೇಳಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಜಂಟಿ ನಿರ್ದೇಶಕ ಎಚ್.ಆರ್. ಮಹಾದೇವಸ್ವಾಮಿ, ‘ಜೆಎಸ್‌ಎಸ್ ಸಂಸ್ಥೆ ವತಿಯಿಂದ ಪ್ರತಿ ವರ್ಷ ಅಂದಾಜು 5 ಸಾವಿರ ಮಂದಿಗೆ ಕೌಶಲಯುಕ್ತ ಶಿಕ್ಷಣ ನೀಡಲಾಗುತ್ತಿದೆ’ ಎಂದು ಅವರು ತಿಳಿಸಿದರು.

ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಅಕಾಡೆಮಿಯ ಪ್ರಾಂಶುಪಾಲ ಮೃತ್ಯುಂಜಯ ವಿ.ಲಟ್ಟೆ ಇದ್ದರು.

ಉಜ್ವಲ ಅಕಾಡೆಮಿಯಿಂದ ₹20 ಲಕ್ಷ ವಿದ್ಯಾರ್ಥಿವೇತನ

ಬೆಂಗಳೂರು: ‘ಕೆಎಎಸ್, ಪಿಎಸ್‌ಐ, ಎಸ್‌ಡಿಎ, ಎಫ್‌ಡಿಎ ನೇಮಕಾತಿ ಪರೀಕ್ಷೆಗಳು ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುವ 120 ಬಡ ಅಭ್ಯರ್ಥಿಗಳಿಗೆ ವಿಜಯನಗರದ ಉಜ್ವಲ ಅಕಾಡೆಮಿಯು ₹20 ಲಕ್ಷ ಮೊತ್ತದ ವಿದ್ಯಾರ್ಥಿ ವೇತನ ನೀಡುವ ಯೋಜನೆ ಹಮ್ಮಿಕೊಂಡಿದೆ’ ಎಂದು ಅಕಾಡೆಮಿ ನಿರ್ದೇಶಕ ಕೆ.ಯು.ಮಂಜುನಾಥ್ ತಿಳಿಸಿದರು.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,‘ಬಡ ಪ್ರತಿಭಾವಂತರನ್ನು ಪ್ರೋತ್ಸಾಹಿಸಲು ಹಾಗೂ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ಮಾಡುವವರಿಗೆ ಉತ್ತೇಜನ ನೀಡಲು ಅಕಾಡೆಮಿ ಈ ವಿದ್ಯಾರ್ಥಿ ವೇತನದ ಯೋಜನೆ ಹಮ್ಮಿಕೊಂಡಿದೆ.’ ಎಂದರು.

‘ಅರ್ಹರನ್ನು ಆಯ್ಕೆ ಮಾಡಲು ಅ.31ರಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಆನ್‌ಲೈನ್ ಮೂಲಕ ನಡೆಸಲಿದ್ದೇವೆ. ಪರೀಕ್ಷೆಯು ಸಾಧನ ಅಕಾಡೆಮಿ ಮೊಬೈಲ್ ಆ್ಯಪ್‌ನಲ್ಲಿ ನಡೆಯಲಿದೆ. ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆಯುವ 10 ಮಂದಿಗೆ ತಲಾ ₹40 ಸಾವಿರ, 50 ಮಂದಿಗೆ ₹20 ಸಾವಿರ ಹಾಗೂ 60 ಮಂದಿಗೆ ತಲಾ ₹10 ಸಾವಿರ ಮೊತ್ತದ ವಿದ್ಯಾರ್ಥಿವೇತನ ಸಿಗಲಿದೆ. ಅಂಕಗಳ ಆಧಾರದ ಮೇಲೆ ಅವರಿಗೆ ಸಂಸ್ಥೆಯಿಂದ ಕೋಚಿಂಗ್ ವ್ಯವಸ್ಥೆಯೂ ಇರಲಿದೆ’ ಎಂದು ಹೇಳಿದರು.

ವಿಳಾಸ: ಉಜ್ವಲ ಅಕಾಡೆಮಿ, ಅತ್ತಿಗುಪ್ಪೆ ಮೆಟ್ರೊ ನಿಲ್ದಾಣದ ಹತ್ತಿರ, ಆರ್‌ಪಿಸಿ ಬಡಾವಣೆ, ವಿಜಯನಗರ. ಸಂಪರ್ಕ: 7795959079

ಹಿಂದೂಗಳ ಮೇಲೆ ಆಕ್ರಮಣ: ‘ಇಸ್ಕಾನ್’ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಂಗ್ಲಾದೇಶದ ಹಿಂದೂಗಳ ಮೇಲಿನ ಆಕ್ರಮಣ ಖಂಡಿಸಿ ನಗರದ ‘ಇಸ್ಕಾನ್’ ದೇವಸ್ಥಾನ ಆವರಣದಲ್ಲಿ ಭಕ್ತರು ಶನಿವಾರ ಪ್ರತಿಭಟನೆ ನಡೆಸಿದರು.

‘ಇಸ್ಕಾನ್ ಫಾರ್ ಬಾಂಗ್ಲಾದೇಶ’ ಹಾಗೂ ‘ವಿಶ್ವ ಕೀರ್ತನೆ ಪ್ರತಿಭಟನೆ’ ಹೆಸರಿನಲ್ಲಿ ವಿಶ್ವದಾದ್ಯಂತ ಏಕಕಾಲದಲ್ಲಿ ಪ್ರತಿಭಟನೆಗೆ ಕರೆ ನೀಡಲಾಗಿತ್ತು. ರಾಜಾಜಿನಗರದಲ್ಲಿರುವ ‘ಇಸ್ಕಾನ್’ ಆವರಣದಲ್ಲಿ ಸೇರಿದ್ದ 50ಕ್ಕೂ ಹೆಚ್ಚು ಭಕ್ತರು, ಕೈಗೆ ಕಪ್ಪು ಪಟ್ಟಿ ಕಟ್ಟಿಕೊಂಡು ಆಕ್ರೋಶ ಹೊರಹಾಕಿದರು.

ಘೋಷಣಾ ಫಲಕಗಳನ್ನು ಪ್ರದರ್ಶಿಸಿ, ಕೀರ್ತನೆ ಮೆರವಣಿಗೆ ನಡೆಸಿದರು. ಇಸ್ಕಾನ್ ದೇವಸ್ಥಾನದ ಅಧ್ಯಕ್ಷ ಮಧು ಪಂಡಿತ್ ದಾಸ್ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಮಹಿಳೆಯರೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.




ಬಾಂಗ್ಲಾದೇಶದ ಹಿಂದೂಗಳ ಮೇಲಿನ ಆಕ್ರಮಣ ಖಂಡಿಸಿ ನಗರದ ‘ಇಸ್ಕಾನ್’ ದೇವಸ್ಥಾನ ಆವರಣದಲ್ಲಿ ಭಕ್ತರು ಶನಿವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

‘ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ನಿರಂತರವಾಗಿ ದೌರ್ಜನ್ಯ ನಡೆ ಯುತ್ತಿದ್ದು, ಇದಕ್ಕೆ ಅಂತ್ಯ ಹಾಡಬೇಕಿದೆ. ಆ ದೇಶದಲ್ಲಿ ಅಲ್ಪಸಂಖ್ಯಾತರಾಗಿರುವ ಹಿಂದೂಗಳಿಗೆ ಸೂಕ್ತ ನ್ಯಾಯ ಒದಗಿಸಬೇಕು. ಹಿಂದೂಗಳ ಧಾರ್ಮಿಕ ಆಚರಣೆಗಳನ್ನು ಗೌರವಿಸಬೇಕು. ಆದರೆ, ಬಾಂಗ್ಲಾದಲ್ಲಿರುವ ನಮ್ಮ ದೇವಾಲಯಗಳಿಗೆ ಧಕ್ಕೆ ಆಗುತ್ತಿದೆ. ಭಕ್ತರನ್ನು ಸಾಯಿಸಲಾಗುತ್ತಿದೆ’ ಎಂದೂ ಪ್ರತಿಭಟನಕಾರರು ತಿಳಿಸಿದರು.

‘ವಿಗ್ರಹ ವಿರೂಪ’

‘ಬಾಂಗ್ಲಾದೇಶದಲ್ಲಿರುವ ಹಿಂದೂಗಳ ಮೇಲೆ ನಡೆದ ಅಪ್ರಚೋದಿತ ದಾಳಿಯಿಂದ ನಾವೆಲ್ಲ ದುಃಖಿತರಾಗಿದ್ದೇವೆ. ಅಲ್ಲಿಯ ಇಸ್ಕಾನ್ ಹಾಗೂ ಇತರೆ ದೇವಸ್ಥಾನಗಳನ್ನು ಧ್ವಂಸ ಮಾಡಿ, ವಿಗ್ರಹಗಳನ್ನು ವಿರೂಪಗೊಳಿಸಲಾಗಿದೆ. ಇಂಥ ಕೃತ್ಯ ಅಂತ್ಯವಾಗಬೇಕು’ ಎಂದು ಮಧು ಪಂಡಿತ್ ದಾಸ್ ಒತ್ತಾಯಿಸಿದರು.

‘ಬಾಂಗ್ಲಾ ಸರ್ಕಾರ, ಅಲ್ಪಸಂಖ್ಯಾತರ ರಕ್ಷಣೆಗೆ ಸೂಕ್ತ ವ್ಯವಸ್ಥೆ ಮಾಡಬೇಕು. ಭಾರತ ಸರ್ಕಾರವೂ ನೆರೆ ದೇಶದ ಜತೆಗೆ ಮಾತುಕತೆ ನಡೆಸಿ, ಹಿಂದೂಗಳನ್ನು ರಕ್ಷಿಸಬೇಕು’ ಎಂದೂ ಹೇಳಿದರು.



ನಗರದಲ್ಲಿ ಶನಿವಾರ ‘ಮೇಕರ್ಸ್ ಆಫ್ ಮಾಡರ್ನ್ ದಲಿತ ಹಿಸ್ಟರಿ’ ಪುಸ್ತಕವನ್ನು ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಲ್.ನಾರಾಯಣಸ್ವಾಮಿ (ಮಧ್ಯದವರು) ಬಿಡುಗಡೆ ಮಾಡಿದರು. ಆರ್‌ಎಸ್‌ಎಸ್‌ನ ಕ್ಷೇತ್ರೀಯ ಕಾರ್ಯವಾಹ ಎನ್. ತಿಪ್ಪೇಸ್ವಾಮಿ, ಲೇಖಕ ಗುರು ಪ್ರಕಾಶ್ ಪಾಸ್ವಾನ್ ಇದ್ದಾರೆ –ಪ್ರಜಾವಾಣಿ ಚಿತ್ರ

‘ಜಾರಿಯಾಗದ ಸಾಮಾಜಿಕ ಪ್ರಜಾಪ್ರಭುತ್ವ’

ಬೆಂಗಳೂರು: ‘ಸ್ವಾತಂತ್ರ್ಯ ದೊರೆತು 75 ವರ್ಷಗಳಾದರೂ ದೇಶದಲ್ಲಿ ಇನ್ನೂ ಸಾಮಾಜಿಕ ಪ್ರಜಾಪ್ರಭುತ್ವ ಸಾಧಿಸಿಲ್ಲ’ ಎಂದು ಹಿಮಾಚಲ ಪ್ರದೇಶದ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಲ್. ನಾರಾಯಣ ಸ್ವಾಮಿ ಬೇಸರ ವ್ಯಕ್ತಪಡಿಸಿದರು.

‘ಮಂಥನ ಬೆಂಗಳೂರು’ ಶನಿವಾರ ಆಯೋಜಿಸಿದ್ದ ‘ಮೇಕರ್ಸ್ ಆಫ್ ಮಾಡರ್ನ್ ದಲಿತ ಹಿಸ್ಟರಿ’ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘10 ವರ್ಷಗಳಲ್ಲಿ ಅಸ್ಪೃಶ್ಯತೆ ನಿವಾರಣೆಯಾಗುತ್ತದೆ ಎಂದು ಹಲವರು ಸಂವಿಧಾನ ರಚನೆ ಸಂದರ್ಭದಲ್ಲಿ ಪ್ರತಿಪಾದಿಸಿದ್ದರು. ಆದರೆ, ಪರಿಸ್ಥಿತಿಗಳು ಇಂದಿಗೂ ಬದಲಾಗಿಲ್ಲ’ ಎಂದರು.

‘ಸರ್ಕಾರಿ ಇಲಾಖೆಗಳಲ್ಲಿ ಹೊರಗುತ್ತಿಗೆ ಪದ್ಧತಿ ಅನುಸರಿಸಲಾಗುತ್ತಿದೆ. ಇದರಿಂದ, ಮೀಸಲಾತಿಗೆ ದೊಡ್ಡ ಪೆಟ್ಟು ಬೀಳುತ್ತಿದೆ. ಅಸ್ಪೃಶ್ಯತೆ ನಿರ್ಮೂಲನೆಯಲ್ಲಿ ಎಲ್ಲ ಸರ್ಕಾರಗಳು ವಿಫಲವಾಗಿವೆ. ಕರ್ನಾಟಕದ ಬಹುತೇಕ ಹಳ್ಳಿಗಳಲ್ಲಿ ಅಸ್ಪೃಶ್ಯತೆ ಆಚರಣೆಯಲ್ಲಿದೆ. ಪರಿಶಿಷ್ಟ ಜಾತಿಯವರಿಗೆ ದೇವಸ್ಥಾನಕ್ಕೆ ಪ್ರವೇಶ ನೀಡದ ಘಟನೆಗಳು ನಡೆಯುತ್ತಿವೆ. ನನಗೂ ಸಹ ಒಂದು ಸಂದರ್ಭದಲ್ಲಿ ದೇವಸ್ಥಾನಕ್ಕೆ ಪ್ರವೇಶ ನೀಡಿರಲಿಲ್ಲ. ಕೆಲವು ಹೊಟೇಲ್‌ಗಳಲ್ಲಿ ನಾಯಿಗಳಿಗೆ ಪ್ರವೇಶವಿದೆ. ಆದರೆ, ಪರಿಶಿಷ್ಟ ಜಾತಿಯವರಿಗೆ ಪ್ರವೇಶ ಇಲ್ಲ. ಸಾಮಾಜಿಕ ಮತ್ತು ಆರ್ಥಿಕ ಸಮಾನತೆ ಸಾಧಿಸದಿದ್ದರೆ ಪ್ರಜಾಪ್ರಭುತ್ವ ವಿಫಲವಾಗುತ್ತದೆ’ ಎಂದರು.

‘ಸಾಮೂಹಿಕ ಭೋಜನ ಮತ್ತು ಅಂತರ್ಜಾತಿ ವಿವಾಹಗಳನ್ನು ಉತ್ತೇಜಿಸಬೇಕು. ಇಂಥಕ್ರಮ ಗಳಿಂದ ಜಾತಿ ನಿರ್ಮೂಲನೆಗೆ ಯತ್ನಿಸಬೇಕು’ ಎಂದು ಸಲಹೆ ನೀಡಿದರು.

ಆರ್‌ಎಸ್‌ಎಸ್‌ನ ಕ್ಷೇತ್ರೀಯ ಕಾರ್ಯವಾಹ ಎನ್. ತಿಪ್ಪೇಸ್ವಾಮಿ, ‘ಅಸ್ಪೃಶ್ಯತೆ ಎನ್ನುವುದು ಮೇಲ್ವರ್ಗದ ಮಾನಸಿಕ ಸ್ಥಿತಿ. ಹೀಗಾಗಿ, ನಮ್ಮ ನಡವಳಿಕೆಯಲ್ಲಿ ಬದಲಾವಣೆಯಾಗಬೇಕಾಗಿದೆ. ಮೀಸಲಾತಿಗೆ ಆರ್‌ಎಸ್‌ಎಸ್ ಎಂದಿಗೂ ವಿರೋಧಿಸಿಲ್ಲ. ಅಸಮಾನತೆ ಇರುವವರೆಗೂ ಮೀಸಲಾತಿ ಇರಬೇಕು ಎಂದು ಸ್ಪಷ್ಟವಾಗಿ ಹೇಳಿದೆ. ಗಾಂಧೀಜಿ ಅವರು ಆರ್‌ಎಸ್‌ಎಸ್ ಶಿಬಿರಕ್ಕೆ ಭೇಟಿ ನೀಡಿದ್ದರು. ಶಿಬಿರದಲ್ಲಿ ಸಮಾನತೆ ಆಚರಣೆಯನ್ನು ಖುದ್ದಾಗಿ ಕಂಡಿದ್ದರು’ ಎಂದು ವಿವರಿಸಿದರು.

ಬಿಜೆಪಿ ರಾಷ್ಟ್ರೀಯ ವಕ್ತಾರ ಮತ್ತು ಪುಸ್ತಕದ ಲೇಖಕರಲ್ಲಿ ಒಬ್ಬರಾದ ಗುರು ಪ್ರಕಾಶ್ ಪಾಸ್ವಾನ್, ‘ಇತಿಹಾಸ ರಚನೆಯ ಸಂದರ್ಭದಲ್ಲಿ ಕೆಲವು ಇತಿಹಾಸಕಾರರು ದ್ವಂದ್ವ ನಿಲುವು ಅನುಸರಿಸಿದ್ದರಿಂದ ಹಲವು ಸಮಾಜ ಸುಧಾರಕರಿಗೆ ಮನ್ನಣೆ ದೊರೆತಿಲ್ಲ. ವಾಸ್ತವ ಸಂಗತಿಗಳನ್ನು ಮುಚ್ಚಿಡಲಾಯಿತು’ ಎಂದರು.

ಲೇಖಕ ಸುದರ್ಶನ ರಾಮಬದ್ರನ್ ಅವರು ಸಹ ‘ಮೇಕರ್ಸ್ ಆಫ್ ಮಾಡರ್ನ್ ದಲಿತ ಹಿಸ್ಟರಿ’ ಪುಸ್ತಕ ರಚನೆಯಲ್ಲಿ ಭಾಗಿಯಾಗಿದ್ದಾರೆ.

ಮಳೆಯಿಂದ ದಿಢೀರ್ ಬೆಲೆ ಏರಿಕೆ, ಗ್ರಾಹಕರಿಗೆ ಹೊರೆ

ತುಟ್ಟಿಯಾದ ಕೊತ್ತಂಬರಿ ಸೊಪ್ಪು: ಪ್ರತಿ ಕಟ್ಟಿಗೆ ₹45

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇತ್ತೀಚೆಗೆ ಸುರಿದ ಧಾರಾಕಾರ ಮಳೆಯಿಂದಾಗಿ ಸೊಪ್ಪಿನ ದರಗಳು ದಿಢೀರ್ ಏರಿಕೆ ಕಂಡಿವೆ. ಕೊತ್ತಂಬರಿ ಸೊಪ್ಪು ದುಬಾರಿಯಾಗಿದ್ದು, ಪ್ರತಿ ಕಟ್ಟಿಗೆ ₹45ರಂತೆ ಶನಿವಾರ ಮಾರಾಟವಾಗಿದೆ.

ಕಳೆದ ತಿಂಗಳಿನಲ್ಲಿ ಕೊತ್ತಂಬರಿ ಸೊಪ್ಪಿನ ದರ ನೆಲ ಕಚ್ಚಿತ್ತು. ಆಗ ಪ್ರತಿ ಕಟ್ಟಿನ ದರವು ₹10ರಿಂದ ₹15ರ ಆಸುಪಾಸಿನಲ್ಲೇ ಇತ್ತು. ದಸರಾಗೆ ತುಸು ಏರಿಕೆ ಕಂಡಿದ್ದ ಕೊತ್ತಂಬರಿ, ₹20ರಂತೆ ಮಾರಾಟವಾಗಿತ್ತು.ಆದರೆ, ಒಂದು ವಾರದಿಂದ ಈಚೆಗೆ ದರ ದುಪ್ಪಟ್ಟಾಗಿದ್ದು, ಚಿಲ್ಲರೆ ವ್ಯಾಪಾರಿಗಳು ಒಂದು ಕಟ್ಟು ಕೊತ್ತಂಬರಿ ಯನ್ನು ₹45ರಂತೆ ಮಾರಾಟ ಮಾಡು ತ್ತಿದ್ದಾರೆ. ಮೊದಲೆಲ್ಲ ಒಂದು ಕೆ.ಜಿ.ಕೊತ್ತಂಬರಿ ಸೊಪ್ಪಿನ ದರವೇ ₹50ರಷ್ಟು ಇರುತ್ತಿತ್ತು. ಈಗ ಒಂದು ಸಣ್ಣ ಕಟ್ಟಿನ ದರವೇ ಈ ಹಿಂದೆ ಕೆ.ಜಿ.ಗೆ ಇದ್ದಷ್ಟು ಆಗಿರುವುದರಿಂದ ಗ್ರಾಹಕರು ಕಂಗಾಲಾಗಿದ್ದಾರೆ.



ಕೊತ್ತಂಬರಿ ಸೊಪ್ಪು

‘ಒಂದು ತಿಂಗಳಿನಿಂದ ಧಾರಾಕಾರ ಮಳೆಯಾಗುತ್ತಿದ್ದು, ಸೊಪ್ಪಿನ ಬೆಳೆಗಳು ಭಾರಿ ಹಾನಿಗೊಳಗಾಗಿವೆ. ಹಾಗಾಗಿ, ಮಾರುಕಟ್ಟೆಗೆ ಬರುತ್ತಿರುವ ಸೊಪ್ಪಿನ ಪ್ರಮಾಣವೂ ತಗ್ಗಿದೆ. ಮಳೆಯಿಂದ ಅಳಿದು ಉಳಿದಿರುವ ಸೊಪ್ಪು ಮಾತ್ರ ಮಾರುಕಟ್ಟೆಗೆ ಬರುತ್ತಿದ್ದು, ಬೆಲೆಯೂ ಏರಿವೆ’ ಎಂದು ದಾಸನಪುರ ಎಪಿಎಂಸಿ ಪ್ರಾಂಗಣದ ಸೊಪ್ಪಿನ ವ್ಯಾಪಾರಿ ಕುಮಾರ್ ತಿಳಿಸಿದರು.

ಸೊಪ್ಪುಗಳ ದರ ಪಟ್ಟಿ (₹ಗಳಲ್ಲಿ)

ಸೊಪ್ಪು	ಚಿಲ್ಲರೆ ದರ (ಒಂದು ಕಟ್ಟಿಗೆ)	ಹಾಪ್‌ಕಾಮ್ಸ್ ದರ (ಕೆ.ಜಿ.ಗೆ)
ಕೊತ್ತಂಬರಿ	45	150
ಮೆಂತ್ಯ	25	140
ಸಬ್ಬಕ್ಕಿ	25	110
ಪಾಲಕ್	20	104
ದಂಟು	20	67

‘ಸಾಮಾನ್ಯ ದಿನಗಳಲ್ಲಿ ಸೊಪ್ಪಿನ ದರಗಳು ಹೆಚ್ಚೆಂದರೆ ಪ್ರತಿ ಕಟ್ಟಿಗೆ ₹15ರಿಂದ ₹20ರಂತೆ ಮಾರಾಟವಾಗುತ್ತಿದ್ದವು. ಈಗ ಪಾಲಕ್, ಮೆಂತ್ಯ, ಸಬ್ಬಕ್ಕಿ, ಚಕ್ಕೋತ, ದಂಟು ಸೇರಿದಂತೆ ಎಲ್ಲ ಸೊಪ್ಪುಗಳ ದರಗಳೂ ಪ್ರತಿ ಕಟ್ಟಿಗೆ ₹20ಕ್ಕಿಂತ ಹೆಚ್ಚೇ ಇದೆ. ಒಂದು ಕೆ.ಜಿ ಕೊತ್ತಂಬರಿ ಸೊಪ್ಪು ಸದ್ಯ ₹150ರಿಂದ ₹200ರವರೆಗೆ ಮಾರಾಟ ಆಗುತ್ತಿದೆ. ಮಳೆ ಬಿಡುವು ನೀಡಿದರೆ ಮಾತ್ರ ದರಗಳು ಇಳಿಯಲಿವೆ. ಮಳೆ ಅಬ್ಬರಿಸಿದರೆ, ದರ ಇನ್ನಷ್ಟು ಏರುವುದು ಖಚಿತ’ ಎಂದೂ ಹೇಳಿದರು.

‘ಒಂದು ಎಕರೆ ಪ್ರದೇಶದಲ್ಲಿ ಎರಡು ಹಂತಗಳಲ್ಲಿ ಕೊತ್ತಂಬರಿ ಬೆಳೆದಿದ್ದೆ. ಅರ್ಧದಷ್ಟು ಕೊತ್ತಂಬರಿಗೆ ಉತ್ತಮ ಬೆಲೆ ಸಿಗಲಿಲ್ಲ. ಎರಡನೇ ಹಂತದ ಬೆಳೆಯೂ ಉತ್ತಮವಾಗಿ ಬಂದಿತ್ತು. ಆದರೆ, ಎರಡು ವಾರಗಳಿಂದ ನಿರಂತರವಾಗಿ ಸುರಿದ ಮಳೆಗೆ ಸೊಪ್ಪು ಕೊಳೆಯುತ್ತಿದೆ. ಹಾಗಾಗಿ, ಇದ್ದ ಸೊಪ್ಪನ್ನೆಲ್ಲ ಆಗ ಸಿಕ್ಕಿದ ದರಕ್ಕೆ ಮಾರಿದೆ. ಈಗ ಕೊತ್ತಂಬರಿ ಸೊಪ್ಪಿಗೆ ಭಾರಿ ಬೆಲೆ ಇದೆ. ಮಳೆ ಬಂದು ನನ್ನ ಬೆಳೆ ಹಾಳಾಗದಿದ್ದರೆ ನನಗೂ ತುಸು ಲಾಭ ಸಿಗುತ್ತಿತ್ತು’ ಎಂದು ಹೊಸಕೋಟೆ ತಾಲ್ಲೂಕಿನ ಸೊಪ್ಪಿನ ಬೆಳೆಗಾರ ಕಾರ್ತಿಕ್ ಬೇಸರ ವ್ಯಕ್ತಪಡಿಸಿದರು.

‘ಸಮುದಾಯ’ದಿಂದ ಜಿ.ಕೆ. ಗೋವಿಂದ ರಾವ್ ನುಡಿನಮನ ಕಾರ್ಯಕ್ರಮ

‘ಕೋಮುವಾದದ ವಿರುದ್ಧ ಸಿಡಿದೇಳುತ್ತಿದ್ದ ಚೇತನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಿ.ಕೆ.ಗೋವಿಂದರಾವ್ ಅವರು ಕೋಮುವಾದದ ವಿರುದ್ಧ ಸಿಡಿದೇಳುತ್ತಿದ್ದ ಚೇತನ. ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ಧಕ್ಕೆಯಾದಾಗ ಹಾಗೂ ಸಾಮಾಜದಲ್ಲಿ ಅನ್ಯಾಯಗಳು ನಡೆದಾಗ ಜಾಗೃತ ಮನಸ್ಸಿನಿಂದ ಪ್ರತಿಕ್ರಿಯಿಸುತ್ತಿದ್ದ ವ್ಯಕ್ತಿ’ ಎಂದು ಚಿಂತಕ ಅಗ್ರಹಾರ ಕೃಷ್ಣಮೂರ್ತಿ ಸ್ಮರಿಸಿದರು.

ಸಮುದಾಯ ಬೆಂಗಳೂರು ಹಮ್ಮಿಕೊಂಡಿದ್ದ ಜಿ.ಕೆ.ಗೋವಿಂದರಾವ್ ಅವರಿಗೆ ನುಡಿನಮನ ಕಾರ್ಯಕ್ರಮದಲ್ಲಿ ಶನಿವಾರ ಅವರು ಮಾತನಾಡಿದರು.

‘ರಾಜ್ಯ ಪರ್ಯಟನೆಯ ಮೂಲಕ ವೈಚಾರಿಕ ಮತ್ತು ವೈಜ್ಞಾನಿಕ ಪರಿಚಾರಿಕೆಯನ್ನು ಯುವ ಮನಸ್ಸುಗಳಲ್ಲಿ ಬಿತ್ತುವ ಕೆಲಸ ಮಾಡಿದ್ದರು. ನಮ್ಮ ಜೊತೆಗೆ ಮಾತನಾಡುತ್ತಿದ್ದ, ಜಗಳವಾಡುತ್ತಿದ್ದ, ನಮ್ಮನ್ನು ಸದಾ ಎಚ್ಚರಿಸುತ್ತಿದ್ದ, ಪುಸ್ತಕಗಳನ್ನು ಓದುವಂತೆ ಹೇಳುತ್ತಿದ್ದ ಜೀವ ಈಗ ನಮ್ಮೊಡನೆ ಇಲ್ಲ ಎಂಬುದು ದುಃಖದ ಸಂಗತಿ’ ಎಂದು ತಿಳಿಸಿದರು.



ಕಾರ್ಯಕ್ರಮದಲ್ಲಿ ರಂಗಕರ್ಮಿ ಶ್ರೀನಿವಾಸ ಜಿ.ಕಪ್ಪಣ್ಣ (ಬಲದಿಂದ ಎರಡನೆಯವರು) ಹಾಗೂ ಜಿ.ರಾಮಕೃಷ್ಣ ಚರ್ಚಿಸಿದರು. (ಎಡದಿಂದ) ಕೆ.ಎಸ್. ವಿಮಲಾ ಹಾಗೂ ಅಗ್ರಹಾರ ಕೃಷ್ಣಮೂರ್ತಿ ಇದ್ದಾರೆ –ಪ್ರಜಾವಾಣಿ ಚಿತ್ರ

ಜನವಾದಿ ಮಹಿಳಾ ಸಂಘಟನೆಯ ಉಪಾಧ್ಯಕ್ಷೆ ಕೆ.ಎಸ್.ವಿಮಲಾ, ‘ಗೋವಿಂದರಾವ್ ಅವರು ಹೋರಾಟದ ಮನಸ್ಸುಗಳನ್ನು ಜಾಗೃತಗೊಳಿಸುತ್ತಿದ್ದರು. ತಾವು ನಂಬಿರುವ ಸಿದ್ಧಾಂತದ ಬಗ್ಗೆ ಬದ್ಧತೆ ಹೊಂದಿದ್ದರು. ಹಿಂಸೆಯ ಬಗ್ಗೆ ಅವರಿಗಿದ್ದ ಪರಿಕಲ್ಪನೆಯೇ ಭಿನ್ನವಾಗಿತ್ತು. ಯಾವುದೇ ಹೋರಾಟ ನಡೆದರೂ ಮುಂಚೂಣಿಯಲ್ಲಿರುತ್ತಿದ್ದರು. ತಾವೊಬ್ಬ ಪ್ರಸಿದ್ಧ ರಂಗಕರ್ಮಿ, ನಟ ಎಂಬ ಅಹಂ ಅವರಿಗೆ ಇರಲಿಲ್ಲ. ಪ್ರತಿಭಟನೆಯ ವೇಳೆ ನಮ್ಮ ಜೊತೆ ನೆಲದ ಮೇಲೆಯೇ ಕುಳಿತುಕೊಳ್ಳುತ್ತಿದ್ದರು’ ಎಂದು ತಿಳಿಸಿದರು.

ಪ್ರಾಧ್ಯಾಪಕಿ ಲಕ್ಷ್ಮಿ ಚಂದ್ರಶೇಖರ್, ಮಾತನಾಡಿ, ‘ಗೋವಿಂದರಾವ್ ಅವರು ನುಡಿದಂತೆ ನಡೆಯುತ್ತಿದ್ದ ವ್ಯಕ್ತಿ. ಶೇಕ್ಸ್‌ಪಿಯರ್ ಅವರನ್ನು ಬಹುವಾಗಿ ಪ್ರೀತಿಸುತ್ತಿದ್ದ ಅಧ್ಯಾಪಕ. ಶೇಕ್ಸ್‌ಪಿಯರ್ ಅವರ ನಾಟಕಗಳ ಕುರಿತು ಅವರು ಮಾಡುತ್ತಿದ್ದ ಪಾಠ ಕೇಳಲು ವಿದ್ಯಾರ್ಥಿಗಳೆಲ್ಲಾ ಕಾತರರಾಗಿರುತ್ತಿದ್ದರು. ಅವರು ಕಡಲೆಪುರಿಯ ಹಾಗೆ ಪುಸ್ತಕಗಳನ್ನು ಖರೀದಿಸುತ್ತಿದ್ದರು. ಅವರ ಮನೆಯಲ್ಲಿ ಪುಸ್ತಕಗಳ ಭಂಡಾರವೇ ಇತ್ತು. ಕೋಮುವಾದದ ಕುರಿತು ಅವರ ನಡೆ ತುಂಬಾ ನಿಷ್ಠುರವಾಗಿರುತ್ತಿತ್ತು. ವಯಸ್ಸು, ಆರೋಗ್ಯದ ಪರಿವೆಯೇ ಇಲ್ಲದೆ ಪ್ರತಿಭಟನೆಗಳಲ್ಲಿ ಭಾಗವಹಿಸುತ್ತಿದ್ದರು’ ಎಂದರು.

ಭಾನುವಾರ, ಅಕ್ಟೋಬರ್ 24, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 295 | ಪುಟ 24
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಭಾನುವಾರದ ಪುರವಣಿ
ನಿಮಗೇಕೆ ಕೊಡಬೇಕು ಕಪ್ಪ ?......
– ಕಿತ್ತೂರು ಚನ್ನಮ್ಮನ ಹೇಳಿಕೆಯೋ, ವೀರಪಾಂಡ್ಯ ಕಟ್ಟಬೊಮ್ಮನ್ ಮಾತೋ?

‘ಭಾರತ– ಬಾಂಗ್ಲಾ ಸಂಬಂಧ ನೆರೆಹೊರೆಗೆ ಮಾದರಿ’ 7
ಸಿಂದಗಿಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರಶ್ನೆ
‘ಉಗ್ರರ ನಿರ್ನಾಮಕ್ಕೆ ಅಂತಿಮ ಹೋರಾಟ’ 7
ರೈತರ ಆದಾಯ ಡಬಲ್ ಮಾಡಿದ್ದಾರಾ 4

ಕ್ರಿಕೆಟ್: ಭಾರತ–ಪಾಕ್ ಹಣಾಹಣಿ ಇಂದು

ದುಬೈ (ಪಿಟಿಐ): ಭಾರತ ಮತ್ತು ಪಾಕಿಸ್ತಾನ ಕ್ರಿಕೆಟ್ ತಂಡಗಳು ಭಾನುವಾರ ಇಲ್ಲಿ ನಡೆಯುತ್ತಿರುವ ಟ್ವೆಂಟಿ–20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಮುಖಾಮುಖಿಯಾಗಲಿವೆ.

ಐಸಿಸಿ ವಿಶ್ವಕಪ್ ಕ್ರಿಕೆಟ್ ಟೂರ್ನಿಗಳ ಪಂದ್ಯಗಳಲ್ಲಿ ಭಾರತ ತಂಡವು ಇದುವರೆಗೂ ಪಾಕಿಸ್ತಾನದ ಎದುರು ಸೋತಿಲ್ಲ. ಅದೇ ದಾಖಲೆಯನ್ನು ಮುಂದುವರಿಸುವತ್ತ ವಿರಾಟ್ ಕೊಹ್ಲಿ ನಾಯಕತ್ವದ ತಂಡವು ಚಿತ್ತ ನೆಟ್ಟಿದೆ. 13

ಚಿನಕುರಳಿ

ಪ್ರಕಾಶ್ ಶೆಟ್ಟಿ



ನಡೆಯದ ನೇಮಕಾತಿ, ಅತಿಥಿ ಉಪನ್ಯಾಸಕರ ಮೇಲೆ ಭಾರ

ವಿ.ವಿಗೆ ಬೋಧಕರ ಬರ

• ಕೆ.ನರಸಿಂಹಮೂರ್ತಿ

ಮೈಸೂರು: ರಾಜ್ಯದ ವಿಶ್ವವಿದ್ಯಾಲಯಗಳನ್ನು ಬೋಧಕರ ಕೊರತೆ ಇನ್ನಿಲ್ಲದಂತೆ ಕಾಡುತ್ತಿದೆ. ಉನ್ನತ ಶಿಕ್ಷಣದ ದೇಗುಲಗಳೆನಿಸಿರುವ ವಿಶ್ವವಿದ್ಯಾಲಯಗಳಲ್ಲಿ ಬೋಧನೆಯ ಗುಣಮಟ್ಟ ಕುಸಿದಿದ್ದರೂ ಸೊಲ್ಲೆತ್ತುವವರಿಲ್ಲ. ಆರ್ಥಿಕ ಮುಗ್ಗಟ್ಟು–ಶೈಕ್ಷಣಿಕ ಬಿಕ್ಕಟ್ಟು ಬಗೆಹರಿದಿಲ್ಲ. ಇಂಥ ಸನ್ನಿವೇಶದಲ್ಲೇ, ಹೆಚ್ಚು ಅಧ್ಯಾಪಕರನ್ನು ಬಯಸುವ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನೂ ಜಾರಿಗೊಳಿಸಬೇಕಾದ ಅನಿವಾರ್ಯತೆ ಎದುರಾಗಿದೆ.

ಲಕ್ಷಾಂತರ ವಿದ್ಯಾರ್ಥಿಗಳ ಕಲಿಕೆಯ ಮಹತ್ವಾಕಾಂಕ್ಷೆಗೂ ಅಡ್ಡಿಯಾಗಿರುವ ಈ ಕೊರತೆಯ ನಡುವೆಯೇ, ನ್ಯಾಕ್ ಮಾನ್ಯತೆಯನ್ನು ಉಳಿಸಿಕೊಳ್ಳಲು ಹಾಗೂ ಹೆಚ್ಚಿನ ಮಾನ್ಯತೆ ಪಡೆಯಲು ವಿಶ್ವವಿದ್ಯಾಲಯಗಳು ಹೆಣಗಾಡುತ್ತಿವೆ. ‘ಅಗತ್ಯ ಸಂಖ್ಯೆಯ ಅಧ್ಯಾಪಕರಿರಬೇಕು, ಸಂಶೋಧನೆ ನಡೆಸಬೇಕು. ಸಂಶೋಧನೆಗೆ ಮಾರ್ಗದರ್ಶಕರಾಗಬೇಕು’ ಎಂಬುದು ನ್ಯಾಕ್ ಮಾನ್ಯತಾ ಮಾನದಂಡಗಳಲ್ಲಿ ಪ್ರಮುಖವಾದದ್ದು. ಆದರೆ, ಅದರಲ್ಲೇ ವಿಶ್ವವಿದ್ಯಾಲಯಗಳು ಹಿಂದೆ ಬಿದ್ದಿವೆ.

ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ಶೇ 50ಕ್ಕಿಂತ ಹೆಚ್ಚು ಬೋಧಕರ ಕೊರತೆಯಿಂದಾಗಿ ಹೊಸ ಕೋರ್ಸ್‌ಗಳನ್ನು ಆರಂಭಿಸುವ ಸಾಧ್ಯತೆಯೂ ಇಲ್ಲ. ಸ್ನಾತಕೋತ್ತರ ಕೇಂದ್ರಗಳೂ ನಿಶ್ಶಕ್ತವಾಗಿವೆ.

ಸಂಶೋಧನೆಗಳೂ ನಿಂತ ನೀರಾಗಿವೆ. ಕಾಯಂ ಬೋಧಕರಷ್ಟೇ ಸಂಶೋಧನೆಗೆ ಮಾರ್ಗದರ್ಶಕರಾಗಬಹುದು ಎಂಬ ನಿಯಮಕ್ಕೆ ತಕ್ಕಂತೆ, ಬೋಧಕರಿಲ್ಲದೆ ಸಂಶೋಧನಾ ವಿದ್ಯಾರ್ಥಿಗಳಿಗೆ ಅವಕಾಶಗಳೂ ಕಡಿಮೆಯಾಗಿವೆ.

ಇಂಥ ಪರಿಸ್ಥಿತಿಯಲ್ಲಿ ಅತಿಥಿ, ಗುತ್ತಿಗೆ ಆಧಾರದ ಅಧ್ಯಾಪಕರನ್ನೇ ಮಾರ್ಗದರ್ಶಕರನ್ನಾಗಿ ನಿಯೋಜಿಸುವ ಚಿಂತನೆಯೂ ನಡೆದಿದೆ. ಹೀಗೆ ಮಾಡಿದರೆ, ಸಂಶೋಧನೆಯ ಗುಣಮಟ್ಟ ಹೆಚ್ಚುತ್ತದೆ ಎಂಬ ಭರವಸೆಯೂ ವಿಶ್ವವಿದ್ಯಾಲಯಗಳಲ್ಲಿ ಇಲ್ಲ.

6ನೇ ಪುಟ ನೋಡಿ

ಒಳನೋಟ
ಎಂದು ನೇಮಕಾತಿ?
ಪ್ರತಿಕ್ರಿಯಿಸಿ: 9606038256
feedback@prajavani.co.in



ಮೈಸೂರು ವಿಶ್ವವಿದ್ಯಾಲಯದ ಮುಖ್ಯದ್ವಾರ

₹ 50 ಲಕ್ಷ ಲಂಚ: ಸಚಿವ ವಿಷಾದ

‘ಸದ್ಯದ ಬೇಡಿಕೆ–ಪೂರೈಕೆ ಗಮನಿಸಿ, ಖಾಲಿ ಹುದ್ದೆಯನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಅರ್ಹರ ಸಂಖ್ಯೆ ಕಡಿಮೆ ಇದೆ. ಅನೇಕರಿಗೆ ಈ ವಿಷಯ ಗೊತ್ತಿಲ್ಲ. ಹೀಗಾಗಿ, ₹ 50 ಲಕ್ಷ, ₹ 60 ಲಕ್ಷ ಲಂಚ ಕೊಟ್ಟು ಹುದ್ದೆ ಪಡೆಯಲು ಪೈಪೋಟಿಗಿಳಿಯುವ ವ್ಯವಸ್ಥೆ ನಿರ್ಮಾಣವಾಗಿದೆ. ಭ್ರಷ್ಟಾಚಾರ, ಅಕ್ರಮ ನೇಮಕಾತಿಗಳಿಗೆ ಅವಕಾಶವಾಗುತ್ತಿದೆ. ಅದರಲ್ಲೂ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಸಂಬಳದಲ್ಲಿಯೇ ಪಾಲು ಪಡೆಯುವ ವ್ಯವಸ್ಥೆಯ ಬಗ್ಗೆಯೂ ಆರೋಪಗಳಿವೆ. ಈ ಎಲ್ಲವನ್ನೂ ತಡೆಯಬೇಕಿದೆ. ಹುದ್ದೆ ಭರ್ತಿಯ ವೇಳೆ ಗುಣಮಟ್ಟಕ್ಕೆ ಆದ್ಯತೆ, ಪ್ರತಿಭಾವಂತರಿಗೆ ಅವಕಾಶ ಸಿಗಬೇಕು’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.


ರಾಜ್ಯದ ವಿಶ್ವವಿದ್ಯಾಲಯಗಳಲ್ಲಿನ ಹುದ್ದೆಗಳು

	ಮಂಜೂರು	ಭರ್ತಿ	ಖಾಲಿ
ಬೋಧಕ	4,126	2,027	2,099
ಬೋಧಕೇತರ (ಅಧಿಕಾರಿ ಹುದ್ದೆ ಸಹಿತ)	8,479	3,210	5,269

ಇನ್ನಷ್ಟು ಸುದ್ದಿಗಳು 6

ಕಿತ್ತೂರು ಕರ್ನಾಟಕ: ಬೊಮ್ಮಾಯಿ ಘೋಷಣೆ

ಪ್ರಜಾವಾಣಿ ವಾರ್ತೆ



ಬೆಳಗಾವಿ: ಮುಂಬೈ ಕರ್ನಾಟಕವನ್ನು ಕಿತ್ತೂರು ಕರ್ನಾಟಕ ಎಂದು ನಾಮಕರಣ ಮಾಡಬೇಕು ಎಂಬ ಬೇಡಿಕೆ ಬಹಳ ವರ್ಷಗಳಿಂದಲೂ ಇದೆ. ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಈ ಮಹತ್ವದ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆ ಸಹಯೋಗದಲ್ಲಿ ಜಿಲ್ಲೆಯ ಕಿತ್ತೂರಿನ ಕೋಟೆ ಆವರಣದಲ್ಲಿ ಆಯೋಜಿಸಿರುವ ಎರಡು ದಿನಗಳ 'ಚನ್ನಮ್ಮನ ಕಿತ್ತೂರು' ಉತ್ಸವಕ್ಕೆ ಶನಿವಾರ ಚಾಲನೆ ನೀಡಿ ಅವರು ಮಾತನಾಡಿದರು.

ಮುಂದಿನ ವರ್ಷದಿಂದ ಕಿತ್ತೂರು ಉತ್ಸವವನ್ನು ರಾಜ್ಯಮಟ್ಟದ ಉತ್ಸವವನ್ನಾಗಿ ಆಚರಿಸಲು ಆದೇಶ ನೀಡಲಾಗುವುದು ಎಂದು ಅವರು ಪ್ರಕಟಿಸಿದರು.

ಅವನತಿಗೊಂಡಿರುವ ಕಿತ್ತೂರು ಅರಮನೆಯ ಪ್ರತಿರೂಪವನ್ನು ಮರು ಸೃಷ್ಟಿಸಲಾಗುವುದು. ಚನ್ನಮ್ಮ ಬಳಸಿದ್ದ ಖಡ್ಗ ಸೇರಿದಂತೆ ಎಲ್ಲ ವಸ್ತುಗಳನ್ನೂ ಎಲ್ಲೆಲ್ಲಿವೆಯೋ ಅಲ್ಲಿಂದ ತರಿಸಲು ಕ್ರಮ ವಹಿಸಲಾಗುವುದು ಎಂದು ಹೇಳಿದರು.

ಶಾಸಕ ಮಹಾಂತೇಶ ದೊಡ್ಡಗೌಡರ, ರಾಜಗುರು ಸಂಸ್ಥಾನ ಕಲ್ಮಠದ ಮಡಿವಾಳ ರಾಜಯೋಗೀಂದ್ರ ಸ್ವಾಮೀಜಿ, ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ, ಹರಿಹರದ ಲಿಂಗಾಯತ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಇದ್ದರು.

ನ್ಯಾಯಾಂಗ ಮೂಲಸೌಕರ್ಯ: ‘ಸುಪ್ರೀಂ’ ಮುಖ್ಯ ನ್ಯಾಯಮೂರ್ತಿ ಅಸಮಾಧಾನ

ಮುಂಬೈ (ಪಿಟಿಐ): ದೇಶದ ನ್ಯಾಯಾಂಗ ಮೂಲಸೌಕರ್ಯದಲ್ಲಿನ ಸುಧಾರಣೆ ಹಾಗೂ ನಿರ್ವಹಣೆ ರೀತಿಯು ತಾತ್ಕಾಲಿಕವಾಗಿದ್ದು, ಯೋಜನಾಬದ್ಧವಾಗಿಲ್ಲ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಅಸಮಾಧಾನ ವ್ಯಕ್ತಪಡಿಸಿದರು.



ಎನ್‌.ವಿ. ರಮಣ

ಬಾಂಬೆ ಹೈಕೋರ್ಟ್‌ನ ಔರಂಗಾಬಾದ್ ಪೀಠದ ಕಟ್ಟಡದ ಎರಡು ಉಪಭವನಗಳ ಉದ್ಘಾಟನಾ ಸಮಾರಂಭದಲ್ಲಿ ಶನಿವಾರ ಮಾತನಾಡಿದ ಅವರು, ಮೂಲಸೌಕರ್ಯವಿಲ್ಲದೇ ನ್ಯಾಯಾಂಗವು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವುದು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಆರಂಭದಲ್ಲಿ ಮಾತನಾಡಿದ್ದ ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು, ‘ಸದೃಢವಾದ ನ್ಯಾಯಾಂಗವು ಪ್ರಜಾಪ್ರಭುತ್ವದ ಯಶಸ್ಸಿನಲ್ಲಿ ಬಹುಮುಖ್ಯ ಪಾತ್ರ ವಹಿಸುವುದರಿಂದ, ನ್ಯಾಯಾಂಗದ ಮೂಲಸೌಕರ್ಯ ಸುಧಾರಣೆಗಾಗಿ ಕೇಂದ್ರ ಸರ್ಕಾರವು ಹಲವಾರು ನಿರ್ಧಾರಗಳನ್ನು ಕೈಗೊಂಡಿದೆ. ಕೆಳ ನ್ಯಾಯಾಲಯಗಳ ಮೂಲಸೌಕರ್ಯ ಅಭಿವೃದ್ಧಿಗಾಗಿ ₹ 9,000 ಕೋಟಿ ಬಿಡುಗಡೆ ಮಾಡುವ ಸಂಬಂಧ ಕಳೆದ ಬಾರಿಯ ಸಂಪುಟ ಸಭೆಯಲ್ಲಿ ಮಹತ್ವದ ನಿರ್ಣಯಗಳನ್ನು ಕೈಗೊಳ್ಳಲಾಗಿದೆ’ ಎಂದು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ್ದರು.

ಕರ್ನಾಟಕ ಸರ್ಕಾರ, ಕಾಲೇಜು ಶಿಕ್ಷಣ ಇಲಾಖೆ

ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಬ್ಬಿ-572216

principalgubbi@gmail.com ಸ್ವಾಯತ್ತ ದೂರವಾಣಿ: 08131-222265

ಸಂಖ್ಯೆ:ಸಪ್ರದಕಾ(ಸ್ವಾ)ಗುಬ್ಬಿ/2021/22/ ದಿನಾಂಕ: 23-10-2021

ಸ್ನಾತಕೋತ್ತರ ಪದವಿ ಪ್ರವೇಶಕ್ಕೆ ಅರ್ಜಿ ಆಹ್ವಾನ 2021-2022

1. ಕಲಾ ವಿಭಾಗ : ಎಂ.ಎ. ಕನ್ನಡ, ಇಂಗ್ಲೀಷ್, ಇತಿಹಾಸ, ಅರ್ಥಶಾಸ್ತ್ರ
2. ವಾಣಿಜ್ಯ ಶಾಸ್ತ್ರ ವಿಭಾಗ: ಎಂ.ಕಾಂ. ವಾಣಿಜ್ಯಶಾಸ್ತ್ರ

ಪ್ರವೇಶ ಬಯಸುವ ಪದವಿ ತೇರ್ಗಡೆಯಾದ ಅಭ್ಯರ್ಥಿಗಳು ರೂ. 200/- (ಪ.ಜಾ.ಪ.ಪಂ./ಸಿ-1 ರೂ. 100/-) ಗಳನ್ನು ಪಾವತಿಸಿ ಅರ್ಜಿ ಪಡೆಯಬಹುದು. ಆನ್‌ಲೈನ್ ಲಿಂಕ್: https://forms.gle/F7KrDoxobGaEi8vaAನಲ್ಲೂ ಅರ್ಜಿ ಸಲ್ಲಿಸಬಹುದು.

ವಿವರಗಳು: 1) ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ: 25-10-2021
2) ಭರ್ತಿ ಮಾಡಿದ ಅರ್ಜಿಯನ್ನು ಅಗತ್ಯ ದಾಖಲೆಗಳೊಂದಿಗೆ ಕಾಲೇಜಿಗೆ ಸಲ್ಲಿಸುವ ಕೊನೆಯ ದಿನಾಂಕ: 10-11-2021.
(3) ಪ್ರವೇಶ ಮಾಡಿಕೊಳ್ಳುವ ದಿನಾಂಕ: 11-11-2021ರಿಂದ 19-11-2021ರವರೆಗೆ
(4) ರೂ. 1,000/-ಗಳ ದಂಡಶುಲ್ಕದೊಂದಿಗೆ 20-11-2021ರಿಂದ 26-11-2021.
(5) ತರಗತಿಗಳು ಪ್ರಾರಂಭವಾಗುವ ದಿನಾಂಕ: 19-11-2021

ಸೂಚನೆ: ಸ್ನಾತಕೋತ್ತರ ಪ್ರವೇಶಾತಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ಪಡೆಯಲು ಸಂಪರ್ಕಿಸಿ: 9945392302

ಸಹಿ/- ಪ್ರಾಂಶುಪಾಲರು

ಎಫ್‌ಕೆಸಿಸಿಐ ಹೊಸ ಪದಾಧಿಕಾರಿಗಳ ಆಯ್ಕೆ


ರಮೇಶ್‌ಚಂದ್ರ ಲಹೋಟಿ


ಬಿ.ವಿ. ಗೋಪಾಲ ರೆಡ್ಡಿ


ಡಾ.ಐ.ಎಸ್. ಪ್ರಸಾದ್

ಬೆಂಗಳೂರು: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) 2021-22ನೇ ಸಾಲಿನ ಪದಾಧಿಕಾರಿಗಳ ಆಯ್ಕೆಗೆ ಶುಕ್ರವಾರ ಚುನಾವಣೆ ನಡೆದಿದ್ದು, ಡಾ.ಐ.ಎಸ್. ಪ್ರಸಾದ್ ಅವರು ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಬಿ.ವಿ. ಗೋಪಾಲ ರೆಡ್ಡಿ ಅವರು ಹಿರಿಯ ಉಪಾಧ್ಯಕ್ಷರಾಗಿ ಆಯ್ಕೆ ಆಗಿದ್ದಾರೆ.

ಸಂಸ್ಥೆಯ ಉಪಾಧ್ಯಕ್ಷರಾಗಿ ರಮೇಶ್ ಚಂದ್ರ ಲಹೋಟಿ ಆಯ್ಕೆ ಆಗಿದ್ದಾರೆ. ಡಾ. ಪ್ರಸಾದ್ ಅವರು ಇಪ್ಪತ್ತೈದು ವರ್ಷಗಳಿಗಿಂತ ಹೆಚ್ಚಿನ ಅವಧಿಯಿಂದ ಎಫ್‌ಕೆಸಿಸಿಐ ಸದಸ್ಯರಾಗಿದ್ದಾರೆ. ಈ ಹಿಂದೆ ಅವರು ಸಂಸ್ಥೆಯ ಉಪಾಧ್ಯಕ್ಷ ಹಾಗೂ ಹಿರಿಯ ಉಪಾಧ್ಯಕ್ಷ ಹುದ್ದೆಗಳನ್ನು ನಿಭಾಯಿಸಿದ್ದಾರೆ. ಅವರು ವೃತ್ತಿಯಿಂದ ಲೆಕ್ಕಪರಿಶೋಧಕ.

ರೆಡ್ಡಿ ಅವರು ಈ ಹಿಂದೆ ಸಂಸ್ಥೆಯ ಉಪಾಧ್ಯಕ್ಷರಾಗಿ ಕರ್ತವ್ಯ ನಿಭಾಯಿಸಿದ್ದಾರೆ.

ಲಹೋಟಿ ಅವರು ಸಂಸ್ಥೆಯ ಬೇರೆ ಬೇರೆ ಸಮಿತಿಗಳಲ್ಲಿ ಕರ್ತವ್ಯ ನಿಭಾಯಿಸಿದ್ದಾರೆ.

ದುಂಡುಮೇಜಿನ ಸಭೆಯಲ್ಲಿ ದಲಿತ, ಪ್ರಗತಿಪರ ಚಿಂತಕರ ನಿರ್ಧಾರ

‘ಪಠ್ಯಪುಸ್ತಕ ಪರಿಷ್ಕರಣೆ: ಸತ್ಯ ತಿರುಚಿದರೆ ಹೋರಾಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬರಗೂರು ರಾಮಚಂದ್ರಪ್ಪ ಅಧ್ಯಕ್ಷತೆಯ ಸಮಿತಿ ನಾಲ್ಕು ವರ್ಷಗಳ ಹಿಂದೆ ಪರಿಷ್ಕರಣೆ ಮಾಡಿರುವ ಪಠ್ಯಪುಸ್ತಕಗಳ ಬಗ್ಗೆ ಅಪಪ್ರಚಾರ ಮಾಡಿ ಚಾರಿತ್ರಿಕ ಸತ್ಯ ತಿರುಚುವ ಹುನ್ನಾರ ನಡೆಸಲಾಗುತ್ತಿದೆ ಎಂದು ಪ್ರಗತಿಪರ ಹೋರಾಟಗಾರರು ಆಪಾದಿಸಿದ್ದಾರೆ.

ನಗರದ ಗಾಂಧಿ ಭವನದಲ್ಲಿ ದಲಿತ ಸಂಘಟನೆಗಳ ಜಂಟಿ ವೇದಿಕೆ ಶನಿವಾರ ದುಂಡುಮೇಜಿನ ಸಭೆ ನಡೆಸಿತು. ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, ಹೋರಾಟಗಾರ ಗುರುಪ್ರಸಾದ್ ಕೆರಗೋಡು, ಸಾಹಿತಿ ಬಂಜಗೆರೆ ಜಯಪ್ರಕಾಶ್, ಚಿಂತಕ ಎಸ್.ಜಿ. ಸಿದ್ಧರಾಮಯ್ಯ, ಶಿಕ್ಷಣ ತಜ್ಞ ಶ್ರೀಪಾದ ಭಟ್, ರಾಜಶೇಖರಮೂರ್ತಿ ಸೇರಿದಂತೆ ಹಲವು ಚಿಂತಕರು ಸಭೆಯಲ್ಲಿ ಭಾಗವಹಿಸಿ ಪಠ್ಯಪುಸ್ತಕ ಪರಿಷ್ಕರಣೆ ಹಿಂದೆ ರಾಜಕಾರಣ ಅಡಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ಹುನ್ನಾರವನ್ನು ಸರ್ಕಾರ ಮುಂದುವರಿಸಿ ಚಾರಿತ್ರಿಕ ಸತ್ಯಗಳನ್ನು ತಿರುಚಿದರೆ ರಾಜ್ಯದಾದ್ಯಂತ ಪ್ರತಿರೋಧ ಒಡ್ಡಲು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.


ದುಂಡುಮೇಜಿನ ಸಭೆಯಲ್ಲಿ ಬಂಜಗೆರೆ ಜಯಪ್ರಕಾಶ್, ಎಸ್.ಜಿ. ಸಿದ್ಧರಾಮಯ್ಯ, ಮಾವಳ್ಳಿ ಶಂಕರ್ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

‘ಈ ಹಿಂದಿನ ಪಠ್ಯಪುಸ್ತಕ ಪರಿಷ್ಕರಣೆ ಕುರಿತಂತೆ ಕ್ಷುಲ್ಲಕ ಹಾಗೂ ಮತೀಯ ರಾಜಕೀಯ ಮಾಡಲಾಗುತ್ತಿದೆ. ಸುಳ್ಳು ಸುದ್ದಿಗಳನ್ನು ಹಬ್ಬಿಸಿ ಇತಿಹಾಸ ತಿರುಚಲು ಹೊರಟಿರುವ ಮುನ್ಸೂಚನೆ ಕಾಣಿಸುತ್ತಿದೆ. ‘ಸಾರ್ವಜನಿಕರು ಗಂಭೀರವಾಗಿ ಗಮನಿಸಿದ್ದರೆ ಹಲ್ಲೆ ಮಾಡುತ್ತಿದ್ದರು’ ಎಂದು ಶಿಕ್ಷಣ ಸಚಿವರೇ ಹೇಳುವ ಮೂಲಕ ಪರಿಷ್ಕರಣೆ ಮಾಡಿದವರ ಮೇಲೆ ಹಿಂಸೆಗೆ ಪ್ರಚೋದನೆ ನೀಡಿದ್ದಾರೆ. ಪಠ್ಯ ಪುಸ್ತಕ ಪರಿಷ್ಕರಣೆ ಪರಿಶೀಲಿಸಲು ಈಗ ನೇಮಕಗೊಂಡಿರುವ ಅಧ್ಯಕ್ಷರು ಎಲ್ಲಾ ಪುಸ್ತಕಗಳನ್ನು ಸಮಗ್ರವಾಗಿ ಪರಿಶೀಲಿಸುವ ಮೊದಲೇ ಅಪಪ್ರಚಾರದಲ್ಲಿ ತೊಡಗಿದ್ದಾರೆ. ಹಿಂದಿನ ಅಧ್ಯಕ್ಷರ ವಿರುದ್ಧ ವೈಯಕ್ತಿಕ ತೇಜೋವಧೆಗೆ ಮುಂದಾಗಿದ್ದಾರೆ. ಈ ಎಲ್ಲಾ ಪ್ರವೃತ್ತಿಗಳನ್ನು ಸಭೆ ಖಂಡಿಸುತ್ತದೆ’ ನಿರ್ಣಯ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

‘ಪರಿಷ್ಕರಣೆಗೊಂಡ ಪಠ್ಯ ಪುಸ್ತಕಗಳು ಜಾರಿಗೆ ಬಂದು ನಾಲ್ಕು ವರ್ಷಗಳು ಮುಗಿದ ಬಳಿಕ ಎಬ್ಬಿಸುತ್ತಿರುವ ವಿವಾದದ ಹಿಂದೆ ಶೈಕ್ಷಣಿಕ ಕಾರಣಗಳಿಲ್ಲ. ಒಂದು ವೇಳೆ ದೋಷಗಳಿದ್ದರೆ ಅವುಗಳನ್ನು ತಿದ್ದುಪಡಿ ಮಾಡುವವರು ಆಯಾ ವಿಷಯಗಳಿಗೆ ಸಂಬಂಧಿಸಿದ ತಜ್ಞರೇ ಹೊರತು ರಾಜಕೀಯ ಪಕ್ಷದ ಜೊತೆ ಸಂಪೂರ್ಣ ಗುರುತಿಸಿಕೊಂಡವರಲ್ಲ. ಅದರಲ್ಲೂ ಮೂಲಭೂತವಾದಿಗಳಂತೂ ಅಲ್ಲವೇ ಅಲ್ಲ’ ಎಂದು ಪತ್ರದಲ್ಲಿ ಆಕ್ಷೇಪಿಸಲಾಗಿದೆ.

ಈಗ ಮೂಲಭೂತವಾದಿಗಳ ಕೈಗೆ ಮಕ್ಕಳ ಭವಿಷ್ಯ ಕೊಡುವ ಹುನ್ನಾರ ಮುಂದುವರಿದರೆ ಹೋರಾಟ ಅನಿವಾರ್ಯವಾಗಲಿದೆ. ಮುಖ್ಯಮಂತ್ರಿ, ಶಿಕ್ಷಣ ಸಚಿವರು ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕರನ್ನು ನಿಯೋಗದೊಂದಿಗೆ ಭೇಟಿ ಮಾಡಿ ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಲಿಖಿತವಾಗಿ ಸಲ್ಲಿಸಲು ಸಭೆ ನಿರ್ಧರಿಸಿತು.

ಅರ್ಜಿ ಆಹ್ವಾನ

ಬೆಂಗಳೂರು: ಎಂ.ಎಸ್ಸಿ ಜೈವಿಕ ವಿಜ್ಞಾನ ಸ್ನಾತಕೋತ್ತರ ಪದವಿಯ ಮೊದಲ ಸೆಮಿಸ್ಟರ್‌ಗೆ ಪ್ರವೇಶ ಪಡೆಯಲು ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಹೊಸ ರಾಷ್ಟ್ರೀಯ ಶಿಕ್ಷಣನೀತಿ (ಎನ್‌ಇಪಿ) ಅಡಿಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯವು ದ್ವಿತೀಯ ಪಿಯುಸಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ರೂಪಿಸಲಾಗಿರುವ ಐದು ವರ್ಷಗಳ ಸಂಯೋಜಿತ (ಇಂಟಗ್ರೇಟೆಡ್) ಕೋರ್ಸ್ ಇದಾಗಿದೆ.

2021-22ನೇ ಸಾಲಿನ ಕೋರ್ಸ್‌ಗೆ ಪ್ರವೇಶ ಕಲ್ಪಿಸಲಾಗುತ್ತಿದ್ದು, ದ್ವಿತೀಯ ಪಿಯುಸಿಯಲ್ಲಿ ಜೀವವಿಜ್ಞಾನ ವಿಷಯವನ್ನು ಕಡ್ಡಾಯವಾಗಿ ಅಧ್ಯಯನ ಮಾಡಿದವರು ಅರ್ಜಿ ಸಲ್ಲಿಸಬಹುದು. ಈಗಾಗಲೇ ಈ ಕೋರ್ಸ್‌ಗೆ ಅರ್ಜಿ ಸಲ್ಲಿಸಿದ್ದರೆ ಮತ್ತೊಮ್ಮೆ ಸಲ್ಲಿಸುವ ಅಗತ್ಯ ಇಲ್ಲ.

ಎನ್‌ಇಪಿ ಆಶಯದಂತೆ ಈ ಪದವಿಯ ಮೊದಲ ವರ್ಷದ ನಂತರ ನಿರ್ಗಮಿಸುವವರಿಗೆ ಜೈವಿಕ ವಿಜ್ಞಾನ ವಿಷಯದಲ್ಲಿ ಪ್ರಮಾಣಪತ್ರ, ಎರಡನೇ ವರ್ಷ ನಿರ್ಗಮಿಸುವವರಿಗೆ ಡಿಪ್ಲೊಮಾ, ಮೂರನೇ ವರ್ಷ ನಿರ್ಗಮಿಸುವವರಿಗೆ ಬಿ.ಎಸ್ಸಿ ಪದವಿ, ನಾಲ್ಕನೇ ವರ್ಷ ನಿರ್ಗಮಿಸುವವರಿಗೆ ಬಿ.ಎಸ್ಸಿ ಆನರ್ ಹಾಗೂ ಐದು ವರ್ಷ ಪೂರ್ಣಗೊಳಿಸುವವರಿಗೆ ಎಂ.ಎಸ್ಸಿ ವಿಜ್ಞಾನ ವಿಷಯದಲ್ಲಿ ಪದವಿ ನೀಡಲಾಗುತ್ತಿದೆ ಎಂದು ಪ್ರಕಟಣೆ ತಿಳಿಸಿದೆ. ಮಾಹಿತಿಗೆ www.bangaloreuniversity.ac.in

‘ಈಶ್ವರಪ್ಪ ಬಹಿರಂಗ ಕ್ಷಮೆ ಕೇಳಲಿ

ಬೆಂಗಳೂರು: ‘ಮೇಲೇಳಲೂ ಸಾಧ್ಯವಿಲ್ಲದ ಕುಂಟನೊಬ್ಬ ಪೈಲ್ವಾನನಿಗೆ ಜಾಡಿಸಿ ಒದೆಯುತ್ತೇನೆ ಎಂದು ಹೇಳುವ ಹಾಗೆ ರಾಜ್ಯದಲ್ಲಿ ಜೆಡಿಎಸ್ ಪರಿಸ್ಥಿತಿ ಇದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಇತ್ತೀಚೆಗೆ ವ್ಯಂಗ್ಯವಾಡಿದ್ದಾರೆ. ಮಾತಿನ ಭರದಲ್ಲಿ ‘ಕುಂಟ’ ಎಂಬ ಪದ ಬಳಸುವ ಮೂಲಕ ಅವರು ಅಂಗವಿಕಲ ಸಮುದಾಯವನ್ನು ಅವಹೇಳನ ಮಾಡಿದ್ದಾರೆ’ ಎಂದು ಕರ್ನಾಟಕ ರಾಜ್ಯ ಅಂಗವಿಕಲರ ರಕ್ಷಣಾ ಸಮಿತಿ ಕಾರ್ಯಾಧ್ಯಕ್ಷ ಚಂದ್ರಶೇಖರ ಪುಟ್ಟಪ್ಪ ದೂರಿದ್ದಾರೆ.

‘2016ರ ಅಂಗವಿಕಲರ ಹಕ್ಕುಗಳ ಕಾಯ್ದೆ ಪ್ರಕಾರ ‘ಕುಂಟ’ ಎಂಬ ಪದ ಬಳಸಿ ನಿಂದಿಸುವುದು ಶಿಕ್ಷಾರ್ಹ ಅಪರಾಧ. ಆ ಕುರಿತ ಅರಿವು ಸಚಿವರಿಗೆ ಇದ್ದಂತಿಲ್ಲ. ಇಂತಹ ಜನಪ್ರತಿನಿಧಿಗಳು ಸಮಾಜಕ್ಕೆ ಮಾದರಿಯಾಗುವುದಾದರೂ ಹೇಗೆ. ಇವರಿಂದ ನಾಗರಿಕರು ಏನನ್ನು ಕಲಿಯಲು ಸಾಧ್ಯ’ ಎಂದು ಅವರು ಪ್ರಶ್ನಿಸಿದ್ದಾರೆ.

‘ಇತ್ತೀಚೆಗೆ ಮುಗಿದ ಪ್ಯಾರಾಲಿಂಪಿಕ್ಸ್‌ನಲ್ಲಿ ಅಂಗವಿಕಲ ಕ್ರೀಡಾಪಟುಗಳು 19 ಪದಕಗಳನ್ನು ಜಯಿಸಿ ದೇಶದ ಹಿರಿಮೆ ಹೆಚ್ಚಿಸಿದ್ದಾರೆ. ಅವರ ಸಾಮರ್ಥ್ಯವನ್ನು ಅರಿಯದ ಈಶ್ವರಪ್ಪನವರು ಬಾಯಿಗೆ ಬಂದಂತೆ ಮಾತನಾಡುವುದು ಅವರ ಘನತೆಗೆ ತಕ್ಕುದಲ್ಲ’ ಎಂದು ತಿಳಿಸಿದ್ದಾರೆ.

ಕಥಾ ಸ್ಪರ್ಧೆ

ಬೆಂಗಳೂರು: ಲೇಖಿಕಾ ಸಾಹಿತ್ಯ ವೇದಿಕೆಯು ‘ತ್ರಿವೇಣಿ ಸ್ಮೃತಿ’ ಕಥಾ ಸ್ಪರ್ಧೆಯನ್ನು ಏರ್ಪಡಿಸಿದೆ.

ವಿಜೇತರಿಗೆ ನಗದು ಬಹುಮಾನ, ಪ್ರಶಸ್ತಿ ಪತ್ರ ಹಾಗೂ ಸ್ಮರಣಿಕೆ ನೀಡಲಾಗುವುದು. ಆಸಕ್ತರು ಅ.30ರೊಳಗೆ ಕಥೆಗಳನ್ನು ಕಳುಹಿಸುವಂತೆ ಪ್ರಕಟಣೆ ತಿಳಿಸಿದೆ.

ವಿಳಾಸ:ಲೇಖಿಕಾ ಸಾಹಿತ್ಯ ವೇದಿಕೆ, ಜೆ.ಪಿ.ನಗರ ಒಂದನೇ ಹಂತ, ಬೆಂಗಳೂರು. ಸಂಪರ್ಕ ಸಂಖ್ಯೆ: 99163 78955.

ಪಯೋನೀರ್ ಡಿಸ್ಟಿಲರೀಸ್ ಲಿಮಿಟೆಡ್

DIAGEO INDIA

ನೋಂದಾಯಿತ ಕಛೇರಿ: ‘ಯುಬಿ ಟವರ್’, ಲೆವೆಲ್ 10, # 24, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು - 560 001, ಭಾರತ. ಫೋನ್: 080 - 4544 8000, ಫ್ಯಾಕ್ಸ್: 080 - 3985 6862
ಇಮೇಲ್: pdlinvestor.india@diageo.com, ವೆಬ್‌ಸೈಟ್: www.pioneerdistilleries.com
ಕಾರ್ಪೊರೇಟ್ ಐಡೆಂಟಿಟಿ ನಂಬರ್: L24116KA1992PLC125992

ಸೆಪ್ಟೆಂಬರ್ 30, 2021ಕ್ಕೆ ಅಂತ್ಯವಾದ ತ್ರೈಮಾಸಿಕ ಮತ್ತು ಆರು ತಿಂಗಳುಗಳಿಗೆ ಪ್ರತ್ಯೇಕಿತ ಪರಿಶೋಧಿಸದ ಆರ್ಥಿಕ ಫಲಿತಾಂಶಗಳ ವಿವರಣೆ

ರೂ. ಲಕ್ಷಗಳಲ್ಲಿ

ಕ್ರ. ಸಂಖ್ಯೆ	ವಿವರಗಳು	ಸೆಪ್ಟೆಂಬರ್ 30, 2021 ಕೊನೆಗೊಂಡ ತ್ರೈಮಾಸಿಕಕ್ಕೆ	ಜೂನ್ 30, 2021 ಕೊನೆಗೊಂಡ ತ್ರೈಮಾಸಿಕಕ್ಕೆ	ಸೆಪ್ಟೆಂಬರ್ 30, 2020 ಕೊನೆಗೊಂಡ ತ್ರೈಮಾಸಿಕಕ್ಕೆ	ಮಾರ್ಚ್ 31, 2021 ವರ್ಷಕ್ಕೆ ಕೊನೆಗೊಂಡ
1.	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	6,464	3,770	5,178	17,041
2.	ಅವಧಿಯ (ತೆರಿಗೆಯ ಮೊದಲು ಅಸಾಧಾರಣ ಮತ್ತು/ಅಥವಾ ವಿಶೇಷ ಐಟೆಂಗಳ #) ನಿವ್ವಳ ಲಾಭ/(ನಷ್ಟ)	(2,179)	(2,064)	(1,712)	(8,657)
3.	ಅವಧಿಯ ತೆರಿಗೆಯ ಮೊದಲು (ಅಸಾಧಾರಣ ಮತ್ತು/ಅಥವಾ ವಿಶೇಷ ಐಟೆಂಗಳ ನಂತರ #) ನಿವ್ವಳ ಲಾಭ/(ನಷ್ಟ)	(2,179)	(2,064)	(1,712)	(8,657)
4.	ಅವಧಿಯ ತೆರಿಗೆಯ ನಂತರ (ಅಸಾಧಾರಣ ಮತ್ತು/ಅಥವಾ ವಿಶೇಷ ಐಟೆಂಗಳ ನಂತರ #) ನಿವ್ವಳ ಲಾಭ/(ನಷ್ಟ)	(2,179)	(2,064)	(1,712)	(8,737)
5.	ಅವಧಿಯ ಒಟ್ಟಾರೆ ವ್ಯಾಪಕ ಆದಾಯ [ಅವಧಿಯ ಲಾಭ/(ನಷ್ಟ) (ತೆರಿಗೆಯ ನಂತರ) ಮತ್ತು ಇತರ ವ್ಯಾಪಕ ಆದಾಯ (ತೆರಿಗೆಯ ನಂತರ)ಗಳನ್ನು ಒಳಗೊಂಡಿರುವ]	(2,179)	(2,064)	(1,712)	(8,737)
6.	ಪಾವತಿಸಿದ ಈಕ್ವಿಟಿ ಷೇರು ಬಂಡವಾಳ ಪ್ರತಿ ಈಕ್ವಿಟಿ ಷೇರಿಗೆ ರೂ.10/-	1,339	1,339	1,339	1,339
7.	ಮೀಸಲುಗಳು (ಮೌಲ್ಯಮಾಪಿತ ಮೀಸಲುಗಳನ್ನು ಹೊರತುಪಡಿಸಿ) ಹಿಂದಿನ ವರ್ಷದ ಪರಿಶೋಧಿತ ಆಯವ್ಯಯ ಪಟ್ಟಿಯಲ್ಲಿ ತೋರಿಸಲಾಗಿದೆ	-	-	-	(29,127)
8.	ಪ್ರತಿ ಷೇರಿನ ಗಳಿಕೆ (ಪ್ರತಿ ಷೇರಿಗೆ ರೂ.2/-) (ಕಾರ್ಯಾಚರಣೆಗಳನ್ನು ಮುಂದಿವರಿಸಲು ಮತ್ತು ನಿಲ್ಲಿಸಲು)				
	1. ಮೂಲ :	(16.28)	(15.42)	(12.79)	(64.66)
	2. ದುರ್ಬಲೀಕೃತ :	(16.28)	(15.42)	(12.79)	(64.66)

ಸೂಚನೆಗಳು:

ಎ) ಮೇಲಿನವು 2015 ರ ಸೆಬಿ ನಿಯಂತ್ರಣಗಳ (ಪಟ್ಟಿ ಮಾಡುವಿಕೆ ಮತ್ತು ಬಹಿರಂಗಪಡಿಸುವಿಕೆ ಅಗತ್ಯತೆಗಳು) 33ನೇ ನಿಯಂತ್ರಣದಡಿಯಲ್ಲಿ ಸ್ಟಾಕ್ ಎಕ್ಸ್‌ಚೇಂಜ್‌ಗಳಿಗೆ ಸಲ್ಲಿಸಲಾದ ತ್ರೈಮಾಸಿಕ ಹಣಕಾಸು ಫಲಿತಾಂಶಗಳ ವಿವರವಾದ ನಮೂನೆಯ ಸಾರಂಶವಾಗಿದೆ. ವಾರ್ಷಿಕ ಹಣಕಾಸು ಫಲಿತಾಂಶಗಳ ಸಂಪೂರ್ಣ ಸ್ವರೂಪವು ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟ್ www.bseindia.com ಮತ್ತು www.nseindia.com ಮತ್ತು ಕಂಪನಿಯ ವೆಬ್‌ಸೈಟ್ www.pioneerdistilleries.com ನಲ್ಲಿ ಲಭ್ಯವಿರುತ್ತದೆ.

ಬಿ) # – ಐಎನ್‌ಡಿ-ಎಎಸ್ ನಿಯಮಗಳು / ಎರಿಸ್ ನಿಯಮಗಳಿಗೆ ಅನುಗುಣವಾಗಿ ತ್ರೈಮಾಸಿಕ ಹಣಕಾಸು ಫಲಿತಾಂಶಗಳ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಅಸಾಧಾರಣ ಮತ್ತು ಅಥವಾ ಅಸಾಧಾರಣ ವಸ್ತುಗಳು ಯಾವುದು ಅನ್ವಯವಾಗುತ್ತದೆಯೋ ಅದಕ್ಕೆ ಸರಿಹೊಂದಿಸಲಾಗಿದೆ.

ನಿರ್ದೇಶಕರ ಮಂಡಳಿಯ ನಿಮಿತ್ಯ ಮತ್ತು ಅವರ ಪರವಾಗಿ
ಸಹಿ/-
ಅಲೋಕೇಶ್ ಬಿಸ್ವಾಸ್
ವ್ಯವಸ್ಥಾಪಕ ನಿರ್ದೇಶಕರು

ಸ್ಥಳ : ಬೆಂಗಳೂರು
ದಿನಾಂಕ : ಅಕ್ಟೋಬರ್ 22, 2021

ಮತದಾರರ ಪಟ್ಟಿ ಪರಿಷ್ಕರಣೆಗೆ ವಿಶೇಷ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಿಲ್ಲೆಯ ಮತದಾರರ ಕರಡು ಪಟ್ಟಿಯನ್ನು ನ. 8ರಂದು ಪ್ರಕಟಿಸಲಾಗುತ್ತದೆ. ಅಂದಿನಿಂದ ಡಿ.12ರವರೆಗೆ ಮತದಾರರ ಕರಡು ಪಟ್ಟಿ ಕುರಿತ ಆಕ್ಷೇಪಣೆಗಳನ್ನು ಸ್ವೀಕರಿಸಲಾಗುತ್ತದೆ' ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ತಿಳಿಸಿದ್ದಾರೆ.

'ಮತದಾರರ ಪಟ್ಟಿ ಪರಿಷ್ಕರಣೆಗೆ ನ. 7, 14, 21 ಮತ್ತು 28ರಂದು ವಿಶೇಷ ಅಭಿಯಾನ ಕೈಗೊಳ್ಳಲಾಗುತ್ತದೆ. ಡಿ. 27ರಂದು ಆಕ್ಷೇಪಣೆಗಳನ್ನು ಪರಿಶೀಲಿಸಿ 2022ರ ಜ. 13ರಂದು ಮತದಾರರ ಅಂತಿಮ ಪಟ್ಟಿ ಬಿಡುಗಡೆ ಮಾಡಲಾಗುತ್ತದೆ' ಎಂದರು.

'ಅಂತಿಮ ಪಟ್ಟಿಯಲ್ಲೂ ಹೆಸರು, ವಿಳಾಸ, ಸಂಬಂಧ ಹಾಗೂ ಇನ್ನಿತರ ತಿದ್ದುಪಡಿಗಳಿದ್ದರೆ ಅದನ್ನು ಮತದಾರರೇ ಸರಿಪಡಿಸಿಕೊಳ್ಳಬಹುದು. ಇದಕ್ಕಾಗಿ 'Voter Helpline' ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಬೇಕು. ಅದರಲ್ಲಿ ತಮ್ಮ ಹೆಸರು ದಾಖಲಾಗಿರುವ ಬಗ್ಗೆ ಪರಿಶೀಲಿಸಿಕೊಳ್ಳಬಹುದು. ಪಟ್ಟಿಯಲ್ಲಿ ಹೆಸರು ದಾಖಲಾಗದಿದ್ದರೆ ಸೇರ್ಪಡೆ ಮಾಡಿಸಿಕೊಳ್ಳಬಹುದು. ತಪ್ಪಾಗಿ ಉಲ್ಲೇಖವಾಗಿದ್ದರೆ ತಿದ್ದುಪಡಿ ಮಾಡಿಕೊಳ್ಳುವ ಅವಕಾಶವನ್ನೂ ಕಲ್ಪಿಸಲಾಗಿದೆ' ಎಂದು ಹೇಳಿದ್ದಾರೆ.

'18 ವರ್ಷ ಪೂರೈಸಿರುವವರು ಮೊಬೈಲ್ ಮೂಲಕ ಮತದಾರರ ಪಟ್ಟಿಗೆ ಹೆಸರು ನೋಂದಣಿ ಮಾಡಿಕೊಳ್ಳಬಹುದು. ಮತದಾರರ ಪಟ್ಟಿಗೆ ಹೆಸರು ಸೇರ್ಪಡೆಗೊಳಿಸುವ ಅಥವಾ ತಿದ್ದುಪಡಿ ಮಾಡುವ ಅವಕಾಶವನ್ನು ಎಲ್ಲ ಅರ್ಹ ಮತದಾರರು ಬಳಸಿಕೊಳ್ಳಬಹುದು' ಎಂದು ಅವರು ತಿಳಿಸಿದ್ದಾರೆ.

ರಾಜ್ಯೋತ್ಸವ: ಆನ್‌ಲೈನ್ ಸ್ಪರ್ಧೆ

ಬೆಂಗಳೂರು: ಆರ್ಟ್‌ರಿಫ್ಲೆಕ್ಟ್ ಅಕಾಡೆಮಿಯು ಕನ್ನಡ ರಾಜ್ಯೋತ್ಸವದ ಅಂಗವಾಗಿ ವಿವಿಧ ಸ್ಪರ್ಧೆಗಳನ್ನು ಆನ್‌ಲೈನ್ ಮೂಲಕ ಆಯೋಜಿಸಿದೆ.

ವೇಷಭೂಷಣ ಸ್ಪರ್ಧೆ, ರಾಜ್ಯೋತ್ಸವ ಗೀತಗಾಯನ, ಭಾಷಣ, ನೃತ್ಯ ಸೇರಿದಂತೆ ವಿವಿಧ ಸ್ಪರ್ಧೆಗಳು ನಡೆಯಲಿದ್ದು, ಆಸಕ್ತರು 9380671947ಗೆ ಹೆಸರು ನೋಂದಣಿ ಮಾಡಿಕೊಳ್ಳುವಂತೆ ಪ್ರಕಟಣೆ ತಿಳಿಸಿದೆ.





ಅತ್ತಿಬೆಲೆಯಲ್ಲಿ ಸರ್ಕಾರಿ ಜಾಗದಲ್ಲಿ ನಿರ್ಮಿಸಿದ್ದ ಕಲ್ಯಾಣ ಮಂಟಪವನ್ನು ವಶಕ್ಕೆ ಪಡೆದ ಜಿಲ್ಲಾಡಳಿತದ ಅಧಿಕಾರಿಗಳು

ಸರ್ಕಾರಿ ಜಾಗದಲ್ಲಿದ್ದ ಕಲ್ಯಾಣ ಮಂಟಪ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಜಿಲ್ಲೆಯ 5 ತಾಲ್ಲೂಕುಗಳಲ್ಲಿ ಕೆರೆ, ಗೋಮಾಳ, ಸ್ಮಶಾನ, ರಾಜಕಾಲುವೆ ಒತ್ತುವರಿ ತೆರವುಗೊಳಿಸಿದ ಜಿಲ್ಲಾಡಳಿತ, ಅಂದಾಜು ₹19.94 ಕೋಟಿ ಮೌಲ್ಯದ 17-31 ಎಕರೆ ಜಾಗವನ್ನು ವಶಕ್ಕೆ ಪಡೆದಿದೆ.

ಆನೇಕಲ್ ತಾಲ್ಲೂಕು ಅತ್ತಿಬೆಲೆ ಹೋಬಳಿ ಇಂಡ್ಲಬೆಲೆ ಗ್ರಾಮದ ಸರ್ಕಾರಿ ಗುಂಡುತೋಪಿನಲ್ಲಿ ಖಾಸಗಿಯವರು ನಿರ್ಮಿಸಿದ್ದ ಕಲ್ಯಾಣ ಮಂಟಪವನ್ನು ವಶಕ್ಕೆ ಪಡೆಯಲಾಗಿದೆ. ಅದಕ್ಕೆ ಅತ್ತಿಬೆಲೆ ನಾಡ ಕಚೇರಿ ಎಂದು ನಾಮಫಲಕ ಹಾಕಲಾಗಿದೆ.

ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಒಂದು ಕೆರೆಯ 20 ಗುಂಟೆ ಜಾಗ, ಯಲಹಂಕ ತಾಲ್ಲೂಕಿನ ಕೆರೆಯೊಂದರ 1-20 ಎಕರೆ ಜಾಗ, ದಕ್ಷಿಣ ತಾಲ್ಲೂಕಿನ ಮೂರು ಕೆರೆಗಳ 36 ಗುಂಟೆ, ಆನೇಕಲ್ ತಾಲ್ಲೂಕಿನಲ್ಲಿ ನಾಲ್ಕು ಕೆರೆಗಳ 6.24 ಎಕರೆ ಜಾಗ ವಶಕ್ಕೆ ಪಡೆಯಲಾಗಿದೆ ಎಂದು ಜಿಲ್ಲಾಡಳಿತದ ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ 14 ಗುಂಟೆ ಸರ್ಕಾರಿ ಖರಾಬು, 1-32 ಎಕರೆ ಸರ್ಕಾರಿ ಗೋಮಾಳ, 1 ಎಕರೆ ಗುಂಡುತೋಪು ವಶಕ್ಕೆ ಪಡೆಯಲಾಗಿದೆ. ಪೂರ್ವ ತಾಲ್ಲೂಕಿನಲ್ಲಿ 6 ಗುಂಟೆ ಸರ್ಕಾರಿ ಖರಾಬು, 9 ಗುಂಟೆ ಗೋಮಾಳ, 5 ಗುಂಟೆ ಗುಂಡುತೋಪು ಜಾಗ ವಶಕ್ಕೆ ಪಡೆಯಲಾಗಿದೆ. ಆನೇಕಲ್ ತಾಲ್ಲೂಕಿನಲ್ಲಿ 1-12 ಎಕರೆ ಕರಾಬು ಜಾಗ, ಸ್ಮಶಾನದ 3 ಗುಂಟೆ ಜಾಗ ವಶಕ್ಕೆ ಪಡೆಯಲಾಗಿದೆ. ಯಲಹಂಕ ತಾಲ್ಲೂಕಿನಲ್ಲಿ 3 ಕಡೆ 4-01 ಎಕರೆ ಗುಂಡುತೋಪು ಸ್ವಾಧೀನಕ್ಕೆ ಪಡೆಯಲಾಗಿದೆ ಎಂದು ವಿವರಿಸಿದ್ದಾರೆ.

ಆರು ಜನರಿಗೆ 'ಕಮಲಾ ಹಂಪನಾ ಸಾಹಿತ್ಯ ಪುರಸ್ಕಾರ'

ಪ್ರಜಾವಾಣಿ ವಾರ್ತೆ


ಬೆಂಗಳೂರು: 'ನಾಡೋಜ ಕಮಲಾ ಹಂಪನಾ ಸಾಹಿತ್ಯ ಪುರಸ್ಕಾರ ವೇದಿಕೆ' ನೀಡುವ 2021ನೇ ಸಾಲಿನ ಪುರಸ್ಕಾರಕ್ಕೆ ಸಪ್ನ ಬುಕ್ ಹೌಸ್‌ನ ವ್ಯವಸ್ಥಾಪಕ ನಿರ್ದೇಶಕ ನಿತಿನ್ ಶಾ, ಲೇಖಕಿ ವಿಜಯಾ ಸುಬ್ಬರಾಜ್ ಸೇರಿದಂತೆ ಆರು ಮಂದಿ ಆಯ್ಕೆಯಾಗಿದ್ದಾರೆ.

ಸಾಹಿತಿ ಹರಿಹರಪ್ರಿಯ, ಲೇಖಕರಾದ ಕೆ. ರಾಜಕುಮಾರ್, ಅಜಿತ ಮುರಗುಂದಿ ಹಾಗೂ ಪ್ರಾಕೃತ ವಿದ್ವಾಂಸ ಶಾಂತಿನಾಥ ಶಿರಹಟ್ಟಿ ಅವರೂ ಪುರಸ್ಕಾರಕ್ಕೆ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು ತಲಾ ₹ 10 ಸಾವಿರ ನಗದು ಒಳಗೊಂಡಿದೆ.

ಇದೇ 31ರಂದು ಬೆಳಿಗ್ಗೆ 10.30ಕ್ಕೆ ಬೆಂಗಳೂರಿನ ಗಾಂಧಿ ಭವನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನಿಲ್ ಕುಮಾರ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕರ್ನಾಟಕ ಗಡಿಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಡಾ.ಸಿ. ಸೋಮಶೇಖರ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.



ವಿಜಯಾ ಸುಬ್ಬರಾಜ್



ಕೆ. ರಾಜಕುಮಾರ್


ನಿತಿನ್ ಶಾ


ಹರಿಹರಪ್ರಿಯ


ಅಜಿತ ಮುರಗುಂದಿ


ಶಾಂತಿನಾಥ ಶಿರಹಟ್ಟಿ


ಕರ್ನಾಟಕ ವಾಣಿಜ್ಯ ಹಾಗೂ ಕೈಗಾರಿಕಾ ಮಹಾ ಸಂಸ್ಥೆಯ (ಎಫ್‌ಕೆಸಿಸಿಐ) ಅಧ್ಯಕ್ಷರಾಗಿ ಆಯ್ಕೆಯಾದ (ಎಡದಿಂದ ಮೂರನೆಯವರು) ಐ.ಎಸ್.ಪ್ರಸಾದ್ ಅವರನ್ನು ನಿರ್ದೇಶಕರಾದ ಅರವಿಂದ ಬುರ್ಜಿ, ರಾಮಕೃಷ್ಣ ಮುದ್ಗಲ್, ಕೆ.ವಿ. ರಾಜೇಂದ್ರ ಕುಮಾರ್ ಅಭಿನಂದಿಸಿದರು



ನಕಲಿ ಅಧಿಕಾರಿ ಬಂಧನ



ದಾವಣಗೆರೆ: ನಕಲಿ ಅಧಿಕಾರಿಯೊಬ್ಬ ಸಾವಿರಾರು ರೂಪಾಯಿ ವಂಚಿಸಿರುವ ಘಟನೆ ತಾಲ್ಲೂಕಿನ ವೇಣುಗೋಪಾಲ ಮತ್ತು ಹೊಟ್ಟೆಸಿ ಗೌಡ ಸುತ್ತಮುತ್ತಲಿನ ಗ್ರಾಮಗಳಲ್ಲಿ ಇದೀಗ ಬೆಳಕಿಗೆ ಬಂದಿದೆ.

ದಿಢೀರ್ ಎಂದು ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಿ ತಾನ ಕೆಲವು ನಕಲಿ ಅಧಿಕಾರಿ ವೇಣುಗೋಪಾಲಗೌಡ, ಅಂಗನವಾಡಿ ಕಾರ್ಯಕರ್ತೆಯರಿಗೆ ಬೆದರಿಕೆವೊಡ್ಡುತ್ತಿದ್ದ. ಕಳೆದ 15 ದಿನಗಳಿಂದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಆಹಾರ ನಿರೀಕ್ಷಕ ಎಂದು ಹೇಳಿಕೊಂಡು ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಿ ಲಂಚಕ್ಕೆ ಬೇಡಿಕೆ ಇಡುತ್ತಿದ್ದ. ಇಲಾಖೆ ಹೆಸರಿನ ಸರ್ಕಾರಿ ಕಾರು, ಗುರುತಿನ ಚೀಟಿ ಹೊಂದಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಅಂಗನವಾಡಿಗೆ ಭೇಟಿ ನೀಡಿ ಆಹಾರ ಪದಾರ್ಥಗಳ ಪರಿಶೀಲನೆ ಜತೆಗೆ ಅಧಿಕಾರಿಗಳ ಭೇಟಿ ಪುಸ್ತಕದಲ್ಲಿ ಸಹಿ ಮಾಡುತ್ತಿದ್ದ. ಗ್ರಾಮಗಳಲ್ಲಿರುವ ನಿರಾಶ್ರಿತರಿಗೆ ಸರ್ಕಾರದಿಂದ ಮನೆ ಕೊಡಿಸುವುದಾಗಿ ಸಾವಿರಾರು ರೂಪಾಯಿ ವಸೂಲಿ ಮಾಡಿರುವ ಆರೋಪವೂ ಇದೆ.

ಚೇತರಿಕೆ ಹಾದಿಯಲ್ಲಿ ವಾಣಿಜ್ಯ ಚಟುವಟಿಕೆ ● ಸಹಜ ಸ್ಥಿತಿಗೆ ಮರಳುತ್ತಿರುವ ಜನಜೀವನ

ಬಾಡಿಗೆ ಮನೆಗಳಿಗೆ ಕುದುರುತ್ತಿದೆ ಬೇಡಿಕೆ

● ಸಚ್ಚಿದಾನಂದ ಕುರಗುಂದ

ಬೆಂಗಳೂರು: ಕೋವಿಡ್ ಸಂಕಷ್ಟಕ್ಕೆ ತತ್ತರಿಸಿದ್ದ ಜನಜೀವನ ಮತ್ತೆ ಸಹಜ ಸ್ಥಿತಿಗೆ ಮರಳುತ್ತಿರುವುದರಿಂದ ಖಾಲಿ ಬಿದ್ದಿದ್ದ ಬಾಡಿಗೆ ಮನೆಗಳಿಗೆ ಈಗ ನಿಧಾನವಾಗಿ ಬೇಡಿಕೆ ಮತ್ತೆ ಕುದುರುತ್ತಿದೆ.

ಕೋವಿಡ್ ಕಾಣಿಸಿಕೊಂಡ ನಂತರ ಸಾಫ್ಟ್‌ವೇರ್ ಎಂಜಿನಿಯರ್‌ಗಳು, ಕಟ್ಟಡ ಕಾರ್ಮಿಕರು, ಗಾರ್ಮೆಂಟ್ಸ್ ಕಾರ್ಖಾನೆಗಳ ಕಾರ್ಮಿಕರು ಸೇರಿದಂತೆ ವಿವಿಧ ವಲಯಗಳಲ್ಲಿ ದುಡಿಯುತ್ತಿದ್ದವರು ಊರಿಗೆ ಮರಳಿದ್ದರು. ನಂತರದ ಬಹುತೇಕ ಬಡಾವಣೆಗಳಲ್ಲಿ 'ಮನೆ ಖಾಲಿ ಇದೆ' ಎನ್ನುವ ಫಲಕಗಳು ಅಲ್ಲಲ್ಲಿ ರಾರಾಜಿಸುತ್ತಿದ್ದವು.

'ಬಾಡಿಗೆ ಮನೆ'ಗಳು ಹಲವರ ಬದುಕಿನ ಆಧಾರ ಸ್ತಂಭಗಳಾಗಿವೆ. ಆದಾಯ ತಂದು ಕೊಡುವ ಈ ಮನೆಗಳು ಖಾಲಿ ಬಿದ್ದಾಗ ಮಾಲೀಕರ ದೈನಂದಿನ ಬದುಕಿನ ನಿರ್ವಹಣೆಗೂ ಪೆಟ್ಟು ಬಿದ್ದಿತ್ತು.

ಈಗ ಮತ್ತೆ ಎಲ್ಲ ವಲಯಗಳ ಚಟುವಟಿಕೆಗಳು ಎಂದಿನಂತೆ ನಡೆಯುತ್ತಿದ್ದು, ವಾಣಿಜ್ಯ ವಹಿವಾಟು ಕ್ರಮೇಣ ಚೇತರಿಸಿಕೊಳ್ಳುತ್ತಿದೆ. ಮಾಹಿತಿ ತಂತ್ರಜ್ಞಾನ ಕಂಪನಿಗಳು ಮನೆಯಿಂದಲೇ ಕೆಲಸ (ವರ್ಕ್ ಫ್ರಂ ಹೋಮ್) ವ್ಯವಸ್ಥೆಯನ್ನು ಹಂತ ಹಂತವಾಗಿ ಸ್ಥಗಿತಗೊಳಿಸಿ ಕಚೇರಿಗಳನ್ನು ಪೂರ್ಣ ಪ್ರಮಾಣದಲ್ಲಿ ಆರಂಭಿಸಲು ಸಿದ್ಧತೆ ನಡೆಸಿವೆ. ಉದ್ಯೋಗಿಗಳಿಗೆ ಕಚೇರಿಗೆ ಬರುವಂತೆ ನೋಟಿಸ್ ಸೂಚನೆ ನೀಡಿವೆ.

ಟಿಸಿಎಸ್ ಸೇರಿದಂತೆ ಕೆಲವು ಕಂಪನಿಗಳಲ್ಲಿ ವ್ಯವಸ್ಥಾಪಕರ ಹಂತದ ಹುದ್ದೆಗಳಲ್ಲಿರುವವರು ಕಚೇರಿಯಿಂದಲೇ ಕಾರ್ಯನಿರ್ವಹಿಸುತ್ತಿದ್ದಾರೆ. ಉಳಿದ ಉದ್ಯೋಗಿಗಳಿಗೂ ನವೆಂಬರ್‌ನಿಂದ ಹಂತ ಹಂತವಾಗಿ ಕಚೇರಿಗೆ ಬರಲು ಸೂಚಿಸಿವೆ. ಕೆಲವು ಕಂಪನಿಗಳು ವಾರದಲ್ಲಿ ಎರಡು ಅಥವಾ ಮೂರು ದಿನ ಮಾತ್ರ ಕಚೇರಿಯಲ್ಲಿ ಕಾರ್ಯನಿರ್ವಹಿಸಬೇಕು. ಉಳಿದ ದಿನ ಮನೆಯಲ್ಲಿಯೇ ಕಾರ್ಯನಿರ್ವಹಿಸಬೇಕು ಎಂದು ನಿರ್ದೇಶನ ನೀಡಿವೆ.

'ನಮಗೆ ಡಿಸೆಂಬರ್‌ನಿಂದ ಕಚೇರಿಗೆ ಬರಲು ಸೂಚನೆ ನೀಡಿದ್ದಾರೆ. ಕೋವಿಡ್ ಮೊದಲನೇ ಅಲೆಯ ಸಂದರ್ಭದಲ್ಲಿ ನಾನು ಬೆಂಗಳೂರಿನಲ್ಲಿ ಮನೆ ಖಾಲಿ ಮಾಡಿದ್ದೆ. ಈಗ ಮುಂದಿನ ತಿಂಗಳು ಬಾಡಿಗೆ ಮನೆ ನೋಡಬೇಕಾಗಿದೆ' ಎಂದು ಹುಬ್ಬಳ್ಳಿಯಲ್ಲಿರುವ ಸಾಫ್ಟ್‌ವೇರ್ ಎಂಜಿನಿಯರ್ ಮೇಘಾ ತಿಳಿಸಿದರು.

ಹೋಟೆಲ್, ಕಟ್ಟಡ ನಿರ್ಮಾಣದ ಚಟುವಟಿಕೆಗಳು ಸಹ ಚುರುಕುಗೊಂಡಿವೆ. ಊರಿಗೆ ತೆರಳಿದ್ದವರು ನಗರಕ್ಕೆ ಮರಳಿ ಕೆಲವು ಉದ್ಯೋಗಗಳಲ್ಲಿ ತೊಡಗಿಸಿಕೊಂಡಿರುವುದರಿಂದ ಬಾಡಿಗೆ ಮನೆಗಳೂ ಭರ್ತಿ ಆಗುತ್ತಿವೆ.

'ಬಾಡಿಗೆ ಮನೆಗಳಿಗೆ ಮತ್ತೆ ಬೇಡಿಕೆ ಹೆಚ್ಚಾಗುತ್ತಿದೆ. ಇದು ಮಾಲೀಕರ ಮೇಲೆಯೂ ಅವಲಂಬನೆಯಾಗಿದೆ. ಮನೆ ಮಾಲೀಕರಲ್ಲಿ ಬಹುತೇಕರು ಮುಂಗಡ ಠೇವಣಿ ಮೊತ್ತವನ್ನು ಕಡಿಮೆ ಮಾಡುತ್ತಿದ್ದಾರೆ. ಉದಾಹರಣೆಗೆ ₹50 ಸಾವಿರ ತೆಗೆದುಕೊಳ್ಳುವವರು ₹30 ಸಾವಿರಕ್ಕೂ ಒಪ್ಪಿಕೊಳ್ಳುತ್ತಿದ್ದಾರೆ. ಆದರೆ, ಬಾಡಿಗೆ ಕಡಿಮೆ ಮಾಡಲು ಸಿದ್ಧರಿಲ್ಲ' ಎಂದು ರಿಯಲ್ ಎಸ್ಟೇಟ್ ಬ್ರೋಕರ್ ಶಿವಾನಂದ್ ತಿಳಿಸಿದರು.

ಪೀಣ್ಯದಲ್ಲಿರುವ ಸೋಮಶೇಖರ್, ತಮ್ಮ ಐದು ಮನೆಗಳನ್ನು ಕಡಿಮೆ ಬಾಡಿಗೆಗೆ ನೀಡಿದ್ದಾರೆ. ಕೋವಿಡ್ ಬಳಿಕ ಈ ಐದು ಮನೆಗಳು ಖಾಲಿ ಉಳಿದಿದ್ದರಿಂದ ಬಾಡಿಗೆಯಿಂದ ದೊರೆಯುವ ಆದಾಯ ಸಂಪೂರ್ಣ ಸ್ಥಗಿತಗೊಂಡಿತು. ಮನೆ ನಿರ್ಮಿಸಲು ಮಾಡಿದ್ದ ಸಾಲ ಪಾವತಿಸುವುದು ಸಹ ಇವರಿಗೆ ಕಷ್ಟವಾಗಿತ್ತು.

'ಬಾಡಿಗೆ ಮನೆಗಳನ್ನು ಖಾಲಿ ಉಳಿಸುವ ಬದಲು ಕಡಿಮೆ ಬಾಡಿಗೆಗೆ ನೀಡಿದ್ದೇನೆ. ಮುಂಗಡ ಠೇವಣಿಯಲ್ಲೂ ಕಡಿಮೆ ಮಾಡಿದ್ದೇನೆ. ವರಮಾನದಲ್ಲಿ ಕಡಿಮೆಯಾದರೂ ಖಾಲಿ ಬಿಡುವುದು ಒಳ್ಳೆಯದಲ್ಲ' ಎಂದು ಸೋಮಶೇಖರ್ ಹೇಳಿದರು.

ಪಿ.ಜಿ. ಕಟ್ಟಡಗಳಿಗೂ ಹೆಚ್ಚಿದ ಬೇಡಿಕೆ

ಪಿ.ಜಿ.(ಪೇಯಿಂಗ್ ಗೆಸ್ಟ್) ಕಟ್ಟಡಗಳು ಸಹ ಕಳೆದ ತಿಂಗಳಿಂದ ಕ್ರಮೇಣ ಭರ್ತಿಯಾಗುತ್ತಿವೆ.

'ಕೋವಿಡ್ ಮೊದಲನೇ ಅಲೆಯ ಬಳಿಕ ಶೇಕಡ 20ರಷ್ಟು ಕೊಠಡಿಗಳು ಮಾತ್ರ ಭರ್ತಿಯಾಗಿದ್ದವು. ಈಗ ಶೇಕಡ 50ರಷ್ಟು ಭರ್ತಿಯಾಗಿವೆ. ಮುಂದಿನ ತಿಂಗಳ ಹೊತ್ತಿಗೆ ಶೇಕಡ 70ರಷ್ಟು ಭರ್ತಿಯಾಗುವ ನಿರೀಕ್ಷೆ ಇದೆ' ಎಂದು ವೈಟ್‌ಫೀಲ್ಡ್‌ನಲ್ಲಿರುವ ಪಿ.ಜಿ.ಯೊಂದರ ಮಾಲೀಕ ಸುರೇಶ್ ತಿಳಿಸಿದರು.

'ಒಂದೂವರೆ ವರ್ಷದಿಂದ ಪಿ.ಜಿ.ಗಳ ನಿರ್ವಹಣೆಯೇ ಕಷ್ಟವಾಯಿತು. ಕೊಠಡಿಗಳು ಖಾಲಿ ಉಳಿದಿದ್ದರಿಂದ ಮಾಡಿದ ಸಾಲ ತೀರಿಸುವುದು ಸಹ ಕಷ್ಟವಾಗಿತ್ತು. ಎಲ್ಲವೂ ಸಹಜ ಸ್ಥಿತಿಗೆ ಮರಳಿದರೆ ನಮಗೆ ಚೇತರಿಸಿಕೊಳ್ಳಲು ಸಾಕಷ್ಟು ಕಾಲಾವಕಾಶ ಬೇಕಾಗುತ್ತದೆ' ಎಂದು ರಾಜಾಜಿನಗರದ ಪಿ.ಜಿ. ಮಾಲೀಕ ಮಹೇಶ್ ಹೇಳಿದರು.

ಪ್ರಜಾವಾಣಿ ವಿಶೇಷ

ಸುದ್ದಿ 2 ನಿಮಿಷ

ಕಾಂಗ್ರೆಸ್, ಬಿಜೆಪಿಯಿಂದ ಮುಸ್ಲಿಮರು ಅತಂತ್ರ: ಫಾರೂಕ್

ಬೆಂಗಳೂರು: 'ಕಾಂಗ್ರೆಸ್ ಮತ್ತು ಬಿಜೆಪಿ ನಡುವಿನ ವೈಷಮ್ಯವೇನೂ ಇಲ್ಲ, ಎರಡೂ ಪಕ್ಷಗಳಿಂದ ಮುಸ್ಲಿಮರು ಅತಂತ್ರರಾಗಿದ್ದಾರೆ' ಎಂದು ವಿಧಾನ ಪರಿಷತ್ತಿನ ಜೆಡಿಎಸ್ ಸದಸ್ಯ ಬಿ.ಎಂ. ಫಾರೂಕ್ ಹೇಳಿದ್ದಾರೆ.

'ಮುಸ್ಲಿಮರ ಮತಗಳಿಗಾಗಿ ಕಾಂಗ್ರೆಸ್ ಮೊಸಳೆ ಕಣ್ಣೀರು ಸುರಿಸುತ್ತಿದೆ. ಆರ್‌ಎಸ್‌ಎಸ್ ಕಾರ್ಯಸೂಚಿಗೆ ಪೂರಕವಾಗಿ ಕಾಂಗ್ರೆಸ್ ಕೆಲಸ ಮಾಡುತ್ತಿದೆ. ಮುಸ್ಲಿಮರ ವಿಚಾರದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ವ್ಯತ್ಯಾಸವಿಲ್ಲ. ಎರಡೂ ಪಕ್ಷಗಳು ಮುಸ್ಲಿಮರ ರಾಜಕೀಯವಾಗಿ ಮೋಸ ಮಾಡಿಕೊಂಡು ಬಂದಿವೆ' ಎಂದು ಪತ್ರಿಕಾ ಹೇಳಿಕೆಯಲ್ಲಿ ದೂರಿದ್ದಾರೆ.



'ಕಾಂಗ್ರೆಸ್‌ನಲ್ಲಿರುವ ಮುಸ್ಲಿಂ ನಾಯಕರ ಕೂಡ ಮುಸ್ಲಿಮರಿಗಾಗಿ ಯಾವ ಕೆಲಸವನ್ನೂ ಮಾಡಿಲ್ಲ. ರಾಜ್ಯಸಭೆ ಚುನಾವಣೆಯಲ್ಲಿ ನನಗೆ ಜೆಡಿಎಸ್‌ನಿಂದ ಅನ್ಯಾಯವಾಯಿತು ಎಂಬುದು ಅಪಪ್ರಚಾರ. ಈಗ ಆರೋಪ ಮಾಡುತ್ತಿರುವ ಶಾಸಕ ಜಮೀರ್ ಅಹಮದ್ ಸೇರಿದಂತೆ ಕೆಲವರೇ ಆಗ ಮೋಸ ಮಾಡಿದವರು' ಎಂದು ಆರೋಪಿಸಿದ್ದಾರೆ.

1ಕ್ಕೆ 10 ಉತ್ತರ: ಮುತಾಲಿಕ್ ಎಚ್ಚರಿಕೆ

ತುಮಕೂರು: 'ಹಿಂದೂ ಕಾರ್ಯಕರ್ತರನ್ನು ಮುಟ್ಟಿದರೆ ಒಂದಕ್ಕೆ ಹತ್ತು ಉತ್ತರ ಕೊಡಲಾಗುವುದು. ದಾದಾಗಿರಿ ನಡೆಸಿದರೆ ಹುಷಾರ್' ಎಂದು ಶ್ರೀರಾಮ ಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಎಚ್ಚರಿಕೆ ನೀಡಿದರು.

ಹಲ್ಲೆಗೆ ಒಳಗಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಬಜರಂಗದಳ ಕಾರ್ಯಕರ್ತ ಮಂಜುಭಾರ್ಗವ ಅವರನ್ನು ಶನಿವಾರ ರಾತ್ರಿ ಭೇಟಿಯಾಗಿ ಆರೋಗ್ಯ ವಿಚಾರಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

'ತುಮಕೂರಿನಲ್ಲಿ ಬಂದ್ ನಡೆಸಿ ಎಚ್ಚರಿಕೆ ಕೊಟ್ಟಿದ್ದೇವೆ. ಇನ್ನು ಮುಂದೆ ನಿಮ್ಮ ಆಟ ನಡೆಯುವುದಿಲ್ಲ. ಬಾಲ ಮುದುರಿಕೊಂಡು, ಬಾಯಿ ಮುಚ್ಚಿಕೊಂಡು ಇರಬೇಕು. ಇಲ್ಲವಾದರೆ ಸುಮ್ಮನಿರುವುದಿಲ್ಲ' ಎಂದು ಎಚ್ಚರಿಸಿದರು.

'ಗೋ ಹತ್ಯೆ ಪ್ರತಿಬಂಧಕ ಕಾಯ್ದೆ ಜಾರಿಗೆ ತಂದು ಸರ್ಕಾರ ಸುಮ್ಮನಾಗಿದೆ. ಕಾನೂನು ಪಾಲನೆ ನಿಲ್ಲಿಸುತ್ತಿಲ್ಲ. ಇಲ್ಲ ನಾವು ನಿಲ್ಲಿಸಬೇಕೋ, ಕಾನೂನು ಪಾಲನೆ ನಡೆಸುವವರನ್ನು ಹತ್ತು ಬನ್ನಲ್ಲಿ ಇಡುತ್ತೀರೋ, ಇಲ್ಲ ನಾವೇ ಮಾಡಬೇಕೋ' ಎಂದು ಪೊಲೀಸರನ್ನು ಪ್ರಶ್ನಿಸಿದರು.

'ಖಾಸಗಿ ವೈದ್ಯ ಕಾಲೇಜುಗಳ ಲಾಬಿಗೆ ಸರ್ಕಾರ ಮಣಿಯದಿರಲಿ'

ಬೆಂಗಳೂರು: 'ರಾಜ್ಯ ಸರ್ಕಾರವು ಖಾಸಗಿ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕಾಲೇಜುಗಳ ಆಡಳಿತ ಮಂಡಳಿಗಳ ಲಾಬಿಗೆ ಮಣಿಯದೆ ವಿದ್ಯಾರ್ಥಿಗಳ ಹಿತ ಕಾಯಬೇಕು' ಎಂದು ಅಖಿಲ ಭಾರತ ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಸಂಘಟನೆಯ (ಎಐಡಿಎಸ್‌ಒ) ರಾಜ್ಯ ಘಟಕದ ಕಾರ್ಯದರ್ಶಿ ಅಜಯ್ ಕಾಮತ್ ಒತ್ತಾಯಿಸಿದ್ದಾರೆ.

'ಸರ್ಕಾರವು ಖಾಸಗಿ ವೈದ್ಯಕೀಯ ಕಾಲೇಜುಗಳ ಆಡಳಿತ ಮಂಡಳಿ ಜೊತೆ ಸಂಪೂರ್ಣವಾಗಿ ಶಾಮೀಲಾಗಿದೆ. ಹೀಗಾಗಿ ಕಾಲೇಜುಗಳು ಪ್ರತಿ ವರ್ಷವೂ ಶುಲ್ಕ ಏರಿಕೆ ಮಾಡುತ್ತಲೇ ಇದೆ. ಈ ವರ್ಷವೂ ಆಡಳಿತ ಮಂಡಳಿಗಳು ಶೇ 25ರಿಂದ ಶೇ 30ರಷ್ಟು ಶುಲ್ಕ ಏರಿಕೆಯ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರದ ಮುಂದಿಟ್ಟಿವೆ. ಇದು ಪ್ರಜಾತಂತ್ರ ವಿರೋಧಿ ಕ್ರಮ' ಎಂದು ತಿಳಿಸಿದ್ದಾರೆ.

'ವೈದ್ಯಕೀಯ ಶಿಕ್ಷಣ ಸಾಕಷ್ಟು ದುಬಾರಿಯಾಗಿದ್ದು, ಬಡ ವಿದ್ಯಾರ್ಥಿಗಳಿಗೆ ಕೈಗೆಟಕದಂತಾಗಿದೆ. ಪ್ರತಿ ವರ್ಷವೂ ಶುಲ್ಕ ಏರಿಕೆಯಾಗುತ್ತಲೇ ಹೋದರೆ ಆರೋಗ್ಯ ವಲಯ ಖಾಸಗೀಕರಣಗೊಳ್ಳುತ್ತದೆ. ಇದರಿಂದ ಬಡವರು ಆರೋಗ್ಯ ಸೇವೆಯಿಂದ ವಂಚಿತರಾಗಬೇಕಾಗುತ್ತದೆ. ಲಕ್ಷಾಂತರ ರೂಪಾಯಿ ಶುಲ್ಕ ಕಟ್ಟಿ ವೈದ್ಯಕೀಯ ಶಿಕ್ಷಣ ಪೂರೈಸುವ ವಿದ್ಯಾರ್ಥಿಗಳು ಸೇವಾ ಮನೋಭಾವವನ್ನೇ ಮರೆತುಬಿಡುತ್ತಾರೆ. ಅವರು ರೋಗಿಗಳನ್ನು ಗ್ರಾಹಕರಂತೆ ಕಾಣುವ ಅಪಾಯವಿದೆ' ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

'ಕೋವಿಡ್‌ನಿಂದಾಗಿ ಜನರು ಆರ್ಥಿಕ ಸಂಕಷ್ಟಕ್ಕೊಳಗಾಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರವು ವಿದ್ಯಾರ್ಥಿಗಳ ಶುಲ್ಕ ರದ್ದುಗೊಳಿಸಬೇಕಿತ್ತು. ವಿದ್ಯಾರ್ಥಿವೇತನ ಹೆಚ್ಚಿಸಬೇಕಿತ್ತು. ಶುಲ್ಕದ ವಿಚಾರವಾಗಿ ವಿದ್ಯಾರ್ಥಿಗಳು, ಪೋಷಕರು, ಉಪನ್ಯಾಸಕರ ಜೊತೆಗೂ ಚರ್ಚಿಸಬೇಕು' ಎಂದು ಆಗ್ರಹಿಸಿದ್ದಾರೆ.

'ಸ್ಮಾರ್ಟ್' ಆದ ಸಾರಕ್ಕಿ ಸರ್ಕಾರಿ ಶಾಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಕ್ಕಿಯ ಕರ್ನಾಟಕ ಪಬ್ಲಿಕ್ ಶಾಲೆ ಈಗ ಹೈಟೆಕ್ ರೂಪ ಪಡೆದುಕೊಂಡಿದ್ದು, ವಿದ್ಯಾರ್ಥಿಗಳಿಗೆ ಆಧುನಿಕ ಹಾಗೂ ಗುಣಮಟ್ಟದ ಶಿಕ್ಷಣ ನೀಡಲು ಸನ್ನದ್ಧವಾಗಿದೆ.

ಬ್ರಿಟಿಷ್ ಬಯೊಲಾಜಿಕಲ್ಸ್‌ನ ವ್ಯವಸ್ಥಾಪಕ ನಿರ್ದೇಶಕ ವಿ.ಎಸ್.ರೆಡ್ಡಿ ಅವರು ₹2.25 ಕೋಟಿ ವೆಚ್ಚದಲ್ಲಿ ಈ ಶಾಲೆಯನ್ನು ಅಭಿವೃದ್ಧಿಪಡಿಸಿದ್ದಾರೆ. ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರು ಶಾಲೆಯಲ್ಲಿ ನಿರ್ಮಿಸಲಾದ ನಾಲ್ಕು ಅಂತಸ್ತುಗಳ 'ಶ್ರೀ ಸಾರಕ್ಕಿ ಅಬ್ಬಯ್ಯ-ರೆಡ್ಡಿ ಸ್ಮಾರಕ ಕಟ್ಟಡ'ವನ್ನು ಶುಕ್ರವಾರ ಉದ್ಘಾಟಿಸಿದರು.

'ವಿ.ಎಸ್.ರೆಡ್ಡಿ ಅವರ ಕಾರ್ಯ ಶ್ಲಾಘನೀಯವಾದುದು. ಇದೊಂದು ಹೊಸ ಬೆಳವಣಿಗೆ. ರೆಡ್ಡಿಯವರಂತೆ ಎಲ್ಲರೂ ತಾವು ಓದಿದ ಶಾಲೆಯ ಅಭಿವೃದ್ಧಿಗೆ ಮುಂದಾಗಬೇಕು. ತಮ್ಮಿಂದಾದ ನೆರವು ನೀಡಬೇಕು' ಎಂದು ನಾಗೇಶ್ ಹೇಳಿದರು.

ವಿ.ಎಸ್.ರೆಡ್ಡಿ, 'ನಾನು ಓದಿದ ಶಾಲೆ ಇದು. ಇತ್ತೀಚೆಗೆ ಇಲ್ಲಿಗೆ ಭೇಟಿ ನೀಡಿದ್ದಾಗ ಕಟ್ಟಡವು ಶಿಥಿಲಗೊಂಡಿರುವುದನ್ನು ಕಂಡು ಬೇಸರವಾಗಿತ್ತು. ಇಂತಹ ಕಟ್ಟಡದಲ್ಲಿ ವಿದ್ಯಾರ್ಥಿಗಳು ಕಲಿಯುವುದು ಅಪಾಯಕಾರಿ ಎಂಬುದನ್ನು ಮನಗಂಡು ಸ್ಥಳೀಯರ ಜೊತೆಗೂಡಿ ಶಾಲೆಯನ್ನು ಅಭಿವೃದ್ಧಿಪಡಿಸಲು ನಿರ್ಧರಿಸಿದೆ' ಎಂದರು.



ಸಚಿವ ಬಿ.ಸಿ.ನಾಗೇಶ್ ಅವರು ವಿದ್ಯಾರ್ಥಿಯೊಂದಿಗೆ ಸಮಾಲೋಚಿಸಿದರು. ವಿ.ಎಸ್ ರೆಡ್ಡಿ ಹಾಗೂ ಶಾಸಕಿ ಸೌಮ್ಯಾ ರೆಡ್ಡಿ ಇದ್ದಾರೆ.

'ಮುಂದಿನ ದಿನಗಳಲ್ಲಿ ಶಾಲೆಯ ನಿರ್ವಹಣೆಗೆ ಅಗತ್ಯವಾಗಿರುವ ನೆರವು ನೀಡಲು ಸಿದ್ಧನಿದ್ದೇನೆ. ನಾನು ಅಕ್ಷರ ಕಲಿತ ಶಾಲೆಯಿಂದ ಇನ್ನಷ್ಟು ಮಂದಿ ಪ್ರತಿಭಾವಂತರು ಹೊರಬರಬೇಕು ಎಂಬ ಆಶಯ ಇದೆ. ಮಕ್ಕಳು ಈ ವ್ಯವಸ್ಥೆಯ ಪ್ರಯೋಜನ ಪಡೆದುಕೊಳ್ಳಬೇಕು. ಶಾಲೆಯಲ್ಲಿ ಕಂಪ್ಯೂಟರ್ ಪ್ರಯೋಗಾಲಯವಿದೆ. 12 ಕೊಠಡಿಗಳಿಗೆ ಹೈಟೆಕ್ ಸ್ಪರ್ಶ ನೀಡಲಾಗಿದೆ. ಖಾಸಗಿ ಶಾಲೆಗಳ ಮಾದರಿಯಲ್ಲೇ ಸ್ಮಾರ್ಟ್ ಕೊಠಡಿಗಳನ್ನು ನಿರ್ಮಿಸಲಾಗಿದೆ' ಎಂದು ತಿಳಿಸಿದರು.

ಶಾಸಕಿ ಸೌಮ್ಯಾ ರೆಡ್ಡಿ, ಸ್ಥಳೀಯ ಮುಖಂಡ ಎಸ್.ಕೆ.ನಟರಾಜ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಂಗಪ್ಪ, ಶಿಕ್ಷಣ ಇಲಾಖೆ ಉಪ ನಿರ್ದೇಶಕ ರಾಜೇಂದ್ರ, ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಪ್ರಕಾಶ್ ಭಾಗವಹಿಸಿದರು.

'ಕನ್ನಡಕ್ಕಾಗಿ ನಾವು' ವಿಶೇಷ ಅಭಿಯಾನ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಒಂದು ವಾರ ಹಮ್ಮಿಕೊಂಡಿರುವ 'ಕನ್ನಡಕ್ಕಾಗಿ ನಾವು' ವಿಶೇಷ ಅಭಿಯಾನದ ಭಾಗವಾಗಿ ನಗರದ ವಿವಿಧೆಡೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

'ಮಾತಾಡ್ ಮಾತಾಡ್ ಕನ್ನಡ' ಘೋಷವಾಕ್ಯದಡಿ ಕಾರ್ಯಕ್ರಮಗಳು ನಡೆಯಲಿವೆ. ಮೈಸೂರು, ಶಿವಮೊಗ್ಗ, ಕಲಬುರಗಿ ಹಾಗೂ ದಾವಣಗೆರೆ ರಂಗಾಯಣ, ಕರ್ನಾಟಕ ನಾಟಕ ಅಕಾಡೆಮಿ ಹಾಗೂ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಲಿವೆ.

ಅ.24ರಂದು (ಭಾನುವಾರ) ಬೆಳಿಗ್ಗೆ 10ಗಂಟೆಗೆ ರವೀಂದ್ರ ಕಲಾಕ್ಷೇತ್ರದಲ್ಲಿ 'ಪರ್ವ' ನಾಟಕ ಪ್ರದರ್ಶನ ಕಾಣಲಿದೆ. ಜಾಲಹಳ್ಳಿಯ ಬಿ.ಇ.ಎಲ್ ರಂಗಮಂದಿರದಲ್ಲಿ 'ಗುಲಾಬಿ ಗ್ಯಾಂಗ್' ನಾಟಕವನ್ನು ರಂಗ ಪಯಣ ತಂಡವು ಪ್ರಸ್ತುತಪಡಿಸಲಿದೆ. ಅ.25ರಂದು (ಸೋಮವಾರ) ಸಂಜೆ 5 ಗಂಟೆಗೆ ರವೀಂದ್ರ ಕಲಾಕ್ಷೇತ್ರದಲ್ಲಿ 'ಮೂಕನ ಮಕ್ಕಳು' ನಾಟಕ ಪ್ರದರ್ಶನವಾಗಲಿದೆ. ಮಲ್ಲೇಶ್ವರದ ಎಂ.ಇ.ಎಸ್ ಕಾಲೇಜಿನ ಸಭಾಭವನದಲ್ಲಿ 'ಮಾಯಾಬೇಟೆ' ನಾಟಕವನ್ನು ದೃಶ್ಯಕಾವ್ಯ ಪ್ರಸ್ತುತಪಡಿಸಲಿದೆ.

ಅ.26ರ ಸಂಜೆ 6.30ಕ್ಕೆ ಕಲಾಗ್ರಾಮದ ಸಾಂಸ್ಕೃತಿಕ ಸಮುಚ್ಚಯದಲ್ಲಿ 'ಚಾಣಕ್ಯ ಪ್ರಪಂಚ', ಸಂಜೆ 6.30ಕ್ಕೆ ರವೀಂದ್ರ ಕಲಾಕ್ಷೇತ್ರದಲ್ಲಿ 'ರಾಶಿ ಚಕ್ರ', ಶೇಷಾದ್ರಿಪುರ ಸಂಜೆ ಕಾಲೇಜಿನಲ್ಲಿ 'ಶಿವರಾತ್ರಿ' ನಾಟಕ ಹಾಗೂ ಪೀಣ್ಯದ ಬಿ.ಇ.ಎಲ್‌ನಲ್ಲಿ 'ಮೂಕನ ಮಕ್ಕಳು' ನಾಟಕಗಳು ಪ್ರದರ್ಶನ ಕಾಣಲಿವೆ.

ಅ.27ರಂದು ಸಂಜೆ 6.30ಕ್ಕೆ ಕಲ್ಯಾಣ ನಗರದ ಡಾ. ಶಿವಕುಮಾರಸ್ವಾಮಿ ಜ್ಞಾನಸೌಧದಲ್ಲಿ 'ಮೂಕನ ಮಕ್ಕಳು', ಕಲಾಗ್ರಾಮದ ಸಾಂಸ್ಕೃತಿಕ ಸಮುಚ್ಚಯದಲ್ಲಿ 'ಕನ್ನಡ ಕಲಿಯೋಣ ಬಾ' ನಾಟಕ, ಮಲ್ಲೇಶ್ವರದ ಕುವೆಂಪು ಸಭಾಂಗಣದಲ್ಲಿ 'ಕತ್ತಲೆಯ ಕೊರೊನಾ' ನಾಟಕ, ಮೆಜೆಸ್ಟಿಕ್‌ನ ಆರ್.ಎಂ.ಎಸ್. ಕನ್ನಡ ಸಂಘದಲ್ಲಿ ಮಹದೇವಯ್ಯ ತಂಡದಿಂದ ಸುಗಮ ಸಂಗೀತ ಕಾರ್ಯಕ್ರಮಗಳು ನಡೆಯಲಿವೆ.

ಅ.28ರಂದು ಸಂಜೆ 6.30ಕ್ಕೆ ಕುರುಬರಹಳ್ಳಿಯ ರಾಜಕುಮಾರ ಸಭಾಂಗಣದಲ್ಲಿ 'ಕತ್ತಲೆ ಕರೊನಾ' ನಾಟಕ, ಸುಚಿತ್ರ ಫಿಲ್ಮ್ ಸೊಸೈಟಿಯಲ್ಲಿ 'ಶ್ರದ್ಧಾ ಮತ್ತು ಸ್ಟೈನ್‌ಲೆಸ್ ಸ್ಟೀಲ್ ಪಾತ್ರೆಗಳು' ನಾಟಕ, ಆರ್‌ಪಿಸಿ ಬಡಾವಣೆಯ ಗ್ರಂಥಾಲಯ ಸಭಾಂಗಣದಲ್ಲಿ 'ಸಿರಿ ಪುರಂದರ' ನಾಟಕ ಹಮ್ಮಿಕೊಳ್ಳಲಾಗಿದೆ.

ಮುಸ್ಲಿಂ ಯುವತಿ ಪ್ರೀತಿಸಿದ್ದ ಲಿಂಗಾಯತ ಯುವಕ

ಮರ್ಯಾದೆಗೇಡು ಹತ್ಯೆ ಶಂಕೆ: ಇಬ್ಬರ ಸೆರೆ

ಪ್ರಜಾವಾಣಿ ವಾರ್ತೆ

ಆಲಮೇಲ (ವಿಜಯಪುರ): ತಾಲ್ಲೂಕಿನ ಬಳಗಾನೂರ ಗ್ರಾಮದಲ್ಲಿ ಮುಸ್ಲಿಂ ಯುವತಿಯನ್ನು ಪ್ರೀತಿಸುತ್ತಿದ್ದ ಲಿಂಗಾಯತ ಯುವಕನನ್ನು ಮರ್ಯಾದೆಗೇಡು ಹತ್ಯೆ ಮಾಡಿರುವ ಶಂಕೆ ವ್ಯಕ್ತವಾಗಿದೆ.

ರವಿ ನಿಂಬರಗಿ (34) ಹತ್ಯೆಯಾದ ಯುವಕ. ಗ್ರಾಮದ ಹೊಲವೊಂದರ ಬಾವಿಯಲ್ಲಿ ಯುವಕನ ಶವ ಪತ್ತೆಯಾಗಿದೆ.

ಈ ಕುರಿತು 'ಪ್ರಜಾವಾಣಿ'ಗೆ ಮಾಹಿತಿ ನೀಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಚ್.ಡಿ.ಆನಂದಕುಮಾರ್, ರವಿ ನಿಂಬರಗಿ ಮತ್ತು ಅದೇ ಗ್ರಾಮದ ಮುಸ್ಲಿಂ ಯುವತಿ ನಾಲ್ಕು ವರ್ಷಗಳಿಂದ ಪರಸ್ಪರ ಪ್ರೀತಿಸುತ್ತಿದ್ದರು. ಆದರೆ, ಯುವತಿಯ ತಂದೆ, ತಾಯಿ ಪ್ರೀತಿಗೆ ವಿರೋಧ ವ್ಯಕ್ತಪಡಿಸಿದ್ದರು. ಅಲ್ಲದೇ, ಪ್ರೇಮಿಗಳಿಗೆ ಈ ಸಂಬಂಧ ಎಚ್ಚರಿಕೆಯನ್ನೂ ನೀಡಿದ್ದರು ಎಂದು ಹೇಳಿದರು.



ಕೊಲೆಯಾದ ರವಿ

ವಿರೋಧದ ನಡುವೆಯೂ ಪ್ರೀತಿಸುತ್ತಿದ್ದ ಜೋಡಿಯನ್ನು ಬೇರೆ ಮಾಡುವ ಸಂಬಂಧ ಯುವತಿ ಕಡೆಯವರು ಅ.21ರಂದು ರವಿ ನಿಂಬರಗಿಯನ್ನು ಹೊತ್ತುಕೊಂಡು ಹೋಗಿ ಹೊಡೆಯುತ್ತಿರುವುದಾಗಿ ಮತ್ತು ಅವನ ಜೀವಕ್ಕೆ ಅಪಾಯ ಇದೆ ಎಂದು ಸ್ವತಃ ಯುವತಿಯೇ ಪೊಲೀಸ್ ಸಹಾಯವಾಣಿ ಸಂಖ್ಯೆ 112ಕ್ಕೆ ಕರೆ ಮಾಡಿ ವಿಷಯ ತಿಳಿಸಿದ್ದರು. ಯುವತಿ ನೀಡಿದ ಮಾಹಿತಿ ಆಧರಿಸಿ ದೂರು ದಾಖಲಿಸಿಕೊಳ್ಳಲಾಗಿದೆ ಎಂದರು.

ಪ್ರಕರಣದ ಹಿನ್ನೆಲೆಯಲ್ಲಿ ಯುವತಿಯ ಮನೆಯವರೆಲ್ಲರೂ ನಾಪತ್ತೆಯಾಗಿದ್ದರು. ಈ ಹಿನ್ನೆಲೆಯಲ್ಲಿ ಮೂರು ತನಿಖಾ ತಂಡ ರಚಿಸಲಾಗಿತ್ತು. ತಂಡವು ಯುವತಿಯ ಮಾವ ಮತ್ತು ಸಹೋದರರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದೆ. ಆರೋಪಿಗಳು ಯುವಕನನ್ನು ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿದ್ದಾರೆ ಎಂದು ತಿಳಿಸಿದರು.

ಯುವತಿಯ ಜೀವಕ್ಕೂ ಅಪಾಯ ಇದೆ ಎಂಬ ಕಾರಣಕ್ಕೆ ಸಾಂತ್ವನ ಕೇಂದ್ರದಲ್ಲಿ ಆಶ್ರಯ ನೀಡಲಾಗಿದೆ ಎಂದು ಹೇಳಿದರು.

ಚಿತ್ರಾವಳಿ



ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲಿನ ದೌರ್ಜನ್ಯ ಖಂಡಿಸಿ ಹಿಂದೂ ಜಾಗರಣ ವೇದಿಕೆ ಕಾರ್ಯಕರ್ತರು ಪುರಭವನದ ಮುಂದೆ ಪಂಜು ಹಿಡಿದು ಪ್ರತಿಭಟನೆ ನಡೆಸಿದರು



ಮಿಜೋರಾಂ ರಾಜಧಾನಿ ಐಜ್ವಾಲ್ ಮಹಾನಗರ ಪಾಲಿಕೆಯ ಮೇಯರ್ ಲಾಲ್ರಿನೆಂಗಾ ಸೈಲೊ ಅವರು ಶುಕ್ರವಾರ ಬಿಬಿಎಂಪಿ ಕಚೇರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಹೂಗುಚ್ಛ ನೀಡಿ ಬರಮಾಡಿಕೊಂಡರು. ನಂತರ ಆಡಳಿತ, ಘನತ್ಯಾಜ್ಯ ವಿಲೇವಾರಿ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಚರ್ಚಿಸಿದರು



ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ರುಕ್ಮಿಣಿ ನಗರ ಹಾಗೂ ನೆಲಗದರನಹಳ್ಳಿ ಹಳೆ ಗ್ರಾಮದ ರಸ್ತೆಗಳಲ್ಲಿ ಒಳಚರಂಡಿ ಹಾಗೂ ಕಾಂಕ್ರೀಟ್ ರಸ್ತೆ ಕಾಮಗಾರಿಗಳಿಗೆ ಶಾಸಕ ಆರ್.ಮಂಜುನಾಥ್ ಶುಕ್ರವಾರ ಚಾಲನೆ ನೀಡಿದರು. ಜೆಡಿಎಸ್ ಮುಖಂಡರಾದ ಮುನಿಸ್ವಾಮಣ್ಣ, ಗೋವಿಂದಪ್ಪ, ರಂಗಣ್ಣ, ಮಂಜು, ರಾಜಕುಮಾರ್, ರವಿ, ಚಂದ್ರಶೇಖರ್, ದಯಾನಂದ್, ಕೆಂಪೇಗೌಡ, ನಾರಾಯಣ್ ಹಾಗೂ ಇತರರು ಇದ್ದರು

'ಕಸಾಪ ಚುನಾವಣೆ: ರಾಜಕಾರಣಿಗಳ ಪ್ರಚಾರಕ್ಕೆ ಆಕ್ಷೇಪ'

ಬೆಂಗಳೂರು: 'ಸ್ವಾಯತ್ತ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಚುನಾವಣೆಯಲ್ಲಿ ಅಭ್ಯರ್ಥಿಯೊಬ್ಬರ ಪರ ಬಿಜೆಪಿ ಶಾಸಕರು ಹಾಗೂ ಆರೆಸ್ಸೆಸ್ ಪ್ರಮುಖರು ಪ್ರಚಾರ ಮಾಡುತ್ತಿರುವುದು ಪರಿಷತ್ತಿನ ಪ್ರಜಾಸತ್ತಾತ್ಮಕ ಸ್ವಾಯತ್ತತೆಗೆ ಧಕ್ಕೆ ತರುವ ವರ್ತನೆ' ಎಂದು ಸಾಹಿತಿಗಳು ಹಾಗೂ ಚಿಂತಕರು ಬೇಸರ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಎಸ್.ಜಿ. ಸಿದ್ಧರಾಮಯ್ಯ, ಕೆ. ಮರುಳಸಿದ್ಧಪ್ಪ, ಬಂಜಗೆರೆ ಜಯಪ್ರಕಾಶ್, ಮಲ್ಲಿಕಾ ಘಂಟಿ ಹಾಗೂ ರುದ್ರಪ್ಪ ಹನಗವಾಡಿ ಜಂಟಿ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

'ಗಂಗಾವತಿ ಕ್ಷೇತ್ರದ ಬಿಜೆಪಿ ಶಾಸಕ ಪರಣ್ಣ ಮುನವಳ್ಳಿ ಅವರ ಹೇಳಿಕೆ ಹಾಗೂ ಆರ್.ಎಸ್.ಎಸ್.ನ ಕೆಲವು ಮುಖಂಡರ ಆಕ್ರಮಣಕಾರಿ ವರ್ತನೆ ಪರಿಷತ್ತಿನ ಪ್ರಜಾಸತ್ತಾತ್ಮಕ ಸ್ವಾಯತ್ತತೆಗೆ ಧಕ್ಕೆ ತರಲಿವೆ. ಆದ್ದರಿಂದ ಅವರುಗಳು ತಮ್ಮ ನಿಲುವುಗಳಿಗೆ ವಿಷಾದ ಸೂಚಿಸಿ, ಅಭಿಪ್ರಾಯವನ್ನು ಬದಲಿಸಿಕೊಳ್ಳಲಿ. ಅಭ್ಯರ್ಥಿ ಮಹೇಶ್ ಜೋಶಿ ಅವರು ಈ ಬಗ್ಗೆ ಹೊಣೆಯರಿತು, ಪರಿಷತ್ತಿನ ಸ್ವಾಯತ್ತತೆಗೆ ಧಕ್ಕೆ ಬಾರದಂತೆ ಜವಾಬ್ದಾರಿ ಮೆರೆಯಲಿ' ಎಂದು ಹೇಳಿದ್ದಾರೆ.

'ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಸಾಂಸ್ಕೃತಿಕ ಸಾಕ್ಷಿಪ್ರಜ್ಞೆಯಂತಿರಬೇಕಾದ ಸ್ವಾಯತ್ತ ಸಾಂಸ್ಕೃತಿಕ ಸಂಸ್ಥೆ. ಇದುವರೆಗಿನ ಅಧ್ಯಕ್ಷರ ಚುನಾವಣೆಗಳಲ್ಲಿ ಯಾವುದೇ ರಾಜಕೀಯ ಪಕ್ಷಗಳು ನೇರವಾಗಿ ಅಥವಾ ಪರೋಕ್ಷವಾಗಿ ಪ್ರವೇಶಿಸಿರಲಿಲ್ಲ. ಎಲ್ಲ ಪಕ್ಷಗಳೂ ಪರಿಷತ್ತಿನ ಸಾಂಸ್ಕೃತಿಕ ವಾತಾವರಣಕ್ಕೆ ರಾಜಕೀಯ ಸುಳಿಯದಂತೆ ಎಚ್ಚರವಹಿಸಿದ್ದವು. ಆದರೆ, ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ ಶಾಸಕರು, ಆರ್.ಎಸ್.ಎಸ್.ನ ಪ್ರಮುಖರು ನೇರವಾಗಿ ವ್ಯಕ್ತಿಯೊಬ್ಬರಿಗೆ ಬೆಂಬಲ ಘೋಷಿಸಿರುವುದು ಅಪಾಯಕಾರಿ ಬೆಳವಣಿಗೆ' ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

'ಸ್ವಾಯತ್ತ ಸಂಸ್ಥೆಯನ್ನು ರಾಜಕೀಯ ಪಕ್ಷಕ್ಕೆ ಅಡವಿಟ್ಟಂತೆ ರಾಜಕಾರಣ ನಡೆಸುವುದು ಖಂಡನೀಯ ನಡವಳಿಕೆ. ಪಕ್ಷಗಳೂ ಈ ಬಗ್ಗೆ ಆರೋಗ್ಯಕರ ನಿಲುವು ತಾಳಿದಂತೆ ಅಂತರ ಕಾಯ್ದುಕೊಳ್ಳಬೇಕಾದ ಹೊಣೆಗಾರಿಕೆಯನ್ನು ತೋರುವ ಅವಶ್ಯಕತೆ ಇದೆ' ಎಂದು ತಿಳಿಸಿದ್ದಾರೆ.

'ಕೀಟನಾಶಕ ಬಳಸಿ ಜೇನು ಸಂತತಿ ಕ್ಷೀಣ'

ಯಲಹಂಕ: 'ಕೀಟನಾಶಕ ಮತ್ತು ಕಳೆನಾಶಕಗಳ ಸಿಂಪಡಣೆಯಿಂದ ಜೇನು ಹುಳುಗಳ ಸಂತತಿ ಕ್ಷೀಣಿಸುತ್ತಿದ್ದು, ಇದರಿಂದ ಆಹಾರ ಉತ್ಪಾದನೆ ಮೇಲೆ ಗಂಭೀರವಾದ ಪರಿಣಾಮ ಬೀರಿದೆ' ಎಂದು ಕೃಷಿ ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಡಾ.ಕೆ.ನಾರಾಯಣಗೌಡ ಕಳವಳ ವ್ಯಕ್ತಪಡಿಸಿದರು.

ಕೃಷಿ ವಿಶ್ವವಿದ್ಯಾಲಯದ ಜೇನು ಕೃಷಿ ವಿಭಾಗದ ವತಿಯಿಂದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ (ಜಿಕೆವಿಕೆ) ಶುಕ್ರವಾರ ಆಯೋಜಿಸಿದ್ದ ಸುಸ್ಥಿರ ಹೆಜ್ಜೇನು ಕೊಯ್ಲು ಕಾರ್ಯಾಗಾರ ಮತ್ತು ರಕ್ಷಣಾ ವಸ್ತ್ರ ವಿತರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಜೇನು ಹುಳುಗಳ ಪರಾಗಸ್ಪರ್ಶದಿಂದ ಆಹಾರ ಉತ್ಪಾದನೆ ಗಣನೀಯವಾಗಿ ವೃದ್ಧಿಯಾಗುತ್ತದೆ. ಸಾವಯವ ಮತ್ತು ನೈಸರ್ಗಿಕ ಕೃಷಿ ಪದ್ಧತಿಗಳ ಮೂಲಕ ಸುಸ್ಥಿರ ಕೃಷಿ ಮಾಡುವುದರಿಂದ ಜೇನು ಹುಳ ಮತ್ತು ಇತರ ಕೀಟಗಳನ್ನು ಸಂರಕ್ಷಿಸಬಹುದು' ಎಂದರು.

'ಜೇನು ತುಪ್ಪದಲ್ಲಿ ಔಷಧೀಯ ಗುಣಗಳು ಅಧಿಕವಾಗಿದ್ದು, ಆರೋಗ್ಯಕ್ಕೆ ಉಪಯುಕ್ತ. ಜೇನಿನಿಂದ ಬೆಳೆಗಳ ಉತ್ಪಾದನೆ ಹೆಚ್ಚಾಗುವ ಜೊತೆಗೆ ರೈತರ ಆದಾಯವೂ ವೃದ್ಧಿಯಾಗುತ್ತದೆ' ಎಂದು ಹೇಳಿದರು.

ಜೇನು ಕೃಷಿ ವಿಭಾಗದ ಮುಖ್ಯಸ್ಥ ಕೆ.ಟಿ.ವಿಜಯ ಕುಮಾರ್,'ನಗರದ ಬೃಹತ್ ಕಟ್ಟಡಗಳಲ್ಲಿ ಸ್ವಾಭಾವಿಕವಾಗಿ ಹೆಜ್ಜೇನು ಗೂಡು ಕಟ್ಟಿಕೊಳ್ಳುತ್ತವೆ. ರೈತಸ್ನೇಹಿ ಮತ್ತು ಪರಾಗಸ್ಪರ್ಶದ ಪ್ರಾಮುಖ್ಯತೆ ತಿಳಿಯದ ಅನೇಕರು, ಜೇನು ಕುಟುಂಬಗಳಿಗೆ ಕೀಟನಾಶಕ ಸಿಂಪಡಿಸಿ ನಾಶಪಡಿಸುತ್ತಾರೆ' ಎಂದು ಬೇಸರ ವ್ಯಕ್ತಪಡಿಸಿದರು.

'ಜೇನು ಹುಳುಗಳನ್ನು ಕೊಲ್ಲದೆ, ಸುಲಭವಾಗಿ ಸ್ಥಳಾಂತರಿಸಬಹುದಾದ ತಾಂತ್ರಿಕ ಸಂರಕ್ಷಣಾ ಕ್ರಮಗಳ ಬಗ್ಗೆ ಜಾಗೃತಿ ಮೂಡಿಸುವುದೇ ಈ ಕಾರ್ಯಾಗಾರದ ಉದ್ದೇಶ' ಎಂದರು.

ಪುಸ್ತಕ ಪ್ರದರ್ಶನ: ಅರ್ಜಿ ಆಹ್ವಾನ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಅ.29ರಿಂದ ನ.2ರವರೆಗೆ 'ಕನ್ನಡಕ್ಕಾಗಿ ನಾವು' ವಿಶೇಷ ಅಭಿಯಾನವನ್ನು ಹಮ್ಮಿಕೊಂಡಿದ್ದು, ಈ ಅವಧಿಯಲ್ಲಿ ಕನ್ನಡ ಪುಸ್ತಕ, ಚಿತ್ರ ಮತ್ತು ಶಿಲ್ಪ ಕಲೆಗಳ ಪ್ರದರ್ಶನ,ಮಾರಾಟ ಮಳಿಗೆಗಳ ಸ್ಥಾಪನೆಗೆ ಅರ್ಜಿ ಆಹ್ವಾನಿಸಲಾಗಿದೆ.

5 ದಿನಗಳ ಈ ಅಭಿಯಾನವು ಇಲ್ಲಿನ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ನಡೆಯಲಿದೆ. ಮೇಳದಲ್ಲಿ ಕನ್ನಡ ಪ್ರಕಾಶಕರು, ಮಾರಾಟಗಾರರು, ಚಿತ್ರ ಕಲಾವಿದರು ಹಾಗೂ ಶಿಲ್ಪ ಕಲಾವಿದರು ಭಾಗವಹಿಸಬಹುದಾಗಿದೆ. ಪುಸ್ತಕ ಮಾರಾಟಕ್ಕೆ 50 ಮಳಿಗೆ, ಚಿತ್ರ ಕಲೆ ಮತ್ತು ಶಿಲ್ಪ ಕಲೆಗಳಿಗೆ ಒಟ್ಟು 50 ಮಳಿಗೆಗಳನ್ನು ಮೀಸಲಿರಿಸಲಾಗುತ್ತದೆ. ಅರ್ಜಿ ನಮೂನೆಗಳು ಪ್ರಾಧಿಕಾರದ ಕೇಂದ್ರ ಕಚೇರಿ ಅಥವಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಿಲ್ಲಾ ಸಹಾಯಕ ನಿರ್ದೇಶಕರ ಕಚೇರಿಗಳಲ್ಲಿ ದೊರೆಯಲಿವೆ. ಪ್ರಾಧಿಕಾರದ ವೆಬ್‌ಸೈಟ್ wwwkannadapustakapradhikara.comನಲ್ಲಿಯೂ ಲಭ್ಯವಿದೆ. ಭರ್ತಿಮಾಡಿದ ಅರ್ಜಿಯನ್ನು ಡಿ.ಡಿ.ಯೊಂದಿಗೆ ಇದೇ 27ರ ಸಂಜೆ 5 ಗಂಟೆಯೊಳಗೆ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು ಈ ವಿಳಾಸಕ್ಕೆ ಅಂಚೆಯ ಮೂಲಕ ಸಲ್ಲಿಸಬೇಕು.

'ಪರ್ವ' ಪ್ರದರ್ಶನಕ್ಕೆ ನಗರದ ಜನತೆಯಿಂದ ಉತ್ತಮ ಪ್ರತಿಕ್ರಿಯೆ

ವರ್ಷಗಳ ಬಳಿಕ ಭರ್ತಿಯಾದ ರವೀಂದ್ರ ಕಲಾಕ್ಷೇತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ರಂಗಾಯಣ ಪ್ರಸ್ತುತಪಡಿಸಿದ 'ಪರ್ವ' ನಾಟಕದ ಪ್ರದರ್ಶನಕ್ಕೆ ರವೀಂದ್ರ ಕಲಾಕ್ಷೇತ್ರದಲ್ಲಿ ಶನಿವಾರ ಚಾಲನೆ ದೊರೆತಿದ್ದು, ನಗರದ ಜನತೆಯಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಎರಡು ವರ್ಷಗಳ ಬಳಿಕ ರವೀಂದ್ರ ಕಲಾಕ್ಷೇತ್ರದ ಎಲ್ಲ ಆಸನಗಳು ಭರ್ತಿಯಾದದ್ದು ವಿಶೇಷ.

ಕನ್ನಡ ರಂಗಭೂಮಿಯ ಇತಿಹಾಸದಲ್ಲಿಯೇ ವಿಶಿಷ್ಟ ಪ್ರಯತ್ನ ಎನ್ನಲಾದ 8 ಗಂಟೆಯಷ್ಟು ಸುದೀರ್ಘ ಅವಧಿಯ ನಾಟಕ ಪ್ರದರ್ಶನಕ್ಕೆ ಸಾಹಿತಿ ಎಸ್.ಎಲ್. ಭೈರಪ್ಪ, ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ ಚಾಲನೆ ನೀಡಿದರು.

ಬೆಳಿಗ್ಗೆ 10 ಗಂಟೆಯಿಂದ ಮೂಡಿ ಬಂದ 'ಪರ್ವ'ದ ದೃಶ್ಯಗಳು ಪ್ರೇಕ್ಷಕರನ್ನು ಕುರ್ಚಿಯಲ್ಲೇ ಬಂಧಿಸಿದವು. ಆರಂಭದಲ್ಲೇ ಕಂಡು ಬಂದ ಧೃತರಾಷ್ಟ್ರ ಭೀಮನನ್ನು ಕೊಲ್ಲುವ ದೃಶ್ಯ ಪ್ರೇಕ್ಷಕರ ಕುತೂಹಲವನ್ನು ಕೆರಳಿಸಿತು. ಈ ಸಮಯದಲ್ಲಿ ಮೂಡಿ ಬಂದ ಬೆಳಕಿನ ವಿನ್ಯಾಸ ನೋಡುಗರನ್ನು ಆರಂಭದಲ್ಲಿಯೇ ಸೆಳೆಯುವಲ್ಲಿ ಯಶಸ್ವಿಯಾಯಿತು.



ಮೈಸೂರು ರಂಗಾಯಣ ಪ್ರಸ್ತುತಪಡಿಸಿದ 'ಪರ್ವ' ನಾಟಕದ ದೃಶ್ಯ – ಪ್ರಜಾವಾಣಿ ಚಿತ್ರಗಳು

> **'ಪರ್ವ' ರಂಗ ಪ್ರಯೋಗವು ಭಾರತೀಯ ರಂಗಭೂಮಿಗೆ ದೊಡ್ಡ ಕೊಡುಗೆಯಾಗಿದೆ. ಕನ್ನಡದಲ್ಲಿ ಮಾತ್ರ ಇಂತಹ ಕೆಲಸಗಳು ಆಗುತ್ತವೆ**
> **ಚಂದ್ರಶೇಖರ ಕಂಬಾರ**
> ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ

ಕುಂತಿಯು ತನ್ನ ನೆನಪಿನ ಸುರುಳಿಗಳನ್ನು ಬಿಚ್ಚಿಡುವಾಗ ಒಂದೇ ಅವಧಿಯಲ್ಲಿ ಎರಡು, ಮೂರು ದೃಶ್ಯಗಳನ್ನು ಒಪ್ಪವಾಗಿ ಜೋಡಿಸಿ, ತೋರಿಸಿದ ನಿರ್ದೇಶಕರ ಜಾಣ್ಮೆಗೆ ಪ್ರೇಕ್ಷಕರು ತಲೆದೂಗಿದರು.

ದುರ್ಯೋಧನ ಪ್ರೇಕ್ಷಕರ ಸಮೂಹದೊಳಗೆ ನುಗ್ಗುವುದು, ಗಾಂಧಾರಿ ಕನ್ನಡಿ ಮುಂದೆ ಮಾತನಾಡುವುದು ಸೇರಿದಂತೆ ನಾಟಕದ ಕೊನೆಯ ದೃಶ್ಯಗಳು ಪ್ರೇಕ್ಷಕರನ್ನು ತುದಿಗಾಲ ಮೇಲೆ ನಿಲ್ಲಿಸಿದವು. ನಾಟಕ ಮುಗಿಯುತ್ತಿದ್ದಂತೆ ನಟ, ನಟಿಯರು ಎಲ್ಲರಿಗೂ ಕೈ ಮುಗಿಯುತ್ತ ಕಲಾಮಂದಿರದ ಮುಖ್ಯದ್ವಾರದಿಂದ ನಿರ್ಗಮಿಸುತ್ತಿದ್ದಂತೆ, ಪ್ರೇಕ್ಷಕರು ಎದ್ದುನಿಂತು ಕರತಾಡನ ಮಾಡುವ ಮೂಲಕ ಮೆಚ್ಚುಗೆ ಸೂಚಿಸಿದರು.

ಇಂದು ಕೊನೆಯ ಪ್ರದರ್ಶನ

ಸಾಹಿತಿ ಎಸ್.ಎಲ್. ಭೈರಪ್ಪ ಅವರ ಕಾದಂಬರಿ ಆಧರಿಸಿದ 'ಪರ್ವ' ನಾಟಕವು ಭಾನುವಾರವೂ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶನ ಕಾಣಲಿದೆ. ನಾಟಕದ ಎಲ್ಲ ಟಿಕೆಟ್‌ಗಳು ಬಿಕರಿ ಆಗಿವೆ. ಈ ನಾಟಕವನ್ನು ರಂಗ ಕರ್ಮಿ ಪ್ರಕಾಶ್ ಬೆಳವಾಡಿ ನಿರ್ದೇಶಿಸಿದ್ದಾರೆ.

'ನಿರೀಕ್ಷೆಯಂತೆ ನಾಟಕಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಭೈರಪ್ಪ ಅವರ ಕಾದಂಬರಿಗೆ ದೊಡ್ಡ ಅಭಿಮಾನಿ ಬಳಗವಿದೆ. ಜನರ ಈ ಸ್ಪಂದನೆ ಹೊಸ ಭರವಸೆ ಮೂಡಿಸಿದೆ. ಈ ನಾಟಕ ಪ್ರದರ್ಶದಿಂದ ಕಲಾಕ್ಷೇತ್ರಕ್ಕೂ ಹೊಸ ಕಳೆ ಬಂದಿದೆ' ಎಂದು ಮೈಸೂರು ರಂಗಾಯಣದ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ ತಿಳಿಸಿದರು.

ನಗರದಲ್ಲಿ ಇಂದು

'ಕನ್ನಡಕ್ಕಾಗಿ ನಾವು' ವಿಶೇಷ ಅಭಿಯಾನಕ್ಕೆ ಕಿರು ನಾಟಕದ ಮೂಲಕ ಚಾಲನೆ ಹಾಗೂ ಕನ್ನಡೇತರರಿಗೆ ಕನ್ನಡ ಕಲಿಸುವ ಕಿರು ಹೊತ್ತಿಗೆ ವಿತರಣೆ(ಬೆಳಿಗ್ಗೆ 8.30): ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್, ಸ್ಥಳ–ಲಾಲ್‌ಬಾಗ್ ಒಳ ಆವರಣ, ಕನ್ನಡ ಅಭಿಯಾನದ ಸ್ವಯಂ ಭಾವಚಿತ್ರ ಕೇಂದ್ರದ ಉದ್ಘಾಟನೆ, ಸ್ಥಳ–ಲಾಲ್‌ಬಾಗ್ ಮೆಟ್ರೊ ನಿಲ್ದಾಣ, ಬೆಳಿಗ್ಗೆ 9.30


ಎಸ್.ಎಲ್.ಭೈರಪ್ಪ ಅವರ ಕಾದಂಬರಿ ಆಧಾರಿತ ಪರ್ವ ನಾಟಕ ಪ್ರದರ್ಶನ: ಚಾಲನೆ–ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್, ಆಯೋಜನೆ–ರಂಗಾಯಣ, ಸ್ಥಳ–ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 9.55

ದಸರಾ ಅಕ್ಷರೋತ್ಸವ:ಹಾಸ್ಯ ನಾಟಕ ಸ್ಪರ್ಧೆ ಹಾಗೂ ಕವಿಗೋಷ್ಠಿ, ಉದ್ಘಾಟನೆ–ಸುಧಾ ಶರ್ಮಾ, ಅಧ್ಯಕ್ಷತೆ–ಸುಂದರ್ ವೀಣಾ, ಅತಿಥಿಗಳು–ಯೋಗೇಶ್ ಮಾಸ್ಟರ್, ಗಂಡಸಿ ಸದಾನಂದಸ್ವಾಮಿ, ಜಿ.ಎಸ್.ಪುಷ್ಪಲತಾ, ಆಯೋಜನೆ–ಅಕ್ಷರ ಚಪ್ಪರ, ಸ್ಥಳ–ಜಯಪ್ರಕಾಶ್ ನಾರಾಯಣ ಸಭಾಂಗಣ, ಗಾಂಧಿ ಭವನ, ಬೆಳಿಗ್ಗೆ 10

ಪ್ರೊ.ಅಶ್ವತ್ಥನಾರಾಯಣ ಅವರಿಗೆ ಅಭಿನಂದನಾ ಕಾರ್ಯಕ್ರಮ:ಅಧ್ಯಕ್ಷತೆ–ಎಸ್.ಚಂದ್ರಶೇಖರ್, ಉದ್ಘಾಟನೆ–ಪುಟ್ಟಣ್ಣ, ಪುಸ್ತಕ ಬಿಡುಗಡೆ–ಹಿ.ಚಿ. ಬೋರಲಿಂಗಯ್ಯ, ಅಭಿನಂದನಾ ನುಡಿ–ಕೆ.ವೈ.ನಾರಾಯಣಸ್ವಾಮಿ, ಸ್ಥಳ–ಬಾಪೂಜಿ ಸಭಾಂಗಣ, ಸರ್ಕಾರಿ ಕಲಾ ಕಾಲೇಜು, ಅಂಬೇಡ್ಕರ್ ವೀದಿ, ಬೆಳಿಗ್ಗೆ 10.30

'ನಿಜವಾದ ದೇಶಪ್ರೇಮಿ ಸಂಘಸಖ್ಯದಲ್ಲಿ ಇರಲಾರ' ಕುರಿತು ಉಪನ್ಯಾಸ:ಪ್ರೊ.ಎಲ್.ಎನ್.ಮುಕುಂದರಾಜ್, ಅಧ್ಯಕ್ಷತೆ–ಎ.ಎಸ್. ನಟರಾಜ್, ಭಾಗವಹಿಸುವವರು–ಆರ್. ನಾಗೇಶ್ ಅರಳಕುಪ್ಪೆ, ಗೀತಾ ಚಂದ್ರಹಾಸ, ಆಯೋಜನೆ–ಅಖಿಲ ಕರ್ನಾಟಕ ವಿಚಾರವಾದಿ ಟ್ರಸ್ಟ್, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)

ಪುಸ್ತಕಗಳ ಬಿಡುಗಡೆ:ಪರಿಸರವಾದಿ ನಾಗೇಶ ಹೆಗಡೆ, ಅತಿಥಿಗಳು–ವಿಮರ್ಶಕಿ ಎಂ.ಎಸ್.ಆಶಾದೇವಿ, ಲೇಖಕ ಎಚ್.ಎಸ್. ಸತ್ಯನಾರಾಯಣ, ಪುಸ್ತಕಗಳು–ಬೋಳುವಾರ ಮಹಮದ್ ಕುಂಞ ಅವರ 'ಆಕಾಶಕ್ಕೆ ನೀಲಿ ಪರದೆ', ಪದ್ಮನಾಭ ಭಟ್ ಶೇವ್ಕಾರ ಅವರ 'ದೇವ್ರು', ಎ.ಎನ್.ಪ್ರಸನ್ನ ಅವರ 'ಬಿಡುಗಡೆ', , ಆಯೋಜನೆ–ಅಂಕಿತ ಪುಸ್ತಕ, ಸ್ಥಳ–ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10.30



ನಾಗೇಶ ಹೆಗಡೆ

'ಗಣಿತಗನ್ನಡಿ' ವಿಚಾರ ಸಂಕಿರಣ:ಭಾಗವಹಿಸುವವರು–ಸೀತಾರಾಮ ಜಾವಗಲ್, ಬಿ.ಎಸ್.ಶೈಲಜಾ, ಪ್ರೊ.ಬಾಲಚಂದ್ರ ರಾವ್, ಬೈರಮಂಗಲ ರಾಮೇಗೌಡ, ಆಯೋಜನೆ–ಬಿ.ಎಂ.ಶ್ರೀ ಪ್ರತಿಷ್ಠಾನ, ಬೆಳಿಗ್ಗೆ 10.30 (ಆನ್‌ಲೈನ್ ಕಾರ್ಯಕ್ರಮ)

ಜಯಪ್ರಕಾಶ್ ನಾರಾಯಣ್ ಅವರ ಜನ್ಮದಿನ:ಮುಖ್ಯಭಾಷಣ–ಬಿ.ಟಿ. ಲಲಿತಾ ನಾಯಕ್, ಅತಿಥಿಗಳು–ಸುಂದರಪ್ಪ, ಎನ್. ಪಿ.ಅಮೃತೇಶ್, ಅಧ್ಯಕ್ಷತೆ–ಮಂಜುಳಾ ಉಮೇಶ್, ಆಯೋಜನೆ–ಜನತಾ ಪಾರ್ಟಿ, ಸ್ಥಳ–ಸಾಗರ್ ಹೋಟೆಲ್, ಶೇಷಾದ್ರಿಪುರ ಕಾಲೇಜಿನ ಹತ್ತಿರ, ಬೆಳಿಗ್ಗೆ 11.30



ಬಿ.ಟಿ.ಲಲಿತಾ ನಾಯಕ್

ಜೆಡಿಎಸ್ ಸೇರ್ಪಡೆ ಪರ್ವ ಹಾಗೂ ಪ್ರತಿಜ್ಞಾವಿಧಿ ಸಮಾ ರಂಭ:ಅತಿಥಿಗಳು–ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಶಾಸಕ ಆರ್.ಮಂಜುನಾಥ್, ಆಯೋಜನೆ–ದಾಸರಹಳ್ಳಿ ಜೆಡಿಎಸ್ ಘಟಕ, ಸ್ಥಳ–ಶಾಸಕರ ಕಚೇರಿ, ನಾಗಸಂದ್ರ ಮೆಟ್ರೊ ಹಿಂಭಾಗ, 8ನೇ ಮೈಲಿ, ಮಧ್ಯಾಹ್ನ 12

'ಕನ್ನಡಕ್ಕಾಗಿ ನಾನು' ವಿಶೇಷ ಅಭಿಯಾನ: ಚಾಲನೆ–ರಾಜ್ಯಪಾಲ ಥಾವರಚಂದ್ ಗೆಹಲೋತ್, ಸಚಿವ ವಿ.ಸುನಿಲ್ ಕುಮಾರ್, ಆಯೋಜನೆ–ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ–ಗಾಜಿನ ಮನೆ, ರಾಜಭವನ, ಸಂಜೆ 6.30

'ಮಾಸಿಕ ಜನಸಂಪರ್ಕ ಸಭೆ': ವೈಯಾಲಿಕಾವಲ್ ಠಾಣೆ ವ್ಯಾಪ್ತಿಯ ಜನರ ದೂರು

'ಗಾಂಜಾ ನಶೆಯಲ್ಲಿ ಯುವಕರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಚಾರ ಪೊಲೀಸರು ನಿಯಮಬಾಹಿರವಾಗಿ ವಾಹನಗಳ ಟೋಯಿಂಗ್ ಮಾಡುತ್ತಾರೆ. ಕೆಲ ಯುವಕರು ಗಾಂಜಾ ನಶೆ ಏರಿಸಿಕೊಂಡು ಜನರಿಗೆ ಕಿರಿಕಿರಿಯನ್ನುಂಟು ಮಾಡುತ್ತಾರೆ. ಕೆಲ ಕಿಡಿಗೇಡಿಗಳು, ಯುವತಿಯರನ್ನು ಚುಡಾಯಿಸುತ್ತಾರೆ...'

ಇವು ವೈಯಾಲಿಕಾವಲ್ ಠಾಣೆ ವ್ಯಾಪ್ತಿಯ ಜನರ ದೂರುಗಳು.

ನಗರದ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರು ಶನಿವಾರ ನಡೆಸಿದ 'ಮಾಸಿಕ ಜನಸಂಪರ್ಕ ಸಭೆ'ಯಲ್ಲಿ ಪಾಲ್ಗೊಂಡಿದ್ದ ಜನ, ಸಮಸ್ಯೆಗಳನ್ನು ಹೇಳಿಕೊಂಡರು.

ವಾಹನ ಟೋಯಿಂಗ್ ವೇಳೆ ನಿಯಮ ಪಾಲಿಸದ ಬಗ್ಗೆ ಸಭೆಯಲ್ಲಿ ಗಮನ ಸೆಳೆದ ಮಹಿಳೆಯೊಬ್ಬರು, 'ವಾಹನ ಟೋಯಿಂಗ್ ಮಾಡುವ ವೇಳೆ ಪೊಲೀಸರು, ಧ್ವನಿವರ್ಧಕದಲ್ಲಿ ನೋಂದಣಿ ಸಂಖ್ಯೆ ಕೂಗುವುದಿಲ್ಲ. ಇತ್ತೀಚೆಗಷ್ಟೇ ನನ್ನ ದ್ವಿಚಕ್ರ ವಾಹನವನ್ನು ನಿಯಮಬಾಹಿರವಾಗಿ ಟೋಯಿಂಗ್ ಮಾಡಿದ್ದರು' ಎಂದರು.


ಕಮಲ್ ಪಂತ್

ಕಮಿಷನರ್, 'ಟೋಯಿಂಗ್ ವೇಳೆ ನಿಯಮ ಉಲ್ಲಂಘಿಸುವ ಪೊಲೀಸರು ಹಾಗೂ ಸಿಬ್ಬಂದಿ ವಿರುದ್ಧ ಕ್ರಮ ಜರುಗಿಸಲಾಗುತ್ತಿದೆ. ನಿರ್ದಿಷ್ಟ ಸಮಸ್ಯೆ ಇದ್ದರೆ, ದೂರು ನೀಡಬಹುದು. ಪರಿಶೀಲಿಸಲಾಗುವುದು' ಎಂದರು.

ಇನ್ನೊಬ್ಬ ಮಹಿಳೆ, 'ಠಾಣೆ ವ್ಯಾಪ್ತಿಯಲ್ಲಿ ಹೆಚ್ಚು ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಬೇಕು. ಇದರಿಂದ ಅಪರಾಧಗಳಿಗೆ ಕಡಿವಾಣ ಹಾಕಬಹುದು' ಎಂದರು.

ಕೇಂದ್ರ ವಿಭಾಗದ ಡಿಸಿಪಿ ಎಂ.ಎನ್. ಅನುಚೇತ್, 'ಬಸ್ ಪ್ರಯಾಣಿಕರ ತಂಗುದಾಣ, ಶಾಲೆ-ಕಾಲೇಜು, ಜನರ ಹೆಚ್ಚು ಓಡಾಡುವ 48 ಸ್ಥಳಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಲಾಗಿದೆ' ಎಂದರು.

ವೃದ್ಧರೊಬ್ಬರು, 'ಉದ್ಯಾನಗಳ ಬಳಿ ಸೇರುವ ಕೆಲ ಯುವಕರು, ಗಾಂಜಾ ನಶೆ ಏರಿಸಿಕೊಂಡು ವಿಚಿತ್ರವಾಗಿ ವರ್ತಿಸುತ್ತಾರೆ. ವಾಯುವಿಹಾರಿಗಳಿಗೆ ಕಿರಿಕಿರಿಯನ್ನುಂಟು ಮಾಡುತ್ತಾರೆ. ಕೆಲ ಕಿಡಿಗೇಡಿಗಳು, ಯುವತಿಯರನ್ನು ಚುಡಾಯಿಸುತ್ತಾರೆ' ಎಂದು ದೂರಿದರು.

ಕಮಿಷನರ್, 'ಇಂತಹ ದೂರುಗಳು ಪದೇ ಪದೇ ಬರುವಂತಹ ಸ್ಥಳಗಳಲ್ಲಿ ಗಸ್ತು ಹೆಚ್ಚಿಸಲಾಗುವುದು. ಗಾಂಜಾ ಸೇವಿಸುವವರನ್ನು ಪತ್ತೆ ಮಾಡಿ ಪ್ರಕರಣ ದಾಖಲಿಸಲಾಗುವುದು' ಎಂದು ಭರವಸೆ ನೀಡಿದರು.

ಪಬ್‌ಗಳಿಗೆ ಡ್ರಗ್ಸ್ ಪೂರೈಸುತ್ತಿದ್ದವರ ಬಂಧನ

ಬೆಂಗಳೂರು: ಪಬ್ ಹಾಗೂ ಪಾರ್ಟಿಗಳಿಗೆ ಡ್ರಗ್ಸ್ ಪೂರೈಸುತ್ತಿದ್ದ ಜಾಲವನ್ನು ಎನ್‌ಸಿಬಿ (ರಾಷ್ಟ್ರೀಯ ಮಾದಕ ವಸ್ತು ನಿಯಂತ್ರಣ ಘಟಕ) ಅಧಿಕಾರಿಗಳು ಭೇದಿಸಿದ್ದು, ನಾಲ್ವರನ್ನು ಬಂಧಿಸಿದ್ದಾರೆ.

'ಕರ್ನಾಟಕ ಹಾಗೂ ಆಂಧ್ರಪ್ರದೇಶದಲ್ಲಿ ತಮ್ಮದೇ ತಂಡ ಕಟ್ಟಿಕೊಂಡು ಆರೋಪಿಗಳು ಡ್ರಗ್ಸ್ ಮಾರುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ' ಎಂದು ಎನ್‌ಸಿಬಿ ವಲಯ ನಿರ್ದೇಶಕ ಅಮಿತ್ ಘಾವಟೆ ಹೇಳಿದರು.

'ವಿಶಾಖಪಟ್ಟಣ, ಬಿಹಾರ ಹಾಗೂ ಹೈದರಾಬಾದ್ ನಿವಾಸಿಗಳಾದ ನಾಲ್ವರು ಆರೋಪಿಗಳು, ಸ್ವಿಫ್ಟ್ ಕಾರಿನಲ್ಲಿ ಬೆಂಗಳೂರಿಗೆ ಡ್ರಗ್ಸ್ ತರುತ್ತಿದ್ದರು. ರಾಷ್ಟ್ರೀಯ ಹೆದ್ದಾರಿಯ ದೇವನಹಳ್ಳಿ ಟೋಲ್‌ಗೇಟ್ ಬಳಿ ಕಾರು ತಡೆದು ಪರಿಶೀಲಿಸಲಾಯಿತು. ಬಟ್ಟೆಗಳಲ್ಲಿ ಬಚ್ಚಿಟ್ಟಿದ್ದ ಡ್ರಗ್ಸ್ ಪತ್ತೆಯಾಯಿತು' ಎಂದೂ ತಿಳಿಸಿದರು.

'ಬೆಂಗಳೂರಿನಿಂದ ಡ್ರಗ್ಸ್ ತೆಗೆದುಕೊಂಡು ಆರೋಪಿಗಳು ಆಂಧ್ರಪ್ರದೇಶದತ್ತ ಹೊರಟಿದ್ದರು. ಹೈದರಾಬಾದ್‌ನಲ್ಲಿರುವ ಪಬ್‌ಗಳು ಹಾಗೂ ಹಲವೆಡೆ ಪಾರ್ಟಿಗಳಿಗೆ ಡ್ರಗ್ಸ್ ಪೂರೈಸುವ ಉದ್ದೇಶವಿಟ್ಟುಕೊಂಡಿದ್ದರು. ಎಂಡಿಎಂಎ ಮಾತ್ರೆಗಳು ಹಾಗೂ ಮೆಥಾಂಫೆಟಮೈನ್ ಡ್ರಗ್ಸ್ ಆರೋಪಿಗಳ ಬಳಿ ಸಿಕ್ಕಿವೆ' ಎಂದೂ ಹೇಳಿದರು.

ಎಟಿಎಂ ಕತ್ತರಿಸಿ ಹಣ ಕದಿಯುತ್ತಿದ್ದ ಇಬ್ಬರ ಬಂಧನ

ಬೆಂಗಳೂರು: ಎಟಿಎಂ ಯಂತ್ರವನ್ನು ಗ್ಯಾಸ್ ಕಟರ್‌ನಿಂದ ಕತ್ತರಿಸಿ ಹಣ ಕದ್ದೊಯ್ಯುತ್ತಿದ್ದ ಆರೋಪದಡಿ ಇಬ್ಬರನ್ನು ಸುಬ್ರಹ್ಮಣ್ಯಪುರ ಪೊಲೀಸರು ಬಂಧಿಸಿದ್ದಾರೆ.

'ಉತ್ತರ ಭಾರತದ ರಾಜ್‌ಕುಮಾರ್ ಹಾಗೂ ಮರ್ಜಿತ್ ಸಿಂಗ್ ಬಂಧಿತರು. ನಗರದ ಎರಡು ಎಟಿಎಂ ಯಂತ್ರಗಳಲ್ಲಿದ್ದ ಹಣವನ್ನು ಆರೋಪಿಗಳು ಕದ್ದಿದ್ದರು. ಪ್ರಕರಣದ ತನಿಖೆ ಕೈಗೊಂಡು, ಇವರಿಬ್ಬರನ್ನು ಸೆರೆ ಹಿಡಿಯಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ನೀಡುವಂತೆ ಕೋರಲಾಗುವುದು' ಎಂದೂ ತಿಳಿಸಿವೆ.

'ತಿಂಗಳಿಗೊಮ್ಮೆ ನಗರಕ್ಕೆ ಬರುತ್ತಿದ್ದ ಆರೋಪಿಗಳು, ಇಲ್ಲಿಯ ವಸತಿಗೃಹಗಳಲ್ಲಿ ವಾಸವಿರುತ್ತಿದ್ದರು. ಭದ್ರತಾ ಸಿಬ್ಬಂದಿ ಇರದ ಹಾಗೂ ಜನರ ಓಡಾಟ ಕಡಿಮೆ ಇರುವ ಎಟಿಎಂ ಘಟಕವನ್ನು ಗುರುತಿಸಿ ಕೃತ್ಯ ಎಸಗುತ್ತಿದ್ದರು.'

'ಎಟಿಎಂ ಯಂತ್ರವನ್ನು ಗ್ಯಾಸ್ ಕಟರ್‌ನಿಂದ ಕತ್ತರಿಸುತ್ತಿದ್ದ ಆರೋಪಿಗಳು, ಅದರಲ್ಲಿದ್ದ ಹಣವನ್ನು ಕದ್ದುಕೊಂಡು ಪರಾರಿಯಾಗುತ್ತಿದ್ದರು. ಇತ್ತೀಚೆಗೆ ಉತ್ತರಹಳ್ಳಿ ಬಳಿಯ ಬ್ಯಾಂಕೊಂದರ ಎಟಿಎಂ ಯಂತ್ರದಿಂದ ₹ 17 ಲಕ್ಷವನ್ನು ಆರೋಪಿಗಳು ಕದ್ದಿದ್ದರೆಂಬುದು ತನಿಖೆಯಿಂದ ಗೊತ್ತಾಗಿದೆ' ಎಂದೂ ಮೂಲಗಳು ಹೇಳಿವೆ.

ಕೇಂದ್ರ ಸರ್ಕಾರದ ಮೇಲ್ಮನವಿ ಅಂಗೀಕಾರ

ಕೇಡರ್ ಹಂಚಿಕೆ ಪ್ರಕ್ರಿಯೆ ಯಾಂತ್ರಿಕವಾದುದು. ಕೆಲವು ನಿಯಮಗಳ ಹೊರತಾಗಿ ಯಾವುದೇ ವಿನಾಯಿತಿ ಒಪ್ಪಿಕೊಳ್ಳುವುದಿಲ್ಲ ಎಂದಿದೆ ಸುಪ್ರೀಂ ಕೋರ್ಟ್

ಕೇಡರ್ ಬದಲಾವಣೆ ಒಪ್ಪದ ಸುಪ್ರೀಂ ಕೋರ್ಟ್

ನವದೆಹಲಿ: ನಾಗರಿಕ ಸೇವಾ ಪರೀಕ್ಷೆಯಲ್ಲಿ ಆಯ್ಕೆಯಾದ ಅಭ್ಯರ್ಥಿಯು ತನಗೆ ಬೇಕಾದ ಕೇಡರ್ ಆಯ್ಕೆಗೆ ಹಕ್ಕು ಸ್ಥಾಪಿಸುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಶನಿವಾರ ಹೇಳಿದೆ.

ಪರೀಕ್ಷೆಯಲ್ಲಿ ಅರ್ಹತೆ ಪಡೆದ ಅಭ್ಯರ್ಥಿಯು ತನ್ನನ್ನು ಐಎಎಸ್ ನೇಮಕಾತಿಗಾಗಿ ಪರಿಗಣಿಸುವ ಹಕ್ಕು ಹೊಂದಿರುತ್ತಾರೆ. ಆದರೆ ತನ್ನ ನೆಚ್ಚಿನ ಕೇಡರ್ ಅಥವಾ ತನ್ನ ತವರು ರಾಜ್ಯಕ್ಕೆ ಹಂಚಿಕೆ ಮಾಡುವಂತೆ ಹಕ್ಕು ಚಲಾಯಿಸುವಂತಿಲ್ಲ ಎಂದು ನ್ಯಾಯಮೂರ್ತಿಗಳಾದ ಹೇಮಂತ್ ಗುಪ್ತಾ ಮತ್ತು ವಿ. ರಾಮಸುಬ್ರಮಣಿಯನ್ ಅವರ ಪೀಠ ಹೇಳಿದೆ.



'ಅಖಿಲ ಭಾರತ ಸೇವೆಗೆ ಆಯ್ಕೆಯಾಗುವ ಮುನ್ನ ಅಭ್ಯರ್ಥಿಯು ದೇಶದಲ್ಲಿ ಎಲ್ಲಿಯಾದರೂ ಸೇವೆ ಸಲ್ಲಿಸಲು ಸಿದ್ಧ ಎಂಬ ಆಯ್ಕೆಯನ್ನು ಒಪ್ಪಿಕೊಂಡಿರುತ್ತಾರೆ. ಆದರೆ, ನಾಗರಿಕ ಸೇವೆಗೆ ಆಯ್ಕೆಯಾದ ಬಳಿಕ ತವರು ರಾಜ್ಯಕ್ಕೆ ತೆರಳುವ ಅಭಿಲಾಷೆ ಅವರಲ್ಲಿ ಉಂಟಾಗುತ್ತದೆ' ಎಂದು ಪೀಠ ಹೇಳಿತು.

ರಾಜ್ಯಗಳು ಸಹ ತಮ್ಮ ಇಚ್ಛೆಗೆ ತಕ್ಕಂತೆ ಕೇಡರ್ ಅನ್ನು ಹಂಚಿಕೊಳ್ಳುವಂತಿಲ್ಲ ಎಂದು ಪೀಠ ತಿಳಿಸಿತು. ಐಎಎಸ್ ಅಧಿಕಾರಿ ಎ.ಶೈನಾಮೋಲ್ ಅವರ ಕೇಡರ್ ಅನ್ನು ಹಿಮಾಚಲ ಪ್ರದೇಶದಿಂದ ಕೇರಳಕ್ಕೆ ಬದಲಾಯಿಸುವಂತೆ 2017ರಲ್ಲಿ ಕೇರಳ ಹೈಕೋರ್ಟ್ ನೀಡಿದ್ದ ಆದೇಶ ಪ್ರಶ್ನಿಸಿ ಕೇಂದ್ರ ಸರ್ಕಾರ ಮಾಡಿದ್ದ ಮೇಲ್ಮನವಿಯನ್ನು ನ್ಯಾಯಾಲಯ ಅಂಗೀಕರಿಸಿತು.

ಕೋವಿಡ್: 38 ಸಾವಿರ ದಾಟಿದ ಮರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪೀಡಿತರಲ್ಲಿ 7 ಮಂದಿ ಮೃತಪಟ್ಟಿರುವುದು ಶನಿವಾರ ದೃಢಪಟ್ಟಿದೆ. ಈವರೆಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38 ಸಾವಿರ ದಾಟಿದೆ.

ರಾಜ್ಯದಲ್ಲಿ ಕಳೆದ ವರ್ಷ ಮಾ.10ರಂದು ಮೊದಲ ಮರಣ ಪ್ರಕರಣ ವರದಿಯಾಗಿತ್ತು. ಡಿಸೆಂಬರ್ ಅಂತ್ಯಕ್ಕೆ ಮೃತರ ಸಂಖ್ಯೆ 12,090ಕ್ಕೆ ತಲುಪಿತ್ತು. ಎರಡನೇ ಅಲೆಯಲ್ಲಿ ಸೋಂಕಿತರ ಜತೆಗೆ ಕಾಯಿಲೆಯ ತೀವ್ರತೆಗೆ ಮೃತಪಡುವವರ ಸಂಖ್ಯೆಯೂ ಹೆಚ್ಚಳವಾಗಿತ್ತು. ಹೀಗಾಗಿ, ಈ ವರ್ಷ 25,912 ಮಂದಿ ಈವರೆಗೆ ಸಾವಿಗೀಡಾಗಿದ್ದಾರೆ.

ಒಂದು ದಿನದ ಅವಧಿಯಲ್ಲಿ 1.20 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. 371 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಸೋಂಕು ದೃಢ ಪ್ರಮಾಣವು ಶೇ 0.30 ರಷ್ಟು ವರದಿಯಾಗಿದೆ. 6 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 17 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬೀದರ್, ಗದಗ, ಕೊಪ್ಪಳ, ರಾಯಚೂರು ಹಾಗೂ ವಿಜಯಪುರದಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ.

ಬೆಂಗಳೂರಿನಲ್ಲಿ 193 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 29.85 ಲಕ್ಷ ದಾಟಿದೆ.

ಸೋಂಕಿತರಲ್ಲಿ 342 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.38 ಲಕ್ಷ ದಾಟಿದೆ.

4 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ ನಾಲ್ವರು, ದಕ್ಷಿಣ ಕನ್ನಡ, ಕೋಲಾರ ಹಾಗೂ ತುಮಕೂರಿನಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ.

ಮರಣ ಪ್ರಮಾಣ ದರವು ಶೇ 1.88 ರಷ್ಟು ದೃಢಪಟ್ಟಿದೆ.

ಕೋವಿಡ್ ಸಕ್ರಿಯ ಪ್ರಕರಣಗಳು 20 ಜಿಲ್ಲೆಗಳಲ್ಲಿ 100ಕ್ಕಿಂತ ಕಡಿಮೆ ಇದೆ. 8,914 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಗದಗ ಜಿಲ್ಲೆಯು ಕೋವಿಡ್ ಮುಕ್ತವಾಗಿದೆ. ಬಾಗಲಕೋಟೆ ಸೇರಿದಂತೆ 6 ಜಿಲ್ಲೆಗಳಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ ಹತ್ತರೊಳಗೆ ಇದೆ. ಬೆಂಗಳೂರಿನಲ್ಲಿ ಗರಿಷ್ಠ (6,754) ಸಕ್ರಿಯ ಪ್ರಕರಣಗಳಿವೆ.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,50,513 ಒಟ್ಟು ಪ್ರಕರಣಗಳು ▲ (12,50,320 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
6,754 ▲	12,27,518 ▲	16,240 ▲

ದಿನದ ಏರಿಕೆ

ಹೊಸ ಪ್ರಕರಣ	193 ▼
ಗುಣಮುಖ	130 ▼
ಸಾವು	04 ▼

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ರಷ್ಯಾ, ಜರ್ಮನಿಯಲ್ಲಿ ಕೋವಿಡ್ ಸೋಂಕು ಉಲ್ಬಣ

ಮಾಸ್ಕೊ (ರಾಯಿಟರ್ಸ್): ರಷ್ಯಾದಲ್ಲಿ ಕೋವಿಡ್ ಸಾವಿನ ಸಂಖ್ಯೆ ಹೆಚ್ಚುತ್ತಿದೆ. ಹೊಸದಾಗಿ 1,075 ಮಂದಿ ಮೃತಪಟ್ಟಿದ್ದು, ಸತತ 5 ದಿನಗಳಿಂದ ಸಾವಿನ ಸಂಖ್ಯೆ ಸಾವಿರದ ಗಡಿ ದಾಟಿದೆ.

ಸೋಂಕು ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಮಾಸ್ಕೊ ಮತ್ತು ಇತರೆಡೆ ಕೆಲಸದ ಸ್ಥಳಗಳನ್ನು ಬಂದ್ ಮಾಡಲು ಮತ್ತು ದೇಶದಾದ್ಯಂತ ಮತ್ತೆ ಪೂರ್ಣ-ಪ್ರಮಾಣದ ಲಾಕ್‌ಡೌನ್ ವಿಧಿಸಲೂ ರಷ್ಯಾ ಸಿದ್ಧತೆ ನಡೆಸಿದೆ.

ಬರ್ಲಿನ್ ವರದಿ: ಜರ್ಮನಿಯಲ್ಲಿ ಮೇ ತಿಂಗಳ ಮಧ್ಯಭಾಗದ ನಂತರ ಇದೇ ಮೊದಲ ಬಾರಿಗೆ ಶನಿವಾರ ಕೋವಿಡ್ ಪ್ರಕರಣಗಳು ಹೆಚ್ಚಾಗಿದ್ದು, ಏಳು ದಿನಗಳಿಂದ ಒಂದು ಲಕ್ಷಕ್ಕೆ 100 ಪ್ರಕರಣಗಳು ಪತ್ತೆಯಾಗುವ ಹಂತ ತಲುಪಿದೆ.

'ಕಳೆದ ಮೇ ತಿಂಗಳಲ್ಲಿ ಕಟ್ಟುನಿಟ್ಟಿನ ಲಾಕ್‌ಡೌನ್ ಜಾರಿಗೊಳಿಸಲು ಇದನ್ನೇ ಮಾನದಂಡವನ್ನಾಗಿ ಮಾಡಿಕೊಳ್ಳಲಾಗಿತ್ತು. ಆದರೆ ಈಗ ಜನರಿಗೆ ಲಸಿಕೆ ನೀಡಿರುವುದರಿಂದ, ಪರಿಸ್ಥಿತಿಯನ್ನು ಸುಲಭವಾಗಿ ನಿಭಾಯಿಸಬಹುದು ಎಂದು ಆರೋಗ್ಯ ಸಚಿವ ಜೆನ್ಸ್ ಸ್ಪಾನ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಬೀಜಿಂಗ್ ವರದಿ: ಚೀನಾದ ರಾಜಧಾನಿ ಬೀಜಿಂಗ್‌ನಲ್ಲಿ ಶನಿವಾರ ಕೊರೊನಾ ಸೋಂಕು ಪ್ರಕರಣಗಳ ಸಂಖ್ಯೆ 9ಕ್ಕೇರಿದ್ದು, ಸ್ಥಳೀಯ ಅಧಿಕಾರಿಗಳು ಅಲ್ಲಿನ ಹೋಟೆಲ್ ಬುಕಿಂಗ್ ನಿರ್ಬಂಧಿಸುವ ಮತ್ತು ಕೋವಿಡ್ ಪರೀಕ್ಷೆಯನ್ನು ಹೆಚ್ಚಿಸುವ ಕ್ರಮಗಳನ್ನು ಕೈಗೊಂಡಿದ್ದಾರೆ.

ಚೀನಾದ ವಿವಿಧ ಭಾಗಗಳಲ್ಲಿ ಒಟ್ಟು 38 ಕೋವಿಡ್ ಪ್ರಕರಣಗಳು ದಾಖಲಾಗಿವೆ ಎಂದು ರಾಷ್ಟ್ರೀಯ ಆರೋಗ್ಯ ಆಯೋಗ ತಿಳಿಸಿದೆ.

ಕೋವಿಡ್ ಅಂಕಿ–ಅಂಶ
ಆಧಾರ: ಕೋವಿಡ್19 ಇಂಡಿಯಾ, ಒಡಬ್ಲ್ಯುಐಡಿ

	ವಿಶ್ವ	ಭಾರತ
ಒಟ್ಟು ಪ್ರಕರಣ	24.39 ಕೋಟಿ ▲	3.41 ಕೋಟಿ
ಸಕ್ರಿಯ ಪ್ರಕರಣ	1.79 ಕೋಟಿ	1.66 ಲಕ್ಷ ▼
ಗುಣಮುಖ	22.10 ಕೋಟಿ ▲	3.35 ಕೋಟಿ
ಸಾವು	49.57 ಲಕ್ಷ ▲	4.54 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.56 ಲಕ್ಷ ▼	15,827 ▲
ಗುಣಮುಖ	3.91 ಲಕ್ಷ ▲	15,182 ▼
ಸಾವು	7,828 ▲	559 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅಮೆರಿಕ	ರಷ್ಯಾ	ಬ್ರಿಟನ್
82,483 ▲	37,141 ▲	49,298 ▼

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ರಷ್ಯಾ	ಬ್ರಿಟನ್
95.08 ▼	8.22 ▲	14.64 ▲

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.39 ಲಕ್ಷ ▼
ತಮಿಳುನಾಡು	36,004 ▲
ಕೇರಳ	28,229 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	66.01 ▲
ಕೇರಳ	49.06 ▲
ತಮಿಳುನಾಡು	26.94 ▲

ಪ್ರಜಾವಾಣಿ ಗ್ರಾಫಿಕ್ಸ್

ಚಿರತೆ ದಾಳಿ: ನಾಟಿ ಕೋಳಿಗಳು ಬಲಿ

ಬಿಡದಿ: ಶೆಟ್ಟಿಗೌಡನದೊಡ್ಡಿ ಭಾಸ್ಕರ್ ಅವರ ನಾಟಿ ಕೋಳಿ ಫಾರಂಗೆ ಶುಕ್ರವಾರ ತಡರಾತ್ರಿ ಮೆಸ್ ಕಿತ್ತು ಒಳನುಗ್ಗಿರುವ ಚಿರತೆ ಸುಮಾರು 350ಕ್ಕೂ ಹೆಚ್ಚು ನಾಟಿ-ಕೋಳಿಗಳನ್ನು ಬಲಿ ತೆಗೆದುಕೊಂಡಿದೆ.

ಅರಣ್ಯ ಅಧಿಕಾರಿಗಳು ಹಾಗೂ ಪಶುವೈದ್ಯರು ಕೋಳಿ ಫಾರಂಗೆ ಭೇಟಿ ನೀಡಿ ಮಾಹಿತಿಯನ್ನು ಕಲೆಹಾಕಿದ್ದಾರೆ.


ಅಲ್ಲದೆ ಶೆಟ್ಟಿಗೌಡನದೊಡ್ಡಿ ಪ್ರದೇಶದ ಸುತ್ತ ಮುತ್ತಲು ದಟ್ಟವಾದ ಕಾಡುಗಳು ಇದ್ದು, ಹೆಚ್ಚು ಚಿರತೆಗಳು ತಂಗಲು ತಾಣವಾಗಿದೆ. ಈ ಮೊದಲು ಕೆಂಚನಕುಪ್ಪೆ, ತಮ್ಮಣ್ಣನದೊಡ್ಡಿ, ಕಾಕರಾಮನಹಳ್ಳಿ ಗ್ರಾಮಗಳಲ್ಲಿ ಆಗಾಗ ಚಿರತೆಗಳು ಕಾಣಿಸಿಕೊಂಡಿದ್ದು, ಹಸು, ಕರುಗಳನ್ನು ಬಲಿ ತೆಗೆದುಕೊಂಡಿದೆ.

ಸುಮಾರು ದಿನಗಳ ಹಿಂದೆಯೇ ಅರಣ್ಯ ಇಲಾಖೆ ಮಾಹಿತಿ ನೀಡಿದ್ದು, ಸಿಬ್ಬಂದಿಯೂ ಬೋನನ್ನು ಇಟ್ಟು ಎರಡು -ಮೂರು ಚಿರತೆಗಳನ್ನು ಸೆರೆಹಿಡಿದಿದ್ದರು. ಮತ್ತೆ ಕಾಣಿಸಿಕೊಂಡಿರುವುದರಿಂದ ಜನರಲ್ಲಿ ಆತಂಕ ಮೂಡಿಸಿದೆ.

'ಚುನಾವಣೆ ಬಳಿಕ ಜಮ್ಮು–ಕಾಶ್ಮೀರಕ್ಕೆ ರಾಜ್ಯದ ಸ್ಥಾನ'

ಪ್ರಜಾವಾಣಿ ವಾರ್ತೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶದ ಗಡಿ ನಿರ್ಧಾರವಾಗಿ, ವಿಧಾನ ಸಭಾ ಚುನಾವಣೆಗಳು ಪೂರ್ಣಗೊಂಡ ಬಳಿಕ ರಾಜ್ಯದ ಸ್ಥಾನಮಾನವನ್ನು ಮರುಸ್ಥಾಪಿಸಲಾಗುತ್ತದೆ ಎಂದು ಕೇಂದ್ರ ಗೃಹಸಚಿವ ಅಮಿತ್ ಶಾ ಭರವಸೆ ನೀಡಿದ್ದಾರೆ.


ಅಮಿತ್ ಶಾ

ಜಮ್ಮು ಮತ್ತು ಕಾಶ್ಮೀರಕ್ಕೆ ಮೂರು ದಿನಗಳ ಭೇಟಿಗಾಗಿ ಶನಿವಾರ ಶ್ರೀನಗರಕ್ಕೆ ಆಗಮಿಸಿರುವ ಅವರು, ಯೂತ್ ಕ್ಲಬ್ ಸದಸ್ಯರ ಜತೆಗಿನ ಸಂವಾದದಲ್ಲಿ ಈ ಭರವಸೆ ನೀಡಿದರು.

ಪ್ರಧಾನಿ ನರೇಂದ್ರ ಮೋದಿ ಅವರ ಶಾಂತಿಯುತ ಮತ್ತು ಅಭಿವೃದ್ಧಿ ಹೊಂದಿದ ಕಣಿವೆ ನಿರ್ಮಾಣ ಕನಸನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಕಾಶ್ಮೀರದ ಯುವಕರ ಬೆಂಬಲವನ್ನು ಶಾ ಕೋರಿದರು.

ಪಡಿತರ ಆಹಾರ ಧಾನ್ಯ ಕಳ್ಳಸಾಗಣೆ

ಪುಟ್ಟೇನಹಳ್ಳಿ ಪೊಲೀಸ್ ಠಾಣೆಯಲ್ಲಿ ಏಳು ಜನರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಡಿತರ ಚೀಟಿದಾರರಿಗೆ ವಿತರಿಸಲು ಪೂರೈಕೆಯಾಗಿದ್ದ ಆಹಾರ ಧಾನ್ಯಗಳನ್ನು ಕಳ್ಳಸಾಗಣೆ ಮಾಡುತ್ತಿದ್ದ ಆರೋಪದ ಮೇಲೆ ಏಳು ಮಂದಿಯ ವಿರುದ್ಧ ನಗರದ ಪುಟ್ಟೇನಹಳ್ಳಿ ಪೊಲೀಸ್ ಠಾಣೆಯಲ್ಲಿ ಶನಿವಾರ ಎಫ್‌ಐಆರ್ ದಾಖಲಿಸಲಾಗಿದೆ.

ಜರಗನಹಳ್ಳಿ ನಿವಾಸಿ ದೀಪಕ್ ಕುಮಾರ್, ಚಿಕ್ಕಕಲ್ಲಸಂದ್ರದ ಶ್ರೀನಿವಾಸ್, ನಾಯಂಡಹಳ್ಳಿಯ ನಯಾಝ್, ಲಾರಿಗಳ ಮಾಲೀಕರಾದ ಶಬ್ಬೀರ್ ಅಹಮ್ಮದ್, ಯತೀಶ್ ಕುಮಾರ್ ಎಂ., ಚಾಂದ್ ಪಾಷ ಮತ್ತು ಲಕ್ಷ್ಮಿನರಸಿಂಹಯ್ಯ ಎಂಬುವವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಪ್ರಮುಖ ಆರೋಪಿ ದೀಪಕ್ ಕುಮಾರ್ ಎಂಬುವವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಯಲಚೇನಹಳ್ಳಿ ಮೆಟ್ರೊ ರೈಲು ನಿಲ್ದಾಣದ ಸಮೀಪದ ದೊಡ್ಡಮನೆ ಕೈಗಾರಿಕಾ ಪ್ರದೇಶದಲ್ಲಿ ಶುಕ್ರವಾರ ಪಡಿತರ ಧಾನ್ಯಗಳನ್ನು ಅಕ್ರಮವಾಗಿ ಸಾಗಿಸಲು ಯತ್ನಿಸುತ್ತಿದ್ದಾಗ ದಾಳಿಮಾಡಿದ್ದ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ರಾಜ್ಯ ಮಟ್ಟದ ಜಾಗೃತದಳದ ಮುಖ್ಯಸ್ಥ ಡಾ.ಕೆ. ರಾಮೇಶ್ವರಪ್ಪ, 350 ಕ್ವಿಂಟಲ್ ಪಡಿತರ ಧಾನ್ಯ ಮತ್ತು ನಾಲ್ಕು ಲಾರಿಗಳನ್ನು ವಶಪಡಿಸಿಕೊಂಡಿದ್ದರು. ಈ ಸಂಬಂಧ ರಾಮೇಶ್ವರಪ್ಪ ಪುಟ್ಟೇನಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಅಕ್ಕಿ, ರಾಗಿ ಮತ್ತು ಲಾರಿಗಳ ಸಮೇತ ದೀಪಕ್ ಕುಮಾರ್ ಎಂಬುವವರನ್ನೂ ಆಹಾರ ಇಲಾಖೆ ಅಧಿಕಾರಿಗಳೇ ಪೊಲೀಸರ ವಶಕ್ಕೆ ನೀಡಿದ್ದರು. ಶನಿವಾರ ಎಫ್‌ಐಆರ್ ದಾಖಲಿಸಿದ ಪೊಲೀಸರು, ಪ್ರಮುಖ ಆರೋಪಿಯನ್ನು ಬಂಧಿಸಿದ್ದಾರೆ.

ಪಡಿತರ ಚೀಟಿದಾರರಿಗೆ ವಿತರಿಸಬೇಕಿದ್ದ ಆಹಾರ ಧಾನ್ಯಗಳನ್ನು ಅಕ್ರಮವಾಗಿ ಮಂಡ್ಯಕ್ಕೆ ಕಳ್ಳಸಾಗಣೆ ಮಾಡುತ್ತಿರುವುದಾಗಿ ಪ್ರಮುಖ ಆರೋಪಿ ವಿಚಾರಣೆ ವೇಳೆ ತಪ್ಪೊಪ್ಪಿಕೊಂಡಿರುವುದನ್ನು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಬಾಯಿಯಲ್ಲಿ ಚಿನ್ನದ ಬಿಸ್ಕತ್ ಬಚ್ಚಿಟ್ಟು ಸಾಗಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೂಲಕ ಚಿನ್ನವನ್ನು ಅಕ್ರಮವಾಗಿ ಸಾಗಿಸುತ್ತಿದ್ದ ಇಬ್ಬರನ್ನು ಆರೋಪಿಗಳನ್ನು ವಶಕ್ಕೆ ಪಡೆದಿರುವ ಕಸ್ಟಮ್ಸ್ ಅಧಿಕಾರಿಗಳು, ₹ 54.48 ಲಕ್ಷ ಮೌಲ್ಯದ ಚಿನ್ನ ಜಪ್ತಿ ಮಾಡಿದ್ದಾರೆ.

'ಇಬ್ಬರೂ ಪ್ರಯಾಣಿಕರು ಪ್ರತ್ಯೇಕವಾಗಿ ದುಬೈನಿಂದ ನಗರದ ನಿಲ್ದಾಣಕ್ಕೆ ಬಂದಿಳಿದಿದ್ದರು. ತಪಾಸಣೆ ನಡೆಸಿದಾಗ ಅವರ ಬಳಿ ಚಿನ್ನದ ಬಿಸ್ಕತ್‌ಗಳು ಪತ್ತೆಯಾದವು' ಎಂದು ಕಸ್ಟಮ್ಸ್ ಮೂಲಗಳು ಹೇಳಿವೆ.

'ಒಬ್ಬಾತ, ಅ. 20ರಂದು ನಿಲ್ದಾಣಕ್ಕೆ ಬಂದಿಳಿದಿದ್ದ. ಆತನ ಬ್ಯಾಗ್ ಹಾಗೂ ಬಟ್ಟೆಯಲ್ಲಿ ₹ 49.60 ಲಕ್ಷ ಮೌಲ್ಯದ 15 ಚಿನ್ನದ ಬಿಸ್ಕತ್ ಸಿಕ್ಕವು. ಆತನನ್ನು ವಶಕ್ಕೆ ಪಡೆದು, ತನಿಖೆ ಮುಂದುವರಿಸಲಾಗಿದೆ' ಎಂದೂ ಮೂಲಗಳು ತಿಳಿಸಿವೆ.

'ಇನ್ನೊಬ್ಬ ಆರೋಪಿ, ಬಾಯಿಯಲ್ಲಿ 2 ಚಿನ್ನದ ಬಿಸ್ಕತ್‌ಗಳನ್ನು ಬಚ್ಚಿಟ್ಟುಕೊಂಡಿದ್ದ. ಲೋಹ ಶೋಧಕದಲ್ಲಿ ತಪಾಸಣೆ ನಡೆಸಿದಾಗ ಚಿನ್ನವಿರುವುದು ಗೊತ್ತಾಗಿತ್ತು. ₹ 4.88 ಲಕ್ಷ ಮೌಲ್ಯದ 100 ಗ್ರಾಂ ಚಿನ್ನ ಸಿಕ್ಕಿದೆ' ಎಂದೂ ಹೇಳಿವೆ.

ಪುರಾತನ ವಿಗ್ರಹ ಜಪ್ತಿ: ಇನ್ನೊಂದು ಪ್ರಕರಣದಲ್ಲಿ, ಅಕ್ರಮವಾಗಿ ಸಾಗಿಸುತ್ತಿದ್ದ ಪುರಾತನ ವಿಗ್ರಹವನ್ನು ಕಸ್ಟಮ್ಸ್ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

'ಬೆಂಗಳೂರಿನಿಂದ ಜಪಾನ್‌ಗೆ ಹೋಗಲು ಆರೋಪಿ, ನಿಲ್ದಾಣಕ್ಕೆ ಬಂದಿದ್ದ. ಆತನ ಬ್ಯಾಗ್‌ನಲ್ಲಿ ಅನುಮಾನಾಸ್ಪದ ವಸ್ತು ಇರುವುದು ತಿಳಿಯಿತು. ಪರಿಶೀಲಿಸಿದಾಗ, ವಿಗ್ರಹ ಪತ್ತೆಯಾಯಿತು. ಆರೋಪಿಯನ್ನು ವಶಕ್ಕೆ ಪಡೆಯಲಾಗಿದೆ' ಎಂದು ಕಸ್ಟಮ್ಸ್ ಮೂಲಗಳು ಹೇಳಿವೆ.

ಸ್ನೇಹಿತರ ನಡುವೆ ಗಲಾಟೆ; ಕೊಲೆಯಲ್ಲಿ ಅಂತ್ಯ

ಬೆಂಗಳೂರು: ಬ್ಯಾಟರಾಯನಪುರ ಠಾಣೆ ವ್ಯಾಪ್ತಿಯಲ್ಲಿ ಸ್ನೇಹಿತರ ನಡುವೆ ನಡೆದ ಗಲಾಟೆ ಚಂದ್ರಶೇಖರ್ (30) ಎಂಬುವರ ಕೊಲೆಯಲ್ಲಿ ಅಂತ್ಯವಾಗಿದೆ.

'ರಾಜರಾಜೇಶ್ವರಿನಗರ ನಿವಾಸಿ ಚಂದ್ರಶೇಖರ್, ಆಟೊ ಚಾಲಕ. ಅದರ ಜೊತೆಯಲ್ಲಿ ಹೂವಿನ ವ್ಯಾಪಾರವನ್ನೂ ಮಾಡುತ್ತಿದ್ದರು. ಅವರ ಕೊಲೆ ಬಗ್ಗೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಸ್ನೇಹಿತರೇ ಕೃತ್ಯ ಎಸಗಿರುವ ಮಾಹಿತಿ ಇದ್ದು, ಆರೋಪಿಗಳು ತಲೆಮರೆಸಿಕೊಂಡಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಚಂದ್ರಶೇಖರ್ ಹಾಗೂ ಆರೋಪಿಗಳ ನಡುವೆ ಹಣಕಾಸಿನ ವ್ಯವಹಾರ ಇತ್ತು. ಈ ಸಂಬಂಧ ಗಲಾಟೆ ನಡೆದು, ವೈಷಮ್ಯವೂ ಬೆಳೆದಿತ್ತು. ಶುಕ್ರವಾರ ರಾತ್ರಿ ಅವಲಹಳ್ಳಿ ಮುಖ್ಯರಸ್ತೆಯಲ್ಲಿ ಸೇರಿದ್ದ ಸ್ನೇಹಿತರು, ಮದ್ಯ ಸೇವನೆ ಮಾಡಿದ್ದರು. ಇದೇ ಸಂದರ್ಭದಲ್ಲೇ ಮಾತಿನ ಚಕಮಕಿ ಆಗಿ ಜಗಳ ಶುರುವಾಗಿತ್ತು.'

'ಚಂದ್ರಶೇಖರ್ ಮೇಲೆ ಹಲ್ಲೆ ಮಾಡಿದ್ದ ಆರೋಪಿಗಳು, ದೇಹದ ಹಲವು ಭಾಗಗಳಿಗೆ ಚಾಕುವಿನಿಂದ ಇರಿದಿದ್ದರು. ನಂತರ, ಕಲ್ಲು ಎತ್ತಿ ಹಾಕಿ ಕೊಲೆ ಮಾಡಿದ್ದರು. ತೀವ್ರ ರಕ್ತಸ್ರಾವದಿಂದ ಆತ ಸ್ಥಳದಲ್ಲೇ ಮೃತಪಟ್ಟಿದ್ದಾನೆ' ಎಂದೂ ಮೂಲಗಳು ಹೇಳಿವೆ.

'ಆರೋಪಿಗಳು ಕಾರಿನಲ್ಲಿ ಸ್ಥಳಕ್ಕೆ ಬಂದಿದ್ದರು. ಕೃತ್ಯದ ನಂತರ ಕಾರು ಬಿಟ್ಟು ಪರಾರಿಯಾಗಿದ್ದಾರೆ. ಮದ್ಯದ ಬಾಟಲಿಗಳು ಸ್ಥಳದಲ್ಲಿ ಸಿಕ್ಕಿವೆ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಲಾಗಿದೆ' ಎಂದೂ ತಿಳಿಸಿವೆ.

ಹರ್ಬಲ್: ಉದ್ಯಮಿಗೆ ₹93.23 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊಬೈಲ್ ಕರೆ ಮೂಲಕ ಪರಿಚಯವಾದ ಮಹಿಳೆಯ ಮಾತು ನಂಬಿ ಹರ್ಬಲ್ ಔಷಧಿ ವ್ಯವಹಾರ ನಡೆಸಲು ಮುಂದಾಗಿದ್ದ ನಗರದ ಉದ್ಯಮಿಯೊಬ್ಬರು ₹ 93.23 ಲಕ್ಷ ಕಳೆದುಕೊಂಡಿದ್ದಾರೆ.

'ಎಲಿಜಬೆತ್ ಜೋಬರ್ಗ್ ಹೆಸರು ಹೇಳಿಕೊಂಡು ಪರಿಚಯವಾಗಿದ್ದ ಮಹಿಳೆ ನನ್ನಿಂದ ಹಂತ ಹಂತವಾಗಿ ₹ 93.23 ಲಕ್ಷ ಪಡೆದು ವಂಚಿಸಿದ್ದಾಳೆ' ಎಂದು ಆರೋಪಿಸಿ ಎಲೆಕ್ಟ್ರಾನಿಕ್ ಸಿಟಿ ನಿವಾಸಿಯೂ ಆಗಿರುವ 45 ವರ್ಷದ ಉದ್ಯಮಿ ದೂರು ನೀಡಿದ್ದಾರೆ. ಇದರನ್ವಯ ಆಗ್ನೇಯ ವಿಭಾಗ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮೇ 14ರಂದು ಉದ್ಯಮಿಗೆ ಕರೆ ಮಾಡಿದ್ದ ಮಹಿಳೆ, ವಿದೇಶಿ ಪ್ರಜೆಯೆಂದು ಪರಿಚಯಿಸಿಕೊಂಡಿದ್ದಳು. ತನ್ನ ಹೆಸರು ಎಲಿಜಬೆತ್ ಜೋಬರ್ಗ್ ಎಂಬುದಾಗಿ ಹೇಳಿ ಆತ್ಮೀಯವಾಗಿ ಮಾತನಾಡಿದ್ದಳು. ತಾನೊಬ್ಬಳು ಹರ್ಬಲ್ ಔಷಧಿ ಉದ್ಯಮಿ ಎಂಬುದಾಗಿಯೂ ಹೇಳಿದ್ದಳು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಹೆಚ್ಚು ಲಾಭ ಬರುವ ಹರ್ಬಲ್ ಔಷಧಿ ಉದ್ಯಮವನ್ನು ಭಾರತದಲ್ಲಿ ನಡೆಸಲು ಇಚ್ಛಿಸಿರುವುದಾಗಿ ಹೇಳಿದ್ದ ಮಹಿಳೆ, ಅದರ ಉಸ್ತುವಾರಿಯನ್ನು ಕುಮಾರ್ ತಾಪ ಕೃಷ್ಣ ಎಂಬಾತನಿಗೆ ವಹಿಸಿರುವುದಾಗಿ ತಿಳಿಸಿದ್ದಳು. ದೂರುದಾರ ಉದ್ಯಮಿಯನ್ನೂ ಪಾಲುದಾರರನ್ನಾಗಿ ಮಾಡಿಕೊಳ್ಳುವುದಾಗಿ ತಿಳಿಸಿದ್ದ ಆರೋಪಿ, ಅವರಿಗೆ ಕುಮಾರ್ ತಾಪ ಕೃಷ್ಣ ಮೊಬೈಲ್ ನಂಬರ್ ನೀಡಿದ್ದಳು.'

'ಆತನಿಗೆ ಕರೆ ಮಾಡಿ ಉದ್ಯಮಿ ಮಾತನಾಡಿದ್ದರು. 'ಉದ್ಯಮ ಆರಂಭಕ್ಕೆ ಕೆಲ ಪ್ರಕ್ರಿಯೆ ನಡೆಸಬೇಕು. ಅದಕ್ಕೆ ಹಣ ಖರ್ಚಾಗುತ್ತದೆ' ಎಂದು ಆರೋಪಿ ಹೇಳಿದ್ದ. ಮಹಿಳೆ ಹಾಗೂ ಕುಮಾರ್ ತಾಪ ಕೃಷ್ಣನ ಮಾತು ನಂಬಿದ್ದ ಉದ್ಯಮಿ, ವಿವಿಧ ಬ್ಯಾಂಕ್ ಖಾತೆಗಳಿಗೆ ಹಂತ ಹಂತವಾಗಿ ಹಣ ಹಾಕಿದ್ದರು. ಹಣ ಪಡೆದ ಬಳಿಕ ಆರೋಪಿಗಳು, ಯಾವುದೇ ಉದ್ಯಮ ಸ್ಥಾಪಿಸದೇ ನಾಪತ್ತೆಯಾಗಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

ನೋಟಿಸ್‌ಗೆ ಉಗ್ರಪ್ಪ ಉತ್ತರಿಸಿದ್ದಾರೆ: ರೆಹಮಾನ್ ಖಾನ್

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಪಕ್ಷದ ನಾಯಕ ವಿ.ಎಸ್. ಉಗ್ರಪ್ಪ ಅವರು ನೋಟಿಸ್‌ಗೆ ಉತ್ತರ ನೀಡಿದ್ದು, ಅದನ್ನು ಬಹಿರಂಗಪಡಿಸುವುದಿಲ್ಲ. ಸದ್ಯದಲ್ಲಿ ಸಭೆಯ ಮುಂದಿಡುತ್ತೇನೆ' ಎಂದು ಕಾಂಗ್ರೆಸ್ ಶಿಸ್ತು ಪಾಲನಾ ಸಮಿತಿಯ ಅಧ್ಯಕ್ಷ ರೆಹಮಾನ್ ಖಾನ್ ತಿಳಿಸಿದ್ದಾರೆ.

ನೀರಾವರಿ ಇಲಾಖೆಯಲ್ಲಿ ಶೇ 6ರಿಂದ 8ರಷ್ಟಿದ್ದ 'ಪರ್ಸಂಟೇಜ್' ಡಿ.ಕೆ. ಶಿವಕುಮಾರ್ ಸಚಿವರಾಗಿದ್ದ ಅವಧಿಯಲ್ಲಿ ಶೇ 10ರಿಂದ 12ಕ್ಕೆ ಏರಿದ್ದು, ಅಡ್ಜಸ್ಟ್‌ಮೆಂಟ್ ಡಿಕೆದ್ದೂ ಇದೆ' ಎಂದು ಕಾಂಗ್ರೆಸ್‌ನ ಮಾಧ್ಯಮ ಸಮನ್ವಯಕಾರರಾಗಿದ್ದ ಎಂ.ಎ. ಸಲೀಂ ಅವರು ವಿ.ಎಸ್. ಉಗ್ರಪ್ಪ ಜೊತೆ ನಡೆಸಿದ ಸಂಭಾಷಣೆ ಬಹಿರಂಗವಾಗಿತ್ತು. ಈ ಕಾರಣಕ್ಕೆ ಸಲೀಂ ಅವರನ್ನು ಶಿಸ್ತು ಪಾಲನಾ ಸಮಿತಿ ಪಕ್ಷದಿಂದ ಉಚ್ಚಾಟಿಸಿತ್ತು. ಉಗ್ರಪ್ಪ ಅವರಿಗೆ ನೋಟಿಸ್ ನೀಡಿತ್ತು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ರೆಹಮಾನ್ ಖಾನ್, 'ಇಬ್ಬರ ಮಾತುಕತೆ ಬಗ್ಗೆ ಸುದೀರ್ಘವಾಗಿ ಚರ್ಚಿಸಿ, ಸಲೀಂ ಅವರನ್ನು ಉಚ್ಚಾಟಿಸಿದ್ದೇವೆ. ಸಲೀಂ ಮಾತುಗಳು ಸ್ಪಷ್ಟವಾಗಿದೆ. ಆದರೆ, ಉಗ್ರಪ್ಪನವರ ಮಾತು ಸ್ಪಷ್ಟವಾಗಿಲ್ಲ. ಅಲ್ಲದೆ, ಉಗ್ರಪ್ಪ ಅವರ ಮೇಲಿನ ಶಿಸ್ತು ಕ್ರಮದ ಬಗ್ಗೆ ಎಐಸಿಸಿ ತೀರ್ಮಾನಿಸುತ್ತದೆ' ಎಂದು ತಿಳಿಸಿದರು.

ಜಾತ್ಯತೀತವಾದರೆ ಬಿಜೆಪಿ ಜೊತೆ ಮುಸ್ಲಿಮರು: 'ಮುಸ್ಲಿಮರ ಕೈಹಿಡಿಯಲು ಯಾವುದೇ ರಾಜಕೀಯ ಪಕ್ಷ ಬೇಕಿಲ್ಲ. ಸಂವಿಧಾನ ಒಂದೇ ಸಾಕು. ಕಾಂಗ್ರೆಸ್ ಜಾತ್ಯತೀತ ಪಕ್ಷ. ಹೀಗಾಗಿ, ಮುಸ್ಲಿಂ ಸಮುದಾಯ ಕಾಂಗ್ರೆಸ್ ಜೊತೆಗಿದೆ. ಬಿಜೆಪಿ ಜಾತ್ಯತೀತವಾದರೆ ಮುಸ್ಲಿಮರೂ ಆ ಪಕ್ಷದ ಜೊತೆಗಿರುತ್ತಾರೆ' ಎಂದು ರೆಹಮಾನ್ ಖಾನ್ ಹೇಳಿದರು.


ಮಳೆ ಅವಾಂತರ... ನಗರದಲ್ಲಿ ಶುಕ್ರವಾರ ರಾತ್ರಿ ಇಡೀ ಸುರಿದ ಮಳೆಯಿಂದಾಗಿ ಗಂಗಾನಗರದ ಬಸ್ ತಂಗುದಾಣ ಬಳಿ ಶನಿವಾರ ನೀರು ಧಾರಾಕಾರ ಹರಿಯಿತು ಪ್ರಜಾವಾಣಿ ಚಿತ್ರ

ಧರ್ಮಸ್ಥಳದಲ್ಲಿ ವಿಎಚ್‌ಪಿ ಕಾರ್ಯಾಧ್ಯಕ್ಷ ಅಲೋಕ್‌ಕುಮಾರ್

ಮತಾಂತರ, ಲವ್ ಜಿಹಾದ್ ತಡೆಗೆ ಗಂಭೀರ ಚಿಂತನೆ

ಪ್ರಜಾವಾಣಿ ವಾರ್ತೆ

ಉಜಿರೆ: ವಿಶ್ವ ಹಿಂದೂ ಪರಿಷತ್ ಕೇಂದ್ರೀಯ ಕಾರ್ಯಾಧ್ಯಕ್ಷ ಅಲೋಕ್ ಕುಮಾರ್ ಶನಿವಾರ ಧರ್ಮಸ್ಥಳಕ್ಕೆ ಭೇಟಿ ನೀಡಿ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಅವರನ್ನು ಗೌರವಿಸಿದರು.

ಬಳಿಕ ಶ್ರೀ ಸನ್ನಿಧಿ ಅತಿಥಿಗೃಹದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ದೇಶದಲ್ಲಿ ಅನುಸೂಚಿತ ಜಾತಿಗಳ ಮೇಲೆ ಮತಾಂತರ ಪಿಡುಗು ವ್ಯಾಪಿಸಿದೆ. ಜೊತೆಗೆ ಲವ್ ಜಿಹಾದ್, ಬೆದರಿಕೆ ಹಾಗೂ ಭಯದ ವಾತಾವರಣ ಸೃಷ್ಟಿಸಿ ಮತಾಂತರ ಮಾಡಲಾಗುತ್ತಿದೆ. ಇದನ್ನು ತಡೆಗಟ್ಟಲು ವಿಶ್ವ ಹಿಂದೂ ಪರಿಷತ್ ಗಂಭೀರ ಚಿಂತನೆ ನಡೆಸಿದೆ. ದೀಪಾವಳಿ ನಂತರ ಈ ಬಗ್ಗೆ ರಾಜ್ಯದ ಮುಖ್ಯಮಂತ್ರಿಯನ್ನು ಭೇಟಿಯಾಗಿ ಮಾತುಕತೆ ನಡೆಸಲಾಗುವುದು ಎಂದು ತಿಳಿಸಿದರು.



ವಿಎಚ್‌ಪಿ ಕಾರ್ಯಾಧ್ಯಕ್ಷ ಅಲೋಕ್‌ಕುಮಾರ್ ಶನಿವಾರ ಧರ್ಮಸ್ಥಳದಲ್ಲಿ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು.

ಬಾಂಗ್ಲಾದೇಶದ ಘಟನೆಯನ್ನು ಖಂಡಿಸಿದ ಅವರು, ಜನಸಾಮಾನ್ಯರ ಮೇಲಿನ ದಾಳಿ ಕ್ರೂರವಾಗಿದ್ದು, ಇದರೊಂದಿಗೆ ಭಯೋತ್ಪಾದನೆಯೂ ಅಡಕವಾಗಿದೆ ಎಂದರು.

ವಿಶ್ವಹಿಂದೂ ಪರಿಷತ್ ನೇತೃತ್ವದಲ್ಲಿ ಸಾಧು- ಸಂತರ ಜೊತೆ ಸೇರಿ ಮುಂದೆ ಆಂದೋಲನ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಸಂಘಟನಾ ಕಾರ್ಯದರ್ಶಿ ಬಸವರಾಜ್, ಸಹ ಕಾರ್ಯದರ್ಶಿ ಕೃಷ್ಣಮೂರ್ತಿ, ಶರಣ್ ಪಂಪ್‌ವೆಲ್, ಭಾಸ್ಕರ ಇದ್ದರು.

ಮತಾಂತರ ನಿಷೇಧ ಕಾಯ್ದೆ ಅಗತ್ಯವಿಲ್ಲ

ಬೆಳಗಾವಿ: 'ಮತಾಂತರ ನಿಷೇಧ ಕಾಯ್ದೆ ಅಗತ್ಯವಿಲ್ಲ. ಸರ್ಕಾರ ತನ್ನ ನಿರ್ಧಾರದಿಂದ ಹಿಂದೆ ಸರಿಯಬೇಕು' ಎಂದು ಬೆಳಗಾವಿ ಧರ್ಮಪ್ರಾಂತ್ಯದ ಬಿಷಪ್ ಡೆರಿಕ್ ಫರ್ನಾಂಡೀಸ್ ಒತ್ತಾಯಿಸಿದರು.


ಡೆರಿಕ್ ಫರ್ನಾಂಡೀಸ್

ಇಲ್ಲಿನ ಕ್ಯಾಂಪ್‌ನಲ್ಲಿರುವ ತಮ್ಮ ಕಚೇರಿಯಲ್ಲಿ ಪತ್ರಕರ್ತರೊಂದಿಗೆ ಶನಿವಾರ ಮಾತನಾಡಿದ ಅವರು, 'ನಾವು ಬಲವಂತದ ಹಾಗೂ ಆಮಿಷಗಳನ್ನು ಒಡ್ಡಿ ಮಾಡುವ ಮತಾಂತರದ ಕಡು ವಿರೋಧಿಗಳಾಗಿದ್ದೇವೆ. ತಪ್ಪು ಮಾಡಿದವರಿಗೆ ಶಿಕ್ಷೆ ವಿಧಿಸುವುದಕ್ಕೆ ಸಂವಿಧಾನದಲ್ಲಿ ಈಗಾಗಲೇ ಹಲವು ರೀತಿಯ ಕ್ರಮಗಳನ್ನು ನೀಡಲಾಗಿದೆ. ಭಾರತೀಯ ದಂಡ ಸಂಹಿತೆಯೂa(ಐಪಿಸಿ) ಇದೆ. ಹೀಗಾಗಿ, ಪ್ರತ್ಯೇಕ ಕಾಯ್ದೆಯ ಔಚಿತ್ಯವಾದರೂ ಏನು?' ಎಂದು ಕೇಳಿದರು.

'ಆಮಿಷಗಳನ್ನು ಒಡ್ಡಿ ಅಥವಾ ಬಲವಂತದಿಂದ ಮತಾಂತರ ಮಾಡುವುದು ಪಾಪದ ಕೆಲಸ. ಯಾರನ್ನು ಯಾರೂ ಆ ರೀತಿ ಮಾಡಬಾರದು. ಕ್ರೈಸ್ತ ಧರ್ಮದ ಕಾನೂನಿನ ಪ್ರಕಾರವೂ ಇದನ್ನು ನಿಷೇಧಿಸಲಾಗಿದೆ. ಯೇಸು ಕ್ರಿಸ್ತ ಕೂಡ ಯಾರನ್ನು ತಮ್ಮತ್ತ ಬಲವಂತವಾಗಿ ಕರೆಯಲಿಲ್ಲ; ತಮ್ಮನ್ನು ಅನುಸರಿಸುವಂತೆ ಒತ್ತಡ ಹೇರಲಿಲ್ಲ. ಇದನ್ನು ನಾವೂ ಅನುಸರಿಸಿಕೊಂಡು ಬಂದಿದ್ದೇವೆ' ಎಂದು ತಿಳಿಸಿದರು.

ರಾತ್ರಿಯೆಲ್ಲ 'ವರುಣ'ನ ಅಬ್ಬರ

ಬೆಂಗಳೂರು: ನಗರದಲ್ಲಿ ಬಿಡುವು ಕೊಡುತ್ತಲೇ ಮಳೆ ಮುಂದುವರಿದಿದ್ದು, ಶನಿವಾರ ರಾತ್ರಿಯೀಡಿ ವರುಣನ ಅಬ್ಬರ ಜೋರಾಗಿತ್ತು. ನಗರದ ಬಹುತೇಕ ಕಡೆ ಉತ್ತಮವಾದ ಮಳೆಯಾಯಿತು. ಗುಡುಗು–ಸಿಡಿಲಿನ ಜೊತೆಯಲ್ಲಿ ಗಾಳಿಯೂ ಜೋರಾಗಿ ಬೀಸಿತು.

ಶುಕ್ರವಾರವೂ ರಾತ್ರಿಯೀಡಿ ಸುರಿದಿದ್ದ ಮಳೆಯಿಂದಾಗಿ ಪ್ರಮುಖ ರಸ್ತೆಗಳು ಹೊಳೆಯಂತಾಗಿದ್ದವು.

ಶನಿವಾರ ಬೆಳಿಗ್ಗೆ ಮಳೆ ಬಿಡುವು ನೀಡಿತ್ತು. ಸಂಜೆಯ ವರೆಗೂ ಮಳೆಯಾಗುವ ಸೂಚನೆಯೇ ಇರಲಿಲ್ಲ. ಸಂಜೆ ನಂತರ ಮೋಡ ಕವಿದ ವಾತಾವರಣ ಕಾಣಿಸಿಕೊಂಡು ಜಿಟಿ ಜಿಟಿ ಮಳೆ ಶುರುವಾಯಿತು.

ರಾತ್ರಿಯಾಗುತ್ತಿದ್ದಂತೆ ಗುಡುಗು–ಸಿಡಿಲಿನ ಆರ್ಭಟದೊಂದಿಗೆ ಉತ್ತಮ ಮಳೆಯಾಯಿತು. ಪ್ರಮುಖ ರಸ್ತೆಗಳು, ಒಳ ರಸ್ತೆಗಳಲ್ಲಿ ನೀರು ಹೊಳೆಯಂತೆ ಹರಿಯಿತು. ಕಾಲುವೆಗಳು ನೀರಿನಿಂದ ತುಂಬಿ ಹರಿದವು.

ಬನಶಂಕರಿ, ಬಸವನಗುಡಿ, ಹನುಮಂತನಗರ, ಗಿರಿನಗರ, ದೀಪಾಂಜಲಿನಗರ, ಚಾಮರಾಜಪೇಟೆ, ಕಾಟನ್‌ಪೇಟೆ, ಮೆಜೆಸ್ಟಿಕ್, ಗಾಂಧಿನಗರ, ಓಕಳಿಪುರ, ರಾಜಾಜಿನಗರ, ವಿಜಯನಗರ, ಮಲ್ಲೇಶ್ವರ, ಬಸವೇಶ್ವರನಗರ, ಮಹಾಲಕ್ಷ್ಮಿ ಬಡಾವಣೆ, ಯಶವಂತಪುರ, ಪೀಣ್ಯ, ಮಲ್ಲೇಶ್ವರ, ಹೆಬ್ಬಾಳ, ಆರ್.ಟಿ.ನಗರ, ಶಿವಾಜಿನಗರ, ಎಂ.ಜಿ.ರಸ್ತೆ, ಅಶೋಕನಗರ, ಕೋರಮಂಗಲ, ಮಡಿವಾಳ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ಮಳೆ ಹೆಚ್ಚಿತ್ತು.

ಪ್ರಮುಖ ರಸ್ತೆಗಳಲ್ಲಿ ನೀರು ಹರಿದಿದ್ದರಿಂದ, ಅಲ್ಲಲ್ಲ ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಯಿತು. ವಾಹನಗಳು ನಿಧಾನಗತಿಯಲ್ಲಿ ಸಾಗಿದ್ದರಿಂದ ದಟ್ಟಣೆಯೂ ಕಂಡುಬಂತು.

'ಬೆಳಿಗ್ಗೆ ಮಳೆ ಕಡಿಮೆ ಇದ್ದರೂ ರಾತ್ರಿ ಮಾತ್ರ ಜೋರಾಗುತ್ತಿದೆ. ನಗರದಲ್ಲಿ ಮಳೆ ಮುಂದುವರಿಯುವ ಸಾಧ್ಯತೆ ಇರುವುದಾಗಿ ಹವಾಮಾನ ಇಲಾಖೆ ತಿಳಿಸಿದೆ' ಎಂದೂ ಮಾಹಿತಿ ನೀಡಿದರು.

ಬಿಜೆಪಿಯಿಂದ ಉಪಚುನಾವಣೆ ಪ್ರಣಾಳಿಕೆ ಬಿಡುಗಡೆ; ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಾಗ್ದಾಳಿ

ಅಲ್ಪಸಂಖ್ಯಾತರಿಗೆ ಅನ್ಯಾಯ ಮಾಡಿದ ಕಾಂಗ್ರೆಸ್

ಪ್ರಜಾವಾಣಿ ವಾರ್ತೆ


ಹಾವೇರಿ: ‘ಚುನಾವಣೆ ಬಂದಾಗ ಅಲ್ಪಸಂಖ್ಯಾತರ ಮೇಲೆ ಕಾಂಗ್ರೆಸ್ ಅತಿ ಪ್ರೀತಿ ತೋರಿಸುತ್ತದೆ. ಕಾಂಗ್ರೆಸ್ ಮಾತ್ರ ನಿಮ್ಮ ರಕ್ಷಣೆ ಮಾಡುತ್ತದೆ ಎಂದು ನಂಬಿಸುತ್ತದೆ. ಅಲ್ಪಸಂಖ್ಯಾತರಿಗೆ ದೊಡ್ಡ ಅನ್ಯಾಯ ಮಾಡಿದ ಯಾವುದಾದರೂ ಪಕ್ಷವಿದ್ದರೆ ಅದು ಕಾಂಗ್ರೆಸ್’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಾಗ್ದಾಳಿ ನಡೆಸಿದರು.

ಹಾನಗಲ್ ಕ್ಷೇತ್ರದ ಚಿಕ್ಕಾಂಶಿ ಹೊಸೂರ ಗ್ರಾಮದಲ್ಲಿ ಶನಿವಾರ ಏರ್ಪಡಿಸಿದ್ದ ಬೃಹತ್ ಸಾರ್ವಜನಿಕ ಸಭೆಯಲ್ಲಿ ಅವರು ಮಾತನಾಡಿ, ‘ಅಲ್ಪಸಂಖ್ಯಾತರನ್ನು ಕಾಂಗ್ರೆಸ್‌ನವರು ಐದು ವರ್ಷ ಬಾವಿಯಲ್ಲಿ ಇಟ್ಟಿರುತ್ತಾರೆ. ಚುನಾವಣೆ ಬಂದಾಗ ಹಗ್ಗ ಕೊಟ್ಟು ಮೇಲೆತ್ತುತ್ತಾರೆ. ಮತಗಳನ್ನು ಹಾಕಿಸಿಕೊಂಡ ನಂತರ ಮತ್ತೆ ಬಾವಿಯಲ್ಲಿ ಇಳಿಸಿ ಕೈಬಿಡುತ್ತಾರೆ’ ಎಂದು ಟೀಕಿಸಿದರು.

‘ಸುಳ್ಳಿನ ರಾಜಕಾರಣವನ್ನು ಕಾಂಗ್ರೆಸ್ ಎಷ್ಟು ದಿನ ನಡೆಸುತ್ತದೆ. ಹಾನಗಲ್ ಕ್ಷೇತ್ರಕ್ಕೆ ಅಲ್ಪಸಂಖ್ಯಾತರ ವಿವಿಧ ಯೋಜನೆಗಳಿಗೆ ಸಂಸದ ಶಿವಕುಮಾರ ಉದಾಸಿ ₹20 ಕೋಟಿ ಮಂಜೂರು ಮಾಡಿಸಿದ್ದಾರೆ. ಏಕವಚನದಲ್ಲಿ ಮಾತನಾಡಿದರೆ ಯಾರೂ ದೊಡ್ಡವರಾಗುವುದಿಲ್ಲ. ಅವರ ಟೀಕೆಗಳನ್ನು ಮೆಟ್ಟಿಲು ಮಾಡಿಕೊಂಡು ಜನರ ಸೇವೆ ಮಾಡುತ್ತೇನೆ. ದೀನ ದಲಿತರು, ರೈತರು ಸೇರಿದಂತೆ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಒತ್ತು ನೀಡುತ್ತೇನೆ’ ಎಂದು ಹೇಳಿದರು.

‘ಕಾಂಗ್ರೆಸ್ ಅಭ್ಯರ್ಥಿ ಶ್ರೀನಿವಾಸ ಮಾನೆ ಅವರನ್ನು ‘ಆಪತ್ಬಾಂಧವ’ ಎನ್ನುತ್ತಾರೆ. ಕೋವಿಡ್ ಕಾಲದಲ್ಲಿ ನಾವು ಕೂಡ ನೆರವು ನೀಡಿದ್ದೇವೆ. ಆದರೆ, ಮಾನವೀಯತೆ ಕಾರ್ಯವನ್ನು ಚುನಾವಣೆಗೆ ಬಂಡವಾಳ ಮಾಡಿಕೊಂಡು, ರಾಜಕೀಯ ಲಾಭ ಗಳಿಸುತ್ತಿರುವ ಕಾಂಗ್ರೆಸ್ ನಿಲುವು ಸರಿಯೇ’ ಎಂದು ಪ್ರಶ್ನಿಸಿದರು.

ದೇಶದಲ್ಲಿ ಕಾಂಗ್ರೆಸ್ ‘ಮುಳುಗುತ್ತಿರುವ ಹಡಗು’ ಎನ್ನಲಾಗುತ್ತಿದೆ. ಅದು ‘ಮುಳುಗಿರುವ ಹಡಗು’. ರಾಜ್ಯದಲ್ಲಿ ಇನ್ನೂ ಸ್ವಲ್ಪ ಅಲುಗಾಡುತ್ತಿದೆ. ಅ.30ರಂದು ಪೂರ್ಣ ಮುಳುಗಲಿದೆ ಎಂದು ವ್ಯಂಗ್ಯವಾಡಿದರು.



ಹಾನಗಲ್ ಪಟ್ಟಣದಲ್ಲಿ ಶನಿವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾನಗಲ್ ಉಪಚುನಾವಣೆ ಪ್ರಣಾಳಿಕೆ ಬಿಡುಗಡೆ ಮಾಡಿದರು. ಸಂಸದ ಶಿವಕುಮಾರ ಉದಾಸಿ, ಸಚಿವ ಮುನಿರತ್ನ, ಮಾಜಿ ಮುಖ್ಯಮಂತ್ರಿ ಬಿ.ಎಸ್‌ ಯಡಿಯೂರಪ್ಪ, ಬಿಜೆಪಿ ಅಭ್ಯರ್ಥಿ ಶಿವರಾಜ ಸಜ್ಜನರ, ಸಚಿವ ಡಾ.ಕೆ.ಸುಧಾಕರ್, ವಿಧಾನ ಪರಿಷತ್ ಸದಸ್ಯ ಎನ್‌ ರವಿಕುಮಾರ್ ಇದ್ದಾರೆ

ಕ್ರಿಕೆಟ್‌ನಲ್ಲಿ ಭಾರತ ತಂಡ ಪಾಕಿಸ್ತಾನವನ್ನು ಸೋಲಿಸುವಂತೆ, ನೀವು ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಹೀನಾಯವಾಗಿ ಸೋಲಿಸಿ

ರಾಜುಗೌಡ, ಸುರಪುರ ಶಾಸಕ

ಕಾಂಗ್ರೆಸ್‌ನವರು ಮತದಾರರಿಗೆ ಸೀರೆ ಹಂಚುತ್ತಿದ್ದಾರೆ. ಆದರೆ, ನಾವು ಗೋಣಿಚೀಲದಲ್ಲಿ ದುಡ್ಡು ಹಂಚುತ್ತಿದ್ದೇವೆ ಎಂದು ಆರೋಪಿಸುತ್ತಾರೆ

ಬಿ.ಸಿ.ಪಾಟೀಲ, ಕೃಷಿ ಸಚಿವ

ಅಂಬೇಡ್ಕರ್‌ಗೆ ಕಾಂಗ್ರೆಸ್‌ನಿಂದ ಅನ್ಯಾಯ: ಬಿ.ಎಸ್‌.ಯಡಿಯೂರಪ್ಪ

‘ಕಾಂಗ್ರೆಸ್‌ನವರು ಡಾ.ಅಂಬೇಡ್ಕರ್ ಅವರನ್ನು ಎರಡು ಬಾರಿ ಸೋಲಿಸಿದರು. ಭಾರತ ರತ್ನವನ್ನೂ ಕೊಡದೆ ಅವಮಾನಿಸಿದರು. ಇಂಥ ಕಾಂಗ್ರೆಸ್ ಅನ್ನು ದೇಶದ ಜನರು ಮರೆತಿದ್ದಾರೆ. 26 ರಾಜ್ಯಗಳಲ್ಲಿ ಬಿಜೆಪಿ ಸರ್ಕಾರವಿದೆ’ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದರು.

‘ಅಧಿಕಾರ ಶಾಶ್ವತವಲ್ಲ, ಎಲ್ಲರಿಗೂ ಸಿಗಬೇಕು ಎಂದು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಬಿಸಾಕಿ ಬಂದೆ. ನನಗೆ ಯಾರೂ ಒತ್ತಡ ಹಾಕಿರಲಿಲ್ಲ’ ಎಂದು ಭಾವುಕರಾಗಿ ನುಡಿದರು.

‘ಅಧಿಕಾರವಿಲ್ಲದಿದ್ದರೂ ರಾಜ್ಯದ ಯಾವುದೇ ಮೂಲೆಗೆ ಹೋದರೂ ಜನರು ಪ್ರೀತಿಯಿಂದ ಕಾಣುತ್ತಾರೆ. ನ.15ರ ನಂತರ ರಾಜ್ಯದ ಪ್ರತಿ ಜಿಲ್ಲಾ ಕೇಂದ್ರಕ್ಕೂ ಬಂದು ಪಕ್ಷ ಸಂಘಟಿಸುತ್ತೇನೆ. ಸಾರ್ವತ್ರಿಕ ಚುನಾವಣೆಯಲ್ಲಿ 140 ಸ್ಥಾನ ಗೆಲ್ಲಲು ಶ್ರಮಿಸುತ್ತೇನೆ’ ಎಂದರು.

ಹಣ, ಹೆಂಡ, ತೋಳ್ಬಲದಿಂದ ಮತ ಪಡೆಯಲು ಸಾಧ್ಯವಿಲ್ಲ ಎಂಬುದನ್ನು ಕಾಂಗ್ರೆಸ್ ಅರ್ಥಮಾಡಿಕೊಳ್ಳಬೇಕು. ಕಾಂಗ್ರೆಸ್ ಬುಡುಬುಡಿಕೆ ಮಾತಿಗೆ ಜನರು ಮಾನ್ಯತೆ ನೀಡುವುದಿಲ್ಲ. ರಾಜಕೀಯ ದೊಂಬರಾಟದಿಂದ ಚುನಾವಣೆ ಗೆಲ್ಲಲು ಸಾಧ್ಯವಿಲ್ಲ. ಜನರು ಬುದ್ಧಿವಂತರಾಗಿದ್ದಾರೆ ಎಂದು ಹೇಳಿದರು.

ಸುದ್ದಿ 2 ನಿಮಿಷ

‘ಸಿದ್ದರಾಮಯ್ಯ ಅವರನ್ನು ಅಫ್ಘಾನಿಸ್ತಾನಕ್ಕೆ ಕಳುಹಿಸಿ’

ಮೈಸೂರು: ‘ತಾಲಿಬಾನ್ ಆಡಳಿತವನ್ನು ಪರಿಶೀಲಿಸಲು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಕೇಂದ್ರ ಸರ್ಕಾರ ಅಫ್ಘಾನಿಸ್ತಾನಕ್ಕೆ ಕಳುಹಿಸಿಕೊಡಬೇಕು’ ಎಂದು ಸಂಸದ ವಿ.ಶ್ರೀನಿವಾಸ ಪ್ರಸಾದ್ ಮನವಿ ಮಾಡಿದರು.

ನಗರದಲ್ಲಿ ಶನಿವಾರ ‘ಆರ್.ಎಸ್.ಮುಖಂಡ ಮ.ವೆಂಕಟರಾಮು ಅಭಿನಂದನಾ ಸಮಾರಂಭ’ದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸಿಂದಗಿ, ಹಾನಗಲ್ ಉಪಚುನಾವಣೆ ಸಂಬಂಧ ವಿರೋಧ ಪಕ್ಷದವರು ಬಹಳ ಉದ್ವೇಗದಿಂದ, ವಿವೇಚನೆ ಕಳೆದುಕೊಂಡು ಮಾತನಾಡುತ್ತಿದ್ದಾರೆ. ಸಿದ್ದರಾಮಯ್ಯ ತಾಳ್ಮೆ ಕಳೆದುಕೊಂಡಿದ್ದಾರೆ. ಅವರು ರಾಷ್ಟ್ರ ಮಟ್ಟದ ರಾಜಕೀಯವನ್ನು ಅರ್ಥ ಮಾಡಿಕೊಂಡು ಮಾತನಾಡುತ್ತಿಲ್ಲ. ಅವರ ಭಾಷಣ ಕೇಳಿದ್ದೀರಾ? ಯಾರಾದರೂ ಸಹಿಸುತ್ತಾರೆಯೇ? ಅದಕ್ಕೆ ಆಡಳಿತ ಪಕ್ಷದವರು ಪ್ರತಿಕ್ರಿಯೆ ನೀಡುವುದು ತಪ್ಪೇ’ ಎಂದು ಪ್ರಶ್ನಿಸಿದರು.

‘ವಿರೋಧ ಪಕ್ಷದ ನಾಯಕರಾದವರು ತಮ್ಮ ಜವಾಬ್ದಾರಿ ಅರಿತು ಸರ್ಕಾರದ ವೈಫಲ್ಯಗಳನ್ನು ಎತ್ತಿ ತೋರಿಸಬೇಕು. ಅದನ್ನು ಬಿಟ್ಟು ಈ ದೇಶದ ಪ್ರಧಾನಿ ಬಗ್ಗೆ ಮಾತನಾಡುತ್ತಿದ್ದಾರೆ. ಕೇಂದ್ರ, ರಾಜ್ಯ ಸರ್ಕಾರವನ್ನು ತಾಲಿಬಾನ್‌ಗೆ ಹೋಲಿಸುತ್ತಿದ್ದಾರೆ. ರಾಷ್ಟ್ರ ಮಟ್ಟದ ಯಾವ ನಾಯಕರೂ ಹೀಗೆ ಮಾತನಾಡುತ್ತಿಲ್ಲ. ಇದು ನನ್ನ ಮನಸ್ಸಿಗೆ ಗಾಸಿ ಉಂಟು ಮಾಡಿದೆ’ ಎಂದರು.



‘ಸಿಂದಗಿ, ಹಾನಗಲ್ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ’ ಎಂದರು.

ಸಂವಿಧಾನ ಬದಲಿಸಲಾಗದು: ಶಾಸಕ ಎನ್‌. ಮಹೇಶ

ಸಿಂದಗಿ: ಬಿಜೆಪಿ ಸಂವಿಧಾನ ಬದಲಾವಣೆ ಮಾಡುತ್ತದೆ ಎಂಬ ಅಪಪ್ರಚಾರ ಆಧಾರರಹಿತವಾದುದು. ಸಂವಿಧಾನ ಬದಲಾವಣೆ ಮಾಡಲು ಅದೇನು ಶಾಲಾ ಪಠ್ಯಪುಸ್ತಕವೇ...? ಪರಿಶಿಷ್ಟ ಜಾತಿ ಬಂಧುಗಳು ಇದನ್ನು ನಂಬಬೇಡಿ. ಸಂವಿಧಾನ ಬದಲಾವಣೆ ಯಾರಿಂದಲೂ ಸಾಧ್ಯವಿಲ್ಲ ಎಂದು ಕೊಳ್ಳೆಗಾಲದ ಶಾಸಕ ಎನ್.ಮಹೇಶ ಹೇಳಿದರು.

ಇಲ್ಲಿಯ ಬಿಜೆಪಿ ಚುನಾವಣಾ ಪ್ರಚಾರ ಕಾರ್ಯಾಲಯದಲ್ಲಿ ಶನಿವಾರ ಸುದ್ದಿಗಾರರ ಜೊತೆಗೆ ಮಾತನಾಡಿ, ‘ಸಂವಿಧಾನ ರತ್ನ ಅಂಬೇಡ್ಕರ್ ಅವರಿಗೆ ಕಾಂಗ್ರೆಸ್ ತೀವ್ರ ಅವಮಾನ ಮಾಡಿತ್ತು. ಆದರೆ, ಈಗ ಪ್ರಧಾನಿ ನರೇಂದ್ರ ಮೋದಿ ಅವರು ಅಂಬೇಡ್ಕರ್ ಅವರ ಅಂತ್ಯಕ್ರಿಯೆ ನಡೆದ ಸ್ಥಳವನ್ನು ಯಾತ್ರಾ ಸ್ಥಳವನ್ನಾಗಿ ಮಾರ್ಪಾಡು ಮಾಡುತ್ತಿದ್ದಾರೆ’ ಎಂದರು.

ಬಸವತತ್ವದಂತೆ ಎಲ್ಲರನ್ನು ಸಮಾನವಾಗಿ ಕಾಣುವ ಸರಳ ವ್ಯಕ್ತಿ ರಮೇಶ ಭೂಸನೂರ ಅವರಿಗೆ ಮತ ನೀಡುವ ಮೂಲಕ ಕಾಂಗ್ರೆಸ್‌ಗೆ ಪಾಠ ಕಲಿಸಬೇಕು ಎಂದು ಮನವಿ ಮಾಡಿದರು.

ಧಾರ್ಮಿಕ ಕಟ್ಟಡಗಳ ರಕ್ಷಣಾ ಮಸೂದೆಗೆ ರಾಜ್ಯಪಾಲ ಅಂಕಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿರುವ ‘ಅನಧಿಕೃತ ಧಾರ್ಮಿಕ ಕಟ್ಟಡ'ಗಳನ್ನು ರಕ್ಷಿಸುವ ಸಲುವಾಗಿ ಜಾರಿಗೆ ತರಲು ಉದ್ದೇಶಿಸಿದ`ಕರ್ನಾಟಕ ಧಾರ್ಮಿಕ ಕಟ್ಟಡಗಳ (ಸಂರಕ್ಷಣೆ) ಕಾಯ್ದೆ–2021’ಯ ಮಸೂದೆಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಂಕಿತ ಹಾಕಿದ್ದಾರೆ.

ರಾಜ್ಯದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನು, ನ್ಯಾಯಾಲಯ, ನ್ಯಾಯಮಂಡಳಿ, ಪ್ರಾಧಿಕಾರದ ಯಾವುದೇ ತೀರ್ಪು, ಪ್ರತಿಬಂಧಕ (ಡಿಕ್ರಿ) ಅಥವಾ ಆದೇಶ ಇದ್ದರೂ ಕಾಯ್ದೆ ಜಾರಿಯಾದ ದಿನದವರೆಗೆ ಅಸ್ತಿತ್ವದಲಿರುವ ಧಾರ್ಮಿಕ ಕಟ್ಟಡಗಳನ್ನು (ದೇವಸ್ಥಾನ, ಚರ್ಚ್, ಮಸೀದಿ, ಗುರುದ್ವಾರ, ಬೌದ್ಧ ವಿಹಾರ, ಮಜರ್ ಇತರೆ) ಸಂರಕ್ಷಿಸಲು ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.

ಆದರೆ ತೆರವಿಗೆ ಸಂಬಂಧಪಟ್ಟಂತೆ ಯಾವುದೇ ಪ್ರಕರಣವು ಯಾವುದೇ ನ್ಯಾಯಾಲಯದಲ್ಲಿ ಇತ್ಯರ್ಥದ ಹಂತದಲ್ಲಿದ್ದರೆ ಸಂರಕ್ಷಿಸುವಂತಿಲ್ಲ ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ.

ಸರ್ಕಾರ ಅಥವಾ ಯಾವುದೇ ಸ್ಥಳೀಯ ಪ್ರಾಧಿಕಾರವು ಭವಿಷ್ಯದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ಧಾರ್ಮಿಕ ಕಟ್ಟಡ ನಿರ್ಮಾಣಕ್ಕೆ ಸೂಕ್ತ ಪರವಾನಗಿ ಇಲ್ಲದೆ (ಅನಧಿಕೃತವಾಗಿ ನಿರ್ಮಾಣಕ್ಕೆ) ಅವಕಾಶ ನೀಡುವಂತೆ ಇಲ್ಲ. ಆದರೆ ರೂಢಿ, ರಿವಾಜು, ಕಾನೂನು ಹಾಗೂ ಸರ್ಕಾರ ಆಗಾಗ ವಿಧಿಸುವ ಷರತ್ತುಗಳಿಗೆ ಒಳಪಟ್ಟಂತೆ ಸಂರಕ್ಷಿತ ಕಟ್ಟಡಗಳಲ್ಲಿ ಧಾರ್ಮಿಕ ಚಟುವಟಿಕೆ ನಡೆಸಲು ಜಿಲ್ಲಾಡಳಿತ ಅವಕಾಶ ಕಲ್ಪಿಸಲು ಕಾಯ್ದೆಯಲ್ಲಿ ಅವಕಾಶ ನೀಡಲಾಗಿದೆ.

ಸಿಂದಗಿಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರಶ್ನೆ

ರೈತರ ಆದಾಯ ಡಬಲ್ ಮಾಡಿದ್ದಾರಾ

ಪ್ರಜಾವಾಣಿ ವಾರ್ತೆ

ವಿಜಯಪುರ: ಬಿಜೆಪಿಯ ಡಬಲ್ ಎಂಜಿನ್ ಸರ್ಕಾರ ಬಂದು ಎರಡು ವರ್ಷವಾಯಿತು. ಅವರು ಹೇಳಿದಂತೆ ರೈತರ ಆದಾಯ ಡಬಲ್ ಮಾಡಿದ್ದಾರಾ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದ್ದಾರೆ.

ಸಿಂದಗಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕೋವಿಡ್ ಸಮಯದಲ್ಲಿ ಘೋಷಿಸಿದ ಪರಿಹಾರ ಪ್ಯಾಕೇಜ್ ಜನರಿಗೆ ತಲುಪಿದೆಯಾ? ಎಂಬುದಷ್ಟೇ ಇಲ್ಲಿ ಮುಖ್ಯ. ಜನ ಇದನ್ನು ನೋಡಿ ನಂತರ ಮತ ಹಾಕುತ್ತಾರೆ. ಇದನ್ನು ಹೊರತುಪಡಿಸಿ ಯಾವ ಪಕ್ಷ ಯಾವ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದಾರೆ ಎಂಬುದು ಮುಖ್ಯವಲ್ಲ. ನಾವು ಜಾತಿ ಮೇಲೆ ಹೋರಾಟ ಮಾಡುತ್ತಿಲ್ಲ, ನೀತಿ ಮೇಲೆ ಹೋರಾಟ ಮಾಡುತ್ತಿದ್ದೇವೆ’ ಎಂದರು.

ಮುಂದಿನ ಚುನಾವಣೆಯಲ್ಲಿ ಬಿಜೆಪಿಗೆ 140 ಸೀಟು ಗೆಲ್ಲಿಸಿ ಮತ್ತೆ ಅಧಿಕಾರಕ್ಕೆ ತರುತ್ತೇನೆ ಎಂದು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಬಹಳ ಸಂತೋಷ, ಇನ್ನುಳಿದ ಕ್ಷೇತ್ರಗಳನ್ನು ಅವರು ಯಾಕೆ ಬಿಟ್ಟಿದ್ದಾರೆ? ಯಡಿಯೂರಪ್ಪನವರ ಗುರಿ 140 ಸೀಟುಗಳಾದರೆ, ನನ್ನ ಗುರಿ 224 ಸೀಟು ಎಂದು ವ್ಯಂಗ್ಯವಾಡಿದರು.

ಯಡಿಯೂರಪ್ಪನವರಿಗೆ ಅವರ ನೋವು ಹೇಳಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಕಣ್ಣೀರು ಯಾಕೆ ಬರುತ್ತದೆ ಹೇಳಿ? ಯಾರಿಗೆ ನೋವಾಗಿರುತ್ತದೆಯೋ ಅವರಿಗೆ ಕಣ್ಣೀರು ಬರುತ್ತದೆ. ಯಡಿಯೂರಪ್ಪನವರು ರಾಜ್ಯಪಾಲರಿಗೆ ರಾಜೀನಾಮೆ ನೀಡುವಾಗ ಹಾಕಿದ ಕಣ್ಣೀರಲ್ಲೇ ಈ ಬಿಜೆಪಿ ಪಕ್ಷ ಹಾಗೂ ಅದರ ಸರ್ಕಾರ ಕೊಚ್ಚಿಹೋಗಲಿದೆ ಎಂದರು.

ಕಾಂಗ್ರೆಸ್ ಮುಳುಗುತ್ತಿರುವ ಹಡಗು, ಜನರೇ ಅದನ್ನು ವಿಸರ್ಜನೆ ಮಾಡಲಿದ್ದು, ವಿಳಾಸ ಹುಡುಕುವಂತಾಗಲಿದೆ ಎಂಬ ಯಡಿಯೂರಪ್ಪನವರ ಹೇಳಿಕೆಗೆ ತಿರುಗೇಟು ಕೊಟ್ಟ ಅವರು, ‘ಕಾಂಗ್ರೆಸ್ ಅಡ್ರೆಸ್ ಪಕ್ಕಕ್ಕಿರಲಿ, ಈಗ ಬಿಜೆಪಿಯವರು ಯಡಿಯೂರಪ್ಪನವರಿಗೆ ಏನಾದರೂ ವಿಳಾಸ ಕೊಟ್ಟಿದ್ದಾರಾ? ಅವರ ವಿಳಾಸ ಏನು ಎಂದು ಮೊದಲು ಹುಡುಕಿಕೊಳ್ಳಲಿ, ಅದನ್ನು ಅವರು ಅರ್ಥ ಮಾಡಿಕೊಳ್ಳಲಿ’ ಎಂದು ಛೇಡಿಸಿದರು.

ರಾಜಾಹುಲಿ ಯಡಿಯೂರಪ್ಪನವರ ಜತೆ ಮತ್ತೊಂದು ಹುಲಿ ಬೊಮ್ಮಾಯಿ ಸೇರಿದ್ದಾರೆ. ಈಗ ಕಾಂಗ್ರೆಸ್‌ನವರು ಇಲಿಗಳಾಗಿದ್ದಾರೆ ಎಂಬ ಬಿಜೆಪಿ ನಾಯಕರ ಹೇಳಿಕೆಗೆ ಮಾರ್ಮಿಕವಾಗಿ ಉತ್ತರಿಸಿದ ಅವರು, ‘ಇಲಿಯೇ ಅಲ್ಲವೇ ಗಣಪತಿಯನ್ನು ಹೊತ್ತು ತಿರುಗುವುದು’ ಎಂದರು.



ಸಿಂದಗಿ ಪಟ್ಟಣದಲ್ಲಿ ಶನಿವಾರ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಕಾಂಗ್ರೆಸ್ ಅಭ್ಯರ್ಥಿ ಅಶೋಕ ಮನಗೂಳಿ, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಧ್ರುವನಾರಾಯಣ ಮತ್ತು ಈಶ್ವರ ಖಂಡ್ರೆ, ವಿಧಾನ ಪರಿಷತ್ ಸದಸ್ಯ ಸುನೀಲ್ ಗೌಡ ಪಾಟೀಲ ಬೃಹತ್ ರೋಡ್ ಶೋ ನಡೆಸಿದರು

ಯುವ ನೀತಿ: ಸಮಿತಿಗೆ ಸೂಲಿಬೆಲೆ, ಸಂಕಲ್ಪ ಶೆಟ್ಟರ್

ಪ್ರಜಾವಾಣಿ ವಾರ್ತೆ



ಬಾಲಸುಬ್ರಹ್ಮಣ್ಯಂ



ಚಕ್ರವರ್ತಿ ಸೂಲಿಬೆಲೆ

ಬೆಂಗಳೂರು: ರಾಜ್ಯ ಸರ್ಕಾರ ‘ಕರ್ನಾಟಕ ಯುವ ನೀತಿ–2021’ ರೂಪಿಸಲು ಸ್ವಾಮಿ ವಿವೇಕಾನಂದ ಯುವ ಚಳವಳಿಯ ಸಂಸ್ಥಾಪಕ ಆರ್. ಬಾಲಸುಬ್ರಹ್ಮಣ್ಯಂ ನೇತೃತ್ವದಲ್ಲಿ ರಚಿಸಿರುವ ಸಮಿತಿಗೆ ಯುವ ಬ್ರಿಗೇಡ್‌ನ ಚಕ್ರವರ್ತಿ ಸೂಲಿಬೆಲೆ, ಬಿಜೆಪಿ ಶಾಸಕ ಜಗದೀಶ್ ಶೆಟ್ಟರ್ ಪುತ್ರ ಸಂಕಲ್ಪ ಶೆಟ್ಟರ್ ಸೇರಿದಂತೆ 13 ಜನ ಸದಸ್ಯರನ್ನು ನೇಮಕ ಮಾಡಲಾಗಿದೆ.

ಕೇಂದ್ರದ ಮಾಜಿ ಸಚಿವ, ದಿವಂಗತ ಎಚ್.ಎನ್. ಅನಂತಕುಮಾರ್ ಪುತ್ರಿ ಐಶ್ವರ್ಯಾ ದಿವೇಶ್, ಬೆಂಗಳೂರಿನ ಚನ್ನಮಲ್ಲಿಕಾರ್ಜುನ್ ಬಿ. ಪಾಟೀಲ, ವಿನೋದ್ ಕೃಷ್ಣಮೂರ್ತಿ, ನೆಹರೂ ಯುವ ಕೇಂದ್ರದ ನಿರ್ದೇಶಕ ಎಂ.ಎನ್. ನಟರಾಜ್, ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಡಾ. ಪ್ರತಾಪ್ ಲಿಂಗಯ್ಯ, ದೊಡ್ಡಬಳ್ಳಾಪುರದ ಡಿ.ಎಸ್. ಕೃಷ್ಣ, ಮಂಡ್ಯದ ಕೆ. ನಾಗಣ್ಣಗೌಡ, ಬೇಲೂರಿನ ಸಂತೋಷ್ ಸೋಮಶೇಖರ್ (ಕೆಂಚಾಂಬ) ಸದಸ್ಯರಾಗಿದ್ದಾರೆ.

ಸಮಿತಿಯ ವಿಶೇಷ ಆಹ್ವಾನಿತರಾಗಿ ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಹಾಗೂ ಸದಸ್ಯ ಕಾರ್ಯದರ್ಶಿಯಾಗಿ ಇಲಾಖೆ ಆಯುಕ್ತರನ್ನು ನೇಮಿಸಲಾಗಿದೆ.

‘ಯುವಜನರು ತಮ್ಮ ಜೀವನವನ್ನು ಉತ್ತಮವಾಗಿ ಕಟ್ಟಿಕೊಳ್ಳಲು, ಉಜ್ವಲ ಭವಿಷ್ಯ ರೂಪಿಸಿಕೊಳ್ಳಲು ಅನುಕೂಲ ಆಗುವಂತೆ ಸಮಗ್ರ ಯುವ ನೀತಿ ಹೊರತರಲು ರಚನೆಯಾಗಿರುವ ತಜ್ಞರ ಸಮಿತಿ ಇದಾಗಿದ್ದು, ಸಮಗ್ರವಾಗಿ ಅಧ್ಯಯನ ನಡೆಸಿ ಎರಡು ತಿಂಗಳೊಳಗೆ ವರದಿ ನೀಡಬೇಕು’ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಸರ್ಕಾರದ ಯುವ ನೀತಿ ರೂಪಿಸುವ ಸಮಿತಿಗೆ, ಹಿಂದುತ್ವವಾದವನ್ನು ಪ್ರತಿಪಾದಿಸುವ ಸೂಲಿಬೆಲೆ ಹಾಗೂ ಬಿಜೆಪಿ ಪ್ರಮುಖರ ಮಕ್ಕಳನ್ನು ಸದಸ್ಯರಾಗಿ ನೇಮಕ ಮಾಡಿರುವುದಕ್ಕೆ ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ವಿರೋಧ ವ್ಯಕ್ತವಾಗಿದೆ. ‘ಸರ್ಕಾರದ ನೀತಿ ರೂಪಿಸಲು ವಿಷಯ ತಜ್ಞರ ಬದಲಾಗಿ, ಯುವಕರನ್ನು ಕೋಮುವಾದಿ ಸಿದ್ಧಾಂತದ ಕಡೆ ಪ್ರಚೋದಿಸುವಂತಹ ಕೆಲಸ ಮಾಡುತ್ತಿರುವವರನ್ನು ನೇಮಕ ಮಾಡುತ್ತಿರುವುದು ಎಷ್ಟು ಸರಿ’ ಎಂದು ಅನೇಕರು ಜಾಲತಾಣಗಳಲ್ಲಿ ಪ್ರಶ್ನಿಸಿದ್ದಾರೆ.

ಆಲಮೇಲ ವಿರಕ್ತಮಠದಲ್ಲಿ ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡ ವಾಗ್ದಾಳಿ

ದೇಶ ಒಡೆಯುತ್ತಿರುವ ಕಾಂಗ್ರೆಸ್, ಆರ್‌ಎಸ್‌ಎಸ್

ಪ್ರಜಾವಾಣಿ ವಾರ್ತೆ

ಆಲಮೇಲ (ವಿಜಯಪುರ): ‘ದೇಶದ ಒಳಿತಿಗಾಗಿ ಕೆಲಸ ಮಾಡುತ್ತಿದ್ದ ಗಾಂಧಿ ಕಾಂಗ್ರೆಸ್ ಮತ್ತು ಹೆಡಗೇವಾರ್ ಆರ್‌ಎಸ್‌ಎಸ್ ಸಂಘಟನೆ ಇಂದು ಸಂಪೂರ್ಣವಾಗಿ ಬದಲಾಗಿದೆ. ಇಂದಿನ ಕಾಂಗ್ರೆಸ್ ಮತ್ತು ಆರ್.ಎಸ್.ಎಸ್ ಸಂಘಟನೆ ಧರ್ಮ, ಧರ್ಮಗಳ ನಡುವೆ ಕೋಮು ಸಂಘರ್ಷ ಹುಟ್ಟುಹಾಕಿ ದೇಶ ಒಡೆಯುವ ಕೆಲಸದಲ್ಲಿ ತೊಡಗಿವೆ’ ಎಂದು ಜೆಡಿಎಸ್ ವರಿಷ್ಠ ಎಚ್‌.ಡಿ ದೇವೇಗೌಡ ಆರೋಪಿಸಿದರು.

ಆಲಮೇಲ ವಿರಕ್ತಮಠದಲ್ಲಿ ಸಿಂದಗಿ ಉಪ ಚುನಾವಣೆ ಹಿನ್ನೆಲೆಯಲ್ಲಿ ಏರ್ಪಡಿಸಿದ್ದ ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿದರು.

ಪಕ್ಷ ಬಿಟ್ಟುಹೋದವರಿಗೆ ಬುದ್ಧಿ ಕಲಿಸಿ; ಎಚ್‌ಡಿಕೆ

ತಾಂಬಾ: ‘2018ರ ಚುನಾವಣೆಯಲ್ಲಿ ನನ್ನ ಮನವಿಗೆ ಬೆಲೆ ಕೊಟ್ಟು ಎಂ.ಸಿ.ಮನಗೂಳಿ ಅವರನ್ನು ಗೆಲ್ಲಿಸಿದ್ದೀರಿ. ಅದೇ ರೀತಿ ಈಗ ನಮ್ಮ ಪಕ್ಷದ ಅಭ್ಯರ್ಥಿ ನಾಜಿಯಾ ಅಂಗಡಿ ಅವರನ್ನು ಗೆಲ್ಲಿಸುವ ಮೂಲಕ ಪಕ್ಷ ಬಿಟ್ಟು ಹೋದವರಿಗೆ ಬುದ್ದಿಕಲಿಸಿ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಹೇಳಿದರು.

ಸಿಂದಗಿ ಉಪಚುನಾವಣೆ ಪ್ರಚಾರ ಅಂಗವಾಗಿ ಗ್ರಾಮದಲ್ಲಿ ಶನಿವಾರ ಹಮ್ಮಿಕೊಂಡ ಬಹಿರಂಗ ಸಭೆಯಲ್ಲಿ ಜೆಡಿಎಸ್ ಅಭ್ಯರ್ಥಿ ನಾಜಿಯಾ ಅಂಗಡಿ ಪರ ಮತಯಾಚನೆ ಮಾಡಿ ಅವರು ಮಾತನಾಡಿದರು.

ಮುಂಬರುವ 2023ರ ಸಾರ್ವತ್ರಿಕ ಚುನಾವಣೆಯಲ್ಲಿ ಜೆಡಿಎಸ್ ಪಕ್ಷಕ್ಕೆ ಬಹುಮತ ನೀಡಿ ಸ್ವತಂತ್ರ ಸರ್ಕಾರ ರಚಿಸಲು ಅವಕಾಶ ನೀಡಿ. ಆಗ ನಾನು ಅಧಿಕಾರಕ್ಕೆ ಬರುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ನನ್ನ 14ತಿಂಗಳ ಅಧಿಕಾರಾವಧಿಯಲ್ಲಿ ಈ ಕ್ಷೇತ್ರಕ್ಕೆ ₹ 980ಕೋಟಿ ನೀಡಿ ಈ ಭಾಗದ 21 ಸಾವಿರ ರೈತರ ಸಾಲ ಮನ್ನಾ ಮಾಡಿರುವೆ ಎಂದು ಹೇಳಿದರು.

ಮುಸ್ಲಿಮರು ವೋಟ್ ಬ್ಯಾಂಕ್ ಅಲ್ಲ: ಹಾನಗಲ್‌ನಲ್ಲಿ ಜೆಡಿಎಸ್ ಅಭ್ಯರ್ಥಿ ನಿಯಾಜ್ ಶೇಖ್ ಪರ ಪ್ರಚಾರ ಸಭೆ ನಡೆಸಿದ ಕುಮಾರಸ್ವಾಮಿ, ‘ 70 ವರ್ಷಗಳಿಂದ ಅಲ್ಪಸಂಖ್ಯಾತರನ್ನು ವೋಟ್ ಬ್ಯಾಂಕ್ ಮಾಡಿಕೊಂಡ ಕಾಂಗ್ರೆಸ್ ನಡವಳಿಕೆ ಬದಲಾಗಬೇಕು’ ಎಂದರು.

ಈ ಚುನಾವಣೆ ಫಲಿತಾಂಶದ ಮೇಲೆ 2023ಕ್ಕೆ ‘ಮಿಷನ್ 123’ಗೆ ಪ್ರೋತ್ಸಾಹ ಸಿಗಬಹುದು. ಈ ಚುನಾವಣೆ ನಮ್ಮ ‘ಮಿಷನ್ ಟೆಸ್ಟಿಂಗ್’ ಚುನಾವಣೆ ಎಂದು ತಿಳಿಸಿದರು.

ಹಿಂದುಳಿದವರು ಮೀಸಲಾತಿ ಕೇಳಿದರೆ ತಪ್ಪಲ್ಲ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ



ಆನವಟ್ಟಿ: ‘ಮೀಸಲಾತಿ ವಿರೋಧಿಸಿದವರೇ ಈಗ ಮೀಸಲಾತಿ ಪಡೆಯುತ್ತಿದ್ದಾರೆ. ಬ್ರಾಹ್ಮಣರು, ರಜಪೂತರು ಸೇರಿ ಉನ್ನತ ಜಾತಿಯವರು ಶೇ 10 ಮೀಸಲಾತಿ ಪಡೆದುಕೊಂಡಿದ್ದಾರೆ. ಹೀಗಿರುವಾಗ ಹಿಂದುಳಿದವರು ಮೀಸಲಾತಿ ಕೇಳುವುದು ತಪ್ಪಲ್ಲ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ಶಿವಮೊಗ್ಗ ಜಿಲ್ಲೆಯ ಆನವಟ್ಟಿ ಸಮೀಪದ ಕುಬಟೂರು ಗ್ರಾಮದ ಬಂಗಾರ ನಿವಾಸದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದರು.

‘ಸಂಯುಕ್ತ ಜನತಾದಳ ಇಬ್ಭಾಗವಾದಾಗ ದೇವೇಗೌಡರ ಜೊತೆ ನಾನು ಮತ್ತು ಕೆಲ ನಾಯಕರು ಸೇರಿ ಜೆಡಿಎಸ್ ಪಕ್ಷವನ್ನು ಕಟ್ಟಿದ್ದೆವು. ಆದರೆ, ಜೆಡಿಎಸ್ ಕುಟುಂಬದ ಪಕ್ಷವಾಗಿದೆ. ಹಾಗಾಗಿ ‘ಜೆಡಿಎಸ್’ ಬದಲು ‘ಜೆಡಿಎಫ್’ ಎಂದು ನಾಮಕರಣ ಮಾಡಿಕೊಳ್ಳಲಿ. ‘ಎಫ್’ ಅಂದರೆ ಫ್ಯಾಮಿಲಿ ಪಾರ್ಟಿ’ ಎಂದು ಅವರು ವ್ಯಂಗ್ಯವಾಡಿದರು.

‘ದೇಶದಲ್ಲಿ ಅಘೋಷಿತ ತುರ್ತು ಪರಿಸ್ಥಿತಿ ಇದೆ. ಕೇಂದ್ರ ಸರ್ಕಾರವನ್ನು ಯಾರೇ ಪ್ರಶ್ನೆ ಮಾಡಿದರೂ ಅವರು ದೇಶದ್ರೋಹಿಗಳು, ನಕ್ಸಲ್, ಭಯೋತ್ಪಾದಕರು ಎಂದು ಬಿಂಬಿಸಲಾಗುತ್ತಿದೆ. ಪ್ರಶ್ನೆ ಮಾಡುವವರ ವಿರುದ್ಧ ಐಟಿ, ಇಡಿ ಮೂಲಕ ದಾಳಿ ನಡೆಸುತ್ತಾರೆ. ಲಖಿಂಪುರ ಖೇರಿಯಲ್ಲಿ ಮೃತಪಟ್ಟ ರೈತರ ಕುಟುಂಬದವರಿಗೆ ಸಾಂತ್ವನ ಹೇಳಲು ಹೋದ ಪ್ರಿಯಾಂಕಾ ಗಾಂಧಿ ಅವರನ್ನು ಬಂಧಿಸಲಾಗುತ್ತದೆ. ಸತ್ಯ ಹೇಳಲು ಮುಂದಾಗುವ ಮಾಧ್ಯಮಗಳಿಗೆ ನೋಟಿಸ್ ನೀಡಲಾಗುತ್ತಿದೆ’ ಎಂದು ದೂರಿದರು.

‘ಹಾನಗಲ್ ಮತ್ತು ಸಿಂದಗಿ ಉಪಚುನಾವಣೆಯಲ್ಲಿ ಬಿಜೆಪಿ, ಕಾಂಗ್ರೆಸ್ ನಡುವೆ ಸ್ಪರ್ಧೆ ಇದೆ. ಜೆಡಿಎಸ್ ಪ್ರತಿಸ್ಪರ್ಧಿಯಲ್ಲ. ಬಿಜೆಪಿ ಕೋಮುವಾದಿ ಪಕ್ಷವಾದರೆ ಜೆಡಿಎಸ್ ಆಂತರಿಕ ಕೋಮುವಾದಿ ಪಕ್ಷ’ ಎಂದು ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

‘ಸಾಲಭಾಗ್ಯದ ರೂವಾರಿ’

ಬೆಂಗಳೂರು: ‘ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ರಾಜ್ಯದ ಪ್ರತಿ ಪ್ರಜೆಯ ಮೇಲೆ ₹ 44,000 ಸಾಲದ ಹೊರೆ ಹೊರಿಸಿರುವ ಸಿದ್ದರಾಮಯ್ಯ, ಸಾಲಭಾಗ್ಯದ ರೂವಾರಿ’ ಎಂದು ಬಿಜೆಪಿ ರಾಜ್ಯ ಘಟಕ ಟ್ವಿಟರ್‌ನಲ್ಲಿ ಟೀಕಿಸಿದೆ.

ಬಿಜೆಪಿ ರಾಜ್ಯ ಘಟಕದ ಅಧಿಕೃತ ಖಾತೆಯಲ್ಲಿ ಸಿದ್ದರಾಮಯ್ಯ ವಿರುದ್ಧ ಶನಿವಾರ ಸರಣಿ ಟ್ವೀಟ್ ಮಾಡಿದೆ.

ಭೇಟಿಯಾದ ಮಠಾಧೀಶರಿಗೆ ಸಚಿವರಾದ ಈಶ್ವರಪ್ಪ, ಕೋಟ ಭರವಸೆ

ಹಿಂದುಳಿದ, ದಲಿತ ಮಠಗಳಿಗೆ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗಗಳು ಮತ್ತು ದಲಿತ ಸಮುದಾಯದ ಮಠಗಳಿಗೆ ಅಗತ್ಯವಿರುವ ನೆರವನ್ನು ರಾಜ್ಯ ಸರ್ಕಾರದಿಂದ ಒದಗಿಸಲಾಗುವುದು ಎಂದು ಸಚಿವರಾದ ಕೆ.ಎಸ್. ಈಶ್ವರಪ್ಪ ಹಾಗೂ ಕೋಟ ಶ್ರೀನಿವಾಸ ಪೂಜಾರಿ ಮಠಾಧೀಶರಿಗೆ ಭರವಸೆ ನೀಡಿದರು.

ರಾಜ್ಯ ಹಿಂದುಳಿದ ವರ್ಗಗಳು ಮತ್ತು ದಲಿತ ಮಠಾಧಿಪತಿಗಳ ಒಕ್ಕೂಟದ ನೇತೃತ್ವದಲ್ಲಿ ಹಲವು ಮಠಾಧೀಶರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ನಿವಾಸಕ್ಕೆ ಶನಿವಾರ ಭೇಟಿ ನೀಡಿ ಚರ್ಚಿಸಿದರು. ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಕೂಡ ಸಭೆಯಲ್ಲಿದ್ದರು. ಒಕ್ಕೂಟದ ಅಧ್ಯಕ್ಷರಾಗಿರುವ ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ ನಿಯೋಗದ ನೇತೃತ್ವ ವಹಿಸಿದ್ದರು.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ನಿರಂಜನನಾಂದಪುರಿ ಸ್ವಾಮೀಜಿ, ‘ಹಿಂದುಳಿದ ವರ್ಗಗಳು ಮತ್ತು ದಲಿತ ಸಮುದಾಯಗಳ ಹಲವು ಮಠಗಳಿಗೆ ಸರಿಯಾದ ಸೂರಿಲ್ಲ. ಈ ಕುರಿತು ಚರ್ಚಿಸಲಾಗಿದೆ. ಸಂಕಷ್ಟದಲ್ಲಿರುವ ಮಠಗಳಿಗೆ ಅಗತ್ಯ ಸೌಲಭ್ಯ ಒದಗಿಸುವಂತೆ ಸಚಿವರನ್ನು ಒತ್ತಾಯಿಸುವುದಕ್ಕಾಗಿ ಎಲ್ಲರೂ ಒಟ್ಟಾಗಿ ಬಂದಿದ್ದೇವೆ’ ಎಂದರು.

ನೆರವಿನ ಭರವಸೆ: ಸಚಿವ ಕೆ.ಎಸ್. ಈಶ್ವರಪ್ಪ ಮಾತನಾಡಿ, ‘ಸ್ವಾಮೀಜಿಗಳು ತಮ್ಮ ಸಮಸ್ಯೆಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಅಗತ್ಯವಿರುವ ನೆರವನ್ನು ಒದಗಿಸುವ ಭರವಸೆ ನೀಡಿದ್ದೇವೆ. ಈ ಉದ್ದೇಶಕ್ಕಾಗಿ ಮಠಾಧೀಶರ ನಿಯೋಗವನ್ನು ಕರೆದೊಯ್ದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ಚರ್ಚಿಸುವ ಭರವಸೆಯನ್ನೂ ನೀಡಿದ್ದೇವೆ’ ಎಂದರು.

ಸರ್ಕಾರ ಮಾಡಬೇಕಾದ ಕೆಲಸಗಳನ್ನು ಮಠಾಧೀಶರು ನಿಸ್ವಾರ್ಥವಾಗಿ ಮಾಡುತ್ತಿದ್ದಾರೆ. ಅವರಿಗೆ ಅಗತ್ಯ ನೆರವು ಒದಗಿಸುವುದು ಸರ್ಕಾರದ ಕರ್ತವ್ಯ. ಹಿಂದೆಯೂ ಸರ್ಕಾರ ನೆರವು ನೀಡಿತ್ತು. ಮುಂದೆಯೂ ಮಠಗಳಿಗೆ ಅಗತ್ಯವಿರುವ ನೆರವು ನೀಡಲಾಗುವುದು ಎಂದು ಹೇಳಿದರು.

‘ತಕ್ಷಣದಲ್ಲಿ ಆಯಾ ಇಲಾಖೆಗಳಿಂದ ಮಾಡಬಹುದಾದ ಕೆಲಸಗಳನ್ನು ಮಾಡಿಕೊಡಲಾಗುವುದು. ಮಠಗಳು ಮತ್ತು ಮಠಗಳ ಅಧೀನದ ಶಿಕ್ಷಣ ಸಂಸ್ಥೆಗಳಿಗೆ ಮೂಲಸೌಕರ್ಯ ಕಲ್ಪಿಸಲು ಅನುದಾನ ಒದಗಿಸಲಾಗುವುದು. ಪ್ರಮುಖ ಬೇಡಿಕೆಗಳ ಕುರಿತು ಮುಖ್ಯಮಂತ್ರಿಯವರ ಜತೆ ಚರ್ಚಿಸಲಾಗುವುದು’ ಎಂದು ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.



ಹಿಂದುಳಿದ ವರ್ಗಗಳು ಮತ್ತು ದಲಿತ ಸಮುದಾಯದ ಮಠಾಧೀಶರ ಒಕ್ಕೂಟದಿಂದ ಸಚಿವ ಕೆ.ಎಸ್‌. ಈಶ್ವರಪ್ಪ ಅವರಿಗೆ ಶನಿವಾರ ಮನವಿ ಸಲ್ಲಿಸಲಾಯಿತು. ಕನಕ ಗುರುಪೀಠದ ಹೊಸದುರ್ಗ ಶಾಖಾ ಮಠದ ಈಶ್ವರಾನಂದಪುರಿ ಸ್ವಾಮೀಜಿ, ಹರಿಹರ ವೇಮನ ಗುರುಪೀಠದ ವೇಮನಾನಂದ ಸ್ವಾಮೀಜಿ, ಶಾಂತವೀರ ಸ್ವಾಮೀಜಿ, ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ, ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ನೆ.ಲ. ನರೇಂದ್ರಬಾಬು, ಚಿತ್ರದುರ್ಗ ಚಲವಾದಿ ಗುರುಪೀಠದ ಬಸವ ನಾಗಿದೇವ ಸ್ವಾಮೀಜಿ, ಹೊಸದುರ್ಗ ಭಗೀರಥ ಪೀಠದ ಪುರುಷೋತ್ತಮಾನಂದಪುರಿ ಸ್ವಾಮೀಜಿ, ಮಾದಾರ ಚೆನ್ನಯ್ಯ ಸ್ವಾಮೀಜಿ, ಚಿತ್ರದುರ್ಗ ಬೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಗಾಣಿಗರ ಗುರುಪೀಠದ ಬಸವಕುಮಾರ ಸ್ವಾಮೀಜಿ, ಕುಂಬಾರ ಗುರುಪೀಠದ ಕುಂಬಾರ ಗುಂಡಯ್ಯ ಸ್ವಾಮೀಜಿ, ನಿಟ್ಟೂರು ನಾರಾಯಣ ಗುರುಪೀಠದ ರೇಣುಕಾನಂದ ಸ್ವಾಮೀಜಿ ಮತ್ತು ತಂಗಡಗಿ ಹಡಪದ ಗುರುಪೀಠದ ಹಡಪದ ಅಪ್ಪಣ್ಣ ಸ್ವಾಮೀಜಿ ಇದ್ದರು.

ಕಿತ್ತೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ

₹50 ಕೋಟಿ: ಕ್ರಿಯಾಯೋಜನೆಗೆ ಅನುಮೋದನೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಕಿತ್ತೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ₹50 ಕೋಟಿ ವೆಚ್ಚದ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗುವುದು ಎಂದು ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಹುಬ್ಬಳ್ಳಿಯಲ್ಲಿ ಶನಿವಾರ ಕಿತ್ತೂರು ಚನ್ನಮ್ಮ ಜಯಂತಿ ಅಂಗವಾಗಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿದ ಅವರು, 2011ರಲ್ಲಿ ₹8 ಕೋಟಿ ಬಿಡುಗಡೆ ಮಾಡಿ, ಆರಂಭಿಸಲಾಗಿತ್ತು. ಕಿತ್ತೂರು ರಾಣಿ ಚನ್ನಮ್ಮ ಬೆಳಗಾವಿಗೆ ಮಾತ್ರ ಸೀಮಿತವಾಗಿರದೆ ಇಡೀ ರಾಜ್ಯಕ್ಕೆ ಸೇರಿದವರಾಗಿದ್ದಾರೆ ಎಂದರು.

ಕಿತ್ತೂರು ರಾಣಿ ಚನ್ನಮ್ಮ ಶ್ರೇಷ್ಠ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಒಬ್ಬರು. ಬ್ರಿಟಿಷರ ವಿರುದ್ಧ ರಣಕಹಳೆ ಊದಿದ ಕರ್ನಾಟಕದ ಹೆಮ್ಮೆಯ ಮಹಿಳೆ. ಕಿತ್ತೂರು ಚನ್ನಮ್ಮ ಹಾಗೂ ಸಂಗೊಳ್ಳಿ ರಾಯಣ್ಣ ಅವರ ಕೊಡುಗೆಯನ್ನು ಸ್ಮರಿಸಿ, ಅವರ ಆಶೋತ್ತರಗಳನ್ನು ಈಡೇರಿಸುವ ಕೆಲಸವನ್ನು ಸರ್ಕಾರ ಮಾಡಲಿದೆ ಎಂದು ಹೇಳಿದರು



ಬೆಳಗಾವಿ ಜಿಲ್ಲೆಯ ಕಿತ್ತೂರಿನಲ್ಲಿ ಆಯೋಜಿಸಿರುವ ಎರಡು ದಿನಗಳ ಚನ್ನಮ್ಮನ ಕಿತ್ತೂರು ಉತ್ಸವ–2021ಕ್ಕೆ ಶನಿವಾರ ಸಂಜೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಿದರು. ರಾಜಗುರು ಸಂಸ್ಥಾನ ಕಲ್ಮಠದ ಮಡಿವಾಳ ರಾಜಯೋಗೀಂದ್ರ ಸ್ವಾಮೀಜಿ, ಕೂಡಲಸಂಗಮದ ಪಂಚಮಸಾಲಿ ಪೀಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ, ಹರಿಹರದ ಲಿಂಗಾಯತ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ, ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ, ಸಚಿವರಾದ ಉಮೇಶ ಕತ್ತಿ, ಮುರುಗೇಶ ನಿರಾಣಿ, ವಿಧಾನಸಭೆ ಉಪಸಭಾಧ್ಯಕ್ಷ ಆನಂದ ಮಾಮನಿ, ವಿಧಾನ ಪರಿಷತ್ ಮುಖ್ಯ ಸಚೇತಕ ಮಹಾಂತೇಶ ಕವಟಗಿಮಠ, ಸಂಸದರಾದ ಮಂಗಲಾ ಅಂಗಡಿ, ಈರಣ್ಣ ಕಡಾಡಿ ಹಾಗೂ ಅಣ್ಣಾಸಾಹೇಬ ಜೊಲ್ಲೆ, ಶಾಸಕರಾದ ಅನಿಲ ಬೆನಕೆ, ಮಹಾದೇವಪ್ಪ ಯಾದವಾಡ, ಮಹೇಶ ಕುಮಠಳ್ಳಿ, ಮಹಾಂತೇಶ ದೊಡ್ಡಗೌಡರ ಭಾಗವಹಿಸಿದ್ದರು

‘ಕಿತ್ತೂರು ಬಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಚಿಂತನೆ’



ಪ್ರಲ್ಹಾದ ಜೋಶಿ

ಹುಬ್ಬಳ್ಳಿ: ‘ಹುಬ್ಬಳ್ಳಿ–ಬೆಳಗಾವಿ ಮಾರ್ಗದ ಕಿತ್ತೂರು ಬಳಿ ಅಂತರ-ರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಿಸುವ ಬಗ್ಗೆ ಚಿಂತನೆ ಮಾಡಲಾಗುವುದು ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು

ಟೈ ವತಿಯಿಂದ ಹುಬ್ಬಳ್ಳಿಯಲ್ಲಿ ಶನಿವಾರ ಹಮ್ಮಿಕೊಂಡಿದ್ದ ಇನ್ಫ್ರಾ ಸಮ್ಮಿಟ್ ಉದ್ಘಾಟಿಸಿ ಮಾತನಾಡಿದ ಅವರು, ‘ಕಿತ್ತೂರು ಬಳಿ ವಿಮಾನ ನಿಲ್ದಾಣ ಆಗಬೇಕು ಎಂಬ ಏಕಸ್ ಸಂಸ್ಥೆಯ ಚೇರ್ಮನ್ ಅರವಿಂದ ಮೆಳ್ಳಿಗೇರಿ ಅವರ ಸಲಹೆ ಸರಿಯಾಗಿದೆ. ಅಲ್ಲಿ ವಿಮಾನಗಳ ಹಾರಾಟದ ಜೊತೆಗೆ ನಿರ್ವಹಣಾ ಕೇಂದ್ರವನ್ನೂ ನಿರ್ಮಾಣ ಮಾಡಬಹುದು’ ಎಂದರು.

ಸಚಿವ ಮುರುಗೇಶ ನಿರಾಣಿ ಮಾತನಾಡಿ, ಕಿತ್ತೂರು ಬಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಆರಂಭಿಸುವ ಚಿಂತನೆ ರಾಜ್ಯ ಸರ್ಕಾರಕ್ಕೂ ಇದೆ ಎಂದು ಸಹಮತ ವ್ಯಕ್ತಪಡಿಸಿದರು.

‘ಎಚ್‌ಎಎಲ್‌ನಲ್ಲಿ ದೇಶಿಯ ವಿಮಾನಗಳ ಹಾರಾಟಕ್ಕೆ ಅವಕಾಶ ಸಂಬಂಧಿಸಿದಂತೆ ಈಗಾಗಲೇ ಚರ್ಚೆ ನಡೆಸಲಾಗಿದೆ. ಬೆಂಗಳೂರು ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಲಿಮಿಟೆಡ್ ಆಕ್ಷೇಪ ವ್ಯಕ್ತಪಡಿಸಿತ್ತು. ಅದನ್ನು ನೀವೇ ವಹಿಸಿಕೊಳ್ಳಿ. ಮುಖ್ಯಮಂತ್ರಿ ಜೊತೆ ಚರ್ಚಿಸಿ ತೀರ್ಮಾನ ಕೈಗೊಳ್ಳಿ ಎಂದು ತಿಳಿಸಲಾಗಿದೆ’ ಎಂದು ಸಚಿವ ಮುರುಗೇಶ ನಿರಾಣಿ ಹೇಳಿದರು.

ಬಹು ಮಾಧ್ಯಮ ಪ್ರಜಾವಾಣಿ LIVE

www.prajavani.net

Prajavani.net | Prajavani | Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಸಂತ ಪುರಂದರ ದಾಸರ ಸಂಗೀತ ಆರಾಧನೆ

facebook LIVE

ಸಂಗೀತ, ನೃತ್ಯ ವಿದ್ವಾಂಸರಿಂದ ಕರ್ನಾಟಕ ಸಂಗೀತ, ಹಿಂದೂಸ್ತಾನಿ ಗಾಯನ, ಕೀರ್ತನೆ, ಭಜನೆ, ಸುಗಮ ಸಂಗೀತ, ಭರತನಾಟ್ಯ, ಕೂಚುಪುಡಿ, ರಂಗಗೀತೆ, ಭಾವಗೀತೆಗಳ ‘ನವರತ್ನ ಮಾಲಿಕೆ’

ಸಹಯೋಗ: ಸಂತ ಪುರಂದರ ದಾಸ ಆರಾಧನಾ ಸಮಿತಿ, ಬೆಂಗಳೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ



ಬೆಳಿಗ್ಗೆ 10.30ರಿಂದ ಸಮಾರೋಪ

ಕ್ಲಬ್ ಹೌಸ್ | ಪ್ರಜಾವಾಣಿ ಆಲದಮರ

ಚಿತ್ರ ವಿಚಿತ್ರ...

ಕಂಪನಿ ನಾಟಕಗಳ ಮಾಯಾಲೋಕ

ಮಾಲತಿ ಸುಧೀರ್, ಮಾಲೀಕರು ಕರ್ನಾಟಕ ಕಲಾ ವೈಭವ ಸಂಘ ಬೆಂಗಳೂರು.

ಡಾ.ಲಕ್ಷ್ಮಣದಾಸ, ರಂಗಭೂಮಿ, ಹರಿಕಥಾ ಕಲಾವಿದ.

ಹೆಲನ್ ಹುಬ್ಬಳ್ಳಿ, ವೃತ್ತಿರಂಗಭೂಮಿ ಕಲಾವಿದೆ.

ಮಲ್ಲಿಕಾರ್ಜುನ ಕಡಕೋಳ, ರಂಗಕರ್ಮಿ, ವಿಮರ್ಶಕ

10.30 ರಿಂದ 12.30



ಸಿನಿ ಮಾತು

ಡಿ ಬಾಸ್- ಡಿಂಪಲ್ ಕ್ವೀನ್ ‘ಕ್ರಾಂತಿ’

https://bit.ly/3E807zj

ಭಾರತ–ಪಾಕಿಸ್ತಾನ ಕ್ರಿಕೆಟ್ ಪಂದ್ಯದ ಸುತ್ತ

ಭಾಗವಹಿಸುವವರು:

ಆರ್. ಅನಂತ್, ಕರ್ನಾಟಕದ ರಾಜ್ಯ ರಣಜಿ ತಂಡದ ಮಾಜಿ ಆಟಗಾರ, ಕೋಚ್. **ರಾಮಚಂದ್ರ ಎಂ**, ಐಟಿ ಎಂಜಿನಿಯರ್, ಕ್ರಿಕೆಟ್ ಬ್ಲಾಗ್ ಲೇಖಕ ಮತ್ತು ವಿಶ್ಲೇಷಕ

ಚರ್ಚೆ | ಮಧ್ಯಾಹ್ನ 2 ರಿಂದ

ಪಾಡ್‌ಕಾಸ್ಟ್: ಪ್ರತೀ ದಿನ: ಬೆಳಿಗ್ಗೆ 7 **ವಚನವಾಣಿ**, ಬೆ. 7.30 **ದಿನದ ಸೂಕ್ತಿ**, ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 **ಪ್ರಜಾವಾಣಿ ವಾರ್ತೆ ಬುಲೆಟಿನ್**, ಬೆಳಿಗ್ಗೆ 9 **ಪ್ರಚಲಿತ**, ಬೆಳಿಗ್ಗೆ 9.30 **ಸಂಪಾದಕೀಯ**, ಸಂಜೆ 4 **ವೈದ್ಯಮಿತ್ರ**

ಪ್ರಜಾವಾಣಿ ಕನ್ನಡ ಧ್ವನಿ

ಹೊರಗೆ ಹೋಗುವಾಗ ಮುಖಗವಸು ಧರಿಸಿ

26ಕ್ಕೆ ಹಿಂಗಾರು ಆರಂಭ

ಬೆಂಗಳೂರು: ಕರ್ನಾಟಕವೂ ಸೇರಿದಂತೆ ಎಲ್ಲ ರಾಜ್ಯಗಳಿಂದ ಇದೇ 26ರಂದು ಮುಂಗಾರು ಕೊನೆಗೊಳ್ಳಲಿದ್ದು, ಅದೇ ದಿನ ಈಶಾನ್ಯ ಭಾಗದಿಂದ ಹಿಂಗಾರು ಮಾರುತಗಳು ಪ್ರವೇಶಿಸಲಿವೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

‘ಮುಂಗಾರು ಪ್ರಭಾವ ತಗ್ಗಿದ್ದರಿಂದ ರಾಜ್ಯದ ಹಲವೆಡೆ ಮಳೆ ತಗ್ಗಿದೆ. 26ಕ್ಕೆ ದೇಶದಾದ್ಯಂತ ಮುಂಗಾರು ಮುಕ್ತಾಯಗೊಳ್ಳಲಿದೆ. ಅದೇದಿನ ಹಿಂಗಾರು ಪ್ರವೇಶಿಸುತ್ತಿರುವುದು ಈ ಬಾರಿಯ ವಿಶೇಷ’ ಎಂದು ಇಲಾಖೆ ಹೇಳಿದೆ.

ಮಳೆ: ಸಿಡಿಲಿಗೆ ಮೂವರು ಸಾವು, ಐವರಿಗೆ ಗಾಯ

ಬೆಂಗಳೂರು: ರಾಜ್ಯದ ವಿವಿಧೆಡೆ ಶನಿವಾರ ಮಳೆಯಾಗಿದ್ದು, ಸಿಡಿಲು ಬಡಿದು ಮೂರು ಮಂದಿ ಸಾವಿಗೀಡಾಗಿದ್ದಾರೆ. ಐವರು ಗಾಯಗೊಂಡಿದ್ದಾರೆ.

ಹೊಸದುರ್ಗ ವರದಿ: ಮಳೆಯಿಂದ ರಕ್ಷಣೆ ಪಡೆಯಲು ತಾಲ್ಲೂಕಿನ ಮಾರಗೊಂಡನದಿಬ್ಬ (ಎಂ.ಜಿ.ದಿಬ್ಬ) ಗ್ರಾಮದ ಹೊರವಲಯದ ದೇವಾಲಯದ ಆಲದ ಮರದ ಕೆಳಗೆ ನಿಂತಿದ್ದ ಹೊಸದುರ್ಗದ ಸಿದ್ದಪ್ಪ(40) ಅವರು ಸಿಡಿಲು ಬಡಿದು ಮೃತಪಟ್ಟಿದ್ದಾರೆ.

ಗಂಭೀರವಾಗಿ ಗಾಯಗೊಂಡಿರುವ ಎಂ.ಜಿ.ದಿಬ್ಬ ಗ್ರಾಮದ ಪ್ರವೀಣ್(19) ಅವರನ್ನು ಶಿವಮೊಗ್ಗದ ಆಸ್ಪತ್ರೆಗೆ ದಾಖಲಿಸಲಾಗಿದೆ. ಎಂ.ಜಿ.ದಿಬ್ಬ ಗ್ರಾಮದ ತಿಪ್ಪೇಶ್, ಕುಮಾರ್, ಮುರುಳಿ ಅವರು ಹೊಸದುರ್ಗ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಚಳ್ಳಕೆರೆ ತಾಲ್ಲೂಕಿನ ತಳಕು ಹೋಬಳಿ ವ್ಯಾಪ್ತಿಯ ಬಂಡೆತಿಮ್ಮಲಾಪುರ ಗ್ರಾಮದಲ್ಲಿ ಸಿಡಿಲು ಬಡಿದು 13 ಕುರಿಗಳು ಮೃತಪಟ್ಟಿವೆ.

ಮಳೆಯಿಂದಾಗಿ ಹಲವೆಡೆ ರಾಗಿ ಬೆಳೆ ನೆಲಕ್ಕಚ್ಚಿದೆ. ಕೊಯ್ಲಿಗೆ ಬಂದಿದ್ದ ಹಾಗೂ ಕಟಾವು ಮಾಡಿದ್ದ ಈರುಳ್ಳಿ ಕೊಳೆಯುವಂತಾಗಿದೆ. ಮೆಕ್ಕೆಜೋಳದ ತೆನೆಗಳು ಮೊಳಕೆಯೊಡೆಯುತ್ತಿವೆ. ದಾಳಿಂಬೆ ಹಾಗೂ ಹತ್ತಿ ಬೆಳೆಗಳಿಗೆ ಹಾನಿಯಾಗಿದೆ.

ಕಲಬುರಗಿ ವರದಿ: ಕೊಪ್ಪಳ ಜಿಲ್ಲೆಯ ಕುಕನೂರು ತಾಲ್ಲೂಕಿನ ಕುದುರಿಮೋತಿ ಗ್ರಾಮದ ಲಾಡಿನ್ ಸಾಬ್ ಮಾಬುಸಾಬ್ ಮಕಾಂದಾರ್ (28) ಹೊಲದಲ್ಲಿ ಕೆಲಸ ಮಾಡುವಾಗ ಸಿಡಿಲು ಬಡಿದು ಶನಿವಾರ ಸಂಜೆ ಸಾವನ್ನಪ್ಪಿದ್ದಾರೆ.

ಜಿಲ್ಲೆಯ ಕುಷ್ಟಗಿ, ಕುಕನೂರು ಮತ್ತು ಗಂಗಾವತಿ ತಾಲ್ಲೂಕಿನಲ್ಲಿ ಶನಿವಾರ ಸಂಜೆ ಗುಡುಗು, ಸಿಡಿಲು ಸಹಿತ ಭಾರಿ ಮಳೆ ಸುರಿಯಿತು.

ತಗ್ಗು ಪ್ರದೇಶದಲ್ಲಿ ನೀರು ಸಂಗ್ರಹಗೊಂಡಿದ್ದು, ರಸ್ತೆ, ಚರಂಡಿ ಯಲ್ಲಿ ಮಳೆ ನೀರು ಹೊಳೆಯಂತೆ ಹರಿಯಿತು. ರಾಯಚೂರು ಜಿಲ್ಲೆಯ ಮಸ್ಕಿಯಲ್ಲೂ ಭಾರಿ ಮಳೆಯಾಯಿತು.

ತಿಪಟೂರು ವರದಿ: ತಾಲ್ಲೂಕಿನ ಹೊನ್ನವಳ್ಳಿ ಹೋಬಳಿಯ ಮೀಸೆ ತಿಮ್ಮನಹಳ್ಳಿ ಗ್ರಾಮದಲ್ಲಿ ಶನಿವಾರ ಕುರಿ ಮೇಯಿಸಲು ಹೋಗಿದ್ದ ಕುರಿಗಾಹಿ ಸಿಡಿಲು ಬಡಿದು ಮೃತಪಟ್ಟಿದ್ದಾರೆ, ಮತ್ತೊಬ್ಬರಿಗೆ ಗಾಯಗಳಾಗಿವೆ.

ತಿಮ್ಮನಹಳ್ಳಿಯ ಲೋಕೇಶ್ ನಾಯಕ (47) ಸಿಡಿಲು ಬಡಿದು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ರಾಜ ನಾಯಕ (45) ಅವರಿಗೆ ಗಾಯಗಳಾಗಿದ್ದು, ತಾಲ್ಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಗದಗ ವರದಿ: ಜಿಲ್ಲೆಯ ವಿವಿಧೆಡೆ ಶನಿವಾರ ಉತ್ತಮ ಮಳೆಯಾಗಿದ್ದು, ಮುಂಡಗರಿ ತಾಲ್ಲೂಕಿನ ಡೋಣಿ ತಾಂಡ ಗ್ರಾಮದ ಅಯ್ಯನಕೆರೆ ಹತ್ತಿರದ ಜಮೀನಿನಲ್ಲಿ 11 ಕುರಿಗಳು ಸಾವನ್ನಪ್ಪಿವೆ. ಕಪ್ಪತ್ತಗುಡ್ಡಕ್ಕೆ ಹೋಗುವ ರಸ್ತೆಯ ಬದಿಯಲ್ಲಿನ ಹೊರವಲಯದಲ್ಲಿ 5 ಕುರಿಗಳು ಸಿಡಿಲು ಬಡಿದು ಸಾವನ್ನಪ್ಪಿವೆ.

ವಿವಿಧ ಜಿಲ್ಲೆಗಳಲ್ಲಿ ‘ಯೆಲ್ಲೊ ಅಲರ್ಟ್’

ಬೆಂಗಳೂರು: ರಾಜ್ಯದ ತುಮಕೂರು, ಶಿವಮೊಗ್ಗ, ಕೊಡಗು, ಹಾಸನ, ಚಿತ್ರದುರ್ಗ, ಚಿಕ್ಕಮಗಳೂರು, ಬಳ್ಳಾರಿ ಜಿಲ್ಲೆಗಳಲ್ಲಿ ಇದೇ 24ರಂದು ಹೆಚ್ಚು ಮಳೆಯಾಗುವ ಮುನ್ಸೂಚನೆ ಇರುವುದರಿಂದ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ.

ಅಕ್ಟೋಬರ್ 26ರವರೆಗೆ ರಾಜ್ಯದ ದಕ್ಷಿಣ ಒಳನಾಡಿನ ಕೆಲವು ಜಿಲ್ಲೆಗಳಲ್ಲಿ ಮಾತ್ರ ಮಳೆಯಾಗುವ ಸಾಧ್ಯತೆಗಳಿವೆ. ಕರಾವಳಿ ಜಿಲ್ಲೆಗಳ ಕೆಲವೆಡೆ ಸಾಧಾರಣ ಮಳೆಯಾಗಬಹುದು. ಎಂದು ಹವಾಮಾನ ಇಲಾಖೆಯು ತಿಳಿಸಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	121.20	10,122	3,822
ಹಾರಂಗಿ	2,859	2,858.36	997	1,200
ಕಬಿನಿ	2284.00	2,282.06	2,450	2,000
ಹೇಮಾವತಿ	2,922	2,910.58	5,200	4,076
ಲಿಂಗನಮಕ್ಕಿ	1,819	1,815.20	5,616	-
ಸೂಪಾ (ಮೀ)	564	556.40	1,243	4,781
ಮಾಣಿ	594	587.06	1,340	-
ತುಂಗಭದ್ರಾ	1,633	1,632.71	8,435	10,751
ಮಲಪ್ರಭಾ	2079.5	2,079.20	-	769
ಘಟಪ್ರಭಾ	2175	2,175	213	213
ಭದ್ರಾ	186	186	6,824	6,824
ಆಲಮಟ್ಟಿ (ಮೀ)	519.60	519.59	--	2,037
ನಾರಾಯಣಪುರ (ಮೀ)	492.25	491.88	350	10,890

* ನೆಲಮಟ್ಟದಿಂದ

ಆಸ್ಪತ್ರೆಯಿಂದ ನಾಂದೇಡ್ ಆಶ್ರಮಕ್ಕೆ ಮರಳಿದ ಕೇದಾರ ಶ್ರೀ

ಪ್ರಜಾವಾಣಿ ವಾರ್ತೆ

ದಾವಣಗೆರೆ: ನಾಲ್ಕು ದಿನಗಳ ಹಿಂದೆ ಹೃದಯಾಘಾತಕ್ಕೆ ಒಳಗಾಗಿ ಆಸ್ಪತ್ರೆಗೆ ದಾಖಲಾಗಿದ್ದ ಕೇದಾರನಾಥ ಪೀಠದ ಭೀಮಾಶಂಕರಲಿಂಗ ಶಿವಾಚಾರ್ಯ ಸ್ವಾಮೀಜಿ ಅವರು ಗುಣಮುಖರಾಗಿದ್ದು, ಮಹಾರಾಷ್ಟ್ರದ ನಾಂದೇಡ್ ಆಶ್ರಮಕ್ಕೆ ಶನಿವಾರ ಮರಳಿದ್ದಾರೆ.

ನಾಂದೇಡ್‌ನಲ್ಲಿರುವ ಕೇದಾರ ಪೀಠದ ಆಶ್ರಮದಲ್ಲಿ ಅ. 20ರಂದು ಬೆಳಗಿನ ಜಾವ ಸ್ವಾಮೀಜಿ ಅವರಿಗೆ ಎದೆನೋವು ಕಾಣಿಸಿಕೊಂಡಿತ್ತು. ತಕ್ಷಣವೇ ಸ್ವಾಮೀಜಿ ಅವರನ್ನು ಮುಂಬೈನ ಜಸ್‌ಲಾಕ್ ಆಸ್ಪತ್ರೆಗೆ ದಾಖಲಿಸಲಾಯಿತು. ವೈದ್ಯರು ತಪಾಸಣೆ ಮಾಡಿದಾಗ ಹೃದಯಾಘಾತವಾಗಿರುವುದು ಬೆಳಕಿಗೆ ಬಂದಿದೆ. ಬಳಿಕ ಶಸ್ತ್ರಚಿಕಿತ್ಸೆ ನಡೆಸಿ ಹೃದಯಕ್ಕೆ ಸ್ಟಂಟ್ ಹಾಕಲಾಗಿತ್ತು. ಈಗ ಅವರ ಆರೋಗ್ಯ ಸ್ಥಿರವಾಗಿದೆ ಎಂದು ಜಗಳೂರಿನ ಕಣ್ವಕುಪ್ಪೆ ಗವಿಮಠದ ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದ್ದಾರೆ.



ಭೀಮಾಶಂಕರ ಲಿಂಗ ಶಿವಾಚಾರ್ಯ ಸ್ವಾಮೀಜಿ

ನಾಲ್ವರು ಮಕ್ಕಳಿಗೆ ವಿಷವುಣಿಸಿ ತಂದೆ ಆತ್ಮಹತ್ಯೆ

ಸಂಕೇಶ್ವರ (ಬೆಳಗಾವಿ): ಇಲ್ಲಿಗೆ ಸಮೀಪದ ಬೋರಗಲ್ಲ ಗ್ರಾಮದಲ್ಲಿ ಪತ್ನಿಯು ಕೋವಿಡ್‌ನಿಂದ ಮೃತಪಟ್ಟ ದುಃಖವನ್ನು ತಡೆಯಲಾರದೇ ಮಾಜಿ ಸೈನಿಕರೊಬ್ಬರು ತನ್ನ ನಾಲ್ವರು ಮಕ್ಕಳಿಗೆ ವಿಷ ಉಣಿಸಿ, ತಾನೂ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಶನಿವಾರ ನಡೆದಿದೆ.

ಮಾಜಿ ಸೈನಿಕ ಗೋಪಾಲ ದುಂಡಪ್ಪ ಹಾದಿಮನಿ (46), ಪುತ್ರಿಯರಾದ ಸೌಮ್ಯ (19), ಸ್ವಾತಿ (16), ಸಾಕ್ಷಿ (12) ಹಾಗೂ ಪುತ್ರ ಸೃಜನ್ (9) ಮೃತರು. ಗೋಪಾಲ ಅವರ ಪತ್ನಿ ಒಂದು ತಿಂಗಳ ಹಿಂದೆ ಕೋವಿಡ್‌ನಿಂದ ಮೃತರಾಗಿದ್ದರು.

ರಾಜ್ಯದ ವಿಶ್ವವಿದ್ಯಾಲಯಗಳ ಹಲವು ಪೀಠಗಳಿಗೆ ಸ್ವಂತ ಕಟ್ಟಡವೂ ಇಲ್ಲ, ಅನುದಾನವೂ ಇಲ್ಲ

ಅಧ್ಯಯನ ಪೀಠಗಳ ಏದುಸಿರು

• ಮನೋಜಕುಮಾರ್ ಗುದ್ದಿ

ಕಲಬುರಗಿ: ಮಹನೀಯರ ಹೆಸರಿನಲ್ಲಿ ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಸ್ಥಾಪಿಸಲಾಗಿರುವ ಅಧ್ಯಯನ ಪೀಠಗಳಲ್ಲಿ ಬಹುತೇಕ ಇದ್ದೂ ಇಲ್ಲದಂತಿವೆ. ಸರ್ಕಾರದ ನೆರವು ದೊರಕದೇ, ಸಕಾಲಕ್ಕೆ ಕಾರ್ಯಕ್ರಮಗಳನ್ನು ನಡೆಸಲಾಗದೇ, ಸ್ವಂತ ಕಟ್ಟಡವಿಲ್ಲದೆ ಪೀಠಗಳು ಏದುಸಿರು ಬಿಡುತ್ತಿವೆ. ಅಧ್ಯಯನ ಪೀಠಗಳಲ್ಲಿ ಅಧ್ಯಯನವೇ ಇಲ್ಲದ ಪರಿಸ್ಥಿತಿ ಮುಂದುವರಿದಿದೆ.

ಮೈಸೂರು ವಿಶ್ವವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಗುಲಬರ್ಗಾ ವಿಶ್ವವಿದ್ಯಾಲಯ, ಕನ್ನಡ ವಿಶ್ವವಿದ್ಯಾಲಯ, ಮಂಗಳೂರು ವಿಶ್ವವಿದ್ಯಾಲಯ, ಕುವೆಂಪು ವಿಶ್ವವಿದ್ಯಾಲಯ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯ, ದಾವಣಗೆರೆ ವಿಶ್ವವಿದ್ಯಾಲಯ ಹಾಗೂ ರಾಣಿ ಚನ್ನಮ್ಮ ವಿಶ್ವವಿದ್ಯಾಲಯಗಳಲ್ಲಿ ಸರಾಸರಿ 6ರಿಂದ 20 ಅಧ್ಯಯನ ಪೀಠಗಳಿವೆ. ಕೆಲವೇ ಪೀಠಗಳಿಗೆ ₹ 5 ಲಕ್ಷದಿಂದ ₹ 3 ಕೋಟಿಯವರೆಗೆ ಇಡುಗಂಟನ್ನು ಸರ್ಕಾರ ಬಿಡುಗಡೆ ಮಾಡಿದೆ. ನಂತರ ಹೆಚ್ಚಿಸುವ ಕಾಳಜಿ ತೋರಿಲ್ಲ.

ಪ್ರಮುಖ ಸಮುದಾಯಗಳನ್ನು ಪ್ರತಿನಿಧಿಸುವ ರಾಷ್ಟ್ರೀಯ ನಾಯಕರ ಹೆಸರಿನಲ್ಲಿ ಆರಂಭವಾದ ಪೀಠಗಳಲ್ಲಿ ಕಟ್ಟಡ, ಸಿಬ್ಬಂದಿ ಇದ್ದಾರೆ. ಚುನಾವಣೆ ಸಂದರ್ಭದಲ್ಲಿ ಜಾತಿ ಸಮುದಾಯಗಳನ್ನು ಓಲೈಸಲು ಕಾಟಾಚಾರಕ್ಕೆಂಬಂತೆ ಕೆಲ ಪೀಠಗಳನ್ನು ಸರ್ಕಾರ ಘೋಷಿಸಿದರೂ ಅನುದಾನ ನೀಡಿಲ್ಲ.

ಸದ್ಯ ಕರ್ನಾಟಕ ವಿಶ್ವವಿದ್ಯಾಲಯದ ಪೀಠಗಳು ಉತ್ತಮವಾಗಿ ಕೆಲಸ ಮಾಡುತ್ತಿವೆ. ಬಸವ, ಗಾಂಧಿ, ಡಾ.ಬಿ.ಆರ್. ಅಂಬೇಡ್ಕರ್, ಕನಕದಾಸ ಹಾಗೂ ಸ್ವಾಮಿ ವಿವೇಕಾನಂದ ಅಧ್ಯಯನ ಪೀಠಗಳಿಗೆ ಸುಸಜ್ಜಿತ ಕಟ್ಟಡಗಳಿವೆ. ಕೆಲವೆಡೆ ಡಿಪ್ಲೊಮಾ ಕೋರ್ಸ್‌ಗಳೂ ನಡೆಯುತ್ತಿವೆ. ಆದರೆ, ದಾವಣಗೆರೆ ವಿ.ವಿ., ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿ.ವಿ, ಬೆಳಗಾವಿಯ ರಾಣಿ ಚನ್ನಮ್ಮ ವಿ.ವಿ. ಗಳಲ್ಲಿನ ಹಲವು ಪೀಠಗಳಿಗೆ ಅನುದಾನವೇ ಘೋಷಣೆಯಾಗಿಲ್ಲ.

ಗುಲಬರ್ಗಾ ವಿ.ವಿ.ಯಲ್ಲಿರುವ 10 ಪೀಠಗಳ ಪೈಕಿ ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಹಾಗೂ ಸಂಶೋಧನಾ ಸಂಸ್ಥೆಗೆ ಸ್ವಂತ ಕಟ್ಟಡವಿದೆ. 2009ರಲ್ಲಿ ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ₹ 4 ಕೋಟಿ ಬಿಡುಗಡೆ ಮಾಡಿದ್ದರು. ಮಲ್ಲಿಕಾರ್ಜುನ ಖರ್ಗೆ ತಮ್ಮ ಸಂಸದರ ಕ್ಷೇತ್ರಾಭಿವೃದ್ಧಿ ನಿಧಿಯಿಂದ ₹ 1 ಕೋಟಿ ನೀಡಿದ್ದರಿಂದ ಕಟ್ಟಡ ನಿರ್ಮಾಣವಾಯಿತು.

ಮೈಸೂರು ವಿಶ್ವವಿದ್ಯಾಲಯದಲ್ಲಿ 18 ಪೀಠಗಳಿವೆ. ಹೊಸದಾಗಿ ಎಸ್.ಪಿ. ಬಾಲಸುಬ್ರಹ್ಮಣ್ಯಂ ಹಾಗೂ ಅನಂತಮೂರ್ತಿ ಪೀಠ ಆರಂಭವಾಗಬೇಕಿದೆ. ಬೆಳಗಾವಿಯಲ್ಲಿ 4 ಪೀಠಗಳಿದ್ದು, ಅದೇ ಜಿಲ್ಲೆಗೆ ಸೇರಿದ ಕಿತ್ತೂರು ಚನ್ನಮ್ಮ ಹೆಸರಿನಲ್ಲಿ ಪೀಠ ಘೋಷಣೆಯಾದರೂ ಅನುದಾನ ಬಿಡುಗಡೆಯಾಗಿಲ್ಲ.

ಮಂಗಳೂರು ವಿಶ್ವವಿದ್ಯಾಲಯದಲ್ಲಿ ವಿವಿಧ ಭಾಷೆ, ಬ್ಯಾಂಕ್, ಕಲೆ, ಸಂಸ್ಕೃತಿಗೆ ಸೇರಿದ ಒಟ್ಟು 20 ಅಧ್ಯಯನ ಪೀಠ ಹಾಗೂ ಕೇಂದ್ರಗಳಿದ್ದು, ₹ 5 ಲಕ್ಷದಿಂದ ₹ 3 ಕೋಟಿ ತನಕ ದತ್ತಿನಿಧಿಯಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಈ ಪೈಕಿ ₹ 1 ಕೋಟಿಗಿಂತ ಹೆಚ್ಚು ದತ್ತಿನಿಧಿ ಹೊಂದಿರುವ ನಾಲ್ಕೈದು ಪೀಠಗಳನ್ನು ಹೊರತು ಪಡಿಸಿ, ಉಳಿದವು ವಾರ್ಷಿಕ ಬಜೆಟ್ ಕೊರತೆಯಿಂದ ಬಳಲುತ್ತಿವೆ. ಗುಲಬರ್ಗಾ ವಿ.ವಿ.ಯಲ್ಲಿ ಬಂಜಾರ ಸಮುದಾಯದವರ ಬೇಡಿಕೆ ಮೇರೆಗೆ ಬಂಜಾರ ಕುಲಗುರು ಸಂತ ಸೇವಾಲಾಲರ ಅಧ್ಯಯನ ಪೀಠವನ್ನು ಘೋಷಿಸಿದ್ದರೂ ಅನುದಾನ ನೀಡಿಲ್ಲ.

‘ಪೀಠ ಘೋಷಣೆಯಷ್ಟೇ ಸರ್ಕಾರದ ಆದ್ಯತೆಯಾಗಬಾರದು. ಅದು ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಅಗತ್ಯ ಸಿಬ್ಬಂದಿಯನ್ನು ನೇಮಿಸಬೇಕು. ಡಿಪ್ಲೊಮಾ ಕೋರ್ಸ್ ಆರಂಭಿಸುವುದರ ಜೊತೆಗೆ ವಿದ್ಯಾರ್ಥಿಗಳಿಗೆ ಆಯ್ಕೆ ಆಧಾರಿತ ಪಠ್ಯಕ್ರಮವನ್ನು (ಸಿಬಿಸಿಎಸ್) ರೂಪಿಸಬೇಕು. ಇಲ್ಲದಿದ್ದರೆ, ವರ್ಷಕ್ಕೊಮ್ಮೆ ಜಯಂತಿ ಆಚರಿಸಲಷ್ಟೆ ಪೀಠ ಸೀಮಿತವಾಗುತ್ತದೆ’ ಎನ್ನುತ್ತಾರೆ ಗುಲಬರ್ಗಾ ವಿ.ವಿ. ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ.ಎಚ್.ಟಿ. ಪೋತೆ.


ಗುಲಬರ್ಗಾ ವಿಶ್ವವಿದ್ಯಾಲಯದ ಆವರಣದಲ್ಲಿ ನಿರ್ಮಾಣ ಹಂತದಲ್ಲಿರುವ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಅಧ್ಯಯನ ಪೀಠದ ಕಟ್ಟಡ



ವಿಶ್ವವಿದ್ಯಾಲಯದ ಆವರಣದಲ್ಲಿರುವ ಡಾ. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆಯ ಕಟ್ಟಡ

ಉನ್ನತ ಶಿಕ್ಷಣ ತಜ್ಞರ ಅಭಿಪ್ರಾಯಗಳು

ಸಿಬ್ಬಂದಿ ಕೊರತೆ ಬೆನ್ನೆಲುಬು ಮುರಿದಂತೆ

ವಿಶ್ವವಿದ್ಯಾಲಯ ಎಂದರೆ ಬೋಧನೆಯಷ್ಟೇ ಅಲ್ಲ. ಸಂಶೋಧನೆ, ಪ್ರಕಟಣೆ, ಸಂಶೋಧನಾ ಯೋಜನೆಗಳು, ಆಡಳಿತಾತ್ಮಕ ಸಲಹೆ–ಸೂಚನೆಗಳು, ಅಧ್ಯಯನ ಸೇರಿದಂತೆ ಸಮಗ್ರವಾದ ಶೈಕ್ಷಣಿಕ ಚಟುವಟಿಕೆಗಳು ನಡೆಯುತ್ತವೆ. ‘ಸಿಬ್ಬಂದಿ’ಯೇ ವಿಶ್ವವಿದ್ಯಾಲಯದ ಬೆನ್ನೆಲುಬು. ‘ಅತಿಥಿ’, ‘ಹೊರಗುತ್ತಿಗೆ’ ನೇಮಕಗಳಿಂದ ಸರಿದೂಗಿಸಲು ಸಾಧ್ಯವಿಲ್ಲ.

ಇದು ಸರಳ ವಿಚಾರವೂ ಅಲ್ಲ. ಸಂಶೋಧನೆಗೆ ಮಾರ್ಗದರ್ಶನ, ಯೋಜನೆ ಮುನ್ನಡೆಸಲು ಕಾಯಂ ತಜ್ಞರೇ ಬೇಕು. ಒಟ್ಟಾರೆ ಮೌಲ್ಯ, ರ್‍ಯಾಂಕಿಂಗ್ ಕುಸಿಯುವ ಅಪಾಯವಿದೆ. ಸಿಬ್ಬಂದಿ ಕೊರತೆಯಿಂದ ಕೇವಲ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಮಾತ್ರವಲ್ಲ, ಒಟ್ಟಾರೆ ಉನ್ನತ ಶಿಕ್ಷಣ ಹಾಗೂ ಅದರ ಮೌಲ್ಯವೇ ಕುಂಠಿತಗೊಳ್ಳುತ್ತದೆ.




ಪ್ರೊ.ಬಿ.ಎ. ವಿವೇಕ ರೈ, ವಿಶ್ರಾಂತ ಕುಲಪತಿ

ನ್ಯಾಕ್ ರ್‍ಯಾಂಕಿಂಗ್ ಮೇಲೂ ಪೆಟ್ಟು

ಬೋಧಕರ ಕೊರತೆಯಿಂದ ನ್ಯಾಕ್ ರ್‍ಯಾಂಕಿಂಗ್ ಮೇಲೂ ಪೆಟ್ಟು ಬಿತ್ತು. ಹುದ್ದೆ ಭರ್ತಿಗೆ ಸರ್ಕಾರ ಅನುಮತಿ ನೀಡದಿದ್ದರೆ ವಿಶ್ವವಿದ್ಯಾಲಯದ ಬೆಳವಣಿಗೆಗೆ ತೊಂದರೆ ಖಚಿತ. ಅಧ್ಯಾಪಕರ ಕೊರತೆಯಿಂದ ಅತಿಥಿ ಶಿಕ್ಷಕರನ್ನೇ ನೇಮಕ ಮಾಡಿಕೊಳ್ಳಬೇಕಾದ ಪರಿಸ್ಥಿತಿಯಿಂದ ಶೈಕ್ಷಣಿಕವಾಗಿ ಗುಣಮಟ್ಟ ಕುಸಿಯುತ್ತಿದೆ. ಸಂಶೋಧನೆಗೆ ಹಿನ್ನಡೆ ಉಂಟಾಗಿದೆ.

ಒಬ್ಬ ಪೂರ್ಣಾವಧಿ ಅಧ್ಯಾಪಕರಿದ್ದರೆ ಕನಿಷ್ಠ ನಾಲ್ಕು ಮಂದಿಗೆ ಸಂಶೋಧನೆಗೆ ಮಾರ್ಗದರ್ಶನ ನೀಡಬಹುದು. ಕನಿಷ್ಠ 150 ಅಧ್ಯಾಪಕರ ಭರ್ತಿಗೆ ಅವಕಾಶ ನೀಡಿದರೆ 600 ಸಂಶೋಧನಾರ್ಥಿಗಳಿರುತ್ತಿದ್ದರು. ಇನ್ನು ಹೊಸ ಶಿಕ್ಷಣ ನೀತಿ ಜಾರಿಗೊಳಿಸಿರುವುದರಿಂದ 10 ಅಧ್ಯಾಪಕರು ಇರುವ ಜಾಗದಲ್ಲಿ 14 ಅಧ್ಯಾಪಕರ ಅಗತ್ಯವಿದೆ. ಈ ನೀತಿಯು ಹೆಚ್ಚು ಕೆಲಸ ಬಯಸುತ್ತದೆ.




ಪ್ರೊ.ಜಿ.ಹೇಮಂತಕುಮಾರ್, ಕುಲಪತಿ, ಮೈಸೂರು ವಿಶ್ವವಿದ್ಯಾಲಯ

ಪದವಿ ತರಗತಿಗಳಿಗೂ ತೊಂದರೆ

ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಅನ್ವಯ ಈ ವರ್ಷದಿಂದ ಪದವಿ ತರಗತಿಗಳು ಕೂಡ ಪ್ರಾರಂಭಗೊಳ್ಳಲಿದ್ದು, ಕಾಯಂ ಬೋಧಕರಿಲ್ಲದ ಕಾರಣ ವಿದ್ಯಾರ್ಥಿಗಳಿಗೆ ತೊಂದರೆ ಎದುರಾಗುವ ಸಾಧ್ಯತೆಗಳಿವೆ.

ಆದಷ್ಟು ಬೇಗ ಖಾಲಿ ಹುದ್ದೆಗಳು ಭರ್ತಿಯಾದರೆ ಬೋಧನೆ, ಸಂಶೋಧನೆ, ಕ್ಷೇತ್ರ ಅಧ್ಯಯನ ಚಟುವಟಿಕೆಗಳಿಗೆ ಹೆಚ್ಚಿನ ಅನುಕೂಲವಾಗುತ್ತದೆ. ಕಾಯಂ ಪ್ರಾಧ್ಯಾಪಕರು ಇಲ್ಲದೇ ಇರುವುದರಿಂದ ಸಂಶೋಧನಾ ಚಟುವಟಿಕೆಗಳಿಗೆ ತೊಡಕಾಗಿದೆ.



ಪ್ರೊ. ಬಸವರಾಜ ಎಲ್.ಲಕ್ಕಣ್ಣವರ, ಕುಲಸಚಿವ, ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ

ಗುಣಮಟ್ಟದಿಂದಲೇ ಮಾನ್ಯತೆ ನಿರ್ಧಾರ

ವಿಶ್ವವಿದ್ಯಾಲಯಗಳೂ ಸೇರಿದಂತೆ ಯಾವುದೇ ಶಿಕ್ಷಣ ಸಂಸ್ಥೆಯ ಮಾನ್ಯತೆ ನಿರ್ಧಾರವಾಗುವುದು ಗುಣಮಟ್ಟದ ಶಿಕ್ಷಣದಿಂದ. ಹುದ್ದೆಗಳು ಖಾಲಿಯಾದಂತೆ ತಕ್ಷಣ ಭರ್ತಿ ಮಾಡದಿದ್ದರೆ ಇರುವವರ ಮೇಲೆ ಹೊರೆ ಹೆಚ್ಚಾಗುತ್ತದೆ. ಆಗ ಸಹಜವಾಗಿ ಗುಣಮಟ್ಟ ಕುಸಿಯುತ್ತದೆ. ಕಾಲ ಮತ್ತು ಸಂದರ್ಭಕ್ಕೆ ಅನುಗುಣವಾಗಿ ಹುದ್ದೆಗಳ ಭರ್ತಿಗೆ ಸರ್ಕಾರ ಅನುಮತಿ ನೀಡಿದರೆ ಅನುಕೂಲವಾಗುತ್ತದೆ.



ಡಾ.ಜಿ.ಪ್ರಶಾಂತ ನಾಯಕ, ನಿರ್ದೇಶಕರು, ಕನ್ನಡ ಭಾರತಿ, ಕುವೆಂಪು ವಿ.ವಿ.

‘ಹುದ್ದೆ ಭರ್ತಿ: ವಿವಿಗಳಿಗೆ ಸ್ವಾಯತ್ತತೆ’

ಶೀಘ್ರ ತಜ್ಞರ ಸಮಿತಿ ರಚನೆ– ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ

• ರಾಜೇಶ್ ರೈ ಚಟ್ಲ

ಬೆಂಗಳೂರು: ಖಾಲಿ ಇರುವ ಬೋಧಕ ಹುದ್ದೆಗಳನ್ನು ತುಂಬುವ ಜೊತೆಗೆ, ಆರ್ಥಿಕ ಹೊಣೆಗಾರಿಕೆ ನಿಭಾಯಿಸಲು ಪೂರಕವಾಗುವಂತೆ ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳಿಗೆ ‘ಸ್ವಾಯತ್ತತೆ’ ನೀಡಲು ಉನ್ನತ ಶಿಕ್ಷಣ ಇಲಾಖೆ ನಿರ್ಧರಿಸಿದೆ.

ಅಲ್ಲದೆ, ನೇಮಕಾತಿ ಪ್ರಾಧಿಕಾರದ ಮೂಲಕ ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸಿ ‘ಅರ್ಹರ ಪಟ್ಟಿ’ಯೊಂದನ್ನು ಸಿದ್ಧಪಡಿಸಿಕೊಳ್ಳಲು ಉದ್ದೇಶಿಸಲಾಗಿದೆ. ಆ ಪಟ್ಟಿಯಿಂದಲೇ ಅವಶ್ಯಕತೆಗೆ ತಕ್ಕಂತೆ ಬೋಧಕರನ್ನು ಎಲ್ಲಾ ವಿಶ್ವವಿದ್ಯಾಲಯಗಳು ಭರ್ತಿ ಮಾಡಿಕೊಳ್ಳಲು ಅವಕಾಶವಾಗುವಂತೆ ನೂತನ ಪದ್ಧತಿ ಅಳವಡಿಸಿಕೊಳ್ಳಲು ಇಲಾಖೆ ಮುಂದಾಗಿದೆ.

‘ಪ್ರಜಾವಾಣಿ’ ಜೊತೆ ಮಾತನಾಡಿದ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, ‘ಈ ಉದ್ದೇಶದಿಂದ ಆರ್ಥಿಕ ಇಲಾಖೆ, ಉನ್ನತ ಶಿಕ್ಷಣ ಪರಿಷತ್ ಅಧಿಕಾರಿಗಳ ಜೊತೆ ಈಗಾಗಲೇ ಚರ್ಚಿಸಿದ್ದೇನೆ. ಸಮಗ್ರವಾದ ರೂಪರೇಷೆ ಸಿದ್ಧಪಡಿಸಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲು ಹಾಲಿ– ಮಾಜಿ ಕುಲಪತಿಗಳ ಸಮಿತಿಯೊಂದನ್ನು ಶೀಘ್ರದಲ್ಲಿ ರಚಿಸಲಾಗುವುದು. ಎಲ್ಲ ವಿಶ್ವವಿದ್ಯಾಲಯಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಈ ಸಮಿತಿ ಒಂದು ತಿಂಗಳ ಒಳಗೆ ಸರ್ಕಾರಕ್ಕೆ ಶಿಫಾರಸುಗಳನ್ನು ಸಲ್ಲಿಸಲಿದೆ’ ಎಂದರು.

‘ಎಲ್ಲ ವಿಶ್ವವಿದ್ಯಾಲಯಗಳು ಕೇಂದ್ರೀಕೃತವಾಗಿವೆ ನಿಜ. ಸ್ವಾಯತ್ತತೆ ಕೊಟ್ಟಿದ್ದರೂ, ಅವು ಪೂರ್ತಿ ಸ್ವಾಯತ್ತ ಆಗಿಲ್ಲ ಎನ್ನುವುದೂ ವಾಸ್ತವ. ಹಲವಾರು ಆಡಳಿತಾತ್ಮಕ ಸವಾಲುಗಳಿವೆ. ಹುದ್ದೆಗಳನ್ನು ಮಂಜೂರು ಮಾಡಿದ್ದರೂ ಅವುಗಳನ್ನು ಭರ್ತಿ ಮಾಡಲು ಹಣಕಾಸು ಅಥವಾ ಇತರ ಕಾರಣ ನೀಡಿ ವ್ಯವಸ್ಥೆಯು ತನ್ನದೇ ಆದ ಸಮಯ ತೆಗೆದುಕೊಳ್ಳುತ್ತಿದೆ. ಹೀಗಾಗಿ, ಹಲವು ವಿಶ್ವವಿದ್ಯಾಲಯಗಳಲ್ಲಿ ಸುದೀರ್ಘ ಅವಧಿಯಿಂದ ನೂರಾರು ಹುದ್ದೆಗಳು ಖಾಲಿ ಇವೆ. ಈ ದಿಕ್ಕಿನಲ್ಲಿ ವ್ಯವಸ್ಥೆಯನ್ನು ಸಡಿಲಗೊಳಿಸಬೇಕಿದೆ. ಆ ಮೂಲಕ, ವಿಶ್ವವಿದ್ಯಾಲಯಗಳಿಗೆ ಸ್ವಾಯತ್ತತೆ ನೀಡಿ, ಅಲ್ಲಿಯೇ ನೇಮಕಾತಿ ಮಾಡಿಕೊಳ್ಳುವ ಅವಕಾಶ ಕಲ್ಪಿಸಲು ನಿರ್ಧರಿಸಿದ್ದೇನೆ’ ಎಂದರು.

‘ವಿಶ್ವವಿದ್ಯಾಲಯಗಳಲ್ಲಿ ಯಾವುದೋ ಕಾಲದಲ್ಲಿ ಯಾವುದೋ ವಿಷಯದ ಹುದ್ದೆಗೆ ಮಂಜೂರಾತಿ ಕೊಡುತ್ತೇವೆ. ನಿಜಕ್ಕೂ ಅದು ಅಗತ್ಯವಿದೆಯೇ, ಇಲ್ಲವೇ ಎಂಬುದು ಗೊತ್ತಿರುವುದಿಲ್ಲ. ಮುಂದಿನ ದಿನಗಳಲ್ಲಿ ಆ ಹುದ್ದೆಗಳನ್ನೇ ಭರ್ತಿ ಮಾಡುವ ವ್ಯವಸ್ಥೆ ಇದೆ. ನೇಮಕಾತಿಗೆ ಈಗ ವರ್ಷಗಟ್ಟಲೆ ತೆಗೆದುಕೊಳ್ಳುತ್ತಿದ್ದೇವೆ. ಇನ್ನು ಮುಂದೆ ಅದಕ್ಕೆ ಅವಕಾಶ ಆಗಬಾರದು. ಅವಶ್ಯಕತೆ ಆಧರಿತವಾಗಿ ನೇಮಕಾತಿಗಳು ನಡೆಯಬೇಕು. ಯಾವ ವಿಷಯ, ಯಾವ ಹುದ್ದೆ ಎಂದು ನಿರ್ಧರಿಸಲು ಮತ್ತು ಹಣಕಾಸು ವಿಚಾರದಲ್ಲಿ ಸರ್ಕಾರದ ಪಾಲುದಾರಿಕೆ ಯಾವ ರೀತಿಯಲ್ಲಿ ಇರಬೇಕು ಎಂದು ತೀರ್ಮಾನಗಳನ್ನು ತೆಗೆದುಕೊಂಡು ವಿಶ್ವವಿದ್ಯಾಲಯಗಳಿಗೆ ಸ್ವಾಯತ್ತತೆ ಕೊಡಲು ಉದ್ದೇಶಿಸಲಾಗಿದೆ. ತಜ್ಞರ ಸಮಿತಿ ಈ ಬಗ್ಗೆ ಅಧ್ಯಯನ ಮಾಡಿ ಪ್ರಸ್ತಾವ ಸಲ್ಲಿಸಲಿದೆ’ ಎಂದು ಅವರು ವಿವರಿಸಿದರು.

‘ಗುಣಮಟ್ಟ, ಪ್ರತಿಭೆ ಇಲ್ಲ. 5 ವರ್ಷಕ್ಕೊಮ್ಮೆ 10 ವರ್ಷಕ್ಕೊಮ್ಮೆ ನೇಮಕಾತಿ ನಡೆಯುತ್ತಿದೆ ಎಂಬ ಆರೋಪ ಉನ್ನತ ಶಿಕ್ಷಣ ವಲಯದಲ್ಲಿದೆ. ಅವುಗಳಿಗೆ ಕೊನೆ ಹಾಡಬೇಕಿದೆ. ಬೋಧನೆ ಅತ್ಯುತ್ತಮ ಮಟ್ಟದ್ದಾಗಿರಬೇಕು ಎಂಬ ಉದ್ದೇಶದಿಂದ ಬೋಧಕರಿಗೆ ಯುಜಿಸಿ (ವಿಶ್ವವಿದ್ಯಾಲಯ ಅನುದಾನ ಆಯೋಗ) ವೇತನ ನೀಡಲಾಗುತ್ತಿದೆ. ಹುದ್ದೆಗಳು ಖಾಲಿ ಆಗುತ್ತಿದ್ದಂತೆ ಭರ್ತಿ ಆಗಬೇಕು. ಪ್ರತಿ ವರ್ಷ ನೇಮಕಾತಿಗಳು ನಡೆಯಬೇಕು. ಕೋರ್ಸ್‌ಗೂ ಮೊದಲೇ ಅಗತ್ಯ ಸಂಖ್ಯೆಯ ಬೋಧಕರನ್ನು ನೇಮಕಾತಿ ಮಾಡಿಕೊಳ್ಳಬೇಕಿದೆ. ಆ ಮೂಲಕ, ಉನ್ನತ ಶಿಕ್ಷಣದ ಧ್ಯೇಯೋದ್ದೇಶ ಈಡೇರಬೇಕಿದೆ’ ಎಂದು ಅಭಿಪ್ರಾಯಪಟ್ಟರು.

‘ಅರ್ಹ ಬೋಧಕರ ಪಟ್ಟಿ’



‘ಹುದ್ದೆ ಖಾಲಿ ಆಗುತ್ತಿದ್ದಂತೆ ಪ್ರತಿವರ್ಷ ನೇಮಕಾತಿ ಮಾಡಿಕೊಳ್ಳಲು ಸಾಧ್ಯವಾಗುವಂತೆ ರಾಜ್ಯಮಟ್ಟದಲ್ಲಿ ‘ಕಾಮನ್ ಪೂಲ್’ (ಅರ್ಹರ ಪಟ್ಟಿ) ಸಿದ್ಧಪಡಿಸಿಟ್ಟುಕೊಳ್ಳಲು ತೀರ್ಮಾನಿಸಲಾಗಿದೆ. ಅರ್ಹತಾ ಪರೀಕ್ಷೆ (ಕೆ–ಸೆಟ್, ನೆಟ್) ಪಾಸಾದವರನ್ನು ನೇಮಕಾತಿ ಪ್ರಾಧಿಕಾರದ ಮೂಲಕ ಪಾರದರ್ಶಕ ಆಯ್ಕೆ ಮಾಡಿ ಪಟ್ಟಿ ತಯಾರಿಸಲಾಗುವುದು. ಅವಶ್ಯ ಇರುವ ವಿಶ್ವವಿದ್ಯಾಲಯಗಳು, ಅನುದಾನಿತ ಸಂಸ್ಥೆಗಳು ತಮಗೆ ಅಗತ್ಯ ಇರುವ ಬೋಧಕ ಸಿಬ್ಬಂದಿಯನ್ನು ಈ ಪಟ್ಟಿಯಿಂದ ನೇಮಿಸಿಕೊಳ್ಳಬಹುದು ಅಥವಾ ನೇಮಕಾತಿ ಪ್ರಾಧಿಕಾರದಿಂದ ಪಡೆದುಕೊಳ್ಳಬಹುದು. ಮಧ್ಯವರ್ತಿಗಳ, ಸರ್ಕಾರದ ಹಸ್ತಕ್ಷೇಪಕ್ಕೆ ಅವಕಾಶವೇ ಇರುವುದಿಲ್ಲ. ಪಾರದರ್ಶಕ ಮತ್ತು ದುರ್ಬಳಕೆಗೆ ಅವಕಾಶ ಸಿಗದಂತೆ ಈ ವ್ಯವಸ್ಥೆಯನ್ನು ರೂಪಿಸಲಾಗುವುದು’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ವಿ.ವಿಗೆ ಬೋಧಕರ ಬರ

ಒಂದನೇ ಪುಟದಿಂದ

ಗುತ್ತಿಗೆ ಆಧಾರದ ಅಧ್ಯಾಪಕರು ಮತ್ತು ಅತಿಥಿ ಉಪನ್ಯಾಸಕರಿಗೂ ಪಿಎಚ್.ಡಿ ಮಾರ್ಗದರ್ಶಕರ ಮಾನ್ಯತೆ ನೀಡಲು ಅನುಮತಿ ಕೋರಿ ಸರ್ಕಾರಕ್ಕೆ ಮನವಿ ಸಲ್ಲಿಸಲು ಮೈಸೂರು ವಿಶ್ವವಿದ್ಯಾಲ ಯದ ಶಿಕ್ಷಣ ಮಂಡಳಿಯ ಸಾಮಾನ್ಯ ಸಭೆಯಲ್ಲಿ ಇತ್ತೀಚೆಗಷ್ಟೇ ನಿರ್ಧರಿಸಲಾಗಿದೆ. ಅಲ್ಲಿ 500 ಅತಿಥಿ ಉಪನ್ಯಾಸಕರಿದ್ದಾರೆ.

ಉದ್ಯೋಗಾವಕಾಶಕ್ಕಾಗಿ ಕಾಯುತ್ತಿರುವವರೇ ವಿಶ್ವವಿದ್ಯಾಲಯಗಳಿಗೆ ಆಪದ್ಬಾಂಧವರಾಗಿದ್ದಾರೆ.

ಶತಮಾನೋತ್ಸವವನ್ನು ಈಗಾಗಲೇ ಆಚರಿಸಿಕೊಂಡಿರುವ ಮೈಸೂರು ವಿಶ್ವವಿದ್ಯಾಲಯದಲ್ಲಿ ನಿಯಮಾನುಸಾರ ಬೋಧಕರಿಲ್ಲವೆಂಬ ಕಾರಣಕ್ಕೆ ನ್ಯಾಕ್ ಮಾನ್ಯತೆಯು ಈ ವರ್ಷ ‘ಎ+’ ನಿಂದ ‘ಎ’ಗೆ ಇಳಿದಿದೆ. ಇಂಥ ದೊಡ್ಡ ಹಿನ್ನಡೆ ಎದುರಾದರೂ ವಿಶ್ವವಿದ್ಯಾಲಯ ದನಿ ಎತ್ತದ ಸ್ಥಿತಿಯಲ್ಲಿದೆ. 14 ವರ್ಷದಿಂದ ಇಲ್ಲಿ ಬೋಧಕರ ನೇಮಕಾತಿಯೇ ನಡೆದಿಲ್ಲ!

ಬೆಳ್ಳಿ ಹಬ್ಬದ ಸಂಭ್ರಮದಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ ಮೂರನೇ ಒಂದು ಭಾಗದಷ್ಟು ಬೋಧಕರ ಕೊರತೆ ಇದೆ. ಇತ್ತೀಚೆಗಷ್ಟೇ ನೇಮಕಾತಿ ಅಧಿಸೂಚನೆ ಹೊರಡಿಸಲಾಗಿದೆ.

ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಸ್ಥಾಪನೆಯಾಗಿ ದಶಕ ಕಳೆದಿದ್ದರೂ, ಕುಲಪತಿ ಮತ್ತು ಹಣಕಾಸು ಅಧಿಕಾರಿ ಹೊರತುಪಡಿಸಿದರೆ ಉಳಿದವರೆಲ್ಲರೂ ‘ಅತಿಥಿ’ಗಳೇ. ಅನುದಾನವಿಲ್ಲದೆ ಅತಿಥಿ ಉಪನ್ಯಾಸಕರಿಗೆ ಆರು ತಿಂಗಳಿಂದ ವೇತನವನ್ನೂ ನೀಡಿಲ್ಲ. ಯುಜಿಸಿ ವೇತನ, ಅನುದಾನ ಪಡೆಯಲು ಬೇಕಾದ 12ಬಿ ಮಾನ್ಯತೆಯೇ ಈ ವಿಶ್ವವಿದ್ಯಾಲಯಕ್ಕೆ ಸಿಕ್ಕಿಲ್ಲ.

‘ಇಷ್ಟು ವರ್ಷಗಳಲ್ಲಿ ಈ ವಿಶ್ವವಿದ್ಯಾಲಯದಿಂದ ಒಬ್ಬ ಸಾಧಕ ಕಲಾವಿದರು ಕೂಡ ಹೊರಬಂದಿಲ್ಲ’ ಎಂಬ ಕಲಾಕ್ಷೇತ್ರದ ಪರಿಣತರ ಅಸಮಾಧಾನ ಶಮನಗೊಂಡಿಲ್ಲ.

ಕಲ್ಯಾಣ ಕರ್ನಾಟಕದ ವಿದ್ಯಾರ್ಥಿಗಳಿಗಾಗಿ ನಾಲ್ಕು ದಶಕದ ಹಿಂದೆ ಸ್ಥಾಪನೆಗೊಂಡ ಗುಲ್ಬರ್ಗಾ ವಿಶ್ವವಿದ್ಯಾಲಯ ಆರಂಭವಾದಾಗ 255 ಕಾಯಂ ಅಧ್ಯಾಪಕರಿದ್ದರು. ಈಗ 60ಕ್ಕೆ ಇಳಿದಿದೆ. ಇತಿಹಾಸ, ಮರಾಠಿ, ಸಂಸ್ಕೃತ, ಪತ್ರಿಕೋದ್ಯಮ ವಿಭಾಗದಲ್ಲಿ ಕಾಯಂ ಪ್ರಾಧ್ಯಾಪಕರಿಲ್ಲ. ಹಲವೆಡೆ ಒಬ್ಬರಷ್ಟೇ ಇದ್ದಾರೆ. ಇತ್ತೀಚೆಗಷ್ಟೇ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿದ್ದ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು, ಕುಲಪತಿ ಪ್ರೊ.ದಯಾನಂದ ಅಗಸರ ಅವರಿಗೆ ‘ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಿ’ ಎಂದಷ್ಟೇ ಹೇಳಿ ಹೋಗಿದ್ದಾರೆ. ‘ಸರ್ಕಾರದ ಕೆಲಸ ಇಷ್ಟೆಯೇ’ ಎಂಬುದು ಸದ್ಯ ಎದುರಾಗಿರುವ ಪ್ರಶ್ನೆ. ಕುವೆಂಪು ವಿಶ್ವವಿದ್ಯಾಲಯದಲ್ಲಿ 24 ವರ್ಷದಿಂದ ಬೋಧಕರ ನೇಮಕಾತಿಯಾಗಿಲ್ಲ. ದಾವಣಗೆರೆ ವಿಶ್ವವಿದ್ಯಾಲಯ ಸ್ಥಾಪನೆಯಾದ ನಂತರ ಬಹಳಷ್ಟು ಸಿಬ್ಬಂದಿ ಕುವೆಂಪು ವಿಶ್ವವಿದ್ಯಾಲಯದಲ್ಲೇ ಉಳಿದಿದ್ದರಿಂದ 171 ಹುದ್ದೆಗಳ ನೇಮಕಾತಿ ಅಧಿಸೂಚನೆ ರದ್ದಾಗಿತ್ತು. ದಾವಣಗೆರೆ ವಿಶ್ವವಿದ್ಯಾಲಯದ ಪರಿಸ್ಥಿತಿ ‘ಪರವಾಗಿಲ್ಲ’ ಎನ್ನುವಂತಿದ್ದರೂ ಅದು ನ್ಯಾಕ್ ‘ಬಿ’ ಗ್ರೇಡ್‌ನಿಂದ ‘ಎ’ ಗ್ರೇಡ್‌ಗೇರಲು ಸಿದ್ಧತೆ ನಡೆಸಿದೆ.


ವಿಜಯಪುರದ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ 30 ವಿಭಾಗಗಳ ಪೈಕಿ 18 ವಿಭಾಗಗಳಲ್ಲಿ ಬೋಧಕರ ನೇಮಕಕ್ಕೆ ಈಗಷ್ಟೇ ಅನುಮೋದನೆ ನೀಡಲಾಗಿದೆ. ಅಲ್ಲಿನ ನಾಲ್ಕು ಸ್ನಾತಕೋತ್ತರ ಕೇಂದ್ರಗಳಲ್ಲೂ ಬೋಧಕರಿಲ್ಲ. ಸರ್ಕಾರ ಅತ್ಯಂತ ಮಹತ್ವಾಕಾಂಕ್ಷೆಯಿಂದ ಸ್ಥಾಪಿಸಿದ ಗದಗದ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯದಲ್ಲಿ ಬೋಧಕರಿಲ್ಲ. ಅಲ್ಲಿ ರಿಸರ್ಚ್ ಪ್ರೊಫೆಸರ್ಸ್ ಹುದ್ದೆಗಳನ್ನೂ ಸೃಜಿಸಲಾಗಿದೆ.

ಕಲ್ಯಾಣ ಕರ್ನಾಟಕ ಕೋಟಾದಡಿ 99 ಹುದ್ದೆಗಳನ್ನು ತುಂಬಲು ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಹಾಗೂ 280 ಹುದ್ದೆ ತುಂಬಲು ಮೈಸೂರು ವಿಶ್ವವಿದ್ಯಾಲಯಕ್ಕೆ ನೀಡಿದ್ದ ಅನುಮತಿಗೆ ಹಣಕಾಸು ಇಲಾಖೆ ತಡೆ ಒಡ್ಡಿದೆ. ಬೋಧಕರ ಕೊರತೆ ತುಂಬುವಲ್ಲಿ ಕೋವಿಡ್ ಕೂಡ ವಿಶ್ವವಿದ್ಯಾಲಯಗಳನ್ನು ಅಸಹಾಯಕಗೊಳಿಸಿದೆ. ಕೆಲವೆಡೆ ಅತಿಥಿ ಉಪನ್ಯಾಸಕರೇ ವಿಭಾಗಗಳನ್ನು ಮುನ್ನಡೆಸುತ್ತಿದ್ದಾರೆ.

‘ಬೋಧಕರ ಕೊರತೆಯು ವಿಶ್ವವಿದ್ಯಾಲಯದ ಬೋಧನೆ ಮತ್ತು ಸಂಶೋಧನೆಯ ಮೇಲೆ ಏಕಕಾಲಕ್ಕೆ ಅತ್ಯಂತ ಕೆಟ್ಟ ಪರಿಣಾಮ ಬೀರುತ್ತಿದೆ’ ಎಂಬುದು ಬಹುತೇಕ ಕುಲಪತಿಗಳ ಅಸಹಾಯಕ ನುಡಿ. ‘ಉನ್ನತ ಶಿಕ್ಷಣದ ಗುಣಮಟ್ಟ ಮತ್ತು ಶ್ರೇಷ್ಠತೆಯನ್ನು ಬಿಟ್ಟುಕೊಟ್ಟು ವಿಶ್ವವಿದ್ಯಾಲಯಗಳನ್ನು ನಡೆಸಬೇಕೇ’ ಎಂದೂ ಕೆಲವರು ಪ್ರಶ್ನಿಸುತ್ತಾರೆ. ಬೋಧಕರ ನೇಮಕದ ವಿಷಯದಲ್ಲಿ ಸರ್ಕಾರ ಉದಾರನೀತಿಯೊಂದನ್ನು ರೂಪಿಸಬೇಕು ಎಂಬುದು ಅವರ ಆಗ್ರಹ.

ಪೂರಕ ಮಾಹಿತಿ: ಚಂದ್ರಹಾಸ ಹಿರೇಮಳಲಿ, ಕೆ. ಓಂಕಾರಮೂರ್ತಿ, ಎಂ. ಮಹೇಶ, ಹರ್ಷವರ್ಧನ್ ಪಿ.ಆರ್.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 24-10-1996

• **ಸಹಕಾರಿ ಕ್ಷೇತ್ರ ಪುನಶ್ಚೇತನ: ಕಾಯ್ದೆ ರಚನೆಗೆ ಶಿಫಾರಸು**

ಬೆಂಗಳೂರು, ಅ. 23– ನೈಜ ವಿಕೇಂದ್ರೀಕರಣ ವ್ಯವಸ್ಥೆಗೆ ಅಡ್ಡಿಯಾಗಿರುವ ವಿವಿಧ ಪ್ರದೇಶಾಭಿವೃದ್ಧಿ ಮಂಡಳಿಗಳನ್ನು 9ನೇ ಪಂಚವಾರ್ಷಿಕ ಯೋಜನಾಭಿವೃದ್ಧಿಯಲ್ಲಿ ಹಂತಹಂತವಾಗಿ ವಿಸರ್ಜಿಸುವಂತೆ ಹಾಗೂ ದುರ್ಬಲಗೊಂಡಿರುವ ಸಹಕಾರಿ ಕ್ಷೇತ್ರದ ಪುನಶ್ಚೇತನಕ್ಕೆ ಅಗತ್ಯವಾಗಿರುವ ಹೊಸ ಕಾಯ್ದೆಯನ್ನು ರಚಿಸುವಂತೆ ರಾಜ್ಯ ಯೋಜನಾ ಮಂಡಳಿ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಪ್ರದೇಶವಾರು ಅಭಿವೃದ್ಧಿ ಮಂಡಳಿಗಳಿಗೆ ಪ್ರತ್ಯೇಕ ಹಣ ಇರುವುದಿಲ್ಲ. ಸರ್ಕಾರ ರೂಪಿಸುವ ಯೋಜನಾ ವೆಚ್ಚದಲ್ಲೇ ಇದೂ ಅಡಕವಾಗಿರುತ್ತದೆ ಎಂದು ಮಂಡಳಿಯ ಉಪಾಧ್ಯಕ್ಷ ಡಾ. ಡಿ.ಎಂ. ನಂಜುಂಡಪ್ಪ ತಿಳಿಸಿದರು.

50 ವರ್ಷಗಳ ಹಿಂದೆ

ಭಾನುವಾರ, 24-10-1971

• **ಐಕಮತ್ಯದಿಂದಿರಲು ಜನತೆಗೆ ಪ್ರಧಾನ ಮಂತ್ರಿ ಕರೆ**

ನವದೆಹಲಿ, ಅ. 23– ಜನತೆ ತಮ್ಮ ಪಕ್ಷಗಳ ಮತ್ತು ಧರ್ಮಗಳ ಭಿನ್ನಾಭಿಪ್ರಾಯಗಳನ್ನೂ ಮರೆತು, ರಾಷ್ಟ್ರದ ಸ್ವಾತಂತ್ರ್ಯ ಮತ್ತು ಏಕತೆಯನ್ನು ಸಂರಕ್ಷಿಸಲು ಸಂಘಟಿತರಾಗಿರಬೇಕು ಎಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರು ಇಂದು ಕರೆ ನೀಡಿದರು.

ಮೂರು ವಾರಗಳ ವಿದೇಶ ಪ್ರವಾಸ ಹೊರಡುವ ಮುನ್ನ ಇಂದು ರಾತ್ರಿ ರಾಷ್ಟ್ರವನ್ನುದ್ದೇಶಿಸಿ ಮಾಡಿದ ಪ್ರಸಾರ ಭಾಷಣದಲ್ಲಿ ಅವರು, ‘ರಾಷ್ಟ್ರವು ಈಗ ಅಪಾಯ ಪರಿಸ್ಥಿತಿಯನ್ನೆದುರಿಸುತ್ತಿರುವುದರಿಂದ ನಮ್ಮ ರಕ್ಷಣಾ ಪಡೆಗಳು ಮಾತ್ರವೇ ಅಲ್ಲದೆ ಜನತೆಯೂ ಜಾಗೃತರಾಗಿರುವುದು ಅತ್ಯಗತ್ಯ’ ಎಂದರು.

ದಿನ ಭವಿಷ್ಯ

ಭಾನುವಾರ ಅಕ್ಟೋಬರ್ 24, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಆಶ್ವಯುಜ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಸ್ವಾತಿ ಚತುರ್ಥಿ ಗಂ. 49-20 (ರಾ. 2-02) ಭಾನುವಾರ ನಿತ್ಯ ನಕ್ಷತ್ರ ರೋಹಿಣಿ ಗಂ. 41-18 (ರಾ. 10-49) ವರೀಯನ್ ನಾಮ ಯೋಗ ಗಂ. 40-39 ಬವ ಕರಣ ಗಂ. 16-44 ವಿಷ ಗಂ. 19-12 ಪುನರ್ವಿಷ ಗಂ. 56-50 ಅಮೃತ ಗಂ. 32-31 ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30: ಸೂರ್ಯೋದಯ: 6-14 ಸೂರ್ಯಾಸ್ತ: 5-53 ಅದೃಷ್ಟ ಸಂಖ್ಯೆ 6 9

ಮೇಷ: ಹೊಸ ಆದಾಯದ ಸಾಧ್ಯತೆ ಇರಲಿದ್ದು ಉತ್ತಮ ಆಶಾಭಾವನೆ ಮುಂದುವರಿಯಲಿದೆ. ಆರೋಗ್ಯದಲ್ಲಿ ಸ್ಥಿರತೆ. ಆರ್ಥಿಕ ಅಭಿವೃದ್ಧಿ. ಕುಟುಂಬದಲ್ಲಿ ಸಾಮರಸ್ಯ ಕಾಪಾಡುವಿರಿ.

ವೃಷಭ: ಮಾಡಿದ ಕೆಲಸಕಾರ್ಯಗಳಲ್ಲಿ ಮನ್ನಣೆ ದೊರೆಯುತ್ತದೆ. ಹೊಸ ಕಾರ್ಯ ರೂಪಿಸುವಲ್ಲಿ ಮುಂಚಿತ ಯೋಚನೆ ಸಫಲವಾಗಲಿದ್ದು ಯಶಸ್ಸಿನತ್ತ ನಿಮ್ಮ ಪಯಣ. ಬೇರೆಯವರ ವ್ಯವಹಾರದಲ್ಲಿ ಮಧ್ಯಸ್ತಿಕೆ ಬೇಡ.

ಮಿಥುನ: ಆಲಸ್ಯ ಉದಾಸೀನತೆ ತೊಡೆದುಹಾಕಿ ಕಾರ್ಯದಲ್ಲಿ ಮಗ್ನರಾಗಿರಿ. ಅನಗತ್ಯ ಕೋಪದಿಂದ ನಷ್ಟದ ಸಾಧ್ಯತೆ. ಬಂಧುಗಳಿಗೆ ಆದರಾತಿಥ್ಯ ನೀಡಲಿದ್ದೀರಿ.

ಕರ್ಕಾಟಕ: ಸ್ಫೂರ್ತಿತುಂಬಿದ ಜೀವನದೊಂದಿಗೆ ಉತ್ತಮ ನೆಲೆಯನ್ನು ಕಾಣಲಿದ್ದೀರಿ. ದಾರಾಳವಾಗಿ ಹಣದ ಹರಿವು ನಿಮ್ಮೆಡೆಗೆ ಹರಿದುಬರಲಿದೆ. ಉತ್ತಮವಾದ ಕುಟುಂಬ ಬಾಂದವ್ಯದಲ್ಲಿ ವೃದ್ಧಿ.

ಸಿಂಹ: ಕರಕುಶಲ ಕಾರ್ಮಿಕರಿಗೆ ಮನ್ನಣೆ ಸಿಗಲಿದ್ದು, ಸರ್ಕಾರದಿಂದ ಹೆಚ್ಚಿನ ಸಹಾಯ ಸಹಕಾರಗಳನ್ನು ನಿರೀಕ್ಷಿಸಬಹುದು. ಎಲ್ಲ ಕಾರ್ಯಗಳಲ್ಲಿಯೂ ತಲ್ಲೀನತೆಯಿಂದ ಸರಿಹೊಂದುವ ಸಾಧ್ಯತೆ.

ಕನ್ಯಾ: ಅನಿವಾರ್ಯ ಬದಲಾವಣೆಗಳಿಗೆ ಒಳಗಾಗಿ ಇದ್ದುದನ್ನು ಕಳೆದುಕೊಳ್ಳಬೇಡಿ. ಹಿರಿಯರ ಮಾರ್ಗದರ್ಶನ ಅಲಕ್ಷಿಸದೆ ಇರುವುದು ಒಳ್ಳೆಯದು. ಕಾರ್ಯಯೋಜನೆಯಿಂದ ದೂರವಿರುವುದು ಉತ್ತಮ.

ತುಲಾ: ಮಿತ್ರರ ನೇಪಥ್ಯದಿಂದ ವ್ಯವಹಾರದಲ್ಲಿ ಸುಗಮತೆ. ಆರ್ಥಿಕ ದೃಢೀಕರಣದಿಂದಾಗಿ ಕಾರ್ಯಾನುಕೂಲ ನಿಮ್ಮದಾಗಲಿದೆ. ಮನೆಯಲ್ಲಿ ಹಬ್ಬದ ವಾತಾವರಣ ಮುಂದುವರಿಯಲಿದೆ.

ವೃಶ್ಚಿಕ: ನಿಮ್ಮ ಪಾಲಿನ ಶ್ರದ್ಧೆಯು ಅನುಕೂಲಕರವಾಗಿ ಪರಿಣಮಿಸಲಿದೆ. ಸಮಾಜಕ್ಕೆ ಉತ್ತಮ ಸಂದೇಶವನ್ನು ಕೊಡಲು ಕಾರ್ಯಪ್ರವೃತ್ತರಾಗುವಿರಿ. ಯುವತಿಯರಿಗೆ ಯಶಸ್ಸು.

ಧನು: ವೈವಾಹಿಕ ಜೀವನದಲ್ಲಿ ಭಾಗ್ಯೋದಯವನ್ನು ಕಾಣಲಿದ್ದೀರಿ. ಬಂಧುಗಳಿಂದ ಸಹಾಯ. ಸ್ಥಿರಾಸ್ತಿಯ ಖರೀದಿಯತ್ತ ನಿಮ್ಮ ಮನಸ್ಸು ಮುಂದಾಗಲಿದೆ.

ಮಕರ: ಆರ್ಥಿಕ ಕ್ರೋಢಿಕರಣದ ಜೊತೆಗೆ ಮಂಗಲ ಕಾರ್ಯಗಳು ನಿಶ್ಚಯವಾಗುವ ಸಾಧ್ಯತೆ. ದೂರದೂರಿನ ಪ್ರಯಾಣ ಬೇಡವೇಬೇಡ. ವಾಹನ ಚಲಾವಣೆಯಲ್ಲಿ ಜಾಗ್ರತೆ ವಹಿಸಿ.

ಕುಂಭ: ಬಂಧುಗಳ ಕಿರಿಕಿರಿಯಿಂದಾಗಿ ಮಾನಸಿಕ ಬೇಸರವಾದರೂ ದೇವರ ಕೃಪೆ ನಿಮ್ಮ ಪಾಲಿಗೆ ಒದಗಿಬರಲಿದೆ. ವಿದ್ಯಾರ್ಥಿಗಳಿಗೆ ಪ್ರಗತಿ ಪರ ಚಿಂತನೆಯಿಂದ ಉತ್ತಮ ಯಶಸ್ಸು.

ಮೀನ: ಸಾಂಸಾರಿಕ ಸೌಖ್ಯಕ್ಕಾಗಿ ಹೊಸ ಪ್ರಯತ್ನ ನಡೆಸಲಿದ್ದೀರಿ. ಆರ್ಥಿಕ ಸಂಕಷ್ಟ ಬಂದೆರಗುವ ಸಾಧ್ಯತೆ. ವಿಶಿಷ್ಟ ಆಲೋಚನೆಯಿಂದ ನೆಮ್ಮದಿ. ಮನಸ್ಸಿನ ದುಗಡದ ನಿವಾರಣೆ.


ನಿಮ್ಮ ಜನ್ಮದಿನ 24-ಅಕ್ಟೋಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ಆರ್ಥಿಕ ಕ್ರೋಢಿಕರಣವು ಸುಗಮವಾಗಿ ನಡೆದರೂ ಪಾಲುದಾರಿಕೆ ವ್ಯವಹಾರಗಳಲ್ಲಿ ಕೈ ಹಾಕುವುದು ಬೇಡ. ಕೈಗಾರಿಕೋದ್ಯಮಿಗಳಿಗೆ ನಷ್ಟದ ಭೀತಿ ತಲೆದೋರಲಿದೆ. ಯುವತಿಯರು ಮನಸ್ಸನ್ನು ಹರಿಬಿಡುವುದು ಉತ್ತಮವಲ್ಲ. ರಾಜಕಾರಣಿಗಳಿಗೆ ಸೋಲಿನ ಸಾಧ್ಯತೆ.

ಪದಬಂಧ 4757

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ವಾಗ್ದೇವಿಯ ಇನ್ನೊಂದು ಹೆಸರು (4)
3.ಅಂತರಂಗವನ್ನು ನಿಯಾಮಿಸತಕ್ಕ ಪರಮಾತ್ಮ (4)
4.ಮಿಡಿ ಧರಿಸಿದವಳ ಸ್ಪಂದನ! (3)
5.ವರ ಪಡೆದುಕೊಂಡಿರುವ ಬೇಡ (4)
7.ಬೆಳ್ಳಿ ಇಲ್ಲಿದೆ (3)
9.ಕಾನೂನು ಬಲ್ಲವನು ನೋಡುತ್ತಿರುವ ಕಾಡು (3)
10.ಬಲೆ ಬೀಸುತ್ತಿರುವ ಬಲಹೀನೆ! (3)
11.ಮಗನಿಗೆ ಇದು ತುಂಬಾ ಸಲೀಸು (3)
13.ಅತ್ಯಂತ ಚಲುವಾದುದು ಮರದಲ್ಲಿದೆ (4)
15.ರುಮಾಲನ್ನು ಧರಿಸಿದವನು ತಂದು ಕೊಟ್ಟ ಹೂವು (3)
16.ಮಾತುಕತೆಯಾಡುವಾಗ ಬಂದಿರುವ ಅಮಲು (4)
17.ಕಣದಲ್ಲಿ ಹಾಕಿರುವ ಲಗಾಮು (4)

ಮೇಲಿಂದ ಕೆಳಕ್ಕೆ
1.ವಸತಿಯ ಹತ್ತಿರ ಕಾಣಿಸುತ್ತಿರುವ ಮಂತ್ರಿ (3)
2.ತೀರದ ಹತ್ತಿರ ತೋರಿಸಿದ ಅಜ್ಞಾನ (3)
3.ಅಂತರಂಗದಲ್ಲಿರುವ ವ್ಯತ್ಯಾಸ (3)
6.ಈ ರೀತಿ ಕೋಮಲವಾಗಿರು (5)
8.ಶೀರ್ಷಿಕೆಯನ್ನು ಹೀಗೆ ಕೊಡಿ (5)
12.ಮತ್ತೆ ಮತ್ತೆ ತೋರುತ್ತಿರುವ ಪ್ರೀತಿ (3)
13.ಕರುವಿಗೆ ತೋರಿಸುತ್ತಿರುವ ದಯೆ (3)
14.ಮರದ ಹತ್ತಿರ ಕಾಯುತ್ತಿರುವ ನಲ್ಲ (3)



4756ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಬಳಪ 3.ಬಸದಿ 5.ಲವಲವಿಕೆ 7.ರತಿ 9.ತೀರ 10.ಪಿಕ 12.ನರ 14.ತಲವಿನ್ಯಾಸ 16.ಹರಕೆ 17.ನಯನ

ಮೇಲಿಂದ ಕೆಳಕ್ಕೆ: 1.ಬಡಿವಾರ 2.ಪತ್ತಲ 3.ಬಯಕೆ 4.ದಿನಕರ 6.ಲಕ್ಷ್ಯ 8.ತಿರುಕ 9.ತೀರ್ಮಾನ 11.ಭವಿ 13.ರಸಾಯನ 14.ತಡಿಕೆ 15.ಸನ್ಮಾನ

ಸುಡೊಕು 5143

2				9		7		
	1		4		7		5	
		9		5			6	
	9			2		8		6
3		7	1		6			
	2			7		1		4
1			9	8			4	
	7					2		8
8		2		1	3		9	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5142 ಸುಡೊಕು

9	6	4	1	3	8	7	2	5
1	5	3	7	6	2	8	9	4
2	8	7	5	4	9	1	6	3
3	9	1	2	7	4	6	5	8
6	2	5	9	8	3	4	7	1
7	4	8	6	1	5	2	3	9
5	7	2	8	9	1	3	4	6
4	1	9	3	2	6	5	8	7
8	3	6	4	5	7	9	1	2

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಜಮ್ಮು ಕಾಶ್ಮೀರಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಭೇಟಿ; ಭದ್ರತೆ ಪರಿಶೀಲನೆ

‘ಉಗ್ರರ ನಿರ್ನಾಮಕ್ಕೆ ಅಂತಿಮ ಹೋರಾಟ’

ಪ್ರಜಾವಾಣಿ ವಾರ್ತೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದನೆಯನ್ನು ಕೊನೆಗಾಣಿಸಲು ಅಂತಿಮ ಹೋರಾಟ ನಡೆಸುವಂತೆ ಕೇಂದ್ರ ಗೃಹಸಚಿವ ಅಮಿತ್ ಶಾ ಅವರು ಭದ್ರತಾ ಪಡೆಗಳಿಗೆ ಶನಿವಾರ ಸೂಚಿಸಿದರು.

ಜಮ್ಮು ಮತ್ತು ಕಾಶ್ಮೀರಕ್ಕೆ ಮೂರು ದಿನಗಳ ಭೇಟಿಗಾಗಿ ಶ್ರೀನಗರಕ್ಕೆ ಆಗಮಿಸಿರುವ ಅವರು, ಕಣಿವೆಯಲ್ಲಿ ಶಾಂತಿ ಕದಡಲು ಯತ್ನಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಜನರಿಗೆ ಭರವಸೆ ನೀಡಿದರು.

ಇಲ್ಲಿನ ರಾಜಭವನದಲ್ಲಿ ಗೃಹ ಸಚಿವ ಅಮಿತ್ ಶಾ ನೇತೃತ್ವದಲ್ಲಿ ಉನ್ನತ ಮಟ್ಟದ ಭದ್ರತಾ ಸಭೆ ನಡೆಯಿತು. ಕಾಶ್ಮೀರದಲ್ಲಿ ಮೂಲಭೂತವಾದ ಮತ್ತು ದೇಶೀ ಉಗ್ರಗಾಮಿ ಚಟುವಟಿಕೆಗಳು ಹೆಚ್ಚುತ್ತಿರುವುದೇಕೆ ಎಂಬುದಕ್ಕೆ ಶಾ ಉತ್ತರ ಬಯಸಿದರು. ಕೇಂದ್ರ ಸರ್ಕಾರದ ಯತ್ನಗಳು ಹಾಗೂ ಭದ್ರತಾಪಡೆಗಳ ನಿಯೋಜನೆ ಹೊರತಾಗಿಯೂ ಮೂಲಭೂತವಾದ ಹಾಗೂ ಭಯೋತ್ಪಾದನೆ ಎಂಬ ಅವಳಿ ಬೆದರಿಕೆಗಳು ಹೆಚ್ಚುತ್ತಿರುವುದಕ್ಕೆ ಅವರ ಕಳವಳ ವ್ಯಕ್ತಪಡಿಸಿದರು ಎಂದು ಮೂಲಗಳು ತಿಳಿಸಿವೆ.

ಇತ್ತೀಚಿನ, ಗುರಿಯಾಗಿಸಿಕೊಂಡು ನಡೆಯುತ್ತಿರುವ ನಾಗರಿಕರ ಹತ್ಯೆಗಳು ಮತ್ತು ಗಡಿಯಾಚೆಗಿನ ಒಳನುಸುಳುವಿಕೆ ಹೆಚ್ಚಳ ಘಟನೆಗಳು ಗೃಹ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಚರ್ಚೆಗೆ ಬಂದವು. ಸಭೆಯಲ್ಲಿ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಸೇರಿದಂತೆ ಉನ್ನತ ಆಡಳಿತಾಧಿಕಾರಿಗಳು ಮತ್ತು ಸೇನೆ, ಸಿಆರ್‌ಪಿಎಫ್, ಪೊಲೀಸ್ ಮತ್ತು ಇತರ ಏಜೆನ್ಸಿಗಳ ಹಿರಿಯ ಭದ್ರತಾ ಅಧಿಕಾರಿಗಳು ಭಾಗವಹಿಸಿದ್ದರು.

‘ಆದಷ್ಟು ಬೇಗ ಈ ಪ್ರದೇಶದಿಂದ ಭಯೋತ್ಪಾದಕರನ್ನು ಹೊರಹಾಕಲು ಭದ್ರತಾ ಸಂಸ್ಥೆಗಳು ಹೆಚ್ಚು ಸಮನ್ವಯದಿಂದ ಕೆಲಸ ಮಾಡಬೇಕು’ ಎಂದ ಶಾ, ಉಗ್ರರೊಂದಿಗಿನ ಎನ್‌ಕೌಂಟರ್ ಬಗ್ಗೆ ಮಾಹಿತಿ ಪಡೆದುಕೊಂಡರು.

ಜಮ್ಮು ಪ್ರದೇಶದ ಪೂಂಛ್-ರಜೌರಿ ವಲಯದಲ್ಲಿ ಎರಡು ವಾರಗಳಿಂದ ಗುಂಡಿನ ಚಕಮಕಿ ನಡೆಯುತ್ತಿದೆ. ಈ ಕಾರ್ಯಾಚರಣೆಯಲ್ಲಿ 9 ಸೇನಾ ಸಿಬ್ಬಂದಿ ಪ್ರಾಣ ಕಳೆದುಕೊಂಡಿದ್ದಾರೆ.

370ನೇ ವಿಧಿ ರದ್ದತಿ ಸಮರ್ಥನೆ: 2019ರ ಆಗಸ್ಟ್ 5ರಂದು ತೆಗೆದುಕೊಂಡ ನಿರ್ಧಾರವು ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದನೆ, ಸ್ವಜನ ಪಕ್ಷಪಾತ ಮತ್ತು ಭ್ರಷ್ಟಾಚಾರವನ್ನು ಕಡಿಮೆ ಮಾಡಿದೆ ಎಂದು ಅಮಿತ್ ಶಾ ಪ್ರತಿಪಾದಿಸಿದರು. ‘ಇಲ್ಲಿನ ಅಭಿವೃದ್ಧಿಯನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ಇದು ನಮ್ಮ ಬದ್ಧತೆ’ ಎಂದು ಅವರು ಇಲ್ಲಿ ನಡೆದ ಜಮ್ಮು ಕಾಶ್ಮೀರ ಯೂತ್ ಕ್ಲಬ್ ಸದಸ್ಯರೊಂದಿಗೆ ನಡೆಸಿದ ಸಂವಾದದಲ್ಲಿ ಹೇಳಿದರು.

ಸಂವಿಧಾನದ 370ನೇ ವಿಧಿ ರದ್ದತಿಯನ್ನು ಸಮರ್ಥಿಸಿಕೊಂಡ ಗೃಹ ಸಚಿವರು, ‘2019ರಿಂದ ಜಮ್ಮು ಮತ್ತು ಕಾಶ್ಮೀರವು ಪಾರದರ್ಶಕತೆ ಮತ್ತು ಭ್ರಷ್ಟಾಚಾರ ಮುಕ್ತ ಆಡಳಿತ ನೀಡುತ್ತಿದ್ದು, ಈ ಪ್ರದೇಶದ ಅಭಿವೃದ್ಧಿಯ ಆಧಾರ ಸ್ತಂಭವಾಗಿದೆ. 370ನೇ ವಿಧಿ ರದ್ದುಗೊಳಿಸದೇ ಇದ್ದರೆ ಇದು ಸಾಧ್ಯವಿತ್ತೇ’ ಎಂದು ಅವರು ಪ್ರಶ್ನಿಸಿದ್ದಾರೆ.

‘2019ರ ಆಗಸ್ಟ್ 5 ಅನ್ನು ಸುವರ್ಣಾಕ್ಷರಗಳಲ್ಲಿ ಬರೆಯಲಾಗುವುದು. ಕಾಶ್ಮೀರವು ಭಯ, ಭಯೋತ್ಪಾದನೆ, ಭ್ರಷ್ಟಾಚಾರ ಮತ್ತು ಕೌಟುಂಬಿಕ ರಾಜಕೀಯದಿಂದ ಶಾಂತಿ, ಅಭಿವೃದ್ಧಿ ಮತ್ತು ಸಮೃದ್ಧಿಗೆ ಹೊರಳಿಕೊಂಡಿದೆ. ಹೊಸ ಆರಂಭವನ್ನು ಕಂಡಿದೆ. ಜಮ್ಮು-ಕಾಶ್ಮೀರದ ಯುವಕರು ಈ ಬದಲಾವಣೆಯನ್ನು ಬಲಪಡಿಸಿದ್ದಾರೆ’ ಎಂದು ಅವರು ಹೇಳಿದ್ದಾರೆ.

ಹುತಾತ್ಮ ಪೊಲೀಸ್ ಮನೆಗೆ ಭೇಟಿ: ಇದಕ್ಕೂ ಮುನ್ನ, ಶ್ರೀನಗರ ವಿಮಾನ ನಿಲ್ದಾಣಕ್ಕೆ ಶನಿವಾರ ಬೆಳಿಗ್ಗೆ ಬಂದಿಳಿದ ಶಾ ಅವರನ್ನು ಕೇಂದ್ರ ಸಚಿವ ಜಿತೇಂದ್ರ ಸಿಂಗ್, ಜಮ್ಮು ಮತ್ತು ಕಾಶ್ಮೀರ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಮತ್ತು ಹಿರಿಯ ಅಧಿಕಾರಿಗಳು ಬರಮಾಡಿಕೊಂಡರು.

ಜೂನ್ 22ರಂದು ನಗರದ ಹೊರವಲಯದ ನೌಗಾಮ್‌ನಲ್ಲಿ ಉಗ್ರರಿಂದ ಹತ್ಯೆಯಾದ ಜಮ್ಮು ಕಾಶ್ಮೀರ ಪೊಲೀಸ್ ಇಲಾಖೆಯ ಇನ್‌ಸ್ಪೆಕ್ಟರ್ ಪರ್ವೇಜ್ ಅಹ್ಮದ್ ಅವರ ಕುಟುಂಬವನ್ನು ಶಾ ಭೇಟಿ ಮಾಡಿದರು.

ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದ ಅವರು, ಪರ್ವೇಜ್ ಅವರ ಪತ್ನಿ ಫಾತಿಮಾ ಅಖ್ತರ್ ಅವರಿಗೆ ಸರ್ಕಾರಿ ಕೆಲಸದ ನೇಮಕಾತಿ ದಾಖಲೆಗಳನ್ನು ನೀಡಿದರು.



ನೌಗಾಮ್‌ನಲ್ಲಿ ಉಗ್ರರ ದಾಳಿಯಲ್ಲಿ ಹತ್ಯೆಯಾದ ಪೊಲೀಸ್ ಇನ್‌ಸ್ಪೆಕ್ಟರ್ ಪರ್ವೇಜ್ ಅವರ ನಿವಾಸಕ್ಕೆ ಗೃಹಸಚಿವ ಅಮಿತ್ ಶಾ ಅವರು ಶನಿವಾರ ಭೇಟಿ ನೀಡಿ, ಕುಟುಂಬದವರಿಗೆ ಸಾಂತ್ವನ ಹೇಳಿದರು–ಪಿಟಿಐ ಚಿತ್ರ

> **ವಿಮಾನ ಆರಂಭ, ವೈದ್ಯಕೀಯ ಕಾಲೇಜು ಉದ್ಘಾಟನೆಯಂತಹ ಚೆಂದದ ಕ್ರಮಗಳಿಂದ ಕಣಿವೆಯ ನಿಜವಾದ ಸಮಸ್ಯೆಗಳು ಪರಿಹಾರವಾಗುವುದಿಲ್ಲ**
> **ಮೆಹಬೂಬಾ ಮುಫ್ತಿ,** ಪಿಡಿಪಿ ನಾಯಕಿ

> **ಕಾಶ್ಮೀರದಲ್ಲಿ ನೆಲೆಸಿರುವ ಶಾಂತಿಯಿಂದ ಭ್ರಮನಿರಸನಗೊಂಡಿರುವ ಪಾಕಿಸ್ತಾನ ಮತ್ತು ಐಎಸ್‌ಐ, ನಾಗರಿಕರನ್ನು ಗುರಿಯಾಗಿಸಿವೆ ಎಂ.ಎಸ್.ಬಿಟ್ಟಾ**
> ಎಐಎಟಿಎಫ್ ಮುಖ್ಯಸ್ಥ

ಅಮಿತ್ ಶಾ ಕಾರ್ಯಕ್ರಮಗಳು

- ಗುಪ್ತಚರ ಮುಖ್ಯಸ್ಥ ಅರವಿಂದ್ ಕುಮಾರ್, ಗಡಿ ಭದ್ರತಾ ಪಡೆಯ ಮುಖ್ಯಸ್ಥ ಪಂಕಜ್ ಸಿಂಗ್, ಸಿಆರ್‌ಪಿಎಫ್ ಮುಖ್ಯಸ್ಥರು ಮತ್ತು ಎನ್‌ಎಸ್‌ಜಿ ಮುಖ್ಯಸ್ಥರೊಂದಿಗೆ ಜಮ್ಮು ಮತ್ತು ಕಾಶ್ಮೀರದ ಉನ್ನತ ಪೊಲೀಸ್ ಭದ್ರತೆಗೆ ಸಂಬಂಧಿಸಿದ ವಿಷಯಗಳ ಕುರಿತು ಅಮಿತ್ ಶಾ ಚರ್ಚೆ ನಡೆಸಲಿದ್ದಾರೆ
- ಉಧಂಪುರ ಮತ್ತು ಹಂದ್ವಾರದಲ್ಲಿ ಎರಡು ಹೊಸ ಸರ್ಕಾರಿ ವೈದ್ಯಕೀಯ ಕಾಲೇಜು ನಿರ್ಮಾಣಕ್ಕೆ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ
- ಭಾನುವಾರ ಜಮ್ಮು ನಗರದಲ್ಲಿ ಬೃಹತ್ ಸಾರ್ವಜನಿಕ ಸಭೆ ಉದ್ದೇಶಿಸಿ ಮಾತನಾಡಲಿದ್ದಾರೆ
- ಸೋಮವಾರ ದೆಹಲಿಗೆ ಹಿಂತಿರುಗುವ ಮೊದಲು ಸರಪಂಚರನ್ನು (ಗ್ರಾಮಗಳ ಮುಖ್ಯಸ್ಥರು) ಭೇಟಿ ಮಾಡಿ, ಅವರ ಸಮಸ್ಯೆಗಳನ್ನು ಆಲಿಸಲಿದ್ದಾರೆ

ಶಾ ಭೇಟಿ: ಕಣಿವೆಯಲ್ಲಿ ಕಟ್ಟೆಚ್ಚರ

ನಾಗರಿಕರನ್ನು ಗುರಿಯಾಗಿಸಿ ದಾಳಿಗಳು ನಡೆಯುತ್ತಿರುವುದರಿಂದ ಹಾಗೂ ಕೇಂದ್ರ ಗೃಹಸಚಿವ ಅಮಿತ್ ಶಾ ಅವರ ಭೇಟಿ ಹಿನ್ನೆಲೆಯಲ್ಲಿ ಕಾಶ್ಮೀರ ಕಣಿವೆಯಲ್ಲಿ ಶನಿವಾರ ಭದ್ರತೆಯನ್ನು ಇನ್ನಷ್ಟು ಬಿಗಿಗೊಳಿಸಲಾಗಿದೆ.

ವೈಮಾನಿಕ ಕಣ್ಗಾವಲು ಉದ್ದೇಶದಿಂದ ಕ್ಯಾಮೆರಾ ಅಳವಡಿಸಿರುವ ಡ್ರೋನ್‌ಗಳನ್ನು ಬಳಸಲಾಗಿದ್ದು, ಶ್ರೀನಗರದ ಆಯಕಟ್ಟಿನ ಸ್ಥಳಗಳಲ್ಲಿ ಶಾರ್ಪ್‌ಶೂಟರ್‌ಗಳನ್ನು ನಿಯೋಜಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಣಿವೆಗೆ ಬಂದಿರುವ ಅನ್ಯರಾಜ್ಯಗಳ ಕಾರ್ಮಿಕರು ಹಾಗೂ ಅಲ್ಪಸಂಖ್ಯಾತ ಸಮುದಾಯವನ್ನು ಗುರಿಯಾಗಿಸಿ ದಾಳಿ ನಡೆಯುತ್ತಿರುವ ಕಾರಣ, ಡ್ರೋನ್‌ಗಳನ್ನು ಕಣ್ಗಾವಲಿಗೆ ಬಳಸಿಕೊಳ್ಳಲು ನಿರ್ಧರಿಸಲಾಗಿದೆ ಎಂದು ಸಿಆರ್‌ಪಿಎಫ್ ಡಿಐಜಿ ಮ್ಯಾಥ್ಯೂ ಎ ಜಾನ್ ತಿಳಿಸಿದ್ದಾರೆ.

ಪ್ರಯಾಣಿಕರು ಮತ್ತು ಪಾದಚಾರಿಗಳ ತಪಾಸಣೆ ಶನಿವಾರವೂ ಮುಂದುವರಿದಿದೆ. ಸಿಆರ್‌ಪಿಎಫ್‌ನ ಮೋಟಾರ್‌ಬೋಟ್‌ಗಳು ದಾಲ್ ಸರೋವರ ಮತ್ತು ನಗರದ ಒಳಭಾಗದ ಮೂಲಕ ಹರಿಯುವ ಜೀಲಂ ನದಿಯ ಪ್ರದೇಶವನ್ನು ಪರಿಶೀಲಿಸಿವೆ. ಸಿಸಿಟಿವಿ ಕಣ್ಗಾವಲನ್ನೂ ಸಹ ಹೆಚ್ಚಿಸಲಾಗಿದೆ.

ಶಾ ಅವರ ಸುಗಮ ಸಂಚಾರಕ್ಕೆ ಮತ್ತು ಅವರ ಅಧಿಕೃತ ಸಭೆಗಳ ಸ್ಥಳಗಳನ್ನು ಭದ್ರಪಡಿಸಲು ದಾಲ್ ಸರೋವರ ಸಮೀಪದ ಬದ್ಯಾರಿ ಚೌಕ್‌ನಿಂದ ನಿಶಾತ್‌ಗೆ ಮೂರು ದಿನಗಳ ಕಾಲ ವಾಹನ ಸಂಚಾರವನ್ನು ಬಂದ್ ಮಾಡಲಾಗಿದೆ.

‘ಭಾರತ– ಬಾಂಗ್ಲಾ ಸಂಬಂಧ ನೆರೆಹೊರೆಗೆ ಮಾದರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಮತ್ತು ಬಾಂಗ್ಲಾದೇಶಗಳ ಮಧ್ಯದ ಸಂಬಂಧವು ಇತರ ಎಲ್ಲ ವ್ಯೂಹಾತ್ಮಕ ಸಂಬಂಧಗಳಿಗಿಂತಲೂ ಬಿಗಿಯಾಗಿದೆ. ಎರಡು ದೇಶಗಳ ಬಾಂಧವ್ಯವು ನೆರೆಹೊರೆಗೆ ಒಂದು ಪ್ರಬಲ ಮಾದರಿಯಂತೆ ಇದೆ ಎಂದು ವಿದೇಶಾಂಗ ವ್ಯವಹಾರಗಳ ಇಲಾಖೆ ಕಾರ್ಯದರ್ಶಿ ಹರ್ಷವರ್ಧನ್ ಶ್ರಿಂಗ್ಲಾ ಹೇಳಿದರು.

ಪಾಕಿಸ್ತಾನದ ವಿರುದ್ಧದ 1971ರ ಯುದ್ಧದಲ್ಲಿ ಭಾರತೀಯ ಸೇನೆಯ ಗೆಲುವಿನ ಸುವರ್ಣ ಮಹೋತ್ಸವದ ಪ್ರಯುಕ್ತ ಜಕ್ಕೂರು ವಾಯುನೆಲೆಯಲ್ಲಿ ನಡೆಯುತ್ತಿರುವ ‘ಸ್ವರ್ಣಿಮ ವಿಜಯ ವರ್ಷ’ ಕಾರ್ಯಕ್ರಮದಲ್ಲಿ ಶನಿವಾರ ದೆಹಲಿಯಿಂದ ವಿಡಿಯೊ ಕಾನ್ಫರೆನ್ಸ್ ಮೂಲಕ ಮಾತನಾಡಿದ ಅವರು, ಉಭಯ ರಾಷ್ಟ್ರಗಳ ಸಂಬಂಧದ ಕುರಿತು ವಿವರಿಸಿದರು.

‘50 ವರ್ಷಗಳ ಹಿಂದೆ ಬಾಂಗ್ಲಾದೇಶದ ವಿಮೋಚನೆಗೆ ಕಾರಣವಾದ ಭಾರತ, ಅಲ್ಲಿನ ಅಭಿವೃದ್ಧಿಯ ಪಾಲುದಾರನಂತೆ ಸ್ನೇಹಹಸ್ತ ಚಾಚಿದೆ. ಐದು ದಶಕಗಳ ಬಳಿಕವೂ ಎರಡೂ ರಾಷ್ಟ್ರಗಳು ಉತ್ತಮ ಬಾಂಧವ್ಯ ಹೊಂದಿವೆ. ಅಭಿವೃದ್ಧಿ ಮತ್ತು ವ್ಯಾಪಾರ ವಹಿವಾಟಿನಲ್ಲಿ ಬಾಂಗ್ಲಾದೇಶವು ಭಾರತಕ್ಕೆ ಅತಿದೊಡ್ಡ ಪಾಲುದಾರನಾಗಿದೆ’ ಎಂದರು.

1971ರ ಯುದ್ಧದ ಗೆಲುವು ಒಂದು ದೊಡ್ಡ ನೈತಿಕ ಮತ್ತು ರಾಜಕೀಯ ಗೆಲುವು. ನೈತಿಕತೆಯ ಆಧಾರದಲ್ಲಿ ಬಾಂಗ್ಲಾದೇಶೀಯರಿಗೆ ಬೆಂಬಲ ನೀಡಿದ್ದ ಭಾರತದ ನಿಲುವು ಸರಿಯಾದದ್ದು ಎಂಬುದು ಸಾಬೀತಾಗಿದೆ. ಸ್ನೇಹ, ಪರಸ್ಪರ ಅರಿಯುವಿಕೆ, ಗೌರವಯುವ ಸಂಬಂಧದ ಮೂಲಕ ಎರಡೂ ರಾಷ್ಟ್ರಗಳು ದ್ವಿಪಕ್ಷೀಯ ಸಂಬಂಧಕ್ಕೆ ಜಗತ್ತಿಗೇ ಮಾದರಿಯಾಗಿವೆ ಎಂದು ಶ್ರಿಂಗ್ಲಾ ಹೇಳಿದರು.

ಉಭಯ ರಾಷ್ಟ್ರಗಳ ಸೇನಾಪಡೆಗಳು ಹೊಂದಿರುವ ಸೌಹಾರ್ದಯುತ ಸಂಬಂಧವು ಭಾರತ ಮತ್ತು ಬಾಂಗ್ಲಾದೇಶಗಳು ಭದ್ರತೆಯ ವಿಷಯದಲ್ಲಿ ಹೊಂದಿರುವ ಸಮಾನ ಕಾಳಜಿಯನ್ನು ಪ್ರತಿಬಿಂಬಿಸುತ್ತವೆ. ಎರಡೂ ರಾಷ್ಟ್ರಗಳು ತ್ಯಾಗ ಮತ್ತು ಧೈರ್ಯವನ್ನು ಒಟ್ಟಾಗಿ ಪ್ರದರ್ಶಿಸಿದ್ದವು. ಅದುವೇ ಈಗ ಭಾರತ ಮತ್ತು ಬಾಂಗ್ಲಾ ನಡುವಿನ ಸೌಹಾರ್ದಯುತ ಸಂಬಂಧಕ್ಕೆ ಕಾರಣವಾಗಿದೆ ಎಂದರು.

ಪೂರ್ವ ಪಾಕಿಸ್ತಾನದ (ಈಗಿನ ಬಾಂಗ್ಲಾದೇಶ) ಜನರ ಮೇಲಿನ ದೌರ್ಜನ್ಯ, ಕಗ್ಗೊಲೆಗಳನ್ನು ಕಂಡು ಮಾನವೀಯ ದೃಷ್ಟಿಯಿಂದ ಭಾರತವು ಸ್ಪಂದಿಸಿತ್ತು. ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಭಾರತದ ಪ್ರಬಲ ಪ್ರತಿಪಾದನೆಗೆ ಮಣಿದ ಹಲವು ರಾಷ್ಟ್ರಗಳು, ಬಾಂಗ್ಲಾದೇಶದ ವಿಮೋಚನೆಯ ಬೇಡಿಕೆಯನ್ನು ಒಪ್ಪಿಕೊಂಡವು. ಪ್ರಬಲ ರಾಷ್ಟ್ರಗಳ ನಡುವಿನ ಶೀತಲ ಸಮರದ ಕಾರಣದಿಂದ ವಿಶ್ವಸಂಸ್ಥೆಯು 1971ರ ಡಿಸೆಂಬರ್‌ವರೆಗೂ ಈ ವಿಷಯದಲ್ಲಿ ಹೆಚ್ಚು ಪ್ರತಿಕ್ರಿಯಿಸಿರಲಿಲ್ಲ ಎಂದು ಹೇಳಿದರು.

ಪ್ರಬಲ ನಾಯಕತ್ವ ಅಗತ್ಯ: ಅನಿಲ್ ಕುಮಾರ್

‘ಅಂದಿನ ಪ್ರಧಾನಿ ಇಂದಿರಾ ಗಾಂಧಿ ನಾಯಕತ್ವದಲ್ಲಿ ಇಡೀ ಸರ್ಕಾರವೇ ಒಂದಾಗಿ ಪ್ರತಿಕ್ರಿಯಿಸಿದ ಕಾರಣದಿಂದ 1971ರ ಯುದ್ಧದಲ್ಲಿ ಗೆಲುವು ಸಾಧ್ಯವಾಯಿತು. ಈ ಕಾಲಘಟ್ಟದಲ್ಲಿ ಅಂತಹ ಪ್ರಬಲ ನಾಯಕತ್ವದ ಪ್ರತಿಕೃತಿಯನ್ನು ಕಾಣುವುದು ಕಷ್ಟ’ ಎಂದು ವೈಸ್ ಅಡ್ಮಿರಲ್ ಅನಿಲ್ ಕುಮಾರ್ ಚಾವ್ಲಾ ಹೇಳಿದರು.

‘ಈಗ ಸಂಪೂರ್ಣ ಚಿತ್ರಣವೇ ಬದಲಾಗಿದೆ. ಎದುರಾಳಿಗಳು, ಸನ್ನಿವೇಶ, ತಂತ್ರಜ್ಞಾನದ ಬಳಕೆ ಎಲ್ಲವೂ ಯುದ್ಧನೀತಿಯನ್ನೇ ಬದಲಿಸಿವೆ. ಸೇನಾಪಡೆಗಳು ಜಂಟಿಯಾಗಿ ಹೋರಾಡಿದರೆ ಸಾಲದು, ಸರ್ಕಾರವೇ ಒಂದಾಗಿ ಪ್ರತಿಕ್ರಿಯಿಸಿದರೆ ಮಾತ್ರ ಈಗಲೂ ಯುದ್ಧದಲ್ಲಿ ಗೆಲುವು ಸಾಧಿಸಬಹುದು’ ಎಂದರು.

ಬಿಜೆಪಿಯ ಬೇಬಿ ರಾಣಿ ಮೌರ್ಯ ಸಲಹೆ

ಕತ್ತಲಾದ ಮೇಲೆ ಠಾಣೆಗೆ ಹೋಗದಿರಿ

ಲಖನೌ: ಕತ್ತಲಾದ ಮೇಲೆ, ಮಹಿಳೆಯರು ಪೊಲೀಸ್ ಠಾಣೆಗೆ ಹೋಗದಂತೆ ಬಿಜೆಪಿಯ ರಾಷ್ಟ್ರೀಯ ಉಪಾಧ್ಯಕ್ಷೆ ಬೇಬಿ ರಾಣಿ ಮೌರ್ಯ ವಿಲಕ್ಷಣ ಸಲಹೆ ನೀಡಿದ್ದಾರೆ.

ಈ ಹೇಳಿಕೆಯಿಂದ ಪಕ್ಷವು ಮುಜುಗರಕ್ಕೀಡಾಗಿದೆ. ಇದರೊಂದಿಗೆ, ಉತ್ತರ ಪ್ರದೇಶದಲ್ಲಿ ಮಹಿಳೆಯರ ಸುರಕ್ಷತೆ ಬಗೆಗೂ ಪ್ರಶ್ನೆಯನ್ನು ಹುಟ್ಟುಹಾಕಿದೆ.

ಉತ್ತರಾಖಂಡದ ಮಾಜಿ ರಾಜ್ಯಪಾಲರಾದ ಬೇಬಿ ರಾಣಿ, ಶುಕ್ರವಾರ ಸಂಜೆ ವಾರಾಣಸಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಇಂಥ ಸಲಹೆ ನೀಡಿದ್ದಾರೆ.

‘ಪೊಲೀಸ್ ಠಾಣೆಯಲ್ಲಿ ಮಹಿಳಾ ಸಿಬ್ಬಂದಿ ಇರುತ್ತಾದರೂ ಸಂಜೆ ಐದರ ನಂತರ ಮಹಿಳೆಯರು ಅಲ್ಲಿಗೆ ಹೋಗದಿರುವುದೇ ಒಳ್ಳೆಯದು. ಪೊಲೀಸ್ ಠಾಣೆಗೆ ಹೋಗಲೇಬೇಕಿದ್ದರೆ ಅಣ್ಣ, ಅಪ್ಪ, ಪತಿ ಯಾರನ್ನಾದರೂ ಜೊತೆಗೆ ಕರೆದುಕೊಂಡು ಹೋಗಿ’ ಎಂದು ಹೇಳಿದ್ದಾರೆ.

ಮಹಿಳೆಯರ ಸುರಕ್ಷತೆಗಾಗಿ ಕೇಂದ್ರ ಹಾಗೂ ಉತ್ತರ ಪ್ರದೇಶ ಸರ್ಕಾರ ಸಾಕಷ್ಟು ಕ್ರಮಗಳನ್ನು ಕೈಗೊಂಡಿದ್ದು, ಕಳೆದ ಕೆಲವು ವರ್ಷಗಳಲ್ಲಿ ಪರಿಸ್ಥಿತಿ ಬದಲಾಗಿದೆ ಎಂದೂ ಹೇಳಿದರು.

ಈ ಬಗ್ಗೆ ಪ್ರತಿಕ್ರಿಯಿಸಲು ಬಿಜೆಪಿ ಮುಖಂಡರು ನಿರಾಕರಿಸಿದ್ದಾರೆ. ಆದರೆ, ವಿರೋಧ ಪಕ್ಷಗಳು, ಮೌರ್ಯ ಅವರ ಹೇಳಿಕೆ ರಾಜ್ಯದ ನೈಜ ಸ್ಥಿತಿಯನ್ನು ಬಿಂಬಿಸಿದ್ದಾಗಿ ಹೇಳಿವೆ.

‘ಉತ್ತರ ಪ್ರದೇಶದಲ್ಲಿ ಮಹಿಳೆಯರು ಸುರಕ್ಷಿತವಾಗಿಲ್ಲ ಎಂದು ನಾವು ಹೇಳುತ್ತಲೇ ಬಂದಿದ್ದೇವೆ. ಪೊಲೀಸ್ ಠಾಣೆಗಳಲ್ಲೂ ಮಹಿಳೆಯರಿಗೆ ಸುರಕ್ಷತೆ ಇಲ್ಲ ಎಂಬುದನ್ನು ನಾವು ಹಲವು ಬಾರಿ ಹೇಳಿದ್ದೇವೆ. ಮೌರ್ಯ ಅವರ ಹೇಳಿಕೆ ನಮ್ಮ ಆರೋಪಗಳಿಗೆ ಬಲ ನೀಡಿವೆ’ ಎಂದು ಸಮಾಜವಾದಿ ಪಕ್ಷದ ನಾಯಕರೊಬ್ಬರು ಹೇಳಿದ್ದಾರೆ.

‘ರಾಮ ದ್ರೋಹಿಗಳಿಂದ ಅಂತರವಿರಲಿ’

ಲಖನೌ (ಪಿಟಿಐ): ವಿರೋಧ ಪಕ್ಷಗಳು ಭಗವಾನ್ ರಾಮನ ವಿರುದ್ಧವಾಗಿವೆ ಎಂದು ಶನಿವಾರ ಆರೋಪಿಸಿರುವ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ‘ಇಂತಹ ರಾಮ ದ್ರೋಹಿಗಳು ಕೇವಲ ನಂಬಿಕೆಗಷ್ಟೇ ಘಾಸಿಯುಂಟುಮಾಡುತ್ತಿಲ್ಲ, ಬದಲಾಗಿ ಸಾಮಾಜಿಕ ಸಂರಚನೆಗೆ ಧಕ್ಕೆಯುಂಟು ಮಾಡುವುದರ ಜೊತೆಗೆ ಅಭಿವೃದ್ಧಿಗೂ ಅಡ್ಡಿಪಡಿಸುತ್ತಿದ್ದಾರೆ’ ಎಂದು ಹೇಳಿದ್ದಾರೆ.

‘ಭಯೋತ್ಪಾದಕರನ್ನು ರಕ್ಷಿಸುವ, ಗಲಭೆಕೋರರನ್ನು ಅಪ್ಪಿಕೊಳ್ಳುವ ರಾಮ ದ್ರೋಹಿಗಳಿಂದ ದೂರವಿರುವುದು ಈಗಿನ ಮತ್ತು ಮುಂದಿನ ಪೀಳಿಗೆಯ ಉತ್ತಮ ಭವಿಷ್ಯಕ್ಕೆ ಅತ್ಯಗತ್ಯ’ ಎಂದು ಅವರು ತಿಳಿಸಿದರು.

ಫೈಜಾಬಾದ್ ರೈಲು ನಿಲ್ದಾಣ ಮರುನಾಮಕರಣ: ‘ಉತ್ತರಪ್ರದೇಶ ಸರ್ಕಾರವು ಫೈಜಾಬಾದ್ ರೈಲು ನಿಲ್ದಾಣದ ಹೆಸರನ್ನು ಅಯೋಧ್ಯಾ ಕಂಟೋನ್ಮೆಂಟ್ ರೈಲು ನಿಲ್ದಾಣ ಎಂದು ಮರುನಾಮಕರಣ ಮಾಡಲು ನಿರ್ಧರಿಸಿದೆ’ ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಕಚೇರಿ ಶನಿವಾರ ಟ್ವೀಟ್ ಮಾಡಿದೆ.

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 24 ಅಕ್ಟೋಬರ್ 2021



ನಗರ ಕೋಟೆಯಿಂದ ನೇಸರನ ನೋಟ..! 9



ಜರ್ಮನಿಯಿಂದ ಭಾರತದವರೆಗೆ ಕಥಕ್ ಚಕ್ಕರ್ 11

ನಿಮಗೇಕೆ ಕೊಡಬೇಕು ಕಪ್ಪ?

'ಕಪ್ಪ ಕೊಡಬೇಕಂತೆ ಕಪ್ಪ. ನಿಮಗೇಕೆ ಕೊಡಬೇಕು ಕಪ್ಪ?' ಎನ್ನುವ ವೀರ ಮಾತನ್ನು ಹೇಳಿದ್ದು ಕಿತ್ತೂರು ಚನ್ನಮ್ಮನಲ್ಲವೇ? ತಮಿಳುನಾಡಿನ ವೀರಪಾಂಡ್ಯ ಕಟ್ಟಬೊಮ್ಮನ್ ಕೂಡ ಹೀಗೆಯೇ ಹೇಳಿದ್ದನಂತೆ! ಹಾಗಿದ್ದರೆ ಏನಿದರ ಮಜಕೂರು? ಕಿತ್ತೂರು ಉತ್ಸವದ ನೆಪದಲ್ಲಿ ಹೀಗೊಂದು ವಿಶ್ಲೇಷಣೆ...



ಕಿತ್ತೂರು ರಾಣಿ ಚನ್ನಮ್ಮ

ಸರಜೂ ಕಾಟ್ಕರ್

ಕೇಂದ್ರ ಸಾಹಿತ್ಯ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮಕ್ಕಾಗಿ ಹೋದ ತಿಂಗಳು ದಿಲ್ಲಿಗೆ ಹೋಗಿದ್ದೆ. ಪ್ರಶಸ್ತಿ ಪ್ರದಾನ ಕಾರ್ಯಕ್ರಮದ ಎರಡನೆಯ ದಿನ ಹಿಂದಿಯ ಸುಪ್ರಸಿದ್ಧ ಲೇಖಕ ನರೇಂದ್ರ ಪ್ರಸಾದ, ತಮಿಳಿನ ಲೇಖಕ ನಟರಾಜನ್ ಹಾಗೂ ನಾನು ಹಾಗೆಯೇ ಲೋಕಾಭಿರಾಮವಾಗಿ ಹರಟೆ ಹೊಡೆಯುತ್ತಿದ್ದೆವು. ಮಾತು ಸ್ವಾತಂತ್ರ್ಯ ಆಂದೋಲನದೆಡೆಗೆ ತಿರುಗಿತು. ಈ ವರ್ಷ ಸ್ವಾತಂತ್ರ್ಯದ 75ನೇ ವರ್ಷವನ್ನು ಆಚರಿಸುತ್ತಿರುವುದರಿಂದ ಮತ್ತು ಕೇಂದ್ರ ಸರ್ಕಾರದ ಎಲ್ಲ ಕಾರ್ಯಕ್ರಮಗಳೂ 'ಆಜಾದಿ ಕಾ ಅಮೃತ ಮಹೋತ್ಸವ' ಎಂಬ ಟ್ಯಾಗ್‌ಲೈನಿನಲ್ಲಿ ಸಂಭ್ರಮಿಸುತ್ತಿರುವುದರಿಂದ ಸಹಜವಾಗಿ ಮಾತು 1857ರ ಪ್ರಥಮ ಸ್ವಾತಂತ್ರ್ಯಾಂದೋಲನವೆಂದು ಹೆಸರಾಗಿರುವ 'ಸಿಪಾಯಿ ದಂಗೆ' ಅಥವಾ ಝಾನ್ಸಿಯ ರಾಣಿ ಲಕ್ಷ್ಮೀಬಾಯಿ ಹೋರಾಟದೆಡೆ ತಿರುಗಿತು.

ಈ 1857ರ ಸ್ವಾತಂತ್ರ್ಯ ಹೋರಾಟಕ್ಕಿಂತ ಮೊದಲು ಅಂದರೆ ಲಕ್ಷ್ಮೀಬಾಯಿಯ ಬಂಡಾಯಕ್ಕಿಂತ 33 ವರ್ಷ ಮೊದಲು ಬ್ರಿಟಿಷರ ವಿರುದ್ಧ ಖಡ್ಗ ಹಿರಿದವಳು ಕಿತ್ತೂರಿನ ರಾಣಿ ಚನ್ನಮ್ಮ. 1824ರಲ್ಲಿಯೇ ಆಕೆ ಬ್ರಿಟಿಷರ ವಿರುದ್ಧ ಯುದ್ಧ ಸಾರಿ ತನ್ನ ಸ್ವಾಭಿಮಾನವನ್ನು ಮೆರೆದವಳು. ಬ್ರಿಟಿಷರು ಹಾಕಿದ ಕರಾರುಗಳನ್ನು ಒಪ್ಪಿಕೊಂಡಿದ್ದರೆ ಆಕೆ ಕಿತ್ತೂರಿನ ರಾಣಿಯಾಗಿ ಸುಖದಿಂದ ಜೀವಿಸಬಹುದಿತ್ತು. ಆಕೆಯ ನಂತರ ಅವಳ ವಂಶಸ್ಥರು ಭಾರತದ ಉಳಿದ ಸಂಸ್ಥಾನಿಕರು ಬದುಕುತ್ತಿರುವ ಸುಖದ, ವಿಲಾಸದ ಜೀವನವನ್ನು ಬದುಕಬಹುದಿತ್ತು. ಆದರೆ ಸ್ವಾಭಿಮಾನಿಯಾಗಿದ್ದ ಚನ್ನಮ್ಮ ಗುಲಾಮಗಿರಿಯನ್ನು ಒಪ್ಪಿಕೊಳ್ಳಲು ಸಿದ್ಧವಾಗಲಿಲ್ಲ. ಇದರ ಪರಿಣಾಮವೇನಾಯಿತೆಂದರೆ ಕಿತ್ತೂರಿಗೂ ಬ್ರಿಟಿಷರಿಗೂ ಯುದ್ಧ ಏರ್ಪಟ್ಟು ಅದರಲ್ಲಿ ಚನ್ನಮ್ಮ ಸೋಲಬೇಕಾಯಿತು. ಆದರೆ ಅವಳು ತೋರಿಸಿದ ಧೈರ್ಯ, ಸಾಹಸಗಳು ಇತಿಹಾಸದಲ್ಲಿ ದಾಖಲಿಸಲ್ಪಟ್ಟವು.

'ಲಕ್ಷ್ಮೀಬಾಯಿಗಿಂತ ಮೊದಲು 1824ರಲ್ಲಿಯೇ ಲಕ್ಷ್ಮೀಬಾಯಿಯಂತಹದ್ದೇ ಹೋರಾಟವನ್ನು ಕರ್ನಾಟಕದ ಒಂದು ಸಣ್ಣ ಸಂಸ್ಥಾನದ ರಾಣಿಯಾಗಿದ್ದ ಚನ್ನಮ್ಮ ನಡೆಸಿದ್ದಳು. ನನ್ನ ಅಭಿಪ್ರಾಯದಲ್ಲಿ ಚನ್ನಮ್ಮ ಬ್ರಿಟಿಷರ ವಿರುದ್ಧ ನಡೆಸಿದ ಹೋರಾಟವೇ ಭಾರತದ ಪ್ರಪ್ರಥಮ ಸ್ವಾತಂತ್ರ್ಯ ಹೋರಾಟ' ಎಂದು ನಾನು ಹೇಳಿದೆ. ಅದಕ್ಕೆ ನಟರಾಜನ್‌ರವರು 'ಚನ್ನಮ್ಮ ಹೋರಾಡಿದ ಇಸ್ವಿ ಯಾವುದು' ಎಂದು ಕೇಳಿದರು.

'1824' ಎಂದೆ ನಾನು.

'1824ಗಿಂತ ಮೊದಲು ತಮಿಳುನಾಡಿನಲ್ಲಿ ವೀರಪಾಂಡ್ಯ ಕಟ್ಟಬೊಮ್ಮನ್ ಎಂಬ ರಾಜ ಬ್ರಿಟಿಷರ ವಿರುದ್ಧ ಖಡ್ಗ ಹಿರಿದಿದ್ದ. ಈ ಯುದ್ಧದಲ್ಲಿ ಆತ ಸೋತ. ಬ್ರಿಟಿಷರು ಅವನನ್ನು ಬಹಿರಂಗವಾಗಿ ಗಲ್ಲಿಗೇರಿಸಿದರು' ಎಂದರು ನಟರಾಜನ್.

'ವೀರಪಾಂಡ್ಯ ಕಟ್ಟಬೊಮ್ಮನ್‌ನ ಇಸ್ವಿ ಯಾವುದು?' ನಾನು ಕೇಳಿದೆ.

'ಅದು 1799ರಲ್ಲಿ. ಆತನಿಗೆ 16 ಅಕ್ಟೋಬರ್ 1799ರಲ್ಲಿ ಕಾಯಥರ್ ಎಂಬ ಊರಿನಲ್ಲಿ ಗಲ್ಲಿಗೆ ಹಾಕಲಾಯಿತು' ಎಂದರು ನಟರಾಜನ್.

'ಆತನ ವಿಶೇಷತೆ ಏನು?' ನಾನು ಕೇಳಿದೆ.

'ವೀರಪಾಂಡ್ಯ ಕಟ್ಟಬೊಮ್ಮನ್' ಪಾಂಚಾಲಕುರುಚ್ಚಿ ಎಂಬ ಸಣ್ಣ ರಾಜ್ಯದ ಅಧಿಪತಿ. ಈಗದು ತಮಿಳುನಾಡಿನ ತೂತುಕುಡಿ ಎಂಬ ಜಿಲ್ಲೆಯಲ್ಲಿದೆ. ಆತ ಹುಟ್ಟಿದ್ದು ಜನವರಿ 3, 1760ರಲ್ಲಿ. ಪಾಂಚಾಲಕುರುಚ್ಚಿ ಆಗ ಮಧುರೈ ಸಾಮ್ರಾಜ್ಯದ ಅಂಗವಾಗಿತ್ತು. ಮಧುರೈಯನ್ನು ಗೆದ್ದ ನಂತರ ಬ್ರಿಟಿಷರು ಇವನ ರಾಜ್ಯವನ್ನು ಕಬಳಿಸಲು ಹವಣಿಸಿದರು. ಇವನು ಅದನ್ನು ವಿರೋಧಿಸಿದ. ಆಗ ಬ್ರಿಟಿಷರು ಪ್ರತಿವರ್ಷ ಬ್ರಿಟಿಷ್ ಸಾಮ್ರಾಜ್ಯಕ್ಕೆ ಇಂತಿಷ್ಟು ಕಪ್ಪ ನೀಡಬೇಕೆಂದು ಕರಾರು ಹಾಕಿದರು' ಎಂದು ನಟರಾಜನ್ ಹೇಳಿದರು.



ವೀರಪಾಂಡ್ಯ ಕಟ್ಟಬೊಮ್ಮನ್

'ಕಪ್ಪ ಅಂದ್ರೆ?' ನಾನು ಕೇಳಿದೆ.

'ಕಪ್ಪ ಅಂದ್ರೆ ಕರ ಅಥವಾ ಇಂತಿಷ್ಟು ಟ್ಯಾಕ್ಸ್ ಕೊಡುವುದು. ಭಾರತದಲ್ಲಿಯ ತಾವು ಗೆದ್ದ ರಾಜ್ಯಗಳ ರಾಜರಿಂದ ಬ್ರಿಟಿಷರು ಈ ರೀತಿಯ ಕಪ್ಪವನ್ನು ವಸೂಲಿ ಮಾಡುತ್ತಿದ್ದರು. ಅದೊಂದು ರೀತಿ ಗುಲಾಮನಾದವನು ತನ್ನ ಒಡೆಯನಿಗೆ ಸಲ್ಲಿಸುವ ಗೌರವದ ಧನವಾಗಿತ್ತು. ಕಪ್ಪ ನೀಡದ ರಾಜ್ಯವನ್ನು ಬ್ರಿಟಿಷರು ತಮ್ಮ ಸುಪರ್ದಿಗೆ ತೆಗೆದುಕೊಳ್ಳುತ್ತಿದ್ದರು. ಹೀಗಾಗಿ ದೇಶಿ ರಾಜರು ಬ್ರಿಟಿಷರಿಗೆ ಹೆದರಿ ಅವರಿಗೆ ನೀಡಬೇಕಾಗಿರುವ ಕಪ್ಪನ್ನು ಬಲವಂತವಾಗಿ ತಮ್ಮ ಪ್ರಜೆಗಳಿಂದ ವಸೂಲಿ ಮಾಡುತ್ತಿದ್ದರು' ಎಂದರು ನಟರಾಜನ್.

'ಮುಂದೆ?' ನಾನು ಕೇಳಿದೆ.

'ವೀರಪಾಂಡ್ಯ ಅರಮನೆಗೆ ಜಾಕ್ಸನ್ ಎಂಬ ಆಗಿನ ಕಲೆಕ್ಟರ್ ಕಪ್ಪ ವಸೂಲಾತಿಗೆ ಹೋಗಿದ್ದ. ಆಗ ವೀರಪಾಂಡ್ಯನ್ ಅವನನ್ನುದ್ದೇಶಿಸಿ 'ಕಪ್ಪ ಕೊಡಬೇಕೆ ಕಪ್ಪ? ನಿಮಗೇಕೆ ಕೊಡಬೇಕು ಕಪ್ಪ? ನೀವೇನು ನಮ್ಮ ಒಡಹುಟ್ಟಿದವರಾ? ಅಣ್ಣ ತಮ್ಮಂದಿರಾ? ನೆಂಟರೇ? ಇಷ್ಟರೇ? ದಾಯಾದಿಗಳೇ?' ಎಂದು ಹೇಳುತ್ತಿರುವಂತೆಯೇ ನನಗೊಂದು ಕ್ಷಣ ಶಾಕ್ ಹೊಡೆದಂತಾಯಿತು. 'ಅರೆ! ಈ ಮಾತುಗಳು ನಮ್ಮ ಕಿತ್ತೂರಿನ ರಾಣಿ ಚನ್ನಮ್ಮಳು ತನ್ನ ರಾಜ್ಯಕ್ಕೆ ಕಪ್ಪ ವಸೂಲಾತಿಗೆ ಬಂದ ಬ್ರಿಟಿಷ್ ಕಲೆಕ್ಟರ್ ಥ್ಯಾಕರೆಗೆ ಹೇಳಿದ ಮಾತುಗಳು' ಎಂದು ನೆನಪಾಗುತ್ತಿರುವಂತೆಯೇ ನಾನು ನಟರಾಜನ್‌ರ ಮಾತುಗಳನ್ನು ಅರ್ಧಕ್ಕೆ ತುಂಡರಿಸಿ, 'ನಟರಾಜನ್, ಒಂದ್ನಿಮಿಷ! ಇದೇ ಮಾತುಗಳನ್ನು, ಶಬ್ದಶಃ ಇದೇ ಮಾತುಗಳನ್ನು ನಮ್ಮ ಚನ್ನಮ್ಮ ಆಗಿನ ಧಾರವಾಡದ ಕಲೆಕ್ಟರನಿಗೆ ಹೇಳಿ ಅವನಿಗೆ ನೀರು ಇಳಿಸಿದ್ದಳು. ಚನ್ನಮ್ಮನ ಈ ಮಾತುಗಳು ಕರ್ನಾಟಕದ ಪ್ರತಿಯೊಬ್ಬರಿಗೂ ಬಾಯಿಪಾಠವಾಗಿವೆ' ಎಂದೆ.

ನನ್ನ ಮಾತುಗಳಿಂದ ನಟರಾಜನ್‌ರಿಗೂ ಆಶ್ಚರ್ಯವಾಯಿತು.

'ಚನ್ನಮ್ಮನ ಬಾಯಿಯಿಂದ ಬಂದ ಮಾತುಗಳಾವವು?' ಎಂದು ಕೇಳಿದರು.

ಚನ್ನಮ್ಮ ಥ್ಯಾಕರೆಯ ನಡುವೆ ನಡೆದ ಸಂಭಾಷಣೆಯು ಬೇರೆ ಕನ್ನಡಿಗರಂತೆ ನನಗೂ ಬಾಯಿಪಾಠವಾಗಿದ್ದಿತು. ಶಾಲೆಯ ಗ್ಯಾದರಿಂಗ್‌ಗಳಲ್ಲಿ ಈ ಸಂಭಾಷಣೆಯು ಪ್ರತಿಸಲವೂ ಪುನರಾವರ್ತಿತವಾಗುತ್ತಿತ್ತು. ಕನ್ನಡ ಶಾಲೆಯಿಂದ ಹೊರಬಿದ್ದು ಅರ್ಧ ಶತಕವಾಗಿದ್ದರೂ ಆ ಸಂಭಾಷಣೆಯು ನನ್ನ ನಾಲಿಗೆಯ ಮೇಲೆ ಇನ್ನೂ ಕುಣಿಯುತ್ತಿತ್ತು.

'ಕಪ್ಪ ಕೊಡಬೇಕಂತೆ ಕಪ್ಪ? ನಿಮಗೇಕೆ ಕೊಡಬೇಕು ಕಪ್ಪ?
ನೀವೇನು ನಮ್ಮ ಒಡಹುಟ್ಟಿದವರಾ?
ಅಣ್ಣ-ತಮ್ಮಂದಿರಾ? ನೆಂಟರೇ? ಇಷ್ಟರೇ? ದಾಯಾದಿಗಳೇ?
ನೀವೇನು ಇಲ್ಲಿ ಉತ್ತೀರಾ? ಬಿತ್ತೀರಾ?
ರೈತ ಬಿತ್ತಾನೆ, ಉತ್ತಾನೆ, ಕಬ್ಬು ತಿನ್ನಲು
ಬಿಟ್ಟ ತಪ್ಪಿಗೆ ಕೂಲೀ ಕೊಡ್ಬೇಕಾ?
ಕಿತ್ತೂರು ನಿಮ್ಮಪ್ಪ ಕಟ್ಟಿ ಬೆಳೆಸಿದ
ಆಸ್ತಿಯೇನು? ನಿಮಗೇನಿದೆ ಹಕ್ಕು ಕಪ್ಪ ಕೇಳಲು?
ನಾವೇಕೆ ಕೊಡಬೇಕು ಕಪ್ಪ ನಿಮಗೆ? ನೆನಪಿರಲಿ
ಕಿತ್ತೂರಿನಿಂದ ಕಪ್ಪ ಕೇಳುವ ನಿಮ್ಮ ನಾಲಿಗೆ
ಕತ್ತರಿಸಿ ನಾಯಿಗೆ ಹಾಕುತ್ತಾರೆ ಈ ನೆಲದ ಮಕ್ಕಳು.
ಹೋಗಿ ಹೋಗಿ ಇಲ್ಲಿಂದ ಹೊರಟು ಹೋಗಿ' ...

ಈ ಸಂಭಾಷಣೆಯನ್ನು ನಾನು ಹೇಳುವಾಗ ನಟರಾಜನ್ ಬಲು ಅಚ್ಚರಿಯಿಂದ ನನ್ನನ್ನೇ ನೋಡುತ್ತಿದ್ದರು. ಅವರಿಗೆ ಕನ್ನಡ ಬರುವುದಿಲ್ಲ. ಆದರೆ ನನ್ನ ಮಾತುಗಳು ಅವರಿಗೆ ಅರ್ಥವಾದವು. ಅವರು ನನ್ನನ್ನು ತಡೆದು 'ಅರೆ, ನಮ್ಮ ವೀರಪಾಂಡ್ಯ ಇದೇ ಮಾತುಗಳನ್ನು ಬ್ರಿಟಿಷರಿಗೆ ಹೇಳಿದ್ದ. ಸೇಮ್ ಟು ಸೇಮ್! ಇದೇ ಧಾಟಿ. ಇದೇ ಲಯ. ಇವೇ ಶಬ್ದಗಳು. ಒಂದೆರೆಡು ಕಡೆ ಶಬ್ದಗಳ ಬದಲಾವಣೆಗಳು ಇರಬಹುದು' ಎಂದು ಅನ್ನುತ್ತ ವೀರಪಾಂಡ್ಯ ಜಾಕ್ಸನ್‌ಗೆ ಹೇಳಿದ ಸಂಭಾಷಣೆಗಳ ಪೂರ್ತಿ ಪಾಠವನ್ನು ಒಪ್ಪಿಸಿದರು. ನನಗೂ ತುಂಬಾ ಅಚ್ಚರಿಯಾಯಿತು. ಭಾಷೆಗಳು, ಕಾಲ, ವ್ಯಕ್ತಿಗಳು ಬೇರೆ ಬೇರೆಯಾಗಿದ್ದರೂ ಅವುಗಳಲ್ಲಿ ಹರಿಯುವ ರೇತಸ್ಸು ಒಂದೇ ಆಗಿದ್ದಿತು. ವೀರಪಾಂಡ್ಯನ್‌ನ ಈ ಸಂಭಾಷಣೆ ತಮಿಳಿನ ಪ್ರತಿಯೊಬ್ಬ ಪೋರನ ನಾಲಿಗೆಯ ಮೇಲೆ ಕುಣಿದಾಡುತ್ತದೆಂದು ನಟರಾಜನ್ ಹೇಳಿದರು.

9ನೇ ಪುಟಕ್ಕೆ...

'ಅನುವಾದ ಕ್ಷೇತ್ರದತ್ತ ಏಕೀ ಅನಾದರ?

ತೇಜಸ್ವಿನಿ ನಿರಂಜನ ಅವರು ಅನುವಾದಿಸಿರುವ ಜಯಂತ ಕಾಯ್ಕಿಣಿ ಅವರ ಸಣ್ಣಕಥೆಗಳ ಸಂಕಲನ 'ನೋ ಪ್ರೆಸೆಂಟ್ಸ್ ಪ್ಲೀಸ್–ಮುಂಬೈ ಸ್ಟೋರೀಸ್' ಅಮೆರಿಕ ಸಾಹಿತ್ಯ ಭಾಷಾಂತರಕಾರರ ಸಂಸ್ಥೆಯು (ಎ.ಎಲ್.ಟಿ.ಎ) ನೀಡುವ 'ಅಮೆರಿಕ ರಾಷ್ಟ್ರೀಯ ಸಾಹಿತ್ಯ ಪ್ರಶಸ್ತಿ'ಗೆ ಆಯ್ಕೆಯಾಗಿದೆ. 2019ರಲ್ಲಿ ದಕ್ಷಿಣ ಏಷ್ಯಾದ ಪ್ರತಿಷ್ಠಿತ ಡಿಎಸ್‌ಸಿ ಅಂತರರಾಷ್ಟ್ರೀಯ ಪ್ರಶಸ್ತಿಯನ್ನೂ ಈ ಅನುವಾದಿತ ಕೃತಿ ಮುಡಿಗೇರಿಸಿಕೊಂಡಿತ್ತು. ಧಾರವಾಡದಲ್ಲಿ ಹುಟ್ಟಿ, ಬೆಂಗಳೂರಿನಲ್ಲಿ ಬೆಳೆದು, ಅಮೆರಿಕದಲ್ಲಿ ಪಿಎಚ್.ಡಿ ಪದವಿ ಪಡೆದು, ಮುಂಬೈನಲ್ಲಿ ಹಲವು ವರ್ಷ ಕೆಲಸ ಮಾಡಿದ್ದ ತೇಜಸ್ವಿನಿ ಅವರು ಪ್ರಸ್ತುತ ಅಹಮದಾಬಾದ್ ವಿಶ್ವವಿದ್ಯಾಲಯದ ಸೆಂಟರ್ ಫಾರ್ ಇಂಟರ್ ಏಷ್ಯನ್ ರಿಸರ್ಚ್‌ನ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರಶಸ್ತಿ ಪಡೆದ ಸಂಭ್ರಮದಲ್ಲಿ ಅವರು 'ಭಾನುವಾರದ ಪುರವಣಿ'ಗೆ ನೀಡಿದ ಸಂದರ್ಶನ ಇಲ್ಲಿದೆ...

ಸಂದರ್ಶನ: ಅಭಿಲಾಷ್ ಪಿ.ಎಸ್.

• 'ನೋ ಪ್ರೆಸೆಂಟ್ಸ್ ಪ್ಲೀಸ್' ಕೃತಿಯನ್ನು ಅನುವಾದಕ್ಕೆ ಆಯ್ಕೆ ಮಾಡಿಕೊಂಡ ಹಿಂದಿದ್ದ ಕಾರಣ, ಪ್ರೇರಣೆ ಏನು?

ಜಯಂತ ಕಾಯ್ಕಿಣಿ ಅವರಿಗೂ ನನಗೂ ಬಹಳ ವರ್ಷಗಳ ಪರಿಚಯ. ಸುಮಾರು 70ರ ದಶಕದಲ್ಲಿ ಕಾಯ್ಕಿಣಿ ಅವರ ಕವಿತೆಗಳನ್ನು ನಾನು ಇಂಗ್ಲಿಷ್‌ಗೆ ಅನುವಾದಿಸಿದ್ದೆ. ಆ ಸಂದರ್ಭದಲ್ಲಿ ನಾನೂ ಕನ್ನಡ, ಇಂಗ್ಲಿಷ್‌ನಲ್ಲಿ ಕವಿತೆ ಬರೆಯುತ್ತಿದ್ದೆ. ಅವರು ಬರೆದ ಕವಿತೆಗಳು ನನಗೆ ಇಷ್ಟವಾಗಿದ್ದವು. ಇದಾದ ನಂತರ ಬಹಳ ವರ್ಷ ನಾನು ಅವರೊಂದಿಗೆ ಸಂಪರ್ಕದಲ್ಲಿ ಇರಲಿಲ್ಲ. ಸುಮಾರು 1998ರಲ್ಲಿ ನಾನು ಬೆಂಗಳೂರಿಗೆ ವಾಪಾಸಾಗಿದ್ದೆ. ಇದೇ ಸಮಯಕ್ಕೆ ಕಾಯ್ಕಿಣಿ ಅವರೂ ಮುಂಬೈ ತೊರೆದು ಬೆಂಗಳೂರಿಗೆ ಬಂದಿದ್ದರು. ಮತ್ತೆ ನಮ್ಮ ಭೇಟಿಯಾಯಿತು. ನಾನು ಕಥೆಗಳನ್ನು ಓದಲು ಪ್ರಾರಂಭಿಸಿದ್ದೆ. ಅವರು ಬರೆದ ಕಥೆಗಳೂ ಹಿಡಿಸಿದವು. ಅದಾಗಲೇ ನಾನು ವೈದೇಹಿ ಅವರು ಬರೆದಿದ್ದ ಕಥೆಗಳನ್ನು ಇಂಗ್ಲಿಷ್‌ಗೆ ಅನುವಾದಿಸಿದ್ದೆ. ಜೊತೆಗೆ ಮತ್ತೊಂದಿಷ್ಟು ಅನುವಾದಗಳನ್ನೂ ಮಾಡಿದ್ದೆ. ಆಗ ಹಾರ್ಪರ್ ಕಾಲಿನ್ಸ್ ಸಂಪಾದಕಿಯಾಗಿದ್ದ ವಿ.ಕೆ.ಕಾರ್ತಿಕ ಅವರು 'ಜಯಂತ ಕಾಯ್ಕಿಣಿ ಅವರ ಕಥೆಗಳನ್ನು ನೀವೇಕೆ ಅನುವಾದಿಸಬಾರದು' ಎಂದು ಕೇಳಿದ್ದರು. ಕಾರ್ತಿಕ ಅವರು ಪೆಂಗ್ವಿನ್ ಸಂಪಾದಕಿಯಾಗಿದ್ದ ಸಂದರ್ಭದಲ್ಲಿ ವೈದೇಹಿ ಅವರ ಕಥೆಗಳನ್ನು ನಾನು ಇಂಗ್ಲಿಷ್‌ಗೆ ಅನುವಾದಿಸಿದ್ದೆ.

ಕಾಯ್ಕಿಣಿ ಅವರ ಜೊತೆ ಮಾತನಾಡಿ ಒಂದಿಷ್ಟು ಕಥೆಗಳನ್ನು ಆಯ್ಕೆ ಮಾಡಿಕೊಂಡೆವು. ನಂತರದಲ್ಲಿ ಅನುವಾದ ಪ್ರಕ್ರಿಯೆ. ಹೀಗಾಗಿ ಇಲ್ಲಿ ಪ್ರೇರಣೆ ಏನೂ ಇಲ್ಲ. (ನಗುತ್ತಾ) ಅಂಥ ವಿಚಿತ್ರವಾದ ಕಥೆಯೇನಿಲ್ಲ. ಪ್ರಕಾಶಕರು ಕೇಳಿದರು, ನಾನು ಅನುವಾದ ಮಾಡಿದೆ ಅಷ್ಟೇ... ಕಥೆಗಳನ್ನಂತೂ ನಾನು ಮುಂಚೆಯೇ ಮೆಚ್ಚಿಕೊಂಡಿದ್ದೆ.

• ಕಾಯ್ಕಿಣಿ ಅವರ ಕಥೆಗಳನ್ನು ಓದಿದ್ದು ರಸಾನುಭವಕ್ಕಾಗಿಯೋ ಅಥವಾ ಅನುವಾದಕ್ಕಾಗಿಯೋ?

ಮುಂಚೆ ಇತರೆ ಕಥೆಗಳನ್ನು ಓದುವ ಹಾಗೆಯೇ ಕಾಯ್ಕಿಣಿ ಅವರ ಕಥೆಗಳನ್ನೂ ಓದಿದ್ದೆ. ಕಥೆಗಳನ್ನು ಮೆಚ್ಚಿಕೊಂಡು ಬಹಳ ಚೆನ್ನಾಗಿವೆ ಎಂದು ಹೇಳಿದ್ದೆ. ಆಗ ಅನುವಾದದ ವಿಚಾರ ಯೋಚನೆಯಲ್ಲಿ ಇರಲಿಲ್ಲ. ಅನುವಾದಕ್ಕಾಗಿ ಕೇಳಿದಾಗ ಮತ್ತೊಮ್ಮೆ ಬೇರೆ ರೀತಿಯೇ ಓದಬೇಕಲ್ಲವೇ? ಮೆಚ್ಚಿಕೊಂಡಿದ್ದ ಕಥೆಗಳನ್ನು ಬೇರೆ ಕಣ್ಣಿನಿಂದ ಓದಬೇಕಾಯಿತು. ಈ ಕಥೆಗಳನ್ನು ಅನುವಾದ ಮಾಡಬಹುದೇ? ಮಾಡಿದರೆ ಯಾವ ರೀತಿ? ಎಂಬ ಪ್ರಶ್ನೆಗಳು ಕಾಡಿದವು. ಸ್ಯಾಂಪಲ್‌ಗೆ ಒಂದೆರಡು ಕಥೆಗಳನ್ನು ಅನುವಾದ ಮಾಡಿದೆ. ಇದು ಜಯಂತ ಅವರಿಗೆ ಇಷ್ಟವಾಯಿತು. ಹೀಗಾಗಿ ಮುಂದುವರಿದೆ.

• ಅನುವಾದ ಸಂದರ್ಭದಲ್ಲಿ ನೀವು ಎದುರಿಸಿದ ಸವಾಲುಗಳೇನು?

ಜಯಂತ ಅವರ ಕಥೆ, ಕವನಗಳನ್ನು ಅನುವಾದ ಮಾಡುವ ಸಂದರ್ಭದಲ್ಲಿ ನನಗೆ ಎದುರಾಗುವ ಕಷ್ಟ ಎಂದರೆ ಭಾಷೆಯ ಲಯ. ಸುಮ್ಮನೆ ಓದಿದರೆ ಸಾಧಾರಣವಾಗಿದೆಯಲ್ಲವೇ? ಕಷ್ಟದ ಕನ್ನಡವೇನಲ್ಲ ಎಂದೆನಿಸುತ್ತದೆ. ವೈದೇಹಿ ಅವರ ಕಥೆಗಳನ್ನು ಇಂಗ್ಲಿಷ್‌ಗೆ ಅನುವಾದಿಸುವುದು ಜಟಿಲವೆನಿಸಿತ್ತು. ಅವರ ಕಥೆಗಳಲ್ಲಿ ಕುಂದಾಪುರ ಕನ್ನಡದ ಶೈಲಿಯಿದೆ. ಇದಕ್ಕೆ ಹೋಲಿಸಿದರೆ ಜಯಂತ ಅವರ ಕಥೆಗಳಲ್ಲಿ ಸಾಧಾರಣ ಕನ್ನಡ ಇರುವಂತೆ ಕಾಣುತ್ತದೆ. ಅನುವಾದ ಕಷ್ಟವಲ್ಲ ಎಂದೆನಿಸಿತ್ತು. ಆದರೆ 'ಭಾಷೆಯ ಲಯ' ಕಷ್ಟವಾಯಿತು. ಈ ಸವಾಲನ್ನು ಸಮರ್ಪಕವಾಗಿ ಎದುರಿಸಿದ್ದೇನೆ ಎನಿಸುತ್ತಿದೆ.



ತೇಜಸ್ವಿನಿ ನಿರಂಜನ

ಜಯಂತ ಅವರ ಕಥೆಗಳಲ್ಲಿ ಪಾತ್ರಗಳು, ಜಾಗ, ಪರಿಸ್ಥಿತಿ ಎಲ್ಲವೂ ಸಾಧಾರಣ, ಸ್ಥಳೀಯವಾಗಿರುತ್ತವೆ. 'ನೋ ಪ್ರೆಸೆಂಟ್ಸ್ ಪ್ಲೀಸ್'ನಲ್ಲಿನ ಪಾತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಇದು ತಿಳಿಯುತ್ತದೆ. ಇದನ್ನು ಓದುತ್ತ ಹೋದರೆ ತೀರಾ ಸಾಧಾರಣವಾಗಿರುವ ಪಾತ್ರಗಳು ಏಕಾಏಕಿ ತುಂಬಾ ಅಸಾಧಾರಣವಾಗಿಬಿಡುತ್ತವೆ. ಇದನ್ನು ಇಂಗ್ಲಿಷ್‌ಗೆ ಹೇಗೆ ಅನುವಾದಿಸುವುದು ಎನ್ನುವುದು ಮತ್ತೊಂದು ಸವಾಲಾಗಿತ್ತು. ಒಂದೊಂದು ಪದ, ಒಂದೊಂದು ವಾಕ್ಯವನ್ನು ಅನುವಾದ ಮಾಡಿದರೆ ಖಂಡಿತವಾಗಿಯೂ ಇದನ್ನು ಕಟ್ಟಿಕೊಡಲು ಸಾಧ್ಯವಿರಲಿಲ್ಲ. 'ನೋ ಪ್ರೆಸೆಂಟ್ಸ್ ಪ್ಲೀಸ್' ಅನುವಾದ ಓದಿದವರು ಇದನ್ನು ಮೆಚ್ಚಿಕೊಂಡಿದ್ದಾರೆ. ಅವರಿಗೆ ಇದು ಅರ್ಥವಾಗಿದೆ. ಕಾಯ್ಕಿಣಿ ಅವರ ಬರವಣಿಗೆಯಲ್ಲಿ ಸಾಧಾರಣವಾಗಿರುವುದು ಹೇಗೆ ಅಸಾಧಾರಣವಾಗುತ್ತದೆ ಎನ್ನುವುದನ್ನು ನಾನು ಅನುವಾದದಲ್ಲಿ ಕಟ್ಟಿಕೊಟ್ಟಿದ್ದೇನೆ. 'ಇದು ಇಂಗ್ಲಿಷ್‌ನಲ್ಲೇ ಬರೆದ ಹಾಗಿದೆ' ಎಂದವರೂ ಇದ್ದಾರೆ. 'ಇಲ್ಲ ಇದು ಬೇರೆ ದೇಶದ್ದೇ ಅನಿಸುತ್ತದೆ. ಆದರೆ ಓದುವುದಕ್ಕೆ ಯಾವುದೇ ತೊಡಕಿಲ್ಲ' ಎಂದವರೂ ಇದ್ದಾರೆ.

ಕಥೆಗಳ ಶೀರ್ಷಿಕೆ ವಿಚಾರದಲ್ಲೂ ಜಯಂತ ಅವರ ಬಳಿ ಚರ್ಚಿಸಿದ್ದೆ. ಬಹುತೇಕ ಎಲ್ಲ ಕಥೆಗಳ ಶೀರ್ಷಿಕೆಯನ್ನು ಹಾಗೆಯೇ ಅನುವಾದ ಮಾಡಿದ್ದೇನೆ. 'ಅಮೃತ ಬಳ್ಳಿ ಕಷಾಯ' ಒಂದನ್ನು ಹೊರತುಪಡಿಸಿ. ಇದನ್ನು ಅನುವಾದ ಮಾಡುವ ಸಂದರ್ಭದಲ್ಲಿ 'ಅನ್‌ಫ್ರೇಮಡ್' ಎಂದು ಬದಲಾಯಿಸಿದೆ. ಸುಮಾರು 20 ವರ್ಷ ಹಿಂದೆ ನಾನು 'ಸೈಟಿಂಗ್ ಟ್ರಾನ್ಸ್‌ಲೇಷನ್' ಎಂಬ ಪುಸ್ತಕ ಬರೆದಿದ್ದೇನೆ. ಇದರಲ್ಲಿ 'ಟ್ರಾನ್ಸ್‌ಲೇಷನ್ ಥಿಯರಿ' ಬಗ್ಗೆ ಬರೆದಿದ್ದೇನೆ. ನಾನು ಅನುವಾದ ಮಾಡುವುದು ಎಲ್ಲರೂ ಮಾಡಿದಂತಲ್ಲ. ಅದರ ಬಗ್ಗೆ ಫಿಲೋಸಫಿ ಥಿಯರಿ ಬರೆದು ಅನುವಾದ ಮಾಡುತ್ತೇನೆ.

• ಮುಂಬೈ ವಾತಾವರಣವನ್ನು ಹತ್ತಿರದಿಂದ ಕಂಡಿದ್ದು, ಅನುಭವಿಸಿದ್ದು ಅನುವಾದಕ್ಕೆ ಸಹಾಯವಾಗಿದೆಯೇ?

ಸ್ನಾತಕೋತ್ತರ ಪದವಿ ಸಂದರ್ಭದಲ್ಲಿ ಮಾತ್ರವಲ್ಲದೆ ಬಹಳ ವರ್ಷ ನಾನು ಮುಂಬೈನಲ್ಲೇ ಕೆಲಸ ಮಾಡಿದ್ದೇನೆ. 15–20 ವರ್ಷದಿಂದ ಹೋಗಿ ಬರುವ ನಗರವದು. ಹೀಗಾಗಿ ಮುಂಬೈ ಚೆನ್ನಾಗಿ ಪರಿಚಯವಿದೆ. ಆದರೆ ನಗರದ ಪರಿಚಯವಷ್ಟೇ ಅನುವಾದಕ್ಕೆ ಸಹಾಯವಾಗುವುದಿಲ್ಲ. ಜಯಂತ ಹಾಗೂ ನನ್ನ ಆಲೋಚನಾ ರೀತಿಗೆ ಬಹಳ ಹೋಲಿಕೆ ಇದೆ. ಜಯಂತ ಅವರಿಗೆ ಮುಂಬೈ ಬಗ್ಗೆ ಹೆಚ್ಚಿನ ಪ್ರೀತಿ ಹಾಗೂ ಕುತೂಹಲವೂ ಇದೆ. ಅದೇ ರೀತಿ ನನಗೂ. ಮುಂಬೈ ಏನೋ ಒಂಥರಾ ವಿಚಿತ್ರವಾಗಿ ಕಂಡರೂ ಬಹಳ ಇಷ್ಟವಾಗುತ್ತದೆ. ಬೇರೆ ಬೇರೆ ಅವಧಿಯಲ್ಲಿ ನಾನೂ, ಅವರೂ ಮುಂಬೈನಲ್ಲಿದ್ದೆವು. ನಾವು ಒಳಗಿನವರು ಅನ್ನಿಸಿದರೂ ಹೊರಗಿನವರಲ್ಲವೇ? ಈ ಸಂಯೋಜನೆ ಒಂದು ರೀತಿ ಕುತೂಹಲಕಾರಿಯಾಗಿ ಕಾಣಿಸುತ್ತದೆ. ಹೀಗಾಗಿ ಇಬ್ಬರೂ ಮುಂಬೈಯನ್ನು ಬೇರೆ ರೀತಿಯೇ ನೋಡಿದ್ದೇವೆ.

• ಕನ್ನಡದಿಂದ ಇತರೆ ಭಾಷೆಗಳಿಗೆ ಅನುವಾದದ ಹೊರಹರಿವಿನ ಬಗ್ಗೆ ನಿಮ್ಮ ಅಭಿಪ್ರಾಯ?

ನಾನಿಲ್ಲಿ ಹೇಳುತ್ತಿರುವುದು ಅಭಿಪ್ರಾಯವಲ್ಲ. ಏಕೆಂದರೆ ನಾನು ಬಹಳ ವೃತ್ತಿಪರವಾಗಿ ಅನುವಾದ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿಲ್ಲ. ಸಾಮಾನ್ಯವಾಗಿ ಹೇಳುವುದಿದ್ದರೆ ಇದು ಸತ್ಯವೇ. ಕನ್ನಡ ಭಾಷೆಯಲ್ಲಷ್ಟೇ ಅಲ್ಲ, ಭಾರತದ ಇತರೆ ಭಾಷೆಗಳಲ್ಲೂ ಇದೇ ಕೊರಗಿದೆ. ಪ್ರಸ್ತುತ ಮಲಯಾಳಂನಿಂದ ಬಹಳಷ್ಟು ಕಥೆಗಳು, ಕೃತಿಗಳು ಅನುವಾದವಾಗಿ ಬರುತ್ತಿವೆ. ಮಲಯಾಳಂನಲ್ಲಿ ಹೊಸ ಬಗೆಯ ಕಾದಂಬರಿಗಳು ಪ್ರಕಟವಾಗುತ್ತಿದ್ದು, ಅನುವಾದಕರೂ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ನಮ್ಮಲ್ಲಿ ಅನುವಾದಕರ ಕೊರತೆ ಇದೆ. ಬೆರಳೆಣಿಕೆಯಷ್ಟೇ ಜನರಿದ್ದಾರೆ. ಕೆಲವೊಂದು ಕಥೆಗಳನ್ನು ಅನುವಾದ ಮಾಡಬಹುದು, ಕೆಲವೊಂದನ್ನು ಆಗುವುದಿಲ್ಲ. ಹೀಗಾಗಿ ಎಲ್ಲ ಭಾಷೆಗಳಲ್ಲೂ ಈ ಸಮಸ್ಯೆ ಇದೆ. ಕೆಲವು ಕೃತಿಗಳು ಅನುವಾದಕ್ಕೆ ಒಗ್ಗುತ್ತವೆ, ಕೆಲವು ಒಗ್ಗುವುದಿಲ್ಲ. ಅನುವಾದಕರ ಕೌಶಲ ಎಷ್ಟೇ ಇರಬಹುದು, ಕೆಲವೊಂದು ಕೃತಿಗಳು ಅನುವಾದಕ್ಕೆ ಸರಿಹೋಗುವುದಿಲ್ಲ. ಇಂಥವುಗಳಿಗೆ ಕೈಹಾಕಲು ಹೋಗಬಾರದು.

10ನೇ ಪುಟಕ್ಕೆ...


ಸೂರ್ಯನ ರಶ್ಮಿಯಿಂದ ಕೋಟೆಗೇ ಮುತ್ತು ಪೋಣಿಸಿದಂತೆ ಇಬ್ಬನಿಯ ಅಲಂಕಾರ

ನಗರ ಕೋಟೆಯಿಂದ ನೇಸರನ ನೋಟ...!

ಸೂರ್ಯನ ಹೊಂಗಿರಣಗಳು ಧರೆ ಸ್ಪರ್ಶಿಸಿದಾಗ ಅಕ್ಷರಶಃ ಭುವಿಗೇ ಮುತ್ತು ಪೋಣಿಸಿದಂತೆ ಹೊಳೆಯುತ್ತದೆ ಶಿವಮೊಗ್ಗದ ನಗರ ಕೋಟೆ. ಮಂಜು-ಮೋಡದ ಮುಸುಕಿನಾಟದಲ್ಲಿ ಹೊಸ ಲೋಕವೇ ಕಣ್ಣೆದುರು ತೆರೆದುಕೊಂಡಾಗ ನಿತ್ಯವೂ ಕಾಣುವ ಸೂರ್ಯೋದಯವೂ ಕೆಲ ಕ್ಷಣ ಅದ್ಭುತವಾಗಿ ಕಾಣಿಸಿಕೊಳ್ಳುತ್ತದೆ



ಕ್ಯಾಮೆರಾಗಾಗಿ ಸೂರ್ಯೋದಯವನ್ನು ಬೊಗಸೆಯಲ್ಲಿ ಹಿಡಿಯುವ ಜೋಡಿಯ ಪ್ರಯತ್ನ

ಸ್ವರೂಪಾನಂದ ಎಂ. ಕೊಟ್ಟೂರು

ಪ್ರವಾಸ

ಚುಮು ಚುಮು ಬೆಳಕು ಮೂಡುವ ಮುನ್ನ ನೀವು ಈ ಕೋಟೆಯ ಹೆಬ್ಬಾಗಿಲು ಪ್ರವೇಶಿಸಿರಬೇಕು. ಇತ್ತ ನೀವು ಕೋಟೆ ಒಳಗೆ ಹೆಜ್ಜೆ ಹಾಕುತ್ತಾ ಹೋದಂತೆ ಅತ್ತ ಪೂರ್ವ ದಿಕ್ಕಿನಲ್ಲಿ ರವಿಯು ಬೆಟ್ಟ, ಮೋಡಗಳ ದಾಟಿ ನಿಧಾನವಾಗಿ ಮೇಲೇಳುತ್ತಾನೆ. ಸೂರ್ಯನ ಹೊಂಗಿರಣಗಳು ಧರೆಗೆ ಮುತ್ತಿಕ್ಕುವ ಮುನ್ನ ಕೋಟೆಯ ಒಳಾಂಗಣ, ಕೋಟೆಯ ಮೇಲೆಲ್ಲ ಬೆಳೆದ ಹುಲ್ಲಿನ ಗರಿಗಳಿಗೆ ತಬ್ಬಿದ ಇಬ್ಬನಿಯು ಇಡೀ ಕೋಟೆಗೆ ಅಕ್ಷರಶಃ ಮುತ್ತು ಪೋಣಿಸಿ, ಅಲಂಕರಿಸದಂತೆ ಕಂಗೊಳಿಸುತ್ತದೆ. ಅದನ್ನೆಲ್ಲ ಹಾಗೇ ಕಣ್ಣು ತುಂಬಿಕೊಳ್ಳುತ್ತಾ ಹಚ್ಚಹಸಿರ ಹುಲ್ಲು ಹೊದಿಕೆಯ ಹಾದಿ ಸವೆಸಿ, ಕೋಟೆಯ ವೀಕ್ಷಣಾ ಗೋಪುರ ತಲುಪಿ ಪೂರ್ವ ದಿಕ್ಕಿಗೆ ಮುಖ ಮಾಡುವಷ್ಟರಲ್ಲಿ ಸೊಗಸಾದ ಸೂರ್ಯೋದಯ ಸವಿಯುವ ಸುವರ್ಣಾವಕಾಶ ಸಿಗುತ್ತದೆ! ರವಿಯ ಹೊಂಬಣ್ಣದ ಬೆಡಗಿಗೆ, ಹೊಂಗಿರಣಕ್ಕೆ ನಿರ್ಲಕ್ಷಿತ ಕೋಟೆ ಮಿರ ಮಿರ ಮಿಂಚಿ, ಜೀವ ಕಳೆ ಕಟ್ಟಿಕೊಂಡು ನಮ್ಮ ಅಷ್ಟೂ ಲಕ್ಷ್ಯ ಗಳಿಸಿಬಿಡುತ್ತದೆ! ರವಿಯ ಆ ಪ್ರಥಮ ಕಿರಣಗಳಂತೂ ಮೈಮನ ಪುಳಕಿತಗೊಳಿಸಿ ಕೋಟೆಯೊಳಗೆ ನಮ್ಮನ್ನು ಬಂಧಿ ಆಗಿಸಿ ಬಿಡುತ್ತವೆ. ಬೆಳಕು ಸಂಪೂರ್ಣವಾಗಿ ಹರಿಯುವಷ್ಟರಲ್ಲಿ ಅಂತಿಮವಾಗಿ ಸೂರ್ಯೋದಯವನ್ನು ಕಣ್ಣು ತುಂಬಿಕೊಳ್ಳಲು ಇದಕ್ಕಿಂತ ಸುಲಭ ಮತ್ತು ಪ್ರಶಸ್ತ ತಾಣ ಮತ್ತೊಂದಿಲ್ಲವೆಂದು ಅರಿವಿಗೆ ಬರುತ್ತದೆ. ಹೌದು, ಕೋಟೆ ಪ್ರವೇಶಿಸಿ ಕೆಲವೇ ನಿಮಿಷಗಳಲ್ಲಿ ಅದು ನಿರಾಯಸವಾಗಿ ಸೂರ್ಯೋದವನ್ನು ಕಣ್ಣು ತುಂಬಿಕೊಳ್ಳುವ ವಿಶೇಷ ಅವಕಾಶ ಇರುವುದು ಈ ಕೋಟೆಯ ಗರಿಮೆಯೇ ಸರಿ!

ಶಿವಮೊಗ್ಗ ಜಿಲ್ಲೆಯ ನಗರ ಕೋಟೆಯನ್ನು (ಬಿದನೂರು)ಅದರ ಇತಿಹಾಸ ಮತ್ತು ಕೋಟೆಯ ರಚನೆಯಿಂದ ಪ್ರವಾಸಿಗರು ನೋಡುವುದು, ಅಭ್ಯಾಸಿಸುವುದೇ ಹೆಚ್ಚು. ಆದರೆ ಇದು


ನಗರ ಕೋಟೆಯ ಮುಖ್ಯದ್ವಾರ

ಸೂರ್ಯೋದಯ ವೀಕ್ಷಣೆಗೆ ಹೇಳಿ ಮಾಡಿಸಿದಂತಹ ತಾಣವೂ ಹೌದು ಎನ್ನುವುದು ಹಲವರಿಗೆ ಗೊತ್ತಿಲ್ಲ! ನೀವು ಕೋಟೆಯ ತುತ್ತ ತುದಿಯಲ್ಲಿ ಮಾತ್ರವಲ್ಲ ಕೋಟೆಯ ಯಾವುದೇ ಭಾಗದ ದಿನ್ನೆಯಿಂದ ಸೂರ್ಯೋದಯ ಮತ್ತು ಅದು ಕೋಟೆಯ ಆವರಣದಲ್ಲಿ ಸೃಷ್ಟಿಸುವ ಸೊಬಗಿನ ರಮಣೀಯ ದೃಶ್ಯವನ್ನು ಕಾಣಬಹುದು. ಇದು ಕೋಟೆ ವೀಕ್ಷಕರಿಗೆ ಬೋನಸ್! ಹೌದು, ಕೋಟೆಯ ಯಾವುದೇ ಕಡೆಯಿಂದ ಸುರ್ಯೋದಯವನ್ನು ನೋಡಿದರೂ ಪ್ರತಿ ನೋಟ ವಿಶೇಷ ಮತ್ತು ವಿಶಿಷ್ಟವಾಗಿಯೇ ಇರುತ್ತದೆ. ಆ ಮೂಲಕ ಇಲ್ಲಿ ಸೂರ್ಯನ ಹುಟ್ಟು, ಅದು ಕೋಟೆಯ ಮೇಲೆ ಮೂಡಿಸುವ ಛಾಪು ಮಾತ್ರ ಅನನ್ಯ ಮತ್ತು ಅಗಾಧವೇ ಆಗಿರುವುದು ವಿಶೇಷ.

ಬೆಳಕು ಮೂಡುವವರೆಗೆ ಇಡೀ ಕೋಟೆ ಪ್ರದೇಶವನ್ನು ಆಕ್ರಮಿಸಿದ್ದ ದಟ್ಟವಾದ ಮಂಜನ್ನು ರವಿಯು ತನ್ನ ಹುಟ್ಟಿನಿಂದ ಓಡಿಸುತ್ತಿರುವಂತೆ ಭಾಸವಾಗುತ್ತದೆ. ಅಲ್ಲಿಯವರೆಗೆ ಅಸ್ಪಷ್ಟವಾಗಿ ಕಾಣುತ್ತಿದ್ದ ಕೋಟೆ, ಅದರ ಸೌಂದರ್ಯ, ಸುತ್ತಲಿನ ಪರಿಸರ ಸ್ಪಷ್ಟವಾಗಿ ಗೋಚರಿಸಲು ಶುರುವಾಗುತ್ತದೆ. ಹೀಗೆ ಮಂಜಿನ ಪ್ರಭಾವ ತಗ್ಗಿ ನೇಸರನ ಆಧಿಪತ್ಯ ಹೆಚ್ಚುತ್ತಾ ಹೋದಂತೆ ಕೋಟೆ ಪ್ರದೇಶದಲ್ಲಿ ಆಗುವ ಸೂಕ್ಷ್ಮ ಬದಲಾವಣೆ, ಆಗುವ ಅದ್ವಿತಿಯ ಸೌಂದರ್ಯವನ್ನು ನೋಡಿಯೇ ಅನುಭವಿಸಬೇಕು. ರವಿ ಸೃಷ್ಟಿಸುವ ರಮ್ಯತೆ ಪಾಚಿ ಗಟ್ಟಿದ ಇಡೀ ಕೋಟೆಗೆ ಹೊಸ ಹೊಳಪು, ವಿಶೇಷ ಮೆರುಗು ನೀಡುತ್ತವೆ. ಸೂರ್ಯೋದಯದಿಂದ ಪರಿಸರದಲ್ಲಿ ಆಗುವ ಚಮತ್ಕಾರಗಳನ್ನು ಕಣ್ಣು ತುಂಬಿಕೊಳ್ಳುತ್ತಲೇ ಕೋಟೆ ಸುತ್ತಲೂ ಕಣ್ಣಾಯಿಸಿದರೆ ತುಂಬಿ ತುಳುಕುವ ಹತ್ತಾರು ನೀರಿನ ಮೂಲಗಳು, ಹಚ್ಚಹಸಿರು, ಹೊಲ-ಗದ್ದೆಗಳು, ಮಂಜು ಮತ್ತು ಮೋಡಗಳ ಮೇಲಾಟ ಮೂಕವಿಸ್ಮಿತಗೊಳಿಸುತ್ತದೆ. ಸೂರ್ಯನ ಈ ಅಸಾಧಾರಣ ಕೈಚಳಕಕ್ಕೆ ನಮ್ಮಿಂದ 'ವಾಹ್' ಎನ್ನುವ ಉದ್ಗಾರ ಅಪ್ರಯತ್ನಪೂರ್ವವಾಗಿ ಹೊರ ಹೊಮ್ಮದೇ ಇರದು!.

ಸೂರ್ಯನ ಹೂ ಬಿಸಿಲಿಗೆ ಮೈಮನ ತೆರೆದುಕೊಂಡು ಉದಯಿಸುವ ಸೂರ್ಯ, ಹೊಂಗಿರಣಗಳ ಹೊಳಪು ಝಳಪಿನೊಂದಿಗೆ ಕಂಗೊಳಿಸುವ ಕೋಟೆಯ ಚೆಲುವು, ಮಂಜು ಹೊದ್ದು ಮಲಗಿದ ಊರು, ಹೊಲ ಗದ್ದೆಗಳು ಆಗಷ್ಟೆ ಮೈಮುರಿದು ಎದ್ದೇಳುವ ಪರಿ, ಹಕ್ಕಿಗಳ ಚಿಲಿಪಿಲಿ ಕಲರವ.. ಎಲ್ಲವೂ ಸೂರ್ಯೋದಯ ಹೊತ್ತಲ್ಲಿ ಇಲ್ಲಿಂದ ಆಸ್ವಾದಿಸುವುದೇ ಒಂದು ಅವಿಸ್ಮರಣೀಯ ಅನುಭವ. ಒಟ್ಟಾರೆ ಇಲ್ಲಿಂದ ಸೂರ್ಯನ ಬಿಂಬವು ಕ್ಷಿತಿಜವನ್ನು ದಾಟುವ ರೀತಿಯೇ ಒಂದು ರೋಮಾಂಚನಕಾರಿ ದೃಶ್ಯ. 'ಇಲ್ಲಿ ಸೂರ್ಯ ಹುಟ್ಟುವ ಪ್ರತಿ ಕ್ಷಣ ಕಣ್ಣಿಗೆ ಹಬ್ಬ, ಮನಸ್ಸಿಗೆ ಮುದ ನೀಡುತ್ತದೆ. ಈ ಮಾರ್ಗದಲ್ಲಿ ನಾವು ಹೋದಾಗಲೆಲ್ಲ ಈ ಕೋಟೆಗೆ ಅದರಲ್ಲೂ ಮುಂಜಾನೆ ಮತ್ತು ಸಂಜೆಯ ವೇಳೆಯೇ ಸಮಯ ಹೊಂದಿಸಿಕೊಂಡು ಭೇಟಿ ಕೊಡುತ್ತೇವೆ. ಬೆಳಗಿನಷ್ಟೇ ಸೂರ್ಯಾಸ್ತದ ವೀಕ್ಷಣೆಯೂ ಅದ್ಭುತವಾಗಿ ಇರುತ್ತದೆ. ಅದರಲ್ಲೂ ವಿಶೇಷವಾಗಿ ಮಳೆಗಾಲದ ಈ ದಿನಗಳಲ್ಲಿ ಸೂರ್ಯೋದಯದ ವೀಕ್ಷಣೆ ಹೆಚ್ಚು ಅಹ್ಲಾದಕರ, ಅತೀವ ಸಂತೋಷ, ಸಂತೃಪ್ತಿ ನೀಡುತ್ತದೆ..' ಎನ್ನುತ್ತಾರೆ ಪ್ರವಾಸಿಗರಾದ ಚಿತ್ರದುರ್ಗದ ಅನುಷಾ, ಚಂದ್ರು ದಂಪತಿ.




ಸೂರ್ಯೋದಯ ಸಮಯದಲ್ಲಿ ಕೋಟೆಯ ಹೊರ ನೋಟ

ನಿಮಗೇಕೆ ಕೊಡಬೇಕು ಕಪ್ಪ?

8ನೇ ಪುಟದಿಂದ...

ನಮ್ಮಿಬ್ಬರ ಮಾತುಗಳನ್ನು ಶಾಂತವಾಗಿ ಕೇಳುತ್ತ ಕುಳಿತಿದ್ದ ನರೇಂದ್ರ ಪ್ರಸಾದ ಈಗ ಬಾಯಿ ಹಾಕಿದರು. 'ನಿಮ್ಮಿಬ್ಬರ ಮಾತುಗಳನ್ನು ಕೇಳಿದೆ. ನಮಗೆ ಹಿಂದಿ ಭಾಷೆಯವರಿಗೆ ಕಿತ್ತೂರು ಚನ್ನಮ್ಮನಾಗಲಿ ಅಥವಾ ವೀರಪಾಂಡ್ಯನ್ ಆಗಲಿ ಗೊತ್ತೇ ಇರಲಿಲ್ಲ. ಆದರೆ ಇತ್ತೀಚಿಗೆ ಒಂದೈದು ಆರು ವರ್ಷಗಳಿಂದ ಛತ್ತೀಸಗಡದ ಮತ್ತು ಉತ್ತರ ಪ್ರದೇಶದ ಏಳನೆಯ ತರಗತಿಯ ವಿದ್ಯಾರ್ಥಿಗಳಿಗೆ ಈ ವೀರಪಾಂಡ್ಯ ಮತ್ತು ಚನ್ನಮ್ಮಳ ಇತಿಹಾಸವನ್ನು ಒಂದು ಪಾಠವನ್ನಾಗಿ ಕಲಿಸಲಾಗುತ್ತಿದೆ. ಅದರಲ್ಲಿ ನೀವು ಹೇಳಿದ ಮಾತುಗಳೂ ಇವೆ. ಅಚ್ಚರಿಯ ವಿಷಯವೆಂದರೆ ಒಂದೇ ಪಾಠದಲ್ಲಿ ಈ ಇಬ್ಬರೂ ಮಹಾನ್ ಕ್ರಾಂತಿಕಾರರನ್ನು ಅವರ ಇತಿಹಾಸದ ಜೊತೆಗೆ ಪರಿಚಯಿಸಲಾಗಿದೆ' ಎಂದರು. ಅವರು ಹೇಳಿದ್ದು ಕೇಳಿ ನಾನು ಮತ್ತು ನಟರಾಜನ್ ಇಬ್ಬರೂ 'ಆ' ಎಂದು ಬಾಯಿ ತೆರೆದೆವು. ಇದು ನಮಗೆ ಹೊಸ ವಿಷಯವಾಗಿತ್ತು.

ನರೇಂದ್ರ ಪ್ರಸಾದ ಯಾರಿಗೋ ಫೋನ್ ಮಾಡಿ ವಾಟ್ಸ್ಆ್ಯಪ್‌ನಲ್ಲಿ ಪಠ್ಯದ ಪುಟಗಳನ್ನು ತರಿಸಿದರು. ಈ ಪಾಠದಲ್ಲಿ ವೀರಪಾಂಡ್ಯನ್ ಬಗೆಗೆ ಹಾಗೂ ಚನ್ನಮ್ಮನ ಬಗ್ಗೆ ವಿವರವಾದ ಮಾಹಿತಿಯನ್ನು ನೀಡಲಾಗಿದೆ. ಚನ್ನಮ್ಮನ ಇತಿಹಾಸದ ಬಗ್ಗೆ ಅಭಿನಯಿಸಿದ ಒಂದು ಸ್ಕಿಟ್ ಫೋಟೋವನ್ನು ಇದರಲ್ಲಿ ಸೇರಿಸಲಾಗಿದೆ. ಚನ್ನಮ್ಮನ ಹೋರಾಟದ ಕಥೆಯನ್ನು ಹಿಂದಿ ಪ್ರಭಾವವಿರುವ ರಾಜ್ಯದ ವಿದ್ಯಾರ್ಥಿಗಳು ಓದುತ್ತಿರುವುದನ್ನು ನೋಡಿ ಮೈ ರೋಮಾಂಚನಗೊಂಡಿತು.

ವೀರಪಾಂಡ್ಯ ಮತ್ತು ಕಿತ್ತೂರು ಚನ್ನಮ್ಮ ಈ ಇಬ್ಬರ ಕಥೆಗಳಲ್ಲಿ ಬರುವ ಸಂಭಾಷಣೆಯು ಅದ್ಹೇಗೆ ಒಂದೇ ರೀತಿಯಲ್ಲಿದೆಂದು ಮನಸ್ಸು ಬುದ್ಧಿಗೆ ಪ್ರಶ್ನಿಸುತ್ತಿತ್ತು. ಆಗ ತಕ್ಷಣ ಹೊಳೆದಿದ್ದೇನೆಂದರೆ - ಚನ್ನಮ್ಮನ ಈ ಸಂಭಾಷಣೆ ಇದ್ದದ್ದು 'ಕಿತ್ತೂರು ಚನ್ನಮ್ಮ' ಚಿತ್ರದಲ್ಲಿ. ಕಿತ್ತೂರಿನ ರಾಣಿಯಾಗಿ ಅಭಿನಯಿಸಿದ ಬಿ. ಸರೋಜಾದೇವಿ ಈ ಸಂಭಾಷಣೆಯನ್ನು ಅತ್ಯಂತ ಪ್ರಭಾವಿಯಾಗಿ ಚಿತ್ರದಲ್ಲಿ ಸಾದರಪಡಿಸಿದ್ದರು. ಈ ಚಿತ್ರವನ್ನು ಬಿ. ಆರ್. ಪಂತುಲುರವರು ನಿರ್ಮಿಸಿ ಅವರೇ ನಿರ್ದೇಶಿಸಿದ್ದರು. ಸಂಭಾಷಣೆಯನ್ನು ಜಿ.ವಿ. ಅಯ್ಯರ್ ಬರೆದಿದ್ದರು. ಚಿತ್ರವು ಗಲ್ಲಾಪೆಟ್ಟಿಗೆಯನ್ನು ಸೂರು ಹೊಡೆದಿತ್ತು.

ತಮಿಳಿನಲ್ಲಿ ಇದೇ ಬಿ. ಆರ್. ಪಂತುಲು 'ವೀರಪಾಂಡ್ಯ ಕಟ್ಟಬೊಮ್ಮನ್' ಚಿತ್ರ ತೆಗೆದಿದ್ದರು. ವೀರಪಾಂಡ್ಯನಾಗಿ ಶಿವಾಜಿ ಗಣೇಶನ್ ಅಭಿನಯಿಸಿದ್ದರು. ಈ ಚಿತ್ರವೂ ಪ್ರಚಂಡ ಯಶಸ್ವಿಯಾಗಿ ಬಾಕ್ಸ್ ಆಫೀಸನ್ನು ಲೂಟಿ ಮಾಡಿದ್ದಿತು. ಈ



ಚಿತ್ರಕ್ಕೆ ಸಂಭಾಷಣೆ ಬರೆದವರು ಶಕ್ತಿ ಡಿ.ಕೆ. ಕೃಷ್ಣಸ್ವಾಮಿ ಮತ್ತು ಕೆ.ಎಂ. ಬಾಲಸುಬ್ರಹ್ಮಣ್ಯಂ ಅವರುಗಳು. ಕಿತ್ತೂರು ಚನ್ನಮ್ಮ ಚಿತ್ರದಲ್ಲಿರುವ 'ಕಪ್ಪ ಕೊಡಬೇಕಾ ಕಪ್ಪ?' ಸಂಭಾಷಣೆಯನ್ನು ಯಥಾವತ್ತಾಗಿ ಈ ಚಿತ್ರದಲ್ಲಿ ಹೈಜಾಕ್ ಮಾಡಲಾಗಿದ್ದಿತು. ಕನ್ನಡದಲ್ಲಿಯ 'ಕಿತ್ತೂರು ಚನ್ನಮ್ಮ'ದಲ್ಲಿ ಬಿ. ಸರೋಜಾದೇವಿ ಈ ಸಂಭಾಷಣೆ ಹೇಳಿದ್ದರೆ, ತಮಿಳಿನ 'ವೀರಪಾಂಡ್ಯ ಕಟ್ಟಬೊಮ್ಮನ್'ದಲ್ಲಿ ಶಿವಾಜಿ ಗಣೇಶನ್ ಈ ಸಂಭಾಷಣೆ ಹೇಳಿದ್ದರು. ಎರಡೂ ಭಾಷೆಗಳ ಚಿತ್ರಗಳ ಈ ಸಂಭಾಷಣೆ ಜನರ ನಾಲಿಗೆಯ ಮೇಲೆ ಈಗಲೂ ಕುಣಿದಾಡುತ್ತದೆ.

ಚನ್ನಮ್ಮ ಬ್ರಿಟಿಷರ ಜೊತೆಗೆ ಯುದ್ಧ ಮಾಡಿ 197 ವರ್ಷಗಳಾಗಿವೆ. ವೀರಪಾಂಡ್ಯ ಯುದ್ಧ ಮಾಡಿ 222 ವರ್ಷಗಳಾಗಿವೆ. ವೀರಪಾಂಡ್ಯನನ್ನು ಗಲ್ಲಿಗೆ ಹಾಕಲಾಗಿದ್ದರೆ ಚನ್ನಮ್ಮ ಜೈಲಿನಲ್ಲಿ ಬಂಧಿಯಾಗಿ ಅಲ್ಲಿಯೇ ಸಾಯಬೇಕಾಯಿತು. ಆದರೆ ಇವರಿಬ್ಬರ ನಡುವೆ ಹರಿಯುವ ಸ್ವಾಭಿಮಾನದ ಅಸ್ಮಿತೆಯ ರಕ್ತ ಒಂದೇ ತೆರನಾಗಿತ್ತು. ಅದಕ್ಕಾಗಿಯೇ ವೀರಪಾಂಡ್ಯ 'ನಿಮಗೇಕೆ ಕೊಡಬೇಕು ಕಪ್ಪ?' ಎಂದು ಕೇಳಿದ್ದ. ಇದೇ ಮಾತುಗಳನ್ನು ಚನ್ನಮ್ಮಳೂ 'ನೀವೇನು ನಮ್ಮ ಒಡಹುಟ್ಟಿದವರಾ? ಅಣ್ಣ ತಮ್ಮಂದಿರಾ? ನೆಂಟರೇ? ಇಷ್ಟರೇ? ದಾಯಾದಿಗಳೇ? ನಿಮಗೇಕೆ ಕೊಡಬೇಕು ಕಪ್ಪ?' ಎಂದು ಗರ್ಜಿಸಿ ಬ್ರಿಟಿಷರ ನೀರು ಇಳಿಸಿದ್ದಳು.

ಮುನ್ನೋಟ 24-10-2021 ರಿಂದ 30-10-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಉದ್ಯೋಗ ಆಕಾಂಕ್ಷಿಗಳಿಗೆ ಶುಭವಾರ್ತೆ ಕೇಳಿಬರಬಹುದು. ಆದಾಯದಲ್ಲಿ ತಕ್ಕಮಟ್ಟಿನ ಹೆಚ್ಚಳವನ್ನು ಕಂಡು ಆರ್ಥಿಕ ವಿಷಯದಲ್ಲಿ ಸುಧಾರಣೆಯನ್ನು ಕಾಣಬಹುದು. ಸ್ತ್ರೀ ವರ್ಗದವರು ಸಂತೋಷದಿಂದ ಶುಭ ಸಮಾರಂಭಗಳಲ್ಲಿ ಭಾಗವಹಿಸುವ ಅವಕಾಶಗಳಿವೆ. ಅನಗತ್ಯ ಸಿಟ್ಟಿನಿಂದ ವ್ಯವಹಾರಗಳಲ್ಲಿ ನಷ್ಟ ಉಂಟಾಗಬಹುದು. ಆದ್ದರಿಂದ ಶಾಂತಿ ಸಮಾಧಾನದಿಂದ ವರ್ತಿಸುವುದು ಒಳ್ಳೆಯದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಯಾವುದೇ ವಿಷಯಗಳಲ್ಲಿ ದುಗುಡಕ್ಕೆ ಎಡೆಮಾಡಿಕೊಡುವುದು ಬೇಡ. ತಾಳ್ಮೆಯೂ ಬಹಳ ನೆಮ್ಮದಿಗೆ ಕಾರಣವಾಗುವುದು. ವ್ಯವಹಾರಗಳಲ್ಲಿ ಸ್ವಲ್ಪಮಟ್ಟಿನ ಚೇತರಿಕೆಯನ್ನು ಕಾಣಬಹುದು. ನೀವು ಕೈಗೊಂಡಿರುವ ಕೆಲಸ ಕಾರ್ಯಗಳು ನಿಧಾನವಾದರೂ ಪೂರ್ಣಗೊಳ್ಳುತ್ತವೆ. ಹಿರಿಯರ ಸಲಹೆಯಿಂದ ಹೊಸ ಆದಾಯದ ಮೂಲಗಳು ಗೋಚರವಾಗುತ್ತವೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಸ್ನೇಹಿತರ ಸಹಕಾರದಿಂದ ನಿಮ್ಮ ಕಾರ್ಯಸಾಧನೆ ಅತ್ಯಂತ ಯಶಸ್ವಿಯಾಗಿ ಆಗುವುದು. ಭೂವಿವಾದಗಳಲ್ಲಿ ಸಿಲುಕಿಕೊಳ್ಳುವ ಸಾಧ್ಯತೆ ಇದೆ. ಆದ್ದರಿಂದ ಈ ರೀತಿಯ ವ್ಯವಹಾರಗಳಲ್ಲಿ ಸಾಕಷ್ಟು ಎಚ್ಚರಿಕೆ ವಹಿಸಿರಿ. ಆಕಸ್ಮಿಕ ಧನಪ್ರಾಪ್ತಿಯನ್ನು ನಿರೀಕ್ಷಿಸಬಹುದು. ಮಹಿಳೆಯರಿಗೆ ಸಾಮಾಜಿಕ ಕಾರ್ಯಗಳಲ್ಲಿ ಪಾಲ್ಗೊಳ್ಳುವ ಯೋಗವಿದೆ. ಸಂಗಾತಿಯ ಕಡೆಯವರಿಂದ ಕಾವೇರಿದ ಮಾತುಗಳನ್ನು ಕೇಳಬೇಕಾಗಬಹುದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ವಿದ್ಯಾರ್ಥಿಗಳು ಅಧ್ಯಯನದಲ್ಲಿ ಸಾಕಷ್ಟು ಮುನ್ನಡೆಯನ್ನು ಕಾಣಬಹುದು. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹೆಚ್ಚು ಹಣ ಹೊಂದಿಸಬೇಕಾಗಬಹುದು. ಕೆಲವು ರೀತಿಯ ರಾಸಾಯನಿಕ ಪದಾರ್ಥಗಳನ್ನು ತಯಾರಿಸಿ ಮಾರುವವರಿಗೆ ವ್ಯಾಪಾರ ವಿಸ್ತರಿಸುವುದರ ಜೊತೆಗೆ ಲಾಭವಿರುತ್ತದೆ. ವಸ್ತ್ರ ವ್ಯಾಪಾರಿಗಳಿಗೆ ವ್ಯಾಪಾರ ಹೆಚ್ಚಾಗಿ ಆದಾಯವೂ ಹೆಚ್ಚುತ್ತದೆ. ವಾಹನ ಚಾಲನೆ ವೇಳೆ ಎಚ್ಚರಿಕೆ ವಹಿಸಿರಿ.

ಸಿಂಹ — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ನಿಮ್ಮ ಕೆಲಸಕಾರ್ಯಗಳಿಗೆ ಇದ್ದ ಅಡ್ಡಿ ಆತಂಕಗಳು ನಿವಾರಣೆಯಾಗುತ್ತವೆ. ಸಮಸ್ಯೆಗಳನ್ನು ಎದುರಿಸುವ ಆತ್ಮವಿಶ್ವಾಸ ನಿಮ್ಮಲ್ಲಿ ಜಾಗೃತಿ ಆಗುತ್ತದೆ. ಕೆಲವು ಸರ್ಕಾರಿ ಹಿರಿಯ ಅಧಿಕಾರಿಗಳಿಗೆ ಅಧೀನ ಸಹೋದ್ಯೋಗಿಗಳಿಂದ ಕಿರುಕುಳ ಆಗಬಹುದು. ಬೆಲೆಬಾಳುವ ದಾಖಲೆಗಳನ್ನು ಜೋಪಾನ ಮಾಡಿರಿ. ಅದರಲ್ಲೂ ತಿಜೋರಿಗಳನ್ನು ನೋಡಿಕೊಳ್ಳುವವರು ಬಹಳ ಎಚ್ಚರವಹಿಸಿರಿ.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ನಿವೇಶನ ಖರೀದಿಗಾಗಿ ಮಾಡಿದ್ದ ಯತ್ನಗಳು ಫಲ ಕೊಡುತ್ತವೆ. ಬಂಧುಗಳಿಂದ ಸಾಕಷ್ಟು ಸಹಾಯ ಈ ವಿಚಾರದಲ್ಲಿ ದೊರೆಯುತ್ತದೆ. ವ್ಯವಹಾರಗಳಲ್ಲಿ ವರ್ತಮಾನದ ವಿಷಯಗಳನ್ನು ಅವಲೋಕನ ಮಾಡಿ ಕಾರ್ಯಮಗ್ನರಾಗುವುದು ಒಳಿತು. ಹಣದ ಒಳಹರಿವು ನಿಮ್ಮ ನಿರೀಕ್ಷೆಗಿಂತ ತುಸು ಹೆಚ್ಚಿರುತ್ತದೆ. ಪಾರಂಪರಿಕ ಆಹಾರ ವಸ್ತುಗಳನ್ನು ಮಾಡುವವರಿಗೆ ಬೇಡಿಕೆ ಹೆಚ್ಚುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3
ದಾಯಾದಿಗಳ ನಡುವಿನ ವೈಮನಸ್ಯ ದೂರವಾಗುತ್ತದೆ. ಜನಪ್ರತಿನಿಧಿಗಳಿಗೆ ಸಾರ್ವಜನಿಕರಿಂದ ಕಿರಿಕಿರಿಯಾಗುವ ಸಂದರ್ಭವಿದೆ. ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಹಣ ದುರ್ಬಳಕೆ ಮಾಡಿದ ಆಪಾದನೆ ಎದುರಾಗಬಹುದು. ಆಸ್ತಿ ದಾಖಲಾತಿಗಳನ್ನು ಈಗ ಸರಿ ಮಾಡಿಕೊಳ್ಳಬಹುದು. ನಿಮ್ಮ ಗುಪ್ತ ಆಸ್ತಿಗಳ ದಾಖಲೆಗಳನ್ನು ಸರಿಯಾಗಿ ಕಾಪಾಡಿಕೊಳ್ಳಿ.

ವೃಶ್ಚಿಕ — ವಿಶಾಖೆ 4 ಅನೂರಾಧ, ಜ್ಯೇಷ್ಠ
ಕೆಲವು ಸರ್ಕಾರಿ ನೌಕರರಿಗೆ ಬಿಡುವಿಲ್ಲದ ತಿರುಗಾಟವಿರುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಸಾಧನೆಗೆ ಅನುಕೂಲಕರವಾದ ವಾತಾವರಣವಿರುತ್ತದೆ. ಬಡ್ಡಿ ವ್ಯವಹಾರಸ್ಥರಿಗೆ ಸಾಧಾರಣ ಲಾಭವಿರುತ್ತದೆ. ನೈತಿಕ ಬಲದಿಂದ ಸುತ್ತಮುತ್ತ ಉತ್ತಮ ವಾತಾವರಣವನ್ನು ಸೃಷ್ಟಿ ಮಾಡುವಿರಿ.


ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1
ಪೊಲೀಸ್ ಉದ್ಯೋಗದಲ್ಲಿರುವವರು ಶಿಸ್ತು ಸಂಯಮವನ್ನು ಕಾಪಾಡಿಕೊಳ್ಳುವುದು ಬಹಳ ಮುಖ್ಯವಾಗುತ್ತದೆ. ವ್ಯಾಪಾರ-ವ್ಯವಹಾರಗಳಲ್ಲಿ ನಿಧಾನಗತಿಯ ಪ್ರಗತಿ ಇರುತ್ತದೆ. ಸ್ನಾಯುಸೆಳೆತ ಸ್ವಲ್ಪ ಬಾಧಿಸಬಹುದು. ಹಿರಿಯರು ಮಾತನಾಡುವಾಗ ಸ್ವಲ್ಪ ಎಚ್ಚರವಿರಲಿ. ಆಡುವ ಮಾತು ಅವರಿಗೆ ತಿರುಗುಬಾಣವಾಗುವ ಸಾಧ್ಯತೆಗಳಿವೆ. ಹಣಕಾಸಿನ ವಿಚಾರದಲ್ಲಿ ಸ್ವಲ್ಪ ಪ್ರಗತಿಯನ್ನು ಕಾಣಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಮನೆಯಲ್ಲಿ ಶುಭಕಾರ್ಯಗಳು ನಡೆಯುವ ಲಕ್ಷಣಗಳಿವೆ. ಭೂ ವ್ಯವಹಾರದಲ್ಲಿ ಹೆಚ್ಚಿನ ಲಾಭವನ್ನು ನಿರೀಕ್ಷಿಸಬಹುದು. ನಿಮ್ಮ ಸಾಲಗಳನ್ನು ತೀರಿಸಲು ಹಲವು ಮಾರ್ಗಗಳು ದೊರೆಯುತ್ತವೆ. ದ್ವಿದಳ ಧಾನ್ಯಗಳ ವ್ಯಾಪಾರಿಗಳಿಗೆ ವ್ಯವಹಾರ ಹೆಚ್ಚುತ್ತದೆ. ಅದರಲ್ಲೂ ತೊಗರಿ, ಕಡಲೆ ಮುಂತಾದ ಧಾನ್ಯಗಳಿಂದ ಹೆಚ್ಚು ಲಾಭವಿರುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಪತ್ರಕರ್ತರಿಗೆ ಸುದ್ದಿ ಸಂಗ್ರಹಕ್ಕೆ ಅತಿಯಾದ ಉತ್ಸಾಹ ಬಂದು ವಾದವಿವಾದಗಳಿಗೆ ಕಾರಣವಾಗಬಹುದು. ಅಪಾಯಕಾರಿ ಕೆಲಸಗಳನ್ನು ಮಾಡುವವರು ಎಚ್ಚರ ವಹಿಸುವುದು ಒಳ್ಳೆಯದು. ಅನುಭವಿ ಕ್ರೀಡಾಪಟುಗಳಿಂದ ನೂತನ ಕ್ರೀಡಾಪಟುಗಳಿಗೆ ಉತ್ತಮ ಸಲಹೆ ದೊರೆಯುತ್ತದೆ. ಹಣದ ಒಳಹರಿವಿನಲ್ಲಿ ಮಂದಗತಿ ಇರುತ್ತದೆ. ವಿದ್ಯಾರ್ಥಿಗಳು ಅಧ್ಯಯನಕ್ಕಾಗಿ ಹೆಚ್ಚಿನ ಶ್ರಮ ಹಾಕಬೇಕಾದ ಅನಿವಾರ್ಯತೆ ಇದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಮಕ್ಕಳೊಂದಿಗೆ ಬೆರೆತು ಸಂತಸದ ದಿನವನ್ನಾಗಿ ಕಳೆಯುವಿರಿ. ವಿಶೇಷವಾಗಿ ಮಹಿಳೆಯರು ತಮ್ಮ ಆರೋಗ್ಯದ ಬಗ್ಗೆ ಎಚ್ಚರ ವಹಿಸಿರಿ. ಸಾಲದ ವ್ಯವಹಾರಗಳಲ್ಲಿ ಮೋಸ ಹೋಗುವ ಸಾಧ್ಯತೆಯಿದೆ. ಬಂಧುವರ್ಗದವರಿಂದ ಸಂತಸದ ಸುದ್ದಿಗಳು ಕೇಳಿಬರುತ್ತವೆ. ಯಾಂತ್ರಿಕ ಸಲಕರಣೆಗಳನ್ನು ಮಾರಾಟ ಮಾಡುವವರ ವ್ಯವಹಾರ ವಿಸ್ತರಿಸುತ್ತದೆ. ಸ್ಥಿರಾಸ್ತಿಯ ಕೊಳ್ಳುವಿಕೆ ಮತ್ತು ಮಾರಾಟದಲ್ಲಿ ಪ್ರಗತಿಯಾಗಿ ಲಾಭ ಬರುತ್ತದೆ. ಆರ್ಥಿಕ ಸ್ಥಿತಿಯು ಸಾಮಾನ್ಯವಾಗಿರುತ್ತದೆ.

ಪದಬಂಧ 2710



ಮೇಲಿನಿಂದ ಕೆಳಕ್ಕೆ
1. ದಿನವೂ ಜನರಿಂದ ಜನರಿಗೆ ಸಂದೇಶ ಹರಡುವಿಕೆ 5
2. ನಗುವಿನ ನಡುವೆ ಮುದುಡಿಹೋಗು 3
3. ಸುಲಭವಾಗಿ ಹಾಡಬಹುದಾದ ಹಾಡು 5
4. ಕಚೇರಿಯ ಮುಂದೆ, ಹಣೆಯ ಮೇಲೆ ತಗುಲಿಹಾಕುವ ಹೆಸರಿನ ಬೋರ್ಡು 5
5. ಕೆಳಗೆ ನೆಲ, ಮೇಲೆ... ? 3
6. ಸಂತೋಷ, ತೃಪ್ತಿ, ಆರಾಮದ ವಾಸಗೃಹ 5
11. ಧರಿತ್ರಿ ಧಾತ್ರಿ ಈ ಧರೆ 3
13. ನಾಗರಿಕರನ್ನಾಗಿ ಮಾಡುವ ಪಟ್ಟಣ 3
14. ಶೀರ್ಷಾಸನದಲ್ಲಿ ಕಾಲು ಮೇಲಾದಾಗ ಮಸ್ತಿಷ್ಕ ನೆಲಕ್ಕೆ ಹೀಗೆ 5
15. ಸದಾ ಕಾರ್ಯ ನಿರತ 5
16. ಇವರೇ ದುಡ್ಡಿರುವ ಶ್ರೀಮಂತರು 5
17. ಬಿಟ್ಟ ಬಾಣವದು ನಮಗೇ ವಾಪಸ್ಸು 5
19. ಹೇ ದೇವಾ! ನಮ್ಮನ್ನು ರಕ್ಷಿಸು ಪೋಷಿಸು 3
21. ಮೇಲಕ್ಕೆ ಜಿಗಿಯುವ ಕಲೆ 3

ಎಡದಿಂದ ಬಲಕ್ಕೆ
1. ತಾಳ್ಮೆಯ ಸ್ವಭಾವ ಬೆಳೆಸುವ ಮಂದಗತಿ 3
3. ಒಳ್ಳೆ ಮನಸ್ಸಿನ ಹೆಣ್ಣೇ ಇವಳು 3
5. ಮುಸುಗುಟ್ಟುವ ಸಿಟ್ಟು 3
7. ಇಸ್ಪಿಟಾಟದಲ್ಲಿ ರಾಜ ರಾಣಿಯರ ಅಡಿಯಾಳು 3
8. ಕೃಷಿಗೆ ಸಿಕ್ಕ ಬೆಳೆ 3
9. ಹೆಣ್ಣು ಹೆಣ್ಣೆಂದು ಹೀಗೆಳೆವ ಹಳ್ಳಿಯವ 3
10. ನೂಲಿನಲಿ ಬೆಸೆದ ಸೋದರ ಸೋದರಿಯರ ಬಾಂಧವ್ಯ 5
12. ಕಾಗಿನೆಲೆ ಆದಿಕೇಶವನಿಗೆ ತನ್ನ ಪದಗಳನ್ನು ಅರ್ಪಿಸಿದ ದಾಸ ಶ್ರೇಷ್ಠ 5
14. ದೇವರ ಹುಂಡಿಯಲ್ಲಿ ಹಾಕುವ ಪ್ರಾಯಶ್ಚಿತ್ತದ ಮುಯ್ಯಿ 5
16. ಈಶ್ವರನ ಜೊತೆ ಗಿರಿಸುತೆ 5
18. ಸ್ವರೂಪ ಸುಂದರ ಗುಣ ವಿವರ 3
19. ಎಲೆ ಕೊನೆ ಸಿಹಿ 3
20. ಮಾಡುವ ಮೋಸ, ದಗಾ 3
22. ಗೆಡ್ಡೆಯ ಜೊತೆ ಸೇರುವ ಕಂದಮೂಲ
23. ಎಳೆದರೆ ಯಥಾಸ್ಥಿತಿಗೆ ಮರಳುವ ವಸ್ತು, ಬರೆದದನ್ನು ಅಳಿಸಲು ಬಳಕೆ 3
24. ಇಗೋ ಈಗಲೇ.... ಹಠಾತ್ತನೇ 3

ಪದಬಂಧ ಉತ್ತರ -2709

ಮೇಲಿನಿಂದ ಕೆಳಕ್ಕೆ
1. ದೀನದಾಸ 2.ರಾಯಸ 4.ಮಾನವ 5.ಷಡಾನನ 6.ದರ 8.ಳಿಸು 10.ಮಹಾನವಮಿ 12.ಮಧುರಸ್ಮೃತಿ 13.ಅಗಸ 14.ಸುನಾಕ 18.ನಳಂದ 19.ಭಾಷಾಪ್ರೇಮಿ 20.ನಿಜ 21.ಪುಕ 22.ನವೆನವೆ 24.ನಮಿತ 25.ಟಗರು

ಎಡದಿಂದ ಬಲಕ್ಕೆ
1.ದೀಪಕರಾಗ 4.ನಾಮಾವಶೇಷ 6.ದಸರಾದೀಪಾವಳಿ 9.ಸಮರ 11.ಸುಮನ 13.ಅರಸು 15.ನವರಂಗ 16.ನಾಗಪುರ 17.ಸನಕ 19.ಭಾಮಿನಿ 21.ಪುತಿನ 23.ಜನಪದನಾಟಕ 26.ಮಿತ್ರಚಿಂತಕ 27.ಮರುಮದುವೆ

ಕರುಳಿನ ಕಿಚ್ಚು ಕಾವ್ಯವಾಗಿಸಿದ ಕಿನ್ನಿಗೋಳಿ

ಶೋಷಣೆಯನ್ನು ಖಂಡಿಸಿ ಕಾವ್ಯ ಬರೆದ ಈ ಸಮಾಜ ವಿಮರ್ಶಕ ಸಾಹಿತ್ಯದಲ್ಲಿ ನೊಂದವರ ಪ್ರತಿನಿಧಿಯಂತೆ ಕೆಲಸ ಮಾಡಿದವರು. ಈ ಸಾಹಿತ್ಯ ಸಾಧಕ ಅಚ್ಯುತ ಗೌಡ ಕಿನ್ನಿಗೋಳಿ ಅವರ ನೂರರ ನೆನಪಿನಲ್ಲಿ ಹೀಗೊಂದು ಯಾನ...



ಅ.ಗೌ.ಕಿನ್ನಿಗೋಳಿ

ಬಿ. ಜನಾರ್ದನ ಭಟ್

‘ಅವಿನಾಶಿ’ ಎಂಬ ಕಾವ್ಯನಾಮದಿಂದಲೇ ಪ್ರಸಿದ್ಧರಾಗಿದ್ದ ಕರಾವಳಿಯ ಮೊದಲನೆಯ ದಲಿತ ಕವಿ ಅಚ್ಯುತ ಗೌಡ ಕಿನ್ನಿಗೋಳಿಯವರು(1921-1976) ಜನಿಸಿದ್ದು 1921ರ ಅ.18ರಂದು. ದಕ್ಷಿಣ ಕನ್ನಡದ ಕಿನ್ನಿಗೋಳಿ ಎಂಬ ಊರಿನವರಾದ ಅವರು ಅ.ಗೌ. ಕಿನ್ನಿಗೋಳಿ ಎಂಬ ಹ್ರಸ್ವ ಹೆಸರನ್ನೇ ಕಾವ್ಯನಾಮವನ್ನಾಗಿ ಮಾಡಿಕೊಂಡು ಬರೆದವರು. ಅವರ ಜನ್ಮಶತಮಾನೋತ್ಸವದ ಸಂದರ್ಭದಲ್ಲಿ ನಾವಿದ್ದೇವೆ.

ಅಚ್ಯುತ ಗೌಡರು ಲಿಟ್ಲ್ ಫ್ಲವರ್ ಗರ್ಲ್ಸ್ ಹೈಸ್ಕೂಲಿನಲ್ಲಿ ಕನ್ನಡ ಪಂಡಿತರಾಗಿದ್ದು, ‘ಕ್ಷಾತ್ರದರ್ಶನ’ವೆಂಬ ವೀರಕವನದಿಂದ ಮೊದಲಾಗಿ ಕನ್ನಡ ಕವಿಲೋಕಕ್ಕೆ ಪರಿಚಿತರಾದವರು. ಅವಿನಾಶಿ ಎಂಬ ಕಾವ್ಯನಾಮದಲ್ಲಿ ವಿಡಂಬನಗಳನ್ನೂ, ಏಕಾಂಕ ನಾಟಕಗಳನ್ನೂ ಅವರು ಬರೆದಿದ್ದಾರೆ. ಅವರ ಬಿಡಿಕವಿತೆಗಳು ನೂರರಷ್ಟಿದ್ದರೂ ಇನ್ನೂ ಸಂಕಲನವಾಗಿ ಪ್ರಕಟವಾಗಿಲ್ಲ. ‘ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ‘ಕಾವ್ಯ ಲಹರಿಯಲ್ಲಿ ಅವರ ಖಂಡಕಾವ್ಯಗಳೆಲ್ಲ ಸೇರಿವೆ.

ಅಚ್ಯುತ ಗೌಡರ ಹೆಸರಿನಲ್ಲಿರುವ ‘ಗೌಡ’ ಎನ್ನುವುದು ದಕ್ಷಿಣ ಕನ್ನಡದಲ್ಲಿ ಒಕ್ಕಲಿಗ ಸಮುದಾಯದವರಿಗಲ್ಲದೆ ಸಮಗಾರ ಜನಾಂಗದವರಿಗೂ ಇರುವ ಜಾತಿನಾಮ. ಅವರಲ್ಲಿ ಮರಾಠಿ ಮತ್ತು ಕನ್ನಡ ಮಾತನಾಡುವ ಕುಟುಂಬಗಳಿವೆ. ಹಾಗಾಗಿ ಈ ಸಮುದಾಯದವರು ಮಹಾರಾಷ್ಟ್ರದಿಂದ ವಲಸೆ ಬಂದಿರಬಹುದೆಂಬ ಅಭಿಪ್ರಾಯವೂ, ವಿಜಯನಗರದಿಂದ ವಲಸೆ ಬಂದಿರಬಹುದೆಂಬ ಇನ್ನೊಂದು ಅಭಿಪ್ರಾಯವೂ ಇದೆ. ಅ.ಗೌ.ಕಿ. ತಮ್ಮ ಸಮುದಾಯವನ್ನು ಪರಿಚಯಿಸುವಂತಹ ಕೃತಿಯೊಂದನ್ನು ಬರೆಯಲು ಅಧ್ಯಯನ ನಡೆಸಿದ್ದರಂತೆ. ಅದು ಪ್ರಕಟವಾಗಿಲ್ಲ; ಹಸ್ತಪ್ರತಿಯೂ ಲಭ್ಯವಿಲ್ಲ.

ಅ.ಗೌ.ಕಿ.ಯವರ ತಂದೆ ರಂಗನಾಥ ಗೌಡರು ಸಮಗಾರ ವೃತ್ತಿಯನ್ನು ಮಾಡುತ್ತಿದ್ದರು. ತಾಯಿ ಲಿಂಗಮ್ಮ. 1943ರಲ್ಲಿ ಅಚ್ಯುತ ಗೌಡ ಅವರು ಲಕ್ಷ್ಮಿ ಎಂಬುವವರನ್ನು ಮದುವೆಯಾದರು. ಅವರಿಗೆ ನಾಲ್ವರು ಮಕ್ಕಳು: ಇಂದಿರಾ, ವಿನಯಪಾಲ, ಜಯಂತಿ ಮತ್ತು ವಿಜಯ. ಕಿನ್ನಿಗೋಳಿಯ ಪಾಂಪೆ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಎಂಟನೆಯ ತರಗತಿಯವರೆಗೆ ಓದಿ, 1943ರಲ್ಲಿ ಎಲಿಮೆಂಟರಿ ಟ್ರೈನ್ಡ್ ಟೀಚರ್ ಆಗಿ ಸಮೀಪದ ಶಿಮಂತೂರಿನ ಸೈಂಟ್ ಕ್ಸೇವಿಯರ್ ಎಲಿಮೆಂಟರಿ ಶಾಲೆಯಲ್ಲಿ ಅಧ್ಯಾಪಕ ವೃತ್ತಿಯನ್ನು ಅ.ಗೌ.ಕಿ ಪ್ರಾರಂಭಿಸಿದರು. ಮದರಾಸ್ ವಿಶ್ವವಿದ್ಯಾಲಯದ ಕನ್ನಡ ಮತ್ತು ಸಂಸ್ಕೃತ ವಿದ್ವಾನ್ ಪದವಿಯನ್ನು 1949ರಲ್ಲಿ ಪಡೆದ ಅವರು, ಲಿಟ್ಲ್ ಫ್ಲವರ್ ಗರ್ಲ್ಸ್ ಹೈಸ್ಕೂಲಿನಲ್ಲಿ ಕನ್ನಡ ಪಂಡಿತರಾಗಿ ನೇಮಕಗೊಂಡರು.

ಕಳೆದ ಎಪ್ಪತ್ತೈದು ವರ್ಷಗಳಿಂದ ಕಿನ್ನಿಗೋಳಿಯಿಂದ ನಿರಂತರವಾಗಿ ಪ್ರಕಟವಾಗುತ್ತಿರುವ ಕನ್ನಡ ಮಾಸಪತ್ರಿಕೆ ‘ಯುಗಪುರುಷ’. ಅ.ಗೌ.ಕಿ. ಅವರಿಗೆ ‘ಯುಗಪುರುಷ’ ಪತ್ರಿಕೆ ಮತ್ತು ‘ಯುಗಪುರುಷ’ ಪ್ರಕಾಶನದ ಕೊ.ಅ. ಉಡುಪರ ಜತೆ ಅವಿನಾಭಾವ ಸಂಬಂಧ. ‘ಅ.ಗೌ.ಕಿ.ಯವರು ಕನ್ನಡ ಸಾರಸ್ವತ ಲೋಕದಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡದ್ದು ಯುಗಪುರುಷ ಪತ್ರಿಕೆಯ ಮೂಲಕವೇ. ಯುಗಪುರುಷ ಪತ್ರಿಕೆಗೆ ಕನ್ನಡ ಓದುಗರ ಮನ್ನಣೆಯನ್ನೂ ಸಾಹಿತ್ಯದ ಮೌಲ್ಯವನ್ನೂ ತಂದುಕೊಟ್ಟವರಲ್ಲಿ ಅ.ಗೌ.ಕಿ.ಯವರು ಒಬ್ಬರು’ ಎಂದು ಡಾ. ಕೆ. ಚಿನ್ನಪ್ಪ ಗೌಡರು ದಾಖಲಿಸಿದ್ದಾರೆ. ಕೊ.ಅ. ಉಡುಪ ಅವರು ಕಿನ್ನಿಗೋಳಿಯ ಪಾಂಪೆ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿದ್ದರು. ಸಮಾನ ಉದ್ಯೋಗ, ಸಮಾನ ಆಸಕ್ತಿಗಳು ಈ ಇಬ್ಬರನ್ನೂ ಮಿತ್ರರನ್ನಾಗಿಸಿತು. ಅ.ಗೌ.ಕಿ. ಅವರ ಹೆಚ್ಚಿನ ಕವಿತೆಗಳು, ಖಂಡಕಾವ್ಯಗಳು, ಲೇಖನಗಳು, ರೂಪಕಗಳು ‘ಯುಗಪುರುಷ’ ಪತ್ರಿಕೆಯಲ್ಲಿ ಅಥವಾ ಯುಗಪುರುಷ ಗ್ರಂಥಮಾಲೆಯಲ್ಲಿ ಪ್ರಕಟವಾಗಿವೆ.

ಸಾಮಾಜಿಕ ಅಸಮಾನತೆಯ ವಿರೋಧ

ಮನುಷ್ಯನು ಹುಟ್ಟಿದ ಜಾತಿಯನ್ನು ಕಂಡು ಅವನ ಬೆಲೆಕಟ್ಟುವ ಅನಿಷ್ಟ ಪದ್ಧತಿಯನ್ನು ಅ. ಗೌ. ಕಿನ್ನಿಗೋಳಿ ಅವರು ಖಂಡಿಸಿದ್ದಾರೆ, ಅದಕ್ಕೆ ಗುರಿಯಾಗಿದ್ದಾರೆ ಮತ್ತು ನೊಂದುಕೊಂಡಿದ್ದಾರೆ. ಮೊದಲು ಯಕ್ಷಗಾನ ತಾಳಮದ್ದಳೆಯಲ್ಲಿ ಅರ್ಥಧಾರಿಯಾಗಿ ಅ.ಗೌ.ಕಿ ಭಾಗವಹಿಸುತ್ತಿದ್ದರು. ಕೆಲವೊಂದು ಕಹಿ ಅನುಭವಗಳ ನಂತರ ಆ ಹವ್ಯಾಸವನ್ನು ತೊರೆದರು. ದೇವಾಲಯಗಳಲ್ಲಿ ಮತ್ತು ಹೊರಗೆ ಧಾರ್ಮಿಕ ಆಚರಣೆಗಳಲ್ಲಿ ನಡೆಯುತ್ತಿದ್ದ ಕೆಲವೊಂದು ಅಪಸವ್ಯಗಳನ್ನು, ಕುತ್ಸಿತ ಮನೋಭಾವಗಳನ್ನು ಅವರು ಖಂಡಿಸುತ್ತಿದ್ದುದರಿಂದ ಅವರು ‘ನಾಸ್ತಿಕ’ ಎಂಬ ಮಾತನ್ನು ಕೇಳಬೇಕಾಯಿತು. ಕಡೆಂಗೋಡ್ಲು ಮಾದರಿಯ ಖಂಡಕಾವ್ಯಗಳನ್ನು ಬರೆದ ಅ.ಗೌ.ಕಿ.ಯವರಿಗೆ ಅವರ ಕಾವ್ಯಗಳಲ್ಲಿ ಹೊಸನೋಟಗಳಿದ್ದರೂ ಸಿಗಬೇಕಾಗಿದ್ದಷ್ಟು ಮನ್ನಣೆ ಸಿಗಲಿಲ್ಲ.

ಕಾವ್ಯಗಳು

ಅ.ಗೌ.ಕಿ.ಯವರು ಕಡೆಂಗೋಡ್ಲು ಅವರ ಖಂಡಕಾವ್ಯ ಪರಂಪರೆಯ ಮುಂದುವರಿಕೆಯಾಗಿ ಕಂಡು ಬರುತ್ತಾರೆ. ಕಡೆಂಗೋಡ್ಲು ಅವರಂತೆ ಪುರಾಣ ಕಥೆಗಳ (ಪುನರ್ಮಿಲನ, ಚಿತಾಗ್ನಿ) ಮೂಲಕ ಸ್ತ್ರೀ ತ್ಯಾಗವನ್ನು, ಅವಳ ಮನಸ್ಸಿನ ನೋವುಗಳನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದರು. ಶಿವಲೇಶ್ಯೆ, ಕ್ಷಾತ್ರ ದರ್ಶನದ ಮೂಲಕ ಕ್ಷಾತ್ರ ತೇಜದ ಮಹತ್ವವನ್ನು ಎತ್ತಿಹೇಳಿದರು. ತಮ್ಮ ಸಮಕಾಲೀನ ಹಿರಿಯ ಕವಿಗಳ ಕಾವ್ಯಗಳನ್ನೇ ಮುಂದುವರಿಸಿ, ಬೇರೊಂದು ದೃಷ್ಟಿಕೋನದಿಂದ ಆ ವಸ್ತುವನ್ನು ಪರಿಶೀಲಿಸಿ, ಅದಕ್ಕೆ ಇನ್ನೊಂದು ಬಗೆಯ ಮುಕ್ತಾಯವನ್ನು ಕೊಡುವುದರಲ್ಲಿ ಅ.ಗೌ.ಕಿ.ಯವರಿಗಿದ್ದ ಆಸಕ್ತಿ ಅವರ ಕಾವ್ಯದ ವೈಶಿಷ್ಟ್ಯ. 1950 ರಿಂದ 1976 ರವರೆಗೆ ಅವರು ಬರೆದಿರುವ ನೂರಾರು ಬಿಡಿ ಕವಿತೆಗಳಲ್ಲಿ ಸಮಕಾಲೀನ ಸಮಾಜ ವಿಮರ್ಶೆ ಪ್ರಧಾನವಾದ ನೆಲೆಯಲ್ಲಿದೆ.

ನೂರರ ಸ್ಮರಣೆ

1933ರಲ್ಲಿ ಆಗಿನ ಯುವ ಕವಿ ಕಯ್ಯಾರ ಕಿಞ್ಞಣ್ಣ ರೈಗಳು ಪುತ್ತೂರಿನಲ್ಲಿ ಕಾರಂತರು ನಡೆಸುತ್ತಿದ್ದ ನಾಡಹಬ್ಬದಲ್ಲಿ ಬೇಂದ್ರೆಯವರ ಅಧ್ಯಕ್ಷತೆಯ ಕವಿಗೋಷ್ಠಿಯಲ್ಲಿ ‘ಊರ್ಮಿಳಾ’ ಎಂಬ ಕವನವನ್ನು ಓದಿದರು. ಈ ಕವಿತೆಯನ್ನು ಆಮೇಲೆ ಕಯ್ಯಾರರ ಕವಿತಾಸಂಕಲನದಲ್ಲಿ ಓದಿದ ಅ.ಗೌ.ಕಿನ್ನಿಗೋಳಿಯವರು, ಕಯ್ಯಾರರು ಎತ್ತಿದ ಪ್ರಶ್ನೆಗೆ ಉತ್ತರವೆಂಬಂತೆ ತಮ್ಮ ‘ಪುನರ್ಮಿಲನ’ ಸಣ್ಣಕಾವ್ಯವನ್ನು ಬರೆದರು. ಅದು ‘ಯುಗಪುರುಷ’ದಲ್ಲಿ ಧಾರಾವಾಹಿಯಾಗಿ ಪ್ರಕಟವಾಯಿತು. ನಂತರ 1954ರಲ್ಲಿ ಪ್ರಕಟವಾದ ‘ಯೋಗಲಹರಿ’ಯಲ್ಲಿ ಸೇರಿತು. ಕಯ್ಯಾರ ಅವರು ತಮ್ಮ ಕವನದಲ್ಲಿ ಆದಿಕವಿ ವಾಲ್ಮೀಕಿಯನ್ನೇ ಪ್ರಶ್ನಿಸಿದ್ದರು. ಊರ್ಮಿಳೆಯ ಅಳಲಿಗೆ ಋಷಿ ಕವಿ ಗಮನ ಕೊಡಲಿಲ್ಲವಲ್ಲ ಎಂದು ಅಸಮಾಧಾನವನ್ನು ಸೂಚಿಸಿದ್ದರು. ಅ.ಗೌ.ಕಿ.ಯವರು ಊರ್ಮಿಳೆಯ ಅಳಲು, ಗಂಡಹೆಂಡತಿಯ ಪುನರ್ಮಿಲನವನ್ನು ತಮ್ಮ ಕಲ್ಪನೆಯಿಂದ ವರ್ಣಿಸಿದ್ದಾರೆ.

ಬಿಡಿ ಕವಿತೆಗಳು

ಅ.ಗೌ.ಕಿ.ಯವರು ತಮ್ಮ ಬಿಡಿ ಕವಿತೆಗಳಲ್ಲಿ ಸಮಾಜದಲ್ಲಿ ನಡೆಯುತ್ತಿದ್ದ ಶೋಷಣೆ, ಸಾಮಾಜಿಕ ಅಸಮಾನತೆಯಿಂದಾಗಿ ಕೆಳಜಾತಿಗಳೆನಿಸಿಕೊಂಡವರ ಅಸಹಾಯಕತೆ, ಶ್ರೀಮಂತ ವರ್ಗ- ಬಡವರ ನಡುವಿನ ಆರ್ಥಿಕ ಕಂದಕ ಮತ್ತು ಬಡಜನರ ಕಷ್ಟಗಳು ಇವುಗಳನ್ನೆಲ್ಲ ಚಿತ್ರಿಸಿದ್ದಾರೆ. ಆ ರೀತಿ ಸಮಾಜಪರವಾಗಿ ಬರೆಯಲಾರಂಭಿಸಿದ್ದ ಕಯ್ಯಾರ ಕಿಞ್ಞಣ್ಣ ರೈಗಳಿಗಿಂತ ಭಿನ್ನವಾದ ನೆಲೆಯಲ್ಲಿ ನಿಂತು ಅ.ಗೌ.ಕಿ. ಬರೆದರು. ರೈಗಳು ಕೂಡ ಸ್ವಾತಂತ್ರ್ಯೋತ್ತರ ಕಾಲದಲ್ಲಿ ದೇಶದ ಆಂತರಿಕ ಸಮಸ್ಯೆಗಳನ್ನು ಅವಲೋಕಿಸುತ್ತ ಮೇಲುಕೀಳು, ಶೋಷಣೆ ಇತ್ಯಾದಿಗಳನ್ನು ಖಂಡಿಸುವ ಕವಿತೆಗಳನ್ನು ಬರೆದರು. ಅವರು ಉದಾರ ಮಾನವತಾವಾದದ ನೆಲೆಯಿಂದ ಕ್ರಾಂತಿಕಾರಕವಾದ ಬದಲಾವಣೆಗಳಾಗಬೇಕೆಂಬ ಸೂಚನೆಯನ್ನು ಕೊಟ್ಟಿದ್ದರು. ಅ.ಗೌ.ಕಿ. ನೊಂದವರ ಪ್ರತಿನಿಧಿಯಾಗಿ ಕವಿತೆಗಳನ್ನು ಬರೆದರು. ಅವರ ಒಂದು ಕವಿತೆಯ ಸಾಲು ಹೀಗಿದೆ: ‘ದಿನ ದಿನ ಹುಟ್ಟುತ ಸಾಯುವ ಬಡವರ ಬಾಳಿನ ಭೀಷಣ ಬನ್ನವನ್ನು ಕಂಡುಂಡಲ್ಲದೆ ಅರಿಯದು’. ಅವರ, ‘ಕರುಳಿನ ಕಿಚ್ಚು’, ‘ಇವಕೆಂದಿಗೆ ಕೊನೆ’, ‘ಅದೋ ಅಲ್ಲಿ ಇದೋ ಇಲ್ಲಿ’, ‘ಇಲ್ಲದ ಬದುಕು’ ಇವು ಇಂತಹ ಕೆಲವು ಕವಿತೆಗಳು. ‘ಕರುಳಿನ ಕಿಚ್ಚು’ ಕವನದ ಸಾಲುಗಳು ಹೀಗಿವೆ:

ಕರುಳಿನ ಕಿಚ್ಚೇ ದಳ್ಳಿಸುತಿಹುದೆನೆ
ಏನಚ್ಚರಿಯೋ, ಘನತೆಗಳು
ಧನ ದರ್ಪಂಗಳು ಹಿರಿ ಹೆಮ್ಮೆಗಳು
ಉರಿದವು ಶೋಷಕ ವರ್ಗಗಳು.

ಅ.ಗೌ.ಕಿ. ಅವರಿಗೆ ಆರ್ಥಿಕ ಸಮಸ್ಯೆ, ಸಾಂಸಾರಿಕ ತೊಂದರೆಗಳು ಮತ್ತು ಸಾಮಾಜಿಕ ನೆಲೆಯಲ್ಲಿ ಮೇಲುವರ್ಗದವರ ಅಹಂಕಾರ-ಅಸಹನೆಗಳಿಂದಾಗಿ ಅನುಭವಿಸಿದ ಅವಮಾನಗಳು ‘ತಾಪತ್ರಯ’ಗಳಾಗಿ ಕಾಡಿದವು. ಆ ನಡುವೆಯೂ ಅವರು ಸಾಹಿತ್ಯದಲ್ಲಿ ಸಾಂತ್ವನವನ್ನು ಕಂಡುಕೊಂಡು, ಉಳಿಯುವಂತಹ ಕೃತಿಗಳನ್ನು ರಚಿಸಿರುವುದು ಶ್ಲಾಘನೀಯವಾಗಿದೆ. ಅವರು ಕೊನೆಕೊನೆಗೆ ಹೆಚ್ಚುಹೆಚ್ಚು ಅಂತರ್ಮುಖಿಗಳಾಗಿದ್ದರಂತೆ.

ಹರಿಕೃಷ್ಣ ಪುನರೂರು ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ಅ.ಗೌ.ಕಿ. ಅವರ ಎಲ್ಲ ಅಲಭ್ಯ ಖಂಡಕಾವ್ಯಗಳನ್ನು ‘ಕಾವ್ಯ ಲಹರಿ’ (ಕುವೆಂಪು ಶತಮಾನೋತ್ಸವ ಮಾಲಿಕೆ - 2004) ಎಂಬ ಒಂದೇ ಸಂಪುಟದಲ್ಲಿ ಪರಿಷತ್ತಿನ ವತಿಯಿಂದ ಮರುಮುದ್ರಿಸಿದರು. ಅ.ಗೌ.ಕಿ.ಯವರ ಜನ್ಮ ಶತಮಾನೋತ್ಸವದ ಈ ಸಂದರ್ಭದಲ್ಲಿ ಅವರ ಸಮಗ್ರ ಸಾಹಿತ್ಯ ಕೃತಿ ಪ್ರಕಟವಾಗಲಿ ಎನ್ನುವುದು ಹಾರೈಕೆ.

(ಪೂರ್ಣ ಲೇಖನ: www.prajavani.net)

ಗಂಡು ಎಂಬ ಅಧಿಕಾರದ ತುಂಡು


ಎಚ್.ಎಸ್. ಅನುಪಮಾ

ಮಹಿಳಾ ಚಳವಳಿ ಜಗತ್ತಿನ ಅತ್ಯಂತ ದೀರ್ಘ ವಿಮೋಚನಾ ಹೋರಾಟವಾಗಲಿರುವ ಬಗೆಗೆ ಯಾವುದೇ ಅನುಮಾನವಿಲ್ಲ. ಅದನ್ನು ಧೃಢಪಡಿಸುವಂತೆ ಇಕ್ಬಾಲುನ್ನಿಸಾ ಹುಸೇನ್ ಬರೆದ ‘ಪರ್ದಾ ಮತ್ತು ಪಾಲಿಗಮಿ’ ಕಾದಂಬರಿಯಿದೆ. ಭಾರತೀಯ ಸಮಾಜದಲ್ಲಿ ಗಂಡು ಎನ್ನುವುದೊಂದು ಅಧಿಕಾರದ ತುಂಡು. ಮನುಷ್ಯ ಸಂಬಂಧಗಳೆಲ್ಲ ಗಂಡಿನೊಡನೆಯ ಅಧಿಕಾರ ಸಂಬಂಧಗಳಾಗಿಯೇ ನಿರೂಪಿತವಾಗುತ್ತವೆ. ಮನೆಯೊಳಗಿನ ಗಂಡುಗಳನ್ನು ಪರೋಪಜೀವಿಗಳನ್ನಾಗಿ ಮಾಡಿದಷ್ಟೂ ತಮ್ಮ ಸ್ಥಾನಬೆಲೆ ಹೆಚ್ಚುವುದೆಂದು ಹೆಣ್ಣುಜೀವರು ಭಾವಿಸಿದ್ದಾರೆ. ಹೆಣ್ಣುಗಳ ಹುಳಿತೇಗಿನ ಮೂಲ ಗಂಡು ಅಧಿಕಾರದೊಂದಿಗೆ ನಡೆಸುವ ಪೈಪೋಟಿಯೇ ಆಗಿದೆ. ಸೆಣಸಾಟದ ಹೆಣ್ಣು ಬದುಕನ್ನು 1944ರಲ್ಲಿ ಇಂಗ್ಲಿಷ್‌ನಲ್ಲಿ ಬಂದ ಕಾದಂಬರಿ ‘ಪರ್ದಾ ಅಂಡ್ ಪಾಲಿಗಮಿ’ ಸಮರ್ಥವಾಗಿ ಚಿತ್ರಿಸಿದೆ. ದಾದಾಪೀರ್ ಜೈಮನ್ ಅದರ ಸಾಂಸ್ಕೃತಿಕ ಅನುವಾದವನ್ನು ಸಮರ್ಥವಾಗಿ ಮಾಡಿ ಕನ್ನಡದ್ದೇ ಆಗಿಸಿದ್ದಾರೆ.

ಚಿಕ್ಕಬಳ್ಳಾಪುರದ ಇಕ್ಬಾಲುನ್ನಿಸಾ (ಜನನ 1897) ಹದಿವಯಸ್ಸಿನಲ್ಲಿ ಪೊಲೀಸ್ ಅಧೀಕ್ಷಕರಾಗಿದ್ದ ಸಯ್ಯದ್ ಹುಸೇನರನ್ನು ಮದುವೆಯಾದರು. ಬಳಿಕ ಓದು ಮುಂದುವರೆಸಿ, ಮಗನ ಜೊತೆಜೊತೆಗೆ ಮೈಸೂರಿನ ಮಹಾರಾಣಿ ಕಾಲೇಜಿನಿಂದ ಬಿ.ಎ. ಪದವಿ ಪಡೆದರು. ಐದು ಮಕ್ಕಳನ್ನು ಭಾರತದಲ್ಲಿ ಬಿಟ್ಟು, ಕೈಗೂಸಿನೊಡನೆ ಲಂಡನ್ ಸೇರಿ ಲೀಡ್ಸ್ ವಿಶ್ವವಿದ್ಯಾಲಯದಿಂದ ಪದವಿ ಪಡೆದ ಮೊದಲ ಭಾರತೀಯ ಮಹಿಳೆಯಾದರು. ಪರ್ದಾ ತ್ಯಜಿಸಿದ್ದ ಇಕ್ಬಾಲುನ್ನಿಸಾ, ಸಾಮಾಜಿಕ ಕಾರ್ಯಕರ್ತೆ, ಲೇಖಕಿಯಾಗಿ ಬೆಳೆದರು. ಭಾರತೀಯ ಮುಸ್ಲಿಮರ ನಂಬಿಕೆ, ಮೂಢನಂಬಿಕೆ, ಶೋಕಿ, ಕಪಟ, ಅಮಾಯಕತೆ, ಅತಿಧಾರ್ಮಿಕತೆ, ಬಡತನ, ಹುಸಿಗರ್ವ, ಸಮುದಾಯಪ್ರಜ್ಞೆಗಳನ್ನು ತಮ್ಮ ಬರಹಗಳಲ್ಲಿ ಚಿತ್ರಿಸಿದರು.

‘ಪರ್ದಾ ಮತ್ತು ಪಾಲಿಗಮಿ’ ನಗರವೊಂದರ ಸಿರಿವಂತ ಮುಸ್ಲಿಂ ಕುಟುಂಬದ ಕಥೆ. ಉಮರ್, ಕಬೀರ್, ಅಕ್ರಮ್ ಎಂಬ ಮೂರು ತಲೆಮಾರಿನ ಗಂಡಸರ ಯಜಮಾನಿಕೆಯ ಏಳುಬೀಳಿನ ಕಥೆ. ಹಣ ಕೂಡಿಡುತ್ತ ಬದುಕು ಸವೆಸಿದ ಅತಿ ಸಂಪ್ರದಾಯವಾದಿ ಉಮರ್; ಹದಿಹರೆಯದಲ್ಲೇ ಸಿಕ್ಕ ಯಾಜಮಾನ್ಯವನ್ನು ಸ್ವೇಚ್ಛೆಗಾಗಿ ಬಳಸಿ ನಾಲ್ಕು ಮದುವೆಯಾಗುವ ಕಬೀರ್; ಆಧುನಿಕ ಬದುಕಿಗೆ ತೆರೆದುಕೊಂಡರೂ ಕುಟುಂಬದ ನಿಯಂತ್ರಣದಿಂದ ಹೊರಬರಲಾರದ ಅಕ್ರಮ್ ಎಂಬ ಮೂವರು ಗಂಡಸರ ಸುತ್ತ ಹೆಣೆದುಕೊಂಡ ‘ದಿಲ್ಖುಶ್’ ಮನೆಯ ಹೆಣ್ಣುಲೋಕದ ಕಥೆ. ಸಂಕೋಚದ ಮುದ್ದೆಯಂತಿರುವ ಹುಡುಗರಲ್ಲಿ ಅದು ಯಾವಾಗ ಗಂಡುಗರ್ವ ಸ್ಫೋಟಿಸಿ ಯಾಜಮಾನ್ಯದ ಚಹರೆ ಬೆಳೆಯುವುದೋ ಎಂಬ ಅಚ್ಚರಿಗೆ ಇಲ್ಲಿ ಉತ್ತರ ಸಿಗುತ್ತದೆ.

‘ದಿಲ್ಖುಶ್’ ಮನೆಯಲ್ಲಿ ವಂಶೋದ್ಧಾರಕನನ್ನು ಹೆತ್ತ ಕಬೀರನ ಮೊದಲನೆಯ ಹೆಂಡತಿ ನಾಝ್ನಿಯು ಗುಣವಾಗದ ಕಾಯಿಲೆಗೆ ತುತ್ತಾಗಿ ಅಸಹಾಯಕತೆ, ಅಬಲತನವೇ ಮೈವೆತ್ತಂತಿರುವವಳು. ಮನೆಗೆಲಸ ಮಾಡಲೊಬ್ಬರು ಬೇಕೆಂದು ಮದುವೆಯಾದ ಎರಡನೆಯ ಹೆಂಡತಿ ‘ಕರಿಮುಸುಡಿ’ಯ ಬಡವಿ ಮುನೀರಾ, ಸಿರಿವಂತನ ಕೈಹಿಡಿವ ಭಾಗ್ಯ ಸಿಕ್ಕಿದ್ದಕ್ಕೆ ಕೃತಕೃತಾರ್ಥಳಾಗಿ ಗಂಡ-ಅತ್ತೆ-ಧರ್ಮ ವಿಧಿಸಿರುವುದನ್ನು ಒಂದಿಷ್ಟೂ ಬದಲಾಗಲು ಬಿಡದವಳು. ಭಾರೀ ಮೆಹೆರ್ ಪಡೆದು ಬಂದಿರುವ ಸುಂದರಿ, ಜಾಣೆ, ಕವಯಿತ್ರಿ ಮಕ್ಬೂಲ್ ಪ್ರತಿತಿಂಗಳ ಆದಾಯಕ್ಕೆ ದಾರಿ ಮಾಡಿಕೊಂಡು ಮೂರನೆಯ ಹೆಂಡತಿಯಾಗಿ ಬಂದವಳು. ಅಶುಭವನ್ನೇ ತಂದಿತ್ತ ಮೂರು ಎಂಬ ಸಂಖ್ಯೆಯನ್ನು ನಿವಾರಿಸಿ ‘ನಾಲ್ಕು’ ಮಾಡಿಕೊಳ್ಳಲು ಹದಿಹರೆಯದ ಸುಂದರ ನಿರ್ಗತಿಕ ಹುಡುಗಿ ನೂರ್‌ಜಹಾನ್ ನಾಲ್ಕನೆಯ ಹೆಂಡತಿಯಾಗಿ ಬಂದವಳು. ಇವರನ್ನೆಲ್ಲ ನಿಯಂತ್ರಿಸುವವಳು ಮುಳ್ಳುನಾಲಗೆಯ ನಿರ್ದಯಿ ಅತ್ತೆ ಜುಹ್ರಾ. ಇವರೆಲ್ಲ ಮನೆಯೊಡೆಯ ಕಬೀರನ ಅಧಿಕಾರ ಎತ್ತಿ ಹಿಡಿಯುವ ನೆಪದಲ್ಲಿ ತಮ್ಮ ಅಧಿಕಾರ ಸ್ಥಾಪಿಸಿಕೊಳ್ಳುವ ಹುಕಿಯಲ್ಲಿರುವವರು. ಒಬ್ಬರಿಗೊಬ್ಬರು ಹೆಣೆವ ಅಸಂಗತ ತರ್ಕಗಳ ಬಲೆಯಲ್ಲಿ ಸಿಲುಕಿ ಉಸಿರುಗಟ್ಟಿದ ಮನೆಯಲ್ಲಿ ಸಂಭ್ರಮಕ್ಕಿಂತ ಸಂಚೇ ಹೆಚ್ಚು. ನೆಮ್ಮದಿಗಿಂತ ಶಂಕೆಯೇ ಹೆಚ್ಚು. ಹೊಸದರ ಕನಸಿಗಿಂತ ಹಳೆಯದನ್ನು ಉಳಿಸುವ ಹಠವೇ ಹೆಚ್ಚು. ಇದ್ದಿದ್ದರಲ್ಲಿ ಸೇವಕಿಯರೇ ನಿರ್ಭೀತಿಯಿಂದ ಮಾತನಾಡುತ್ತಾರೆ. ಬಂಡೇಳುವ ಗುಣಕ್ಕಾಗಿಯೇ ನಿಂದೆಗೊಳಗಾಗುತ್ತಾರೆ.



ಪರ್ದಾ ಮತ್ತು ಪಾಲಿಗಮಿ
ಲೇ: ಇಕ್ಬಾಲುನ್ನೀಸಾ ಹುಸೇನ್
ಅ:ದಾದಾಪೀರ್ ಜೈಮನ್
ಪ್ರ: ಛಂದ ಪುಸ್ತಕ
ಸಂ: 9844422782

ಪು: 424 ₹380

ಕಾದಂಬರಿಯ ಹೆಣ್ಣುಲೋಕದಲ್ಲಿ ಹೆಣ್ತನವೆಂದರೆ ಬಸುರು, ಅಡುಗೆ, ದಾಸ್ಯದ ಬದುಕು, ಪೈಪೋಟಿ, ಅಧಿಕಾರ ಸ್ಥಾಪನೆಯ ಗುದ್ದಾಟ ಅಷ್ಟೇ. ಕೂಪದೊಳಗಿನ ಜಿಗಿದಾಟದ ಬದುಕಿನಲ್ಲಿ ಕಳೆದುಕೊಂಡದ್ದರ ಬಗೆಗೆ ಯಾರಿಗೂ ಅರಿವಿಲ್ಲ. ಪ್ರಶ್ನೆಗಳು ಹುಟ್ಟುವುದಿಲ್ಲ. ಬದಲಾವಣೆಯ ಬಯಕೆಯಿಲ್ಲ. ಉಲ್ಲಂಘಿಸುವ ಧೈರ್ಯವಿಲ್ಲ. ಆರೋಗ್ಯಕರ ಧಾರ್ಮಿಕತೆಯೂ ಇಲ್ಲದ ಕುರುಡು ಅನುಯಾಯಿತ್ವದಲ್ಲಿ ಅಧ್ಯಾತ್ಮದ ಬಯಲಿಗೊಯ್ಯುವ ಬೆಳಕಿಲ್ಲ. ವೈಚಾರಿಕತೆ, ಸ್ವಾತಂತ್ರ್ಯ, ಸಮಾನತೆ, ಸ್ನೇಹಭಾವಗಳು ಅವರ ಪದಕೋಶದಲ್ಲಿಲ್ಲ. ಹಕ್ಕುಗಳಿಗಾಗಿ ಹೋರಾಡುವುದು ಒತ್ತಟ್ಟಿಗಿರಲಿ, ಸ್ವಾಯತ್ತ ಬದುಕಿನ ಕನಸೇ ಅವರಿಗಿಲ್ಲ.

ಹೀಗೆ, ಧಾರ್ಮಿಕ ಮೂಲಭೂತವಾದಿಗಳ ಬೆದರಿಕೆಗೆ ಜಗ್ಗದೆ ವಸ್ತುಸ್ಥಿತಿಯನ್ನು ನಿರೂಪಿಸುವ ಧೈರ್ಯ ತೋರುವ ಕಾದಂಬರಿಯಲ್ಲಿ ಸುಧಾರಣೆಯ ಉತ್ಸಾಹ ಇಲ್ಲವೆನ್ನುವಷ್ಟು ಕಡಿಮೆ. ವ್ಯಂಗ್ಯ, ವಿಡಂಬನೆಗಳು ತೆರೆಮರೆಯಲ್ಲಿದ್ದರೂ ನೇರ ಬಂಡಾಯದ ಪಾತ್ರಗಳು ಬಲುಕಡಿಮೆ. ಬಂಡೇಳುವ ಗುಣದ ಮಕ್ಬೂಲ್, ಅಡುಗೆಯ ಕೆಲಸದವಳ ಪಾತ್ರಗಳು ವಿಸ್ತಾರಗೊಳ್ಳಬಹುದಾದ ಸಾಧ್ಯತೆಗಳಿದ್ದರೂ ಅದೇಕೋ ಮೊಟಕುಗೊಂಡಿವೆ. ಅಕ್ರಮ್‌ನ ಗೆಳತಿ ರೋಸ್ ಎಂಬ ಆಧುನಿಕ ಕ್ರೈಸ್ತ ಹುಡುಗಿ ಭಿನ್ನವಾಗಿದ್ದರೂ ಅವಳ ‘ಕಾಫರ್ನಿ’ ಚಿಂತನೆಗಳು ಮುಸ್ಲಿಂ ಹೆಣ್ಣುಗಳಿಗೆ ಅಸ್ವೀಕೃತವೆಂಬಂತೆ ಮಾಡಲಾಗಿದೆ. ಕೌಟುಂಬಿಕ, ಧಾರ್ಮಿಕ ವ್ಯವಸ್ಥೆಯ ಟೊಳ್ಳುಗಳನ್ನು ಮನಸ್ಸಿನಲ್ಲೂ ಟೀಕಿಸದ ಹೆಣ್ಣು ಪಾತ್ರಗಳು, ಅನ್ಯಾಯ ಎಸಗುವ ಗಂಡು ಉತ್ತರದಾಯಿತ್ವವೇ ಇಲ್ಲದೆ ಪಾರಾಗುವುದು, ಯಥಾಸ್ಥಿತಿಗೆ ಎಲ್ಲವನ್ನೂ ಅಂಟಿಸುವ ಅಂತ್ಯವು ಇಕ್ಬಾಲುನ್ನೀಸಾರ ಕಾದಂಬರಿಯೆಂದು ಇಟ್ಟುಕೊಂಡ ಭರವಸೆಯನ್ನು ಹುಸಿಗೊಳಿಸುತ್ತವೆ.

ವಿಮರ್ಶೆ


ಹೆಣ್ಣು ಕನಸುವ ಆದರ್ಶ ಸಮಾಜ ಹೇಗಿರಬೇಕು? ಮಹಿಳಾ ಹೋರಾಟದ ಅಂತಿಮ ಬಿಂದು ಯಾವುದು? ಹೆಣ್ಣಿನ ಜೈವಿಕ ಹಾಗೂ ಸಾಮಾಜಿಕ ಪಾತ್ರಗಳ ನಿಭಾವಣೆಯಲ್ಲಿ ಗಂಡಸಿನ ಪಾತ್ರವೇನು? ಲಿಂಗಾಧಾರಿತ ಪಾತ್ರಗಳ ತಿರುವುಮುರುವು ಮಹಿಳಾ ಹೋರಾಟದ ತುದಿಯೇ? ಎಂಬಿತ್ಯಾದಿ ಪ್ರಶ್ನೆಗಳಿಗೆ ಒಳನೋಟ ಮತ್ತು ದೂರದರ್ಶಿತ್ವವಿರುವ ಹೆಣ್ಣು ಬರಹಗಳಲ್ಲಿ ಉತ್ತರವಿರುತ್ತದೆ. 1905ರಲ್ಲಿ ಬಂಗಾಳದ ಬೇಗಂ ರುಖಿಯಾ ಶೆಖಾವತ್ ಹುಸೇನ್ ಬರೆದ ‘ಸುಲ್ತಾನಾಳ ಕನಸು’ ನೆನಪಾಗುತ್ತಿದೆ. ಅದನ್ನು ಓದತೊಡಗಿದರೆ ಸ್ತ್ರೀವಾದದ ನಾಳೆಯ ಕನಸುಗಳು ಬಿಚ್ಚಿಕೊಳ್ಳುತ್ತವೆ. ಈ ಕಾದಂಬರಿಯಲ್ಲಿ ಅಂತಹ ಆಶಾವಾದ, ಹೊರದಾರಿ, ಕನಸುಗಳು ಕಾಣಿಸುವುದಿಲ್ಲ. ಎಂದೇ ಇದನ್ನು ಸ್ತ್ರೀವಾದಿ ಕಾದಂಬರಿ ಎನ್ನುವುದಕ್ಕಿಂತ ಸ್ತ್ರೀವಾದ ಸಮಾಜಕ್ಕೆ ಯಾಕೆ ಅನಿವಾರ್ಯವೆಂದು ತಿಳಿಸುವ ಕೃತಿ ಎನ್ನಬಹುದು. ನಾವು ಹುಟ್ಟಿದ ಕುಟುಂಬ-ಜಾತಿ-ಧರ್ಮಗಳಲ್ಲಿ ಹೆಣ್ಣುಪ್ರಶ್ನೆಗಳನ್ನು ಎತ್ತದಿರುವ ಕಾರಣಕ್ಕೇ ಅವೆಲ್ಲ ಹೆಣ್ಣು ಬಂದೀಖಾನೆಗಳಾಗಿವೆಯೆಂದು ಎಚ್ಚರಿಸುವ ಕೃತಿ ಎನ್ನುವುದು ಸೂಕ್ತವಾಗುತ್ತದೆ.

ಆರ್.ನಾಗೇಶ್ ನೆನಪಿನಲ್ಲಿ ರಂಗವಿಹಂಗಮ

ಮೊದಲ ಓದು

ರಂಗಭೂಮಿಯ ಯಾವ ತರಬೇತಿಯನ್ನೂ ಪಡೆಯದೇ ಇದ್ದರೂ 20ನೇ ಶತಮಾನದ ಉತ್ತರಾರ್ಧದ ಐದು ದಶಕಗಳ ಕಾಲ ಹವ್ಯಾಸಿ ರಂಗಭೂಮಿಯ ನಾಯಕ ಎಂದು ಕರೆಸಿಕೊಂಡ, ಈ ವೇದಿಕೆಗೆ ನೂರಾರು ರಂಗಕರ್ಮಿಗಳನ್ನು, ಕಲಾವಿದರನ್ನು ನೀಡಿದ ರಾಮರಾಜೇ ಅರಸು ನಾಗೇಶ(ಆರ್. ನಾಗೇಶ್) ಅವರ ನೆನಪಿನಲ್ಲಿ ಬಂದಿರುವ ಕೃತಿ ‘ಆರ್.ನಾಗೇಶ್ ರಂಗವಿಹಂಗಮ’. 15 ವರ್ಷಗಳ ಹಿಂದೆಯೇ ಬರಬೇಕಿದ್ದ ಇಂಥ ಒಂದು ಕೃತಿ ತಡವಾಗಿದ್ದೇಕೆ ಎನ್ನುವ ಕಾರಣವನ್ನು ನೀಡುತ್ತಾ, ಆರ್. ನಾಗೇಶ್ ಅವರ ಒಡನಾಡಿಗಳಾಗಿದ್ದ ಶ್ರೀನಿವಾಸ್ ಜಿ.ಕಪ್ಪಣ್ಣ, ಟಿ.ಎನ್.ಸೀತಾರಾಂ, ಟಿ.ಎಸ್. ನಾಗಾಭರಣ, ಕೆ.ಮರಳಸಿದ್ದಪ್ಪ, ಪುರುಷೋತ್ತಮ ಬಿಳಿಮಲೆ, ಎನ್. ಕೆ.ಮೋಹನರಾಂ, ಉಮಾಶ್ರೀ, ಮಂಡ್ಯ ರಮೇಶ ಮುಂತಾದವರ ನೆನಪಿನ ಬುತ್ತಿಯಿಂದ ಬಂದ ಲೇಖನ, ಛಾಯಾಚಿತ್ರಗಳೊಂದಿಗೆ ಕೃತಿಯನ್ನು ಸಂಪಾದಿಸಿದ್ದಾರೆ ಬಿ.ಎಸ್.ವಿದ್ಯಾರಣ್ಯ.

‘ರಂಗನೊಗ ಆರ್. ನಾಗೇಶ್–75’ ನಾಟಕೋತ್ಸವದ ಬಳಿಕ ನಾಟಕೋತ್ಸವದ ಸಮಿತಿಯ ಆಶಯದಂತೆ ಮೊಳಕೆಯೊಡೆದ ಈ ಕೃತಿ, ನಾಗೇಶ್ ಅವರ ರಂಗಹೆಜ್ಜೆಗಳನ್ನು ಕಟ್ಟಿಕೊಟ್ಟಿದೆ.



ಆರ್.ನಾಗೇಶ್ ರಂಗವಿಹಂಗಮ
ಸಂಪಾದಕ: ಬಿ.ಎಸ್. ವಿದ್ಯಾರಣ್ಯ
ಪ್ರ: ಚಾರುಮತಿ ಪ್ರಕಾಶನ
ಸಂ: 9448235553

ಪು: 196 ₹300

ಅನುವಾದ ಕ್ಷೇತ್ರದತ್ತ ಏಕೀ ಅನಾದರ?

8ನೇ ಪುಟದಿಂದ...

- **ಕಾಯ್ಕಿಣಿ ಅವರು ‘ಭಾಷೆಯನ್ನು ಮೀರಿ ನಿಂತ ಬರಹಗಾರ’ರಾಗಿ ಕಂಡಿದ್ದು ಹೇಗೆ?**

ಕಾಯ್ಕಿಣಿ ಹೀಗೆ ಕಾಣಿಸಿದ್ದು ಅವರ ಕಥೆಗಳನ್ನು ಓದಿದಾಗ. ಹಾಗೆಂದು ಎಲ್ಲ ಕಥೆಗಳನ್ನು ಓದುವ ಸಂದರ್ಭದಲ್ಲಿ ಅಲ್ಲ. ಹಲವು ಕಥೆಗಳಲ್ಲಿ ಅವರು ಗೋಕರ್ಣ, ಕಾರವಾರದ ಬಗ್ಗೆ ಬರೆದಿದ್ದಾರೆ. ಇವೆಲ್ಲವೂ ಕರ್ನಾಟಕದ ಬೇರಿನವು. ಮುಂಬೈ ಕಥೆಗಳಲ್ಲಿ ಕನ್ನಡಿಗರೇ ಇಲ್ಲ. ಒಂದೆರಡು ಪಾತ್ರಗಳು ಅಲ್ಲಲ್ಲಿ ಇರಬಹುದು. ಕಥೆಗಳಲ್ಲಿ ತುಂಬಿರುವ ಕನ್ನಡೇತರ ಪಾತ್ರಗಳು, ನಿರ್ದಿಷ್ಟ ಭಾಷೆಯೊಂದಿಗೆ ವ್ಯಕ್ತಿಯನ್ನು ಗುರುತಿಸುವ ಮಿತಿಯನ್ನು ಮೀರಿ ನಿಲ್ಲುತ್ತವೆ. ಕಥೆಗಳನ್ನು ಕನ್ನಡದಲ್ಲಿ ಬರೆದರೂ, ಸಂಭಾಷಣೆ ಕನ್ನಡದಲ್ಲಿ ಇದ್ದರೂ ಕೆಲ ಪಾತ್ರಗಳು ಹಿಂದಿ, ಗುಜರಾತಿ, ಒರಿಯಾ ಭಾಷೆ ಮಾತನಾಡುತ್ತವೆ. ಹೀಗಾಗಿ ಅನುವಾದದ ವೇಳೆ ನಾನು ಹಿಂದಿ, ಉರ್ದು ಬಳಸಿದ್ದೆ. ಬಳಕೆ ಜಾಸ್ತಿಯಾಯಿತೇನೋ ಎಂದೆನಿಸಿದಾಗ ಜಯಂತ ಅವರು ‘ಇರಲಿ. ಹೀಗಿದ್ದರಷ್ಟೇ ಆ ಪಾತ್ರಗಳು ಆ ಪ್ರದೇಶದವು ಎಂದು ಓದುಗರಿಗೆ ತಿಳಿಯುತ್ತದೆ’ ಎಂದರು. ಈ ಪಾತ್ರಗಳಾವುವೂ ಕನ್ನಡದವರು ಎಂದೆನಿಸದಿದ್ದರೂ, ಕನ್ನಡದಲ್ಲಿ ಅವುಗಳನ್ನು ಓದುತ್ತೇವೆ. ಈ ಕಥೆಗಳನ್ನು ಕೇವಲ ಅಮೆರಿಕದ ಓದುಗರಿಗೆ ನಾನು ಅನುವಾದ ಮಾಡಿಲ್ಲ. ಭಾರತ ಸೇರಿದಂತೆ ಹಲವು ದೇಶಗಳಲ್ಲಿ ಇಂಗ್ಲಿಷ್ ಕೃತಿಗಳನ್ನು ಓದುತ್ತಾರೆ. ಇದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಅನುವಾದ ಮಾಡಿದ್ದೇನೆ. ಸ್ಥಳೀಯ ಓದುಗರಿಗಾಗಿ ಮಾಡಿದ್ದ ಈ ಕೃತಿಯನ್ನು ಪ್ರಸ್ತುತ ಜಗತ್ತಿನಾದ್ಯಂತ ಜನ ಓದುತ್ತಿದ್ದಾರೆ.

- **ಅನುವಾದ ವಿಮರ್ಶೆಯ ಕುರಿತು ನಿಮ್ಮ ಅಭಿಪ್ರಾಯ?**

ಈ ಪ್ರಶಸ್ತಿ ಬಂದ ಮೇಲೆ ಎಲ್ಲರೂ ಕಾಯ್ಕಿಣಿ ಅವರಿಗೆ ಕರೆ ಮಾಡಿ ಶುಭಾಶಯ ಕೋರುತ್ತಿದ್ದಾರಂತೆ. ಇದರಿಂದ ಅವರಿಗೆ ಕೋಪ ಬಂದಿದೆ. ಅವರು ನನಗೆ ಕರೆ ಮಾಡಿ ‘ನನಗೆ ಏಕೆ ಶುಭಾಶಯ ಕೋರುತ್ತಿದ್ದಾರೋ ತಿಳಿಯುತ್ತಿಲ್ಲ. ಅನುವಾದಿತ ಕೃತಿಗಲ್ಲವೇ ಪ್ರಶಸ್ತಿ ಬಂದಿದ್ದು’ ಎಂದರು. ಅನುವಾದ ಕೃತಿಗೆ ಮೊದಲು ಡಿಎಸ್‌ಸಿ ಅಂತರರಾಷ್ಟ್ರೀಯ ಪುರಸ್ಕಾರ ಬಂದಾಗ ನನಗೆ ಬಹಳ ಖುಷಿಯಾಗಿತ್ತು. ಈ ಕುರಿತು ಬಂದ ವಿಮರ್ಶೆ, ಪ್ರತಿಕ್ರಿಯೆಗಳಲ್ಲಿ ಕೊನೆಯಲ್ಲಿ ಒಂದು ಸಾಲಿನಲ್ಲಿ ‘ಅನುವಾದ ಬಹಳ ಚೆನ್ನಾಗಿ ಬಂದಿದೆ’ ಎಂದು ಬರೆಯುತ್ತಿದ್ದರು. ವಿಚಿತ್ರ ಎನಿಸುತ್ತದೆ. ಲೋಕವಿರುವುದೇ ಹಾಗೆ ಬಿಡಿ. ಅನುವಾದಕರು ಇಲ್ಲದೇ ಇಂಥ ಕೃತಿಗಳೇ ಇರುವುದಿಲ್ಲವಲ್ಲ.

ರೈತ ಮಹಿಳೆಯ ಅಂತಃಕರಣದ ಕಥನಗಳು


ರಘುನಾಥ ಚ.ಹ.

‘ಇದು ಬರಿ ಮಣ್ಣಲ್ಲ’ ಸಹನಾ ಕಾಂತಬೈಲು ಅವರು ಮೂರನೇ ಕೃತಿ. ‘ಸಿಂಚನ’ ಎಂಬ ಹನಿಗವನ ಸಂಕಲನ ಹಾಗೂ ‘ಆನೆ ಸಾಕಲು ಹೊರಟವಳು’ ಲೇಖನ ಸಂಕಲನ ಅವರ ಉಳಿದೆರಡು ಕೃತಿಗಳು. ‘ಇದು ಬರಿ ಮಣ್ಣಲ್ಲ’ ಶೀರ್ಷಿಕೆಯನ್ನು ‘ಇದು ಬರಿ ಬರಹವಲ್ಲ’ ಎಂದು ಬದಲಿಸುವುದಾದರೆ, ಆ ವಿಶೇಷಣ ಸಹನಾ ಅವರ ಕೃತಿಗೂ ಬದುಕಿಗೂ ಅನ್ವಯವಾಗುವಂತಿದೆ.

ಸಹನಾ ಅವರ ಬರಹಗಳ ಬಹು ದೊಡ್ಡ ಆಕರ್ಷಣೆ, ಸರಳತೆಯಲ್ಲಿನ ಸಹಜ ಚೆಲುವನ್ನು ಬರವಣಿಗೆ ಒಳಗೊಂಡಿರುವುದು. ಈ ಚೆಲುವು ಭಾಷೆಯ ಬಗ್ಗೆ ಅಕ್ಕರೆ ಉಕ್ಕಿಸುವುವಂತಹದ್ದು; ಭಾಷೆಯೊಂದಿಗೆ ತಳಕು ಹಾಕಿಕೊಂಡ ಭಾವಜಗತ್ತಿನ ಬೆರಗನ್ನು ಓದುಗನ ಅನುಭವಕ್ಕೆ ತರುವಂತಹದ್ದು. ‘ಶುದ್ಧ ಕನ್ನಡದಲ್ಲಿ ಮಾತನಾಡುವ ಸ್ಪರ್ಧೆ’ಯನ್ನು ಮಾಡಲು ಹೊರಟು ಶುದ್ಧ–ಅಶುದ್ಧ ಚರ್ಚೆಯ ಇರುವೆಯನ್ನು ಮೈಮೇಲೆ ಬಿಟ್ಟುಕೊಂಡಿರುವ ಸರ್ಕಾರವೇನಾದರೂ, ಬರವಣಿಗೆಯಲ್ಲಿ ಕನ್ನಡದ ಚೆಲುವನ್ನು ಗುರ್ತಿಸುವ ಸ್ಪರ್ಧೆಯನ್ನು ಮಾಡಲು ಹೊರಟರೆ, ಸಹನಾ ಅವರ ಕೃತಿ ಒಳ್ಳೆಯ ಸ್ಪರ್ಧೆ ನೀಡಬಲ್ಲದು. ಸಹನಾ ಅವರದು ಹೆಸರಿಗೆ ತಕ್ಕಂತೆ ಸಾವಧಾನದ ಭಾಷೆ. ಜೀವವೊಂದು ತನ್ನ ಮನಸ್ಸಿಗೆ ಆಪ್ತವಾದ ಮತ್ತೊಂದು ಜೀವದೆದುರು ತನ್ನ ಒಳಗನ್ನು ತೋಡಿಕೊಳ್ಳುವ ಬಗೆ ಇಲ್ಲಿನ ಬರಹಗಳಲ್ಲಿದೆ.

‘ಇದು ಬರಿ ಮಣ್ಣಲ್ಲ’ ಕೃತಿಯ ಬರಹಗಳಲ್ಲಿನ ಸರಳತೆ ಬರಹದ ವಸ್ತುವಿಗೆ ಸಂಬಂಧಿಸಿದ್ದು ಹಾಗೂ ಭಾಷೆಗೂ ಸಂಬಂಧಿಸಿದ್ದು. ಸಹನಾ ತಮ್ಮ ಬರವಣಿಗೆಗೆ ಆರಿಸಿಕೊಳ್ಳುವ ವಸ್ತುಗಳು ವಿದ್ವಜ್ಜನರು ಘನವೆಂದು ಭಾವಿಸುವ ಸಂಗತಿಗಳೇನಲ್ಲ. ಊರದನಗಳು, ಮಜ್ಜಿಗೆ, ಬೆಕ್ಕು, ಉಪ್ಪಿನಕಾಯಿ, ಗಂಜಿ, ಒಗ್ಗರಣೆ, ಸೀರೆ, ಅವಲಕ್ಕಿ – ಹೀಗೆ ದೈನಿಕದಲ್ಲಿ ಎಡತಾಕುವ ಪುಟ್ಟ ಪುಟ್ಟ ಸಂಗತಿಗಳು ಲೇಖಕಿಗೆ ಬರೆಯಲು ಸ್ಫೂರ್ತಿ ನೀಡಬಲ್ಲವು. ಈ ಪುಟ್ಟ ಸಂಗತಿಗಳ ಬಗ್ಗೆ ಸಹನಾ ಅದೆಷ್ಟು ಆಪ್ತವಾಗಿ ಬರೆಯುತ್ತಾರೆಂದರೆ, ಆ ಹಿತ್ತಲ ಜಗತ್ತು ನಮ್ಮದೂ ಹೌದಲ್ಲವೇ ಎಂದು ಓದುಗನಿಗೆ ಅನ್ನಿಸುವಷ್ಟು. ರೈತಾಪಿ ಮಹಿಳೆಯ ದಿನಚರಿ ಪುಸ್ತಕದ ಪುಟಗಳಂತೆ ನೋಡಬಹುದಾದ ಈ ಬರಹಗಳಲ್ಲಿ ಓದುಗನಿಗೆ ತನ್ನೂರು, ಅಜ್ಜಿ, ಅಜ್ಜ, ಅಕ್ಕ, ಗೆಳೆಯ ಗೆಳತಿಯರ ಜ್ಞಾಪಕ ಚಿತ್ರಶಾಲೆ ಕಂಡರೆ ಆಶ್ಚರ್ಯವೇನಿಲ್ಲ.

ಒಳನೋಟ



ಇದು ಬರಿ ಮಣ್ಣಲ್ಲ
ಲೇ: ಸಹನಾ ಕಾಂತಬೈಲು
ಪ್ರ: ಅಹರ್ನಿಶಿ, ಶಿವಮೊಗ್ಗ
ಸಂ: 9449174662

ಪು: 120 ₹120

ಅಡುಗೆಮನೆ ಮತ್ತು ಹೊಲಗಳ ನಡುವೆ ಹಂಚಿಹೋಗಿರುವ ಕನ್ನಡದ ರೈತ ಮಹಿಳೆಯರ ಪ್ರತಿನಿಧಿಯಂತೆ ಸಹನಾ ಅವರನ್ನೂ ಅವರ ಬರಹಗಳನ್ನೂ ಕಾಣಬಹುದು. ವ್ಯತ್ಯಾಸ ಇರುವುದು, ತುದಿಮೊದಲಿಲ್ಲದ ದಂದುಗದಲ್ಲಿ ಬಹುತೇಕ ರೈತ ಹೆಣ್ಣುಮಕ್ಕಳು ಖಾಸಗಿ ಬದುಕು ಹಾಗೂ ಉಲ್ಲಾಸವನ್ನು ಕಳೆದುಕೊಂಡಿದ್ದರೆ, ಈ ಲೇಖಕಿ ಮನೆವಾರ್ತೆಯಲ್ಲಿಯೂ ಜೀವನಪ್ರೀತಿಯನ್ನು ಹಿಂಡಿ ತೆಗೆಯಬಲ್ಲರು ಹಾಗೂ ಸಹೃದಯರಿಗೂ ಹಂಚಬಲ್ಲರು.

ಗೃಹಕೃತ್ಯದ ನಡುವೆಯೂ ಬರವಣಿಗೆಯ ತುಡಿತವನ್ನು ಉಳಿಸಿಕೊಳ್ಳಲು ಹಂಬಲಿಸುವುದು ಹಾಗೂ ಬರವಣಿಗೆಯ ಮೂಲಕ ಮತ್ತೊಂದು ಜಗತ್ತನ್ನು ಸೃಷ್ಟಿಸಿಕೊಳ್ಳುವ ಸೃಜನಶೀಲ ಪ್ರಯತ್ನ ‘ಬರಹಗಾರ್ತಿಯ ತಳಮಳ’ ಬರಹದಲ್ಲಿದೆ. ‘ದೈನಂದಿನ ಒತ್ತಡದಲ್ಲಿ ಮುಳುಗಿದ ನನ್ನನ್ನು ಬದುಕಿಸುವುದು ಬರವಣಿಗೆಯೊಂದೇ’ ಎನ್ನುವ ಲೇಖಕಿಯ ಮಾತು, ಸಾಹಿತ್ಯವನ್ನೋ ಅಥವಾ ಸಾಹಿತ್ಯದಂಥ ಮತ್ತಾವುದೋ ಕಲೆಯನ್ನೋ ಎಲ್ಲ ಹೆಣ್ಣುಮಕ್ಕಳು ರೂಢಿಸಿಕೊಳ್ಳಬೇಕಾದ ಅಗತ್ಯವನ್ನು ಸೂಚಿಸುವಂತಿದೆ. ಅನುದಿನದ ದಂದುಗದಲ್ಲೇ ನಮ್ಮ ಅಜ್ಜಿಯರು, ಅಮ್ಮಂದಿರ ಬದುಕು ಸವೆದುಹೋಗುವುದನ್ನು ನೋಡಿದರೆ, ಕಲೆಯ ಸಖ್ಯ ಹೆಣ್ಣಿಗೆ ಎಷ್ಟು ಮುಖ್ಯ ಎನ್ನುವುದು ಮನದಟ್ಟಾಗುತ್ತದೆ.

ಹಿತ್ತಲಲ್ಲಿ ನಿಂತೂ ಜಗತ್ತನ್ನು ಕಾಣುವುದು, ಸಮಕಾಲೀನ ವಿದ್ಯಮಾನಗಳಿಗೆ ತಮ್ಮ ಮಿತಿಯಲ್ಲಿಯೇ ಸ್ಪಂದಿಸುವುದು ಸಹನಾ ಅವರಿಗೆ ಸಾಧ್ಯವಾಗಿದೆ. ‘ಇದು ಬರಿ ಮಣ್ಣಲ್ಲ’ ರಚನೆ ಮಣ್ಣಿನ ಜೀವಪರ ಗುಣ ಹಾಗೂ ಸುಟ್ಟಷ್ಟೂ ಫಲವತ್ತಾಗುವ ಅದರ ಸೃಜನಶೀಲ ಶಕ್ತಿಯ ಬಗ್ಗೆಯಷ್ಟೇ ಹೇಳುತ್ತಿಲ್ಲ; ಮನುಷ್ಯನ ಬಕಾಸುರ ಬಯಕೆಗಳು ಮಣ್ಣನ್ನು ಬರಡಾಗಿಸುತ್ತಿರುವ ವಿಪರ್ಯಾಸದ ಕುರಿತೂ ಹೇಳುತ್ತಿದೆ. ‘ಬದುಕುವ ದಾರಿ’ ಬರಹದಲ್ಲಿ, ಚಾಪೆ ಹೆಣೆಯುವ ಅಜ್ಜಿಗೆ ತನ್ನ ಕಸುಬನ್ನು ಮುಂದಿನ ತಲೆಮಾರಿಗೆ ದಾಟಿಸಬೇಕೆಂದು ಒತ್ತಾಯಿಸುವ ಲೇಖಕಿಗೆ, ತನ್ನ ಮಕ್ಕಳು ನಗರ ಸೇರಿ ಮಣ್ಣಿಗೆ ಬೆನ್ನು ಹಾಕಿರುವ ಅರಿವೂ ಇದೆ. ಗ್ರಾಮೀಣ ಜಗತ್ತು, ವಿಶೇಷವಾಗಿ ಕಾಡಂಚಿನ ಪರಿಸರದಲ್ಲಿ ಆಗುತ್ತಿರುವ ಬದಲಾವಣೆಗಳ ಬಗ್ಗೆ ಸಹನಾ ಅವರ ಬರಹಗಳು ಗಮನಸೆಳೆಯುತ್ತವೆ.

ಸಹನಾ ಅವರ ಎಲ್ಲ ಬರಹಗಳ ಸಾಮಾನ್ಯ ಅಂಶ ಜೀವನಪ್ರೀತಿ. ಆನೆಗಳಿಗಾಗಿ ಕಲ್ಲುಬಾಳೆ ನೆಡುವುದು, ದಣಿದು ಅಂಗಳಕ್ಕೆ ಬಂದವರಿಗೆ ಮಜ್ಜಿಗೆ ನೀಡುವುದು, ಗೋವಾ ಪ್ರವಾಸವನ್ನು ಸಂಭ್ರಮಿಸುವುದು, ತನ್ನ ಜಗತ್ತಲ್ಲಿ ಜೇನುಹುಳುಗಳಿಗೂ ಜಾಗ ಕೊಡುವುದು – ಹೀಗೆ, ಬದುಕಿನ ಪ್ರತಿಕ್ಷಣವನ್ನೂ ಅನುಭವಿಸುವ ಲೇಖಕಿಯ ಮನೋಧರ್ಮ ಅವರ ಬರಹಗಳಲ್ಲೂ ಇದೆ. ಓದುಗರ ತುಟಿಗಳಲ್ಲಿ ಮಂದಹಾಸವನ್ನು ಮೂಡಿಸುತ್ತಲೇ ಅಂತಃಕರಣವನ್ನು ತಾಕುವ ಗುಣ ಅವರ ಬರವಣಿಗೆಯದು.

‘ಇದು ಬರಿ ಮಣ್ಣಲ್ಲ’ ಕೃತಿಯ ಬರಹಗಳನ್ನು ‘ಲಲಿತ ಪ್ರಬಂಧಗಳು’ ಎಂದು ಕರೆಯಲಾಗಿದೆ. ಈ ಬರಹಗಳಲ್ಲಿ ಲಾಲಿತ್ಯವಿದೆ; ಪ್ರಬಂಧ ಗುಣವಿಲ್ಲ. ಹಾಗಾಗಿ, ಇವುಗಳನ್ನು ರೈತ ಮಹಿಳೆಯ ಅನುಭವ ಕಥನಗಳು ಎಂದು ಕರೆಯುವುದೇ ಸೂಕ್ತ. ಪ್ರಬಂಧಗಳ ಆಳ ಅಗಲ ಎರಡೂ ಇಲ್ಲಿಲ್ಲ ಎನ್ನುವುದು ಸಹನಾ ಅವರ ಬರಹಗಳ ಹೊಳಪನ್ನೇನೂ ಕಡಿಮೆ ಮಾಡುವುದಿಲ್ಲ. ಅಂತಃಕರಣದಿಂದ ತುಳುಕುವ ಈ ರಚನೆಗಳು, ಗ್ರಾಮೀಣ ಕೃಷಿ ಬದುಕಿನ ಜೀವಂತಿಕೆಯನ್ನೂ ಘನತೆಯನ್ನೂ ತಮ್ಮದಾಗಿಸಿಕೊಂಡಿವೆ. ಮುಗ್ಧತೆ, ಕುತೂಹಲ ಮತ್ತು ಉತ್ಸಾಹ ಸಹನಾ ಅವರ ಬರಹಗಳಿಗೆ ನೀರು, ಕಾವು, ಗೊಬ್ಬರವಾಗಿ ಪರಿಣಮಿಸಿವೆ.

‘ಆನೆ ಸಾಕಲು ಹೊರಟವಳು’ ಹಾಗೂ ‘ಇದು ಬರಿ ಮಣ್ಣಲ್ಲ’ ಕೃತಿಯ ಮೂಲಕ ಸಹನಾ ತಮ್ಮದೇ ಆದ ಆಪ್ತ ಭಾಷೆಯ ಕಥನಶೈಲಿಯೊಂದನ್ನು ರೂಢಿಸಿಕೊಂಡಿದ್ದಾರೆ. ತಮಗೆ ಸುಲಭ ಸರಾಗವಾಗಿರುವ ಜನಪ್ರಿಯ ಶೈಲಿಯನ್ನು ಮೀರುವ ಹಾಗೂ ಚುಟುಕು ಅನುಭವಗಳನ್ನು ಇನ್ನಷ್ಟು ಶೋಧನೆಗೆ ಒಡ್ಡುವ ಸವಾಲು ಅವರ ಮುಂದಿದೆ.



ಮಂಜಯ್ಯ ದೇವರಮನಿ ಬರೆದ ಕಥೆ
ಅಗಸಿ ಹೆಣ

ದೀಪಾವಳಿ ಮಾರನೇ ದಿನ ಬ್ಯಾಡಗಿಯಲ್ಲಿ ಕರಿಹಬ್ಬ ಜೋರು ನಡದಿತ್ತು. ಹೋರಿಗಳ ಪೈಲ್ವಾನರ ದೊಡ್ಡ ದೊಡ್ಡ ಫ್ಲೆಕ್ಸುಗಳು ತಲೆಯೆತ್ತಿದ್ದವು. ತೆರಹೇವಾರಿ ಕಮಾನುಗಳಿಂದ ಸಾರುವೆ ಕಟ್ಟಿದ ಅಖಾಡ ಸಿದ್ಧವಾಗಿತ್ತು. ಕುಲಾವಿ ಪೀಪಿಚಟ್ಟು ಕಟ್ಟಿದ ಬಲೂನುಗಳು ಬಣ್ಣದ ಹೊಳೆ ಹರಿಸಿದ್ದವು. ಅಖಾಡದ ಇಕ್ಕೆಲಗಳಲ್ಲಿ ನೆರದಿದ್ದ ಜನಗಳು ಹಬ್ಬ ಕಣ್ಣುತುಂಬಿಕೊಳ್ಳಲು ಕಾತರಿಸುತ್ತಿದ್ದರು. ತಲೆಗೆ ಸ್ಕಾರ್ಫ್ ಸುತ್ತಿ, ಕಾಲಿಗೆ ಶೂ ಹಾಕಿ ಬಣ್ಣದ ಪೋಷಾಕು ಧರಿಸಿದ ನೂರಾರು ಪೈಲ್ವಾನರು ಸಜ್ಜಾಗಿದ್ದರು. ಏರು ಬಿಸಿಲು ಹಬ್ಬದ ಕಾವು ಹೆಚ್ಚಿಸಿತ್ತು. ಅಲ್ಲಲ್ಲಿ ಕಟ್ಟಿದ ಧ್ವನಿವರ್ಧಕಗಳು ಸಾರ್ವಜನಿಕರಿಗೆ ಎಚ್ಚರಿಕೆ ನೀಡುತ್ತಿದ್ದವು. ಕಾಂತ ಅಖಾಡದಲ್ಲಿದ್ದ. ಅಗಸಿಬಾಗಿಲು ತೆಗಿಯುತಿದ್ದಂತೆ ಹೋರಿಗಳು ಪೈಲ್ವಾನರನ್ನು ಸೀಳಿಕೊಂಡು ನುಗ್ಗುತ್ತಿದ್ದವು. ಕೆಲವರು ಕೈ ಹಾಕಿದರೆ ಕೆಲವರು ಕೈ ಚೆಲ್ಲುತಿದ್ದರು. ಇನ್ನು ಕೆಲವರು ನುಗ್ಗಿದ ರಭಸಕ್ಕೆ ಕೈ ಹಾಕಿ ಮಕಾಡೆ ಬೀಳುತಿದ್ದರು.

ಪೂರ್ಣ ಕಥೆ ಓದಲು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://www.prajavani.net/short-story

ಕವನ
ನಂದಿನಿ ಹೆದ್ದುರ್ಗ ಬರೆದ ಕವನ
ಬಿಡಿ ಹೂ (ಹನಿಗವಿತೆಗಳ ಗುಚ್ಛ)

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://www.prajavani.net/poetry

ಜರ್ಮನಿಯಿಂದ ಭಾರತದವರೆಗೆ ಕಥಕ್ 'ಚಕ್ಕರ್'



ದುರ್ಗಾ ಆರ್ಯ

'ನಿರೀಕ್ಷೆ ಇಲ್ಲದೇ ಕಲಿಯಿರಿ. ಚಪ್ಪಾಳೆ ಹಿಂದೆ ಬೀಳದಿರಿ. ನರ್ತಕನ ಭಾವ ಪ್ರೇಕ್ಷಕನಿಗೆ ಅಷ್ಟೇ ಉತ್ಕಟವಾಗಿ ತಲುಪಿದರೆ ಅದೇ ಗೆಲುವು'. 20 ವರ್ಷಗಳ ನಂತರ ನೃತ್ಯವನ್ನು ಮತ್ತೆ ಆರಂಭಿಸಿದಾಗ ಪ್ರಚಾರ ಇಲ್ಲದಿದ್ದರೂ ಜನ ನನ್ನನ್ನು ಹುಡುಕಿಕೊಂಡು ಬಂದದ್ದರ ಗುಟ್ಟು ಇದೇ ಎನ್ನುತ್ತಾರೆ ದುರ್ಗಾ ಆರ್ಯ...



ಚಿತ್ರಾ ವೆಂಕಟರಾಜು

ಒಂದು ಸ್ಫೂರ್ತಿ ಮತ್ತು ಸರಿಯಾದ ಮಾರ್ಗದರ್ಶನ ಸಿಕ್ಕಿದರೆ ಕಲಾ ಜೀವನ ಯಾವೆಲ್ಲಾ ತಿರುವುಗಳನ್ನು ಪಡೆಯಬಹುದು ಎಂಬುದಕ್ಕೆ ಸಾಕ್ಷಿಯಾಗಿದ್ದಾರೆ ಲಖನೌ ಘರಾಣೆಯ ಪ್ರಸಿದ್ಧ ಕಥಕ್ ಕಲಾವಿದೆ ದುರ್ಗಾ ಆರ್ಯ.

ದುರ್ಗಾ ಆರ್ಯ ಅವರೊಡನೆ ಇತ್ತೀಚೆಗೆ ನಡೆಸಿದ ಸಂವಾದವೊಂದು ಈ ನೃತ್ಯದ ವಿಸ್ತಾರವನ್ನು ನಿರೂಪಿಸಿತು. ಈ ಸಂವಾದ ಆಯೋಜಿಸಿದ್ದು ಬೆಂಗಳೂರಿನ 'ಮಾನಸ ಜೋಶಿ'ಸ್ ಕಥಕ್' ಅಕಾಡೆಮಿಯ ಮುಖ್ಯಸ್ಥೆ, ನೃತ್ಯ ಕಲಾವಿದೆ ಹಾಗೂ ನಟಿ ಮಾನಸಾ ಜೋಶಿ.

ಕಥಕ್ ಪರಂಪರೆಯನ್ನು ಮುಂದಿನ ತಲೆಮಾರಿಗೆ ದಾಟಿಸುತ್ತಿರುವ ಗುರುಗಳ ಮತ್ತು ಅವರ ನೃತ್ಯಪದ್ಧತಿ ಹಾಗೂ ನೃತ್ಯದ ಬಗೆಗಿನ ಅವರ ಆಲೋಚನೆಗಳನ್ನು ಅರ್ಥಮಾಡಿಕೊಳ್ಳುವ ಉದ್ದೇಶದಿಂದ ಮಾನಸಾ ಅವರು 'ವಚನ –ವಿಚಾರ' ಎಂಬ ಸಂವಾದ ಸರಣಿ ಆರಂಭಿಸಿದ್ದಾರೆ.

ದುರ್ಗಾ ಆರ್ಯ ಅವರು, ತಮ್ಮ ಮೊನಚಾದ ಚಕ್ಕರ್ (ಕಥಕ್ ನೃತ್ಯದಲ್ಲಿ ತಿರುಗುವುದು), ಭಾವಪೂರ್ಣ ಅಭಿನಯ, ಸಂಕೀರ್ಣವಾದ ತಾಳಗಳ ಮೇಲಿನ ಹಿಡಿತಕ್ಕೆ ಪ್ರಸಿದ್ಧಿ. ಭಾರತೀಯರಲ್ಲದೇ ಅನೇಕ ವಿದೇಶಿಯರಿಗೂ ಕಥಕ್ ನೃತ್ಯವನ್ನು ಕಲಿಸುತ್ತಿದ್ದಾರೆ. ಪ್ರತಿ ವರ್ಷವೂ ಕೆಲವು ತಿಂಗಳು ಭಾರತಕ್ಕೆ ಬಂದು ಕಾರ್ಯಾಗಾರಗಳನ್ನು, ನೃತ್ಯದ ತರಗತಿಗಳನ್ನು ತೆಗೆದುಕೊಳ್ಳುತ್ತಾರೆ. ತಾಳಗಳ ಜತೆ ಮುಖಭಾವದ ಮೂಲಕವೇ ಕತೆಗಳನ್ನು ಹೇಳುವುದು ಅಲ್ಲೇ ಕತೆಯನ್ನು ಕಟ್ಟುವುದು ಒಂದು ಕಡೆಯಾದರೆ ಎದ್ದು ನಿಂತು ಲಯಕ್ಕೆ ತಕ್ಕಂತೆ ನಿಖರವಾದ ಹೆಜ್ಜೆ ಹಾಕುತ್ತಾ ತಮ್ಮ ಭಾವ-ಭಂಗಿಯ ಮೂಲಕ ಪ್ರೇಕ್ಷಕರನ್ನು ಸಮ್ಮೋಹಗೊಳಿಸುವ ಕಲೆ ಇನ್ನೊಂದು ಕಡೆ. ಒಂದೇ ಸಾಲನ್ನು ಹತ್ತು ಹಲವು ಬಗೆಯಲ್ಲಿ ನಿರೂಪಿಸುತ್ತಾರೆ.

ದುರ್ಗಾ ಹೆಜ್ಜೆಗಳ ಹಿಂದೆ...

ನೈನಿತಾಲ್‌ನಲ್ಲಿದ್ದ ದುರ್ಗಾ ಆರ್ಯ ಅವರ ಕುಟುಂಬ ದೆಹಲಿಗೆ ಬಂದು ನೆಲೆಸಿತು. ಆಗ ಅವರಿಗೆ 6 ವರ್ಷ. ಮನೆಯಲ್ಲಿ ಬಡತನ. ಮೂವರು ಮಕ್ಕಳು. ತಂದೆ ತಾಯಿ ಅನಕ್ಷರಸ್ಥರು. ತಂದೆ ಅಡುಗೆ ಕೆಲಸ ಮಾಡಿ ದಿನಕ್ಕೆ ನೂರು ರೂಪಾಯಿ ಸಂಪಾದಿಸುತ್ತಿದ್ದರು, ತಾಯಿ ಅವರಿವರ ಮನೆ ಕೆಲಸ ಮಾಡಿಕೊಂಡು ಸಂಸಾರ ನಡೆಸುತ್ತಿದ್ದರು. ತಮ್ಮ ಮೂವರು ಮಕ್ಕಳನ್ನೂ ಸರ್ಕಾರಿ ಶಾಲೆಗೆ ಸೇರಿಸಿದ್ದರು.

ದುರ್ಗಾ ಅವರು ಶಾಲೆಯಲ್ಲಿ ಸಂಗೀತ, ನೃತ್ಯ, ಖವ್ವಾಲಿ ಹೀಗೆ ಎಲ್ಲಾ ಚಟುವಟಿಕೆಗಳಲ್ಲೂ ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಇದನ್ನು ನೋಡಿದ ಸಂಗೀತ ಶಿಕ್ಷಕರು ಅವರನ್ನು ದೆಹಲಿಯ ಕಥಕ್ ಕೇಂದ್ರಕ್ಕೆ ಕರೆದುಕೊಂಡು ಹೋದರು. ಅಲ್ಲಿ ಪದ್ಮವಿಭೂಷಣ ಬಿರ್ಜು ಮಹಾರಾಜ್ ಅವರು ಕಲಿಸುತ್ತಿದ್ದರು. ಪುಟ್ಟ ದುರ್ಗಾರನ್ನು ನೋಡಿ, 'ನೀನು ಯಾವ ನೃತ್ಯ ಮಾಡುತ್ತೀಯ?' ಎಂದು ಕೇಳಿದಾಗ, ಹಿಂದಿಯ ಪ್ರಸಿದ್ಧ 'ಝೂಮ್ಕಾ ಗಿರಾ ರೇ' ಎಂಬ ಹಾಡಿಗೆ ನೃತ್ಯ ಮಾಡಿ ತೋರಿಸಿದರು. ಅಲ್ಲಿಂದ ಅವರು ಬಿರ್ಜು ಮಹಾರಾಜ್ ಅವರಿಂದ ನೃತ್ಯ ಶಿಕ್ಷಣವನ್ನು ಪ್ರಾರಂಭಿಸಿದರು.

ಮನೆಯ ಆರ್ಥಿಕ ಪರಿಸ್ಥಿತಿ ತಿಳಿದ ಗುರುಗಳು ಯಾವ ವೆಚ್ಚವೂ ಇಲ್ಲದೇ ನೃತ್ಯವನ್ನು ಕಲಿಸಲು ಪ್ರಾರಂಭಿಸಿದರು. ಸಣ್ಣ ವಯಸ್ಸಿನಿಂದಲೂ ಬಿರ್ಜು ಮಹಾರಾಜ್ ಅವರಲ್ಲಿ ಕಲಿತ ಹೆಮ್ಮೆ ದುರ್ಗಾ ಆರ್ಯ ಅವರದ್ದು.

ಕಥಕ್ ಕೇಂದ್ರದಲ್ಲಿ...

ಕಾಲೇಜು ಮುಗಿಸುವ ಹೊತ್ತಿಗೆ ದುರ್ಗ ಆರ್ಯ ಅವರಿಗೆ ತಮ್ಮ ದಾರಿ ತಿಳಿದುಹೋಗಿತ್ತು. ಇನ್ನು ಮುಂದೆ ಶಿಕ್ಷಣ ಪಡೆಯುವುದಿದ್ದರೆ ಅದು ನೃತ್ಯದಲ್ಲಿ ಮಾತ್ರ ಎಂದು ನಿರ್ಧರಿಸಿ, ಪೂರ್ಣಪ್ರಮಾಣದಲ್ಲಿ ಕಥಕ್ ನೃತ್ಯದಲ್ಲಿ ತೊಡಗಿಕೊಂಡರು. ಕಥಕ್ ಕೇಂದ್ರದ ತರಗತಿಗಳನ್ನು ತೆಗೆದುಕೊಳ್ಳುವುದರಲ್ಲಿ ತಮ್ಮ ಗುರುಗಳಿಗೆ ಜತೆಯಾದರು. ಯಾವುದೇ ಬ್ಯಾಚ್‌ಗಳಿಗೆ ಗುರುಗಳು ತರಗತಿ ತೆಗೆದುಕೊಂಡರೂ ದುರ್ಗಾ ಅವರ ಜತೆ ಕೆಲವು ಶಿಷ್ಯರು ಅಲ್ಲಿರುತ್ತಿದ್ದರು. ಉಳಿದ ಶಿಷ್ಯರುಗಳಿಗೆ ಕಲಿಸುವಾಗಲೂ ತಾವು ಅವರಿಗೂ ಕಲಿಸುತ್ತಾ ತಾವು ತಾಲೀಮು ಮಾಡುತ್ತಿದ್ದರು. ಹಲವು ಬಾರಿ ಕಥಕ್ ಕೇಂದ್ರದ ಆವರಣದಲ್ಲಿ ತತ್ಕಾರ್ (ಕಥಕ್ ನೃತ್ಯದಲ್ಲಿ ಹೆಜ್ಜೆ ಹಾಕುವ ವಿಶೇಷ ಪದ್ಧತಿ)ಹಾಗೂ ಚಕ್ಕರ್‌ಗಳನ್ನು ಅಭ್ಯಾಸ ಮಾಡುತ್ತಿದ್ದರು. ಕಥಕ್ ಕೇಂದ್ರ ಹಾಗೂ ರಾಷ್ಟ್ರೀಯ ನಾಟಕ ಶಾಲೆ ಒಂದೇ ಆವರಣದಲ್ಲಿರುವುದರಿಂದ ಒಂದು ಕಡೆ ನಟರು ತಮ್ಮ ಸಂಭಾಷಣೆಯನ್ನು ಅಭ್ಯಾಸ ಮಾಡುತ್ತಿದ್ದರೆ ಒಂದು ಕಡೆ ಇವರೆಲ್ಲ ನೃತ್ಯಾಭ್ಯಾಸ ಮಾಡುತ್ತಿದ್ದರು. ಬೆಳಗ್ಗೆ ಬಂದು ಗೆಜ್ಜೆ ಕಟ್ಟಿದರೆ ರಾತ್ರಿಯವರೆಗೂ ಒಂದಲ್ಲಾ ಒಂದು ಅಭ್ಯಾಸ ನಡೆಯುತ್ತಲೇ ಇರುತ್ತಿತ್ತು. ಇವರ ಕ್ಲಾಸ್ ಮುಗಿಯುವ ಹೊತ್ತಿಗೆ ರಾತ್ರಿಯೇ ಆಗುತ್ತಿತ್ತು. ಅಷ್ಟು ರಾತ್ರಿಯಲ್ಲಿ ಮನೆಗೆ ಹೋಗಬೇಕಾದಾಗ ನೆಂಟರಿಂದ, ನೆರೆಹೊರೆಯವರಿಂದ ಅನೇಕ ಮಾತುಗಳನ್ನು ಕೇಳಬೇಕಾಗಿ ಬರುತ್ತಿತ್ತು. ಮನಸ್ಸಿಗೆ ನೋವಾಗುತ್ತಿತ್ತು. ಅವರಿಗ್ಯಾರಿಗೂ ನೃತ್ಯದ ಬಗ್ಗೆ ತಿಳಿದಿರಲಿಲ್ಲ. ನನ್ನ ತಂದೆ ತಾಯಿ ಇಟ್ಟ ನಂಬಿಕೆಯಿಂದ ಎಲ್ಲಾ ಅಡೆತಡೆಗಳನ್ನು ದಾಟಿ ಅಂದುಕೊಂಡ ದಾರಿಯಲ್ಲಿ ನಡೆಯಲು ಸಹಾಯವಾಯಿತು ಎಂದು ನೆನಪಿಸಿಕೊಂಡರು ದುರ್ಗಾ.

ಮದುವೆಯಾಗಿ ಜರ್ಮನಿಗೆ ಬಂದ ನಂತರ, ಎಲ್ಲಾ ಹೊಸದು. ಇಲ್ಲಿ ಹೇಗೆ ನೃತ್ಯವನ್ನು ಮುಂದುವರಿಸುವುದು ತಿಳಿಯುತ್ತಿರಲಿಲ್ಲ. ಮನಸ್ಸು ಮುದುಡಿಹೋಗುತ್ತಿತ್ತು. ಅಲ್ಲಿಯ ಭಾಷೆಯಾಗಲೀ, ಇಂಗ್ಲಿಷ್ ಭಾಷೆಯಲ್ಲಾಗಲೀ ವ್ಯವಹರಿಸುವುದು ಮೊದಮೊದಲು ಸವಾಲೆನಿಸಿತು. ಅಲ್ಲಿ ಭಾರತದ ಶಾಸ್ತ್ರೀಯ ಸಂಗೀತ ಕಲಿಯುತ್ತಿದ್ದ ಕಲಾವಿದರ ಪರಿಚಯವಾದ ಮೇಲೆ ಅಲ್ಲಿ ಕೆಲವು ಕಾರ್ಯಕ್ರಮಗಳನ್ನು ನೀಡಿದರು. ಜರ್ಮನಿಯಲ್ಲಿ ಕೆಲವು ನೃತ್ಯದ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದರು. ಬಿರ್ಜು ಮಹಾರಾಜ್ ಅವರು ನೃತ್ಯ ಸಂಯೋಜನೆ ಮಾಡಿದ ರೂಪಕಗಳಾದ 'ಅಂಗ್ ತರಂಗ್', 'ರಾಮಾಯಣ್', 'ಕೃಷ್ಣಾಯಣ್', 'ಕುಮಾರ್ ಸಂಭವ್' ಮುಂತಾದ ಪ್ರದರ್ಶನಗಳನ್ನು ಹಲವಾರು ದೇಶಗಳಲ್ಲಿ ನೀಡಿದ್ದಾರೆ. ಜರ್ಮನಿಗೆ ಹೋದ ನಂತರದ 20 ವರ್ಷ ಅವರು ಭಾರತದಲ್ಲಿ ನೃತ್ಯದೊಂದಿಗೆ ಸಂಪರ್ಕವೇ ಇಲ್ಲದಂತೆ ಇದ್ದರು.

ಮತ್ತೆ ಗೆಜ್ಜೆಯ ಹೆಜ್ಜೆ...

ಸುಮಾರು 20 ವರ್ಷಗಳ ನಂತರ ಭಾರತದಲ್ಲಿ 2017 ನೃತ್ಯದ ಕಾರ್ಯಾಗಾರಗಳನ್ನು ಪ್ರಾರಂಭಿಸಿದರು. ದುರ್ಗಾ ಆರ್ಯ ಅವರು ಬೆಂಗಳೂರಿನಲ್ಲಿ ನಡೆಸಿದ ಮೊದಲ ಕಾರ್ಯಾಗಾರದಲ್ಲೇ ಮಾನಸಾ ಜೋಶಿಯವರು ಭಾಗವಹಿಸಿದ್ದರು ಮತ್ತು ಅಂದಿನಿಂದ ಅವರ ಮಾರ್ಗದರ್ಶನದಲ್ಲೇ ನೃತ್ಯಾಭ್ಯಾಸ ಮಾಡುತ್ತಿದ್ದಾರೆ. ದುರ್ಗಾ ಆರ್ಯ ಅವರು ಭಾರತದಲ್ಲಿ ಮತ್ತೆ ತರಗತಿಗಳನ್ನು ಆರಂಭಿಸಿದಾಗ ಅವರ ಬಳಿ ಬ್ರೋಷರ್, ವಿಸಿಟಿಂಗ್ ಕಾರ್ಡ್ ಯಾವುದೂ ಇರಲಿಲ್ಲ. ಅವರು ಅಷ್ಟು ವರ್ಷ ನೃತ್ಯ ಕಲಿತಿದ್ದರೂ ಯಾವ ಸರ್ಟಿಫಿಕೇಟ್‌ಗಳನ್ನು ಪಡೆದಿರಲಿಲ್ಲ. ಇದ್ದುದೊಂದೇ ಗುರುಗಳು ಕಲಿಸಿದ ನೃತ್ಯ. ಅವರ ಕಲಿಕೆಯೇ ಅವರ ಅಂಕ ಪಟ್ಟಿ. ಒಮ್ಮೆ ಮತ್ತೆ ನೃತ್ಯ ಮಾಡಲು ಪ್ರಾರಂಭಿಸಿದಾಗ ಕಲಿತ ವಿದ್ಯೆ ತಾನಾಗೇ ಬಂದು ಜತೆಯಾಯಿತು. ಹಲವಾರು ಶಿಷ್ಯರು ಹುಡುಕಿಕೊಂಡು ಬಂದರು. ನೃತ್ಯಶೈಲಿಯ ಶುದ್ಧತೆ ಹಾಗೂ ಅಂಗಶುದ್ಧಿ, ಪರಂಪರೆಯಿಂದ ಬಂದದ್ದನ್ನು ಬಂದ ಹಾಗೆಯೇ ಮುಂದಿನ ತಲೆಮಾರಿಗೆ ದಾಟಿಸಬೇಕೆಂಬ ಹಂಬಲದಲ್ಲಿ ಹಲವಾರು ಶಿಷ್ಯರನ್ನು ತಯಾರು ಮಾಡುತ್ತಿದ್ದಾರೆ. ಇಂದಿಗೂ ಭಾರತದಲ್ಲೂ ಮತ್ತು ಬೇರೆ ಬೇರೆ ದೇಶಗಳಲ್ಲೂ ವಿದ್ಯಾರ್ಥಿಗಳು ಇವರ ಬಳಿ ನೃತ್ಯಾಭ್ಯಾಸ ಮಾಡುತ್ತಿದ್ದಾರೆ. ಕರ್ನಾಟಕದಲ್ಲಿ ಮಾನಸಾ ಜೋಶಿಯವರು ಇವರ ಶಿಷ್ಯೆ. ಇವರು ನಡೆಸಿದ ಕಥಕ್ ಕಾರ್ಯಾಗಾರಗಳಲ್ಲೂ ಭಾಗವಹಿಸಿದ್ದಾರೆ.

ಮಡಿವಂತಿಕೆ ಬೇಡ

ನೃತ್ಯ, ಅದು ಶಾಸ್ತ್ರೀಯ, ಜಾನಪದ, ಅಥವಾ ಸಿನಿಮಾ ನೃತ್ಯವೇ ಇರಲಿ ಅದು ಒಳ್ಳೆಯದೇ ಆಗಿದೆ. ಕಥಕ್ ನೃತ್ಯ ಕಲಾವಿದೆ ಬಾಲಿವುಡ್ ಸಿನೆಮಾದ ಒಂದು ಒಳ್ಳೆಯ ಹಾಡಿಗೆ ಕಥಕ್ ನೃತ್ಯ ಮಾಡಿದರೆ ಏನೂ ತೊಂದರೆ ಇಲ್ಲ. ಅದು ಖುಷಿಯ ವಿಷಯವೇ. ಆದರೆ ಸರಿಯಾಗಿ ನೃತ್ಯವನ್ನು ಕಲಿಯದೇ ಕಥಕ್ ನ ರೀತಿ ಕಾಣುವ ನೃತ್ಯ ಮಾಡಿ 'ಇದು ಕಥಕ್ ನೃತ್ಯ' ಎಂದರೆ ಅದು ಬಹಳ ತಪ್ಪು. ಅದು ಹಲವರನ್ನು ದಾರಿ ತಪ್ಪಿಸುತ್ತದೆ.

ಕಲಿಯುವಾಗ ಯಾವುದರ ನಿರೀಕ್ಷೆ ಇಲ್ಲದೇ ಕಲಿಯಬೇಕು. ಪ್ರದರ್ಶನ ಯಾವಾಗ ಕೊಡುತ್ತೇನೆ, ರಂಗದ ಮೇಲೆ ಯಾವಾಗ ಹೋಗುತ್ತೇನೆ ಎನ್ನುವುದನ್ನು ಬಿಟ್ಟು ಹೇಗೆ ಅಂಗಶುದ್ಧಿಯನ್ನು ಸಾಧಿಸುತ್ತೇನೆ ಎಂಬುದರ ಕಡೆಗೆ ಗಮನ ಇಟ್ಟು ತಾಳ್ಮೆಯಿಂದ ಕಾದರೆ ಎಲ್ಲವೂ ಆಗುತ್ತದೆ. ಗುರಿಯನ್ನು ಸಾಧಿಸಲು ತಾಲೀಮನ್ನು ಬಿಟ್ಟು ಬೇರೆ ದಾರಿ ಇಲ್ಲ. ಪ್ರತಿನಿತ್ಯ ನೃತ್ಯವನ್ನೇ ಧ್ಯಾನಿಸಬೇಕು. ಹಾಗಾದಾಗ ಎಲ್ಲವೂ ಒಲಿದು ಬರುತ್ತದೆ. ಕಲಿಯಲು ಯಾವುದಾದರೂ ಅಡ್ಡಿ ಬಂದಾಗ ಈ ಅಡ್ಡಿಯನ್ನು ಹೇಗೆ ನಿವಾರಿಸಿಕೊಂಡು ಅದರಿಂದ ಹೊರಗೆ ಬರಬೇಕು ಎಂಬುದನ್ನು ಯೋಚಿಸಬೇಕು. ನಮ್ಮ ಕೆಲಸ-ಕಾರ್ಯ, ಇದು ಯಾವುದೂ ಸಾಧನೆಗೆ 'ನೆಪ' ಆಗಬಾರದು. ಹೊರಬರಲು ಯಾವುದಾದರೂ ದಾರಿ ಇದ್ದೇ ಇರುತ್ತದೆ ಎನ್ನುತ್ತಾರೆ ಅವರು.

ಯಾವ ಕಲಾವಿದನೂ ಚಪ್ಪಾಳೆಯ ಹಿಂದೆ ಬೀಳಬಾರದು. ಕಥಕ್‌ನಲ್ಲಿ 10 ಅಥವಾ 20 ಚಕ್ಕರ್ (ಸುತ್ತು) ಹಾಕಿ ನಿಂತ ಮೇಲೆ ಖಂಡಿತಾ ಜನರು ಚಪ್ಪಾಳೆ ತಟ್ಟುತ್ತಾರೆ. ಆದರೆ ಅದಕ್ಕೆ ರೂಢಿಯಾಗಬಾರದು. ನರ್ತಕನ ಭಾವ ಪ್ರೇಕ್ಷಕನಿಗೆ ಅಷ್ಟೇ ಉತ್ಕಟವಾಗಿ ತಲುಪಬೇಕು ಆಗ ಅವನ/ಳ ಮನಸ್ಸಿನಲ್ಲಿ 'ಆಹಾ'! ಎಂದೆನಿಸಿದರೆ ಅದೇ ಗೆಲುವು. ಇಲ್ಲದಿದ್ದರೆ 20 ವರ್ಷಗಳ ನಂತರ ಯಾವ ಜಾಹೀರಾತೂ ಇಲ್ಲದೇ ನೃತ್ಯವನ್ನು ಮತ್ತೆ ಆರಂಭಿಸಿದಾಗ ಮತ್ತೆ ಯಾಕೆ ಜನ ನನ್ನನ್ನೇ ಹುಡುಕಿಕೊಂಡು ಬರಬೇಕು?'ಎಂದು ಅವರು ಕೇಳುವುದರಲ್ಲೇ ಉತ್ತರವೂ ಇದೆ.

ಭಾನುವಾರವೂ ಕಥಕ್ ಗುಂಗು

ಚಿಕ್ಕ ವಯಸ್ಸಿನಲ್ಲಿ ಭಾನುವಾರವೂ ಗುರುಗಳು ಅವರ ಮಕ್ಕಳ ಜೊತೆಗೆ ಅವರ ಮನೆಯಲ್ಲಿಯೇ ಕ್ಲಾಸ್ ಮಾಡುತ್ತಿದ್ದರು. ಹಾಗಾಗಿ ಅವರ ಶಿಷ್ಯರೂ ಅವರ ಸ್ವಂತ ಮಕ್ಕಳಂತೆಯೇ ಕಲಿತರು. ನಂತರದಲ್ಲಿ ಭಾನುವಾರವೂ ಅಭ್ಯಾಸ ಮಾಡುವವರಿಗೆ ಅನುಕೂಲವಾಗಲು ಕಥಕ್ ಕೇಂದ್ರದ ಕೊಠಡಿಗಳು ತೆರೆದಿರುವಂತೆ ನೋಡಿಕೊಳ್ಳುತ್ತಿದ್ದರು. ಅವರ ಶಿಷ್ಯಂದಿರಲ್ಲಿ ಒಂದೊಂದಕ್ಕೆ ಒಬ್ಬೊಬ್ಬರ ಉದಾಹರಣೆಯನ್ನು ಕೊಡುತ್ತಿದ್ದರು. ಅಭಿನಯಕ್ಕೆ ಶಾಶ್ವತಿ ಸೇನ್, ಚಕ್ಕರ್(ಕಥಕ್ ನೃತ್ಯದಲ್ಲಿ ತಿರುಗುವ ವಿಶೇಷವಾದ ಪದ್ಧತಿ)ಗೆ ದುರ್ಗಾ ಅವರ ಉದಾಹರಣೆ ಕೊಡುತ್ತಿದ್ದರು. ಒಬ್ಬೊಬ್ಬರು ಉಳಿದವರನ್ನು ನೋಡಿ ಕಲಿಯುತ್ತಿದ್ದುದು ಹೆಚ್ಚು. ಆದರೆ ಅದರಲ್ಲಿ ಈರ್ಷ್ಯೆ ಇರಲಿಲ್ಲ. ದುರ್ಗಾ ಅವರನ್ನು ಗುರುಗಳು ಪ್ರೀತಿಯಿಂದ 'ಬಿಜಲಿ'ಎಂದು ಕರೆಯುತ್ತಿದ್ದರು. ಅಭ್ಯಾಸ ಮಾಡದೇ ಬಂದಾಗ ಬೈಗುಳಗಳನ್ನೂ ಕೇಳಬೇಕಾಗುತ್ತಿತ್ತು. ನೃತ್ಯವನ್ನು ಎಷ್ಟರಮಟ್ಟಿಗೆ ಧ್ಯಾನಿಸುತ್ತಿದ್ದರೆಂದರೆ, ಒಮ್ಮೊಮ್ಮೆ ರಸ್ತೆ ದಾಟುವಾಗ ಪಡಂತ್ (ನೃತ್ಯ ಮಾಡುವುದಕ್ಕೆ ಹೇಳುವ ಬೋಲ್ ಅಥವಾ ಸೊಲ್ಲುಕಟ್ಟು) ಗಳನ್ನು ತಾಳಗಳನ್ನು ಹಾಕುತ್ತಾ ಮೈಮರೆತು ರಸ್ತೆಯಲ್ಲಿ ಹೋಗುವ ವಾಹನ ಸವಾರರಿಂದ, ಜನಗಳಿಂದ ಬಯ್ಯಿಸಿಕೊಂಡ ಎಷ್ಟೋ ಉದಾಹರಣೆಗಳಿವೆ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

ಯಾವಾಗಲೂ 21

10ರೊಳಗಿನ ಒಂದು ಸಂಖ್ಯೆ ಬರೆದಿಟ್ಟುಕೊಳ್ಳಿ. ಮುಂದೆ ನಾನು ಹೇಳಿದಂತೆ ಮಾಡಿ. ಅದನ್ನು 3ರಿಂದ ಗುಣಿಸಿ; ಅದಕ್ಕೆ 2 ಕೂಡಿಸಿ ಮತ್ತೆ 3ರಿಂದ ಗುಣಿಸಿ ನಂತರ ನೀವು ಬರೆದುಕೊಂಡ ಸಂಖ್ಯೆ ಕೂಡಿಸಿ. ಈಗ ಬಂದ ಉತ್ತರದಲ್ಲಿ ಕೊನೆ ಅಂಕಿ ಹೊಡೆದು ಹಾಕಿ. ನಂತರ ಮತ್ತೆ 2 ಕೂಡಿಸಿ. ಈಗ 4ರಿಂದ ಭಾಗಿಸಿ. ಮತ್ತೆ 19 ಕೂಡಿಸಿ. ಈಗ ಬಂದ ಉತ್ತರ ನಾನು ಹೇಳುತ್ತೇನೆ.

ಉತ್ತರ: 21 ಸರಿ ತಾನೇ?

ಉದಾ: ನಿನ್ನ ಸಂಖ್ಯೆ 7 ಆಗಿರಲಿ.

x 3 ಗುಣಿಸಿದಾಗ

21
+ 2
23
x 3
69
+ 7
76 ಮೊದಲನೇ ಅಂಕಿ ಹೊಡೆದು ಹಾಕಿದಾಗ
+ 2
4) 8 (2
8
0
ಇಲ್ಲಿ 2 ಭಾಗಲಬ್ಧಕ್ಕೆ
+ 19 ಕೂಡಿಸಿದಾಗ
21



ಹೌದು! ನಾನು ಹೇಳಿದ ಉತ್ತರವೂ 21.

ನಿಮ್ಮ ಗೆಳೆಯರೊಂದಿಗೆ ಮೇಲಿನ ಕ್ರಮವನ್ನು ಅನುಸರಿಸಿ. ನೀವೂ ಆಡಿ ನೋಡಿ.

ಅದಲು ಬದಲು ಕಂಚಿ ಕದಲು...

ಇಲ್ಲಿರುವ ಪದಗಳ ಅಕ್ಷರಗಳನ್ನು ಬಳಸಿಕೊಂಡು ಅಷ್ಟೇ ಅಕ್ಷರಗಳ ಬೇರೊಂದು ಪದ ರಚಿಸಬಲ್ಲಿರಾ?

1. ರವದಿ =	______	7. ನಕಲು =	______
2. ಬಹಳ =	______	8. ಮಾನಸ =	______
3. ಹಗುರ =	______	9. ಮನನ =	______
4. ಮುಳುಗು =	______	10. ರಮಣ =	______
5. ಪ್ರಮಥ =	______	11. ತಗಣೆ =	______
6. ಸವತಿ =	______	12. ಕಡಿದ =	______

ಡಶ್ಸ್ಗ ಚಕ್ಕ್ಯ ಕೇಿಶ್ರಷ್ಕ್ಯ ಕಥೆಯ

ಪದ ಹಿಗ್ಗು

ಇಲ್ಲಿ ಕೊಟ್ಟಿರುವ ಮಧ್ಯದ ಅಕ್ಷರಕ್ಕೆ ಮೇಲಿನ ಪಟ್ಟಿಯ ಪದವನ್ನು ಹಿಗ್ಗಿಸಿ ಆಚೀಚೆ ತುಂಬಿದರೆ ಮೂರು ಅಕ್ಷರದ ಪದವಾಗುತ್ತದೆ ಹೊಂದಿಸಿ.

1. ಕಿಡಿ 2. ಹೋಳಿ 3. ನಗೆ 4. ಕರ 5. ಕಡೆ 6. ವಿಷ 7. ಗುರು 8. ಸೋಸು

1.		ವ	
2.		ನ	
3.		ಶೇ	
4.		ಬ	
5.		ಟು	
6.		ಲಿ	
7.		ಮ್ಮಾ	
8.		ಲಾ	


ಟ್ವೆಂಟಿ – 20 ಮ್ಯಾಚ್

ಇಲ್ಲಿ ಕೊಟ್ಟಿರುವ ಹೆಸರುಗಳ ಆರಂಭಿಕ ಅಕ್ಷರಗಳ (ಇನಿಷಿಯಲ್) ಜೊತೆ ಅವುಗಳಿಗೆ ಸಂಬಂಧಿಸಿದ ಹೆಸರುಗಳನ್ನು ಹೊಂದಿಸಿ.

1.	ಡಿ.ವಿ.	A.	ಬೇಂದ್ರೆ
2.	ಎಂ.ಎಸ್.	B.	ಪುಟ್ಟಪ್ಪ
3.	ಕೆ.ಎಸ್.	C.	ಗುಂಡಪ್ಪ
4.	ಎಂ.ಕೆ.	D.	ಅಯ್ಯರ್
5.	ಕೆ.ವಿ.	E.	ರಾಜರತ್ನಂ
6.	ಜಿ.ವಿ.	F.	ಶಿವರುದ್ರಪ್ಪ
7.	ಜಿ.ಪಿ.	G.	ಕೃಷ್ಣ
8.	ಡಿ.ಎಂ.	H.	ನಂಜುಂಡಪ್ಪ
9.	ವಿ.ಕೆ.	I.	ಪಾಟೀಲ
10.	ಸಿ.ವಿ.	J.	ಕೈಲಾಸಂ
11.	ಬಿ.ಆರ್.	K.	ಶ್ರೀನಿವಾಸ
12.	ಜಿ.ಕೆ.	L.	ಇಂದಿರಾ
13.	ಡಿ.ಸಿ.	M.	ಬಾಲಸುಬ್ರಹ್ಮಣ್ಯ
14.	ಎಸ್.ಪಿ.	N.	ಗೋಕಾಕ್
15.	ಟಿ.ಪಿ.	O.	ಪಾವಟೆ
16.	ಜಿ.ಎಸ್.	P.	ಪಂತಲು
17.	ಬಿ.ಸಿ.	Q.	ವೆಂಕಟೇಶ
18.	ಪಿ.ಬಿ.	R.	ಸುಬ್ಬುಲಕ್ಷ್ಮೀ
19.	ಎಸ್.ಎಂ.	S.	ರಾಮನ್
20.	ಡಿ.ಆರ್.	T.	ಅಶ್ವತ್ಥ

ಮರ ಮಂಗನಾಟ

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ




ಇದು ಚೋರ– ಪಾರರ ನಡುವಿನ 'ಮುಟ್ಟಾಟ'. ಇದನ್ನು ಆಡಲು ನಾವು ನಾಲ್ಕೈದು ಮಂದಿ ಗೆಳೆಯರು ಸೇರಿದರೆ ಸಾಕು. ಆಡುವ ವಿಧಾನವೂ ತುಂಬಾ ಸರಳ



ಎಷ್ಟು ಗೆಳೆಯರಿರುವವೋ ಅಷ್ಟು ಸಂಖ್ಯೆಯ ಸಣ್ಣ ಎಲೆಗಳನ್ನು ಕಿತ್ತು, ಅವುಗಳನ್ನು ಜೋಡಿಸಬೇಕು. ಒಂದು ಎಲೆಯ ನಡುವೆ ರಂಧ್ರ ಮಾಡಿ ಅದನ್ನು ಉಳಿದ ಎಲೆಗಳ ನಡುವೆ ಕಾಣಿಸದಂತೆ ಇರಿಸಬೇಕು



ಈಗ ಎಲ್ಲರೂ ಒಂದೊಂದು ಎಲೆ ತೆಗೆದುಕೊಳ್ಳಬೇಕು. ಮಧ್ಯ ರಂಧ್ರವಿರುವ ಎಲೆ ಮುಟ್ಟಿದವ 'ಚೋರ' ಇನ್ನುಳಿದ ಎಲೆ ಮುಟ್ಟಿದವರು 'ಪಾರ'ರು



ಸುಲಭವಾಗಿ ಹತ್ತಲು ಮತ್ತು ಜಿಗಿಯಲು ಅನುಕೂಲವಿರುವ ಮರ ಆಯ್ಕೆಮಾಡಿಕೊಳ್ಳಬೇಕು. ಎಲ್ಲರೂ ಮರ ಹತ್ತಿದಾಗ 'ಚೋರ' ನಾದವನು ಮರವೇರಿ ಅವರನ್ನು ಮುಟ್ಟಬೇಕು



ಹೀಗೆ ಮುಟ್ಟಲು ಬಂದ ಚೋರನಿಂದ ಇನ್ನುಳಿದವರು ತಪ್ಪಿಸಿಕೊಳ್ಳಲು ಟೊಂಗೆಯಿಂದ ಟೊಂಗೆಗೆ ಎಗರುವುದು. ಇನ್ನೇನು ಮುಟ್ಟಿದ ಅನ್ನುವಷ್ಟರಲ್ಲಿ ತುದಿಯ ಟೊಂಗೆಯಿಂದ ಕೆಳಗೆ ಜಿಗಿಯಬೇಕು



ಕೆರೆಯ ದಂಡೆಯಲ್ಲಿ ಮರವಿದ್ದರೆ ತುದಿ ಟೊಂಗೆಯಿಂದ ನೀರಿಗೆ ಜಿಗಿದು ಈಜಿ ದಡಸೇರಬೇಕು. ಹೌದು 'ಚೋರ'ನಿಂದ ಹರಸಾಹಸದಲ್ಲಿ ತಪ್ಪಿಸಿಕೊಳ್ಳುವ 'ಮುಟ್ಟಾಟ' ಅದೆಷ್ಟು ಮಜ?

ಶಬ್ದಗಳೊಡನೆ ಸರಸ

ತಿರುಚುಳಿ ಮುರುಚುಳಿ

1. ಪದ–ಗೋಪುರ (ಹೇಗಾದರೂ ಓದಿ ನೋಡಿ)

ನಾ
ಕಾ ಕಾ
ನ ಯ ನ
ನ ವ ವ ನ
ರ ವಾ ನೆ ವಾ ರ
ಗ ಜಾ ನ ನ ಜಾ ಗ
ನ ವ ಕ ವಿ ಕ ವ ನ
ನ ವ ಕ ರ ರ ಕ ವ ನ
ಕ ನ ಕ ನ ಧ ನ ಕ ನ ಕ

2. ಇಲ್ಲಿ ಕೊಟ್ಟಿರುವ ಪದಗಳನ್ನು ಕನ್ನಡಿ ಎದುರು ಹಿಡಿದು ಓದಿದರೂ ಬದಲಾಗುವುದಿಲ್ಲ.

M	T	H	W	T
A	O	I	H	A
T	M	M	A	X
	A		T	I
	T			
	O			

ಕಳೆದ ಸಂಚಿಕೆಯ ಸರಿ ಉತ್ತರಗಳು

ಶಬ್ದಗಳೊಡನೆ ಸರಸ

1. ಹತ್ತಿ 2. ರಾಗಿ 3. ಅಗಸೆ 4. ಉದ್ದು
5. ಗೋಧಿ 6. ಕಡಲೆ 7. ಹುರುಳಿ 8. ಹೆಸರು

ಅದಲು ಬದಲು ಕಂಚಿ ಬದಲು

1. ಜನನಮರಣ 2. ಹರದಾರಿ
3. ಪರದಾಟ 4. ಜನಬರಲಿ

ಪದಹಿಗ್ಗು

1. ಕಬಡ್ಡಿ 2. ಜೋಪಡಿ 3. ಹುಡುಗಿ 4. ಕಣ್ಕಟ್ಟು
5. ಗರಡಿ 6. ಕಾದಾಟ 7. ಮಲಗು 8. ಕಠೋರ

ಟ್ವೆಂಟಿ – 20 ಮ್ಯಾಚ್

A ವಿಭಾಗ


1-I	2-G	3-J	4-A	5-H
6-B	7-F	8-D	9-E	10-C

B ವಿಭಾಗ

1-J	2-E	3-G	4-A	5-B
6-I	7-C	8-H	9-F	10-D

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು



ಸಂತೃಪ್ತಿ ಚಂದ್ರಶೇಖರ
ಸಿಂಧನೂರು (ರಾಯಚೂರು)



ಹರ್ಷಿತಾ ಎಂ,
ಬೆಳಗಾವಿ



ತರಂಗ ಬೆಟ್ಟಪುರ
ಬೆಂಗಳೂರು

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇ- ಮೇಲ್ ವಿಳಾಸ:

majakoora@prajavani.co.in

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹435
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹442

ಮುಂಬೈ ಧಾರಣೆ

ಶೇಂಗಾ

23-10-2021

ಜಾವಾ 70/80(ಹೊಸ)	10450-10500
ಜಾವಾ 80/90(ಹೊಸ)	10150-10200
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	9300-9400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1460 (1460)
ಒಂದು ವಾರದ ಡೆಲಿವರಿ	1455 (1455)
ಸೋಯಾ ಕಚ್ಚಾ	1255 (1260)
ಪಾಮ್ ವಾರದ ಡೆಲಿವರಿ	1198 (1198)
ಸೂರ್ಯಕಾಂತಿ ಎಣ್ಣೆ ಕಚ್ಚಾ	1280 (1280)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

47,750 (47,750)

ಬೆಳ್ಳಿ ಕೆ.ಜಿ 65,300 (65,350)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೇಂದ್ರೋದ್ಯಮಗಳ ಐಪಿಒ: ಆರ್ಥಿಕ ಶಿಸ್ತಿಗೆ ಪೂರಕ

ಬೆಂಗಳೂರು: ಕೇಂದ್ರ ಸರ್ಕಾರದ ಮಾಲೀಕತ್ವದ ಉದ್ಯಮಗಳಲ್ಲಿ 'ಐಪಿಒ'ದಿಂದಾಗಿ ಪಾರದರ್ಶಕತೆ ಹೆಚ್ಚಿ, ಆರ್ಥಿಕ ಶಿಸ್ತು ಮೂಡಲಿದೆ ಎಂಬ ವಾದ ಮತ್ತು ಐಪಿಒ ಪ್ರಕ್ರಿಯೆಯು ಉದ್ಯಮಗಳನ್ನು ಖಾಸಗೀಕರಣ ಮಾಡುವ ಮೊದಲ ಹೆಜ್ಜೆ ಎಂಬ ಪ್ರತಿವಾದ 'ಪ್ರಜಾವಾಣಿ' ಶನಿವಾರ ನಡೆಸಿದ ಸಂವಾದದಲ್ಲಿ ಮಂಡನೆಯಾಯಿತು. ಅತಿಥಿಗಳು ಹಂಚಿಕೊಂಡ ಅಭಿಪ್ರಾಯದ ಸಂಕ್ಷಿಪ್ತ ರೂಪ ಇಲ್ಲಿದೆ.

ಪ್ರಜಾವಾಣಿ ಸಂವಾದ

'ಹೂಡಿಕೆದಾರರ ದೃಷ್ಟಿಯಿಂದ ಒಳ್ಳೆಯದು'



ಕೇಂದ್ರೋದ್ಯಮಗಳ ಐಪಿಒ ಹೂಡಿಕೆದಾರರ ದೃಷ್ಟಿಯಿಂದ ಉತ್ತಮ ಬೆಳವಣಿಗೆ. ಆರ್ಥಿಕವಾಗಿ ಸಬಲವಾಗಿರುವ ಕಂಪನಿಗಳ ಐಪಿಒ ಉತ್ತಮ ಗಳಿಕೆ ತಂದುಕೊಡುತ್ತದೆ. ಸದ್ಯ, ಸಾಂಪ್ರದಾಯಿಕ ಹೂಡಿಕೆಗಳಲ್ಲಿ ಜನರಿಗೆ ಬರುವ ಗಳಿಕೆ ಕಡಿಮೆ ಇದೆ. ಹಣದುಬ್ಬರ ಪ್ರಮಾಣ ಮೀರಿ ಲಾಭ ತಂದುಕೊಡುವುದು ಈಕ್ವಿಟಿ ಮಾತ್ರ. ಈಗ ಐಪಿಒಗೆ ಸಿದ್ಧವಾಗಿರುವ 'ಎಲ್ಐಸಿ' ಜನರಿಗೆ ಬೇಕಾದ ಉತ್ಪನ್ನಗಳನ್ನು ನೀಡುವಲ್ಲಿ ಹಿಂದೆ ಬಿದ್ದಿದೆ. ಅದು ಸ್ಪರ್ಧಾತ್ಮಕ ಆಗಬೇಕು ಎಂದರೆ ಲಿಸ್ಟೆಡ್ ಕಂಪನಿ ಆಗಬೇಕು. ಐಪಿಒ, ಷೇರುಮಾರುಕಟ್ಟೆ ಎಂದರೆ ಒಂದಿಷ್ಟು ಅಪಾಯ ಇದ್ದೇ ಇರುತ್ತದೆ. ಆದರೆ, ಸೆಬಿ ಹೂಡಿಕೆದಾರರ ಹಿತವನ್ನು ಕಾಯುತ್ತದೆ ಎಂಬ ನಂಬಿಕೆಯನ್ನು ನಾವು ಹೊಂದಿರಬೇಕು.

- **ಶರತ್ ಎಂ.ಎಸ್.**, ಹೂಡಿಕೆ ತಜ್ಞ

'ಐಪಿಒದಿಂದ ಅಭಿವೃದ್ಧಿ ಸಾಧ್ಯವಿಲ್ಲ'



ಕೇಂದ್ರೋದ್ಯಮಗಳ ಐಪಿಒ ಬೇಡ. ಐಪಿಒ ಮೂಲಕ ಖಾಸಗೀಕರಣದತ್ತ ಹೆಜ್ಜೆ ಇಡುತ್ತಿರುವುದು ಅಪಾಯಕಾರಿ. ಇದು ಸರ್ಕಾರದ ಶಕ್ತಿಯನ್ನು ಕುಂದಿಸುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆ ಇರುವಾಗ, ಸರ್ಕಾರಗಳು ಆರ್ಥಿಕವಾಗಿ ಸಬಲ ಆಗುವುದು ಮುಖ್ಯ. ಕೇಂದ್ರೋದ್ಯಮಗಳು ಸರ್ಕಾರಕ್ಕೆ ಹೆಚ್ಚು ಆದಾಯ ತರುವಂತಹವು. ಎಲ್ಐಸಿಯ ಐಪಿಒದ ಅಗತ್ಯ ಏನು? ದೇಶದ ಜನ ಬಹಳ ನಂಬಿಕೆ ಇರಿಸಿರುವ ಕಂಪನಿ ಎಲ್ಐಸಿ. ಇದು ಷೇರು ಮಾರುಕಟ್ಟೆಗೆ ಹೋದರೆ ಷೇರುಪೇಟೆಯ ಏಳುಬೀಳಿಗೆ ಒಳಗಾಗುತ್ತದೆ. ಯಾರೋ ನಾಲ್ಕು ಜನ ಬಂಡವಾಳಶಾಹಿಗಳ ಹಿತಕ್ಕಾಗಿ ಎಲ್ಐಸಿಯನ್ನು ಅಪಾಯಕ್ಕೆ ಒಡ್ಡುವುದು ಎಷ್ಟು ಸರಿ?

- **ಅಖಿಲಾ ವಿದ್ಯಾಸಂದ್ರ**, ವಕೀಲೆ

'ಪಾರದರ್ಶಕತೆ ಬರುತ್ತದೆ'



'ಎಲ್ಐಸಿ' ಐಪಿಒದಿಂದ ಪಾರದರ್ಶಕತೆ ಬರಲಿದೆ. ಹಾಗಾಗಲು ಐಪಿಒ ಅಗತ್ಯ. ಐಪಿಒಗೆ ಬಂದರೆ ಸರ್ಕಾರದ ನಿಯಂತ್ರಣದಿಂದ ಹೊರಬರುತ್ತದೆ. ಆರ್ಥಿಕ ಶಿಸ್ತು ಬರಲಿದೆ. ಇದರಿಂದ ಪಾಲಿಸಿ ಹೊಂದಿರುವವರಿಗೆ ಲಾಭವೇ ಹೊರತು ನಷ್ಟ ಆಗುವುದೇ ಇಲ್ಲ. ನಮ್ಮ ತೆರಿಗೆಯು ಕೇಂದ್ರೋದ್ಯಮಗಳ ನಷ್ಟವನ್ನು ತುಂಬಲು ಹೋಗಬೇಕೋ ಅಥವಾ ದೇಶದ ಅಭಿವೃದ್ಧಿಗೆ ಹೋಗಬೇಕೋ? ಎಲ್ಐಸಿಯನ್ನು ಖಾಸಗೀಕರಣ ಮಾಡುವುದಿಲ್ಲ ಎಂದು ಸರ್ಕಾರ ಸ್ಪಷ್ಟಪಡಿಸಿದೆ. ಐಪಿಒದಿಂದ ಬರುವ ಹಣವನ್ನು ವರಮಾನ ವೆಚ್ಚಕ್ಕೆ ಬಳಸುವುದಿಲ್ಲ; ಬಂಡವಾಳ ವೆಚ್ಚದ ಉದ್ದೇಶಕ್ಕೆ ಬಳಸಲಾಗುವುದು ಎಂದೂ ಸರ್ಕಾರ ಹೇಳಿದೆ.

- **ವಿಶ್ವನಾಥ ಭಟ್**, ಆರ್ಥಿಕ ತಜ್ಞ

ಸಂವಾದದ ವೀಕ್ಷಣೆಗೆ: facebook.com/prajavani.net

ಸುದ್ದಿ 2 ನಿಮಿಷ

ಭಾರತ ಮೂಲದ ನೀರಾ ಟಂಡನ್ ಶ್ವೇತಭವನದ ಸಿಬ್ಬಂದಿ ಕಾರ್ಯದರ್ಶಿ

ವಾಷಿಂಗ್ಟನ್ (ಪಿಟಿಐ): ಭಾರತ ಮೂಲದ ಅಮೆರಿಕನ್ ನಿವಾಸಿ, ನೀತಿ ರಚನಾ ತಜ್ಞೆ ನೀರಾ ಟಂಡನ್ (51) ಅವರನ್ನು ಶ್ವೇತಭವನದ ಸಿಬ್ಬಂದಿ ಕಾರ್ಯದರ್ಶಿಯಾಗಿ ಅಧ್ಯಕ್ಷ ಜೋ ಬೈಡನ್ ಅವರು ನೇಮಕ ಮಾಡಿದ್ದಾರೆ.

ಟಂಡನ್ ಅವರು ಬೈಡನ್ ಅವರ ಹಿರಿಯ ಸಲಹೆಗಾರರಾಗಿದ್ದರು. ಆಡಳಿತಕ್ಕೆ ಸಂಬಂಧಿತ ಪತ್ರಗಳ ನಿರ್ವಹಣೆಯಲ್ಲಿ ಸಿಬ್ಬಂದಿ ಕಾರ್ಯದರ್ಶಿ ಪಾತ್ರ ಪ್ರಮುಖವಾದುದು. ಈ ಹುದ್ದೆಗೆ ನೇಮಕವಾಗುವ ವ್ಯಕ್ತಿ, ಶ್ವೇತಭವನದ ಪ್ರಭಾವಿ ಅಧಿಕಾರಿಗಳಲ್ಲಿ ಒಬ್ಬರಾಗಿರುತ್ತಾರೆ ಎಂದು ಸಿಎನ್ಎನ್ ವರದಿ ಮಾಡಿದೆ.

ಹೊಸ ಕಾರ್ಯಭಾರದ ಜೊತೆಗೆ ಅವರು ಹಿರಿಯ ಸಲಹೆಗಾರರಾಗಿಯೂ ಕಾರ್ಯನಿರ್ವಹಿಸುವರು. ಪ್ರಮುಖ ಹುದ್ದೆಗೆ ಇವರ ಹೆಸರನ್ನು ರಿಪಬ್ಲಿಕನ್ ಸಂಸದರು ಕಡೆಗಣಿಸಿದ್ದ ಎಂಟು ತಿಂಗಳ ನಂತರ ಈ ನೇಮಕ ಆಗಿದೆ. ಸಿಬ್ಬಂದಿ ಕಾರ್ಯದರ್ಶಿ ಸ್ಥಾನಕ್ಕೆ ನೇಮಿಸಲು ಸೆನೆಟ್‌ನ ಅನುಮೋದನೆ ಅಗತ್ಯವಿಲ್ಲ ಎಂದೂ ತಿಳಿಸಿದೆ.

ಟಂಡನ್ ಹಿಂದೆ ಹಿಲರಿ ಕ್ಲಿಂಟನ್ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದಾಗ ಪ್ರಚಾರ ಕಾರ್ಯದ ನೀತಿ ನಿರ್ದೇಶಕಿಯಾಗಿದ್ದರು. 2008ಕ್ಕೂ ಮುನ್ನ ಕ್ಲಿಂಟನ್ ಅವರ ಕಚೇರಿಯಲ್ಲಿ ಶಾಸನಸಭೆಯ ನಿರ್ದೇಶಕಿಯಾಗಿ ಕಾರ್ಯನಿರ್ವಹಿಸಿದ್ದರು.



ಐಸಿಐಸಿಐ ಬ್ಯಾಂಕ್ ಲಾಭ ಹೆಚ್ಚಳ

ನವದೆಹಲಿ (ಪಿಟಿಐ): ಐಸಿಐಸಿಐ ಬ್ಯಾಂಕ್ ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹ 6,092 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್ ₹ 4,882 ಕೋಟಿ ನಿವ್ವಳ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಶೇಕಡ 24.7ರಷ್ಟು ಹೆಚ್ಚಾಗಿದೆ.

ಒಟ್ಟು ವರಮಾನವು ₹ 39,289.60 ಕೋಟಿಯಿಂದ ₹ 39,484.50 ಕೋಟಿಗೆ ಏರಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ವಸೂಲಾಗದ ಸಾಲದ (ಎನ್‌ಪಿಎ) ಸರಾಸರಿ ಪ್ರಮಾಣವು ಶೇ 5.17ರಿಂದ ಶೇ 4.82ಕ್ಕೆ ಇಳಿಕೆ ಕಂಡಿದೆ. ನಿವ್ವಳ ಎನ್‌ಪಿಎ ಶೇ 1 ರಷ್ಟು ಇದ್ದಿದ್ದು ಶೇ 0.99ಕ್ಕೆ ಅಲ್ಪ ಇಳಿಕೆ ಆಗಿದೆ ಎಂದು ಬ್ಯಾಂಕ್ ಹೇಳಿದೆ.


ರೈತರ ಸಂಪೂರ್ಣ ಸಾಲ ಮನ್ನಾ ಭರವಸೆ

ಪ್ರತಿಜ್ಞಾ ಯಾತ್ರೆ: ಪ್ರಿಯಾಂಕಾ ಚಾಲನೆ

ಲಖನೌ (ಪಿಟಿಐ): ಉತ್ತರ ಪ್ರದೇಶದಲ್ಲಿ ಮುಂದಿನ ವರ್ಷ ನಡೆಯುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ರೈತರ ಸಾಲವನ್ನು ಪೂರ್ಣ ಮನ್ನಾ ಮಾಡುವುದಾಗಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಘೋಷಿಸಿದರು.

ಅವರು ಉತ್ತರ ಪ್ರದೇಶದ ಬಾರಾಬಂಕಿಯಲ್ಲಿ ಕಾಂಗ್ರೆಸ್‌ನ 'ಪ್ರತಿಜ್ಞಾ ಯಾತ್ರೆ'ಗೆ ಶನಿವಾರ ಚಾಲನೆ ನೀಡಿ ಮಾತನಾಡಿದರು.

12ನೇ ತರಗತಿ ತೇರ್ಗಡೆಯಾದ ಬಾಲಕಿಯರಿಗೆ ಸ್ಮಾರ್ಟ್‌ಫೋನ್‌ಗಳು ಮತ್ತು ಪದವೀಧರ ಬಾಲಕಿಯರಿಗೆ ಇ-ಸ್ಕೂಟಿ ಜೊತೆಗೆ ಚುನಾವಣೆಯಲ್ಲಿ ಮಹಿಳೆಯರಿಗೆ ಶೇ 40 ರಷ್ಟು ಟಿಕೆಟ್ ನೀಡುವುದಾಗಿ ಈ ಹಿಂದೆ ನೀಡಿದ್ದ ಘೋಷಣೆಗಳನ್ನು ಅವರು ಪುನರುಚ್ಚರಿಸಿದರು.



ಪ್ರಿಯಾಂಕಾ

ರೈತರ ಸಂಪೂರ್ಣ ಸಾಲ ಮನ್ನಾ, ಗೋಧಿಗೆ ₹ 2, 500 ಕನಿಷ್ಠ ಬೆಂಬಲ ಬೆಲೆ, 20 ಲಕ್ಷ ಜನರಿಗೆ ಸರ್ಕಾರಿ ಉದ್ಯೋಗ, ಕೊರೊನಾ ಬಿಕ್ಕಟ್ಟಿನ ಸಮಯದಲ್ಲಿ ಆರ್ಥಿಕ ನಷ್ಟ ಎದುರಿಸಿದ ಕುಟುಂಬಗಳಿಗೆ ಸಂಕಷ್ಟದಿಂದ ದೂರ ಬರಲು ₹25,000 ನೆರವು ನೀಡಲಾಗುವುದು. ಅದರ ಜತೆಗೆ ವಿದ್ಯುತ್ ಬಿಲ್‌ಗಳನ್ನು ಅರ್ಧಕ್ಕೆ ಇಳಿಸಲಾಗುವುದು ಎಂದು ಅವರು ಭರವಸೆ ನೀಡಿದರು.

ವಾರದೊಳಗೆ ಮಹಿಳೆಯರಿಗಾಗಿ ಪ್ರತ್ಯೇಕ ಪ್ರಣಾಳಿಕೆ ತರಲಾಗುವುದು ಎಂದು ಪ್ರಿಯಾಂಕಾ ಇದೇ ವೇಳೆ ತಿಳಿಸಿದರು.

ಯಾತ್ರೆಯು ರಾಜ್ಯದ ಮೂರು ವಿಭಿನ್ನ ಮಾರ್ಗಗಳಲ್ಲಿ ತೆರಳಲಿದೆ. ಬಾರಾಬಂಕಿಯಿಂದ ಬುಂದೇಲ್‌ಖಂಡ್, ಸಹರಾನ್‌ಪುರದಿಂದ ಮಥುರಾ ಮತ್ತು ವಾರಾಣಸಿಯಿಂದ ರಾಯ್ ಬರೇಲಿಯವರೆಗೆ ಯಾತ್ರೆ ಸಾಗಲಿದೆ.

'ಹಮ್ ವಚನ್ ನಿಭಾಯೇಂಗೆ' ಘೋಷಣೆಯೊಂದಿಗೆ ಆರಂಭ ಆಗಿರುವ ಯಾತ್ರೆಯು ನವೆಂಬರ್ 1ರವರೆಗೆ ವಿವಿಧೆಡೆ ಸಂಚರಿಸಲಿದೆ.

ಭರವಸೆಗಳು


- ಕೊರೊನಾದಿಂದ ಆರ್ಥಿಕ ಸಂಕಷ್ಟಕ್ಕೊಳಗಾದ ಕುಟುಂಬಕ್ಕೆ ₹ 20 ಸಾವಿರ
- ಚುನಾವಣೆಯಲ್ಲಿ ಮಹಿಳೆಯರಿಗೆ ಶೇ 40 ರಷ್ಟು ಟಿಕೆಟ್
- ಮಹಿಳೆಯರಿಗಾಗಿ ವಾರದೊಳಗೆ ಪ್ರತ್ಯೇಕ ಪ್ರಣಾಳಿಕೆ: ಪ್ರಿಯಾಂಕ

ಪೆಟ್ರೋಲ್: ಒಂದೂವರೆ ವರ್ಷದಲ್ಲಿ ₹ 35 ಹೆಚ್ಚಳ

ಶನಿವಾರ ಪೆಟ್ರೋಲ್, ಡೀಸೆಲ್ ದರ ತಲಾ 35 ಪೈಸೆ ಏರಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಶನಿವಾರ ಪೆಟ್ರೋಲ್ ಮತ್ತು ಡೀಸೆಲ್ ದರವನ್ನು ಲೀಟರಿಗೆ ತಲಾ 35 ಪೈಸೆಯಷ್ಟು ಹೆಚ್ಚಿಸಿವೆ. ಇದರಿಂದಾಗಿ, 2020ರ ಮೇ ತಿಂಗಳಿನಿಂದ ಇಲ್ಲಿಯವರೆಗೆ ಪೆಟ್ರೋಲ್ ದರವು ಲೀಟರಿಗೆ ₹ 35.98ರಷ್ಟು ಮತ್ತು ಡೀಸೆಲ್ ದರವು ಲೀಟರಿಗೆ ₹ 26.58ರಷ್ಟು ಹೆಚ್ಚಳ ಆದಂತಾಗಿದೆ.

ಶನಿವಾರ ಬೆಂಗಳೂರಿನಲ್ಲಿ ಪೆಟ್ರೋಲ್ ದರವು ಲೀಟರಿಗೆ ₹ 110.94ಕ್ಕೆ, ಡೀಸೆಲ್ ದರವು ಲೀಟರಿಗೆ ₹ 101.82ಕ್ಕೆ ಏರಿದೆ. ದೆಹಲಿಯಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 107.24 ಮತ್ತು ಡೀಸೆಲ್ ದರ ಲೀಟರಿಗೆ ₹ 95.97ಕ್ಕೆ ಏರಿಕೆ ಆಗಿದೆ.



ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರವು ಬ್ಯಾರೆಲ್‌ಗೆ 19 ಡಾಲರ್‌ಗೆ ಕುಸಿದಾಗ ಕೇಂದ್ರ ಸರ್ಕಾರವು ಎಕ್ಸೈಸ್ ಸುಂಕವನ್ನು ಹೆಚ್ಚಿಸುವ ತೀರ್ಮಾನ ಕೈಗೊಂಡಿತು. ಈಗ ಕಚ್ಚಾ ತೈಲ ದರವು ಬ್ಯಾರೆಲ್‌ಗೆ 85 ಡಾಲರ್‌ಗೆ ಹೆಚ್ಚಳವಾಗಿದ್ದರೂ, ಎಕ್ಸೈಸ್ ಸುಂಕವು ಲೀಟರ್ ಪೆಟ್ರೋಲ್‌ಗೆ ₹ 32.9 ಹಾಗೂ ಲೀಟರ್ ಡೀಸೆಲ್‌ಗೆ ₹ 31.8ರ ಮಟ್ಟದಲ್ಲಿಯೇ ಉಳಿದಿದೆ.

ತೈಲೋತ್ಪನ್ನಗಳ ಮೇಲಿನ ಎಕ್ಸೈಸ್ ಸುಂಕ ತಗ್ಗಿಸಬೇಕು ಎಂಬ ಬೇಡಿಕೆಯನ್ನು ಕೇಂದ್ರ ಪೆಟ್ರೋಲಿಯಂ ಸಚಿವ ಹರದೀಪ್ ಸಿಂಗ್ ಪುರಿ ಅವರು, 'ತಮ್ಮ ಕಾಲನ್ನು ತಾವೇ ಕತ್ತರಿಸಿಕೊಳ್ಳಬೇಕು ಎಂಬ ಬೇಡಿಕೆ' ಎಂದು ಶುಕ್ರವಾರ ಬಣ್ಣಿಸಿದ್ದಾರೆ. ಇಂತಹ ಸುಂಕಗಳಿಂದಲೇ ಕೇಂದ್ರ ಸರ್ಕಾರಕ್ಕೆ ಕೋವಿಡ್ ಲಸಿಕೆಯನ್ನು ಉಚಿತವಾಗಿ ನೀಡಲು ಆಗುತ್ತಿದೆ ಎಂದು ಹೇಳಿದ್ದಾರೆ.

'ನಾವು ನೂರು ಕೋಟಿ ಡೋಸ್ ಕೋವಿಡ್ ಲಸಿಕೆ ನೀಡಿದ್ದೇವೆ. ಸಾಂಕ್ರಾಮಿಕದ ಸಂದರ್ಭದಲ್ಲಿ 90 ಕೋಟಿ ಜನರಿಗೆ ಒಂದಿಡೀ ವರ್ಷ ಊಟ ನೀಡಿದ್ದೇವೆ. ಇವು ಮತ್ತು ಇನ್ನೂ ಹೆಚ್ಚಿನ ಹಲವು ಕೆಲಸಗಳು ಎಕ್ಸೈಸ್ ಸುಂಕದ ಹಣದಿಂದಾಗಿ ಸಾಧ್ಯವಾಗಿವೆ' ಎಂದು ಪುರಿ ಅವರು ಪ್ರತಿಪಾದಿಸಿದ್ದಾರೆ.

ಜೋಯಾಲುಕ್ಕಾಸ್: ₹ 100 ಕೋಟಿ ಮೌಲ್ಯದ ಗಿಫ್ಟ್ ವೋಚರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಾಭರಣ ಕಂಪನಿ ಜೋಯಾಲುಕ್ಕಾಸ್, ಈ ಬಾರಿಯ ದೀಪಾವಳಿ ಹಬ್ಬಕ್ಕಾಗಿ ತನ್ನ ಗ್ರಾಹಕರಿಗೆ ಒಟ್ಟು ₹ 100 ಕೋಟಿ ಮೌಲ್ಯದ ಗಿಫ್ಟ್ ವೋಚರ್‌ಗಳನ್ನು ನೀಡಲಿದೆ.

'ಈ ವರ್ಷ ನಮ್ಮ ಗ್ರಾಹಕರಿಗೆ ಉಚಿತ ಗಿಫ್ಟ್ ವೋಚರ್‌ಗಳನ್ನು ಕೊಡುಗೆಯಾಗಿ ನೀಡುತ್ತಿದ್ದೇವೆ. ಇದನ್ನು ಅವರು ಹೆಚ್ಚಿನ ಆಭರಣ ಖರೀದಿಸಲು ಬಳಸಬಹುದು' ಎಂದು ಜೋಯಾಲುಕ್ಕಾಸ್ ಸಮೂಹದ ಅಧ್ಯಕ್ಷ ಜಾಯ್ ಅಲುಕ್ಕಾಸ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಕೊಡುಗೆ ಅಡಿಯಲ್ಲಿ, ಗ್ರಾಹಕರಿಗೆ ₹ 50 ಸಾವಿರ ಮೌಲ್ಯದ ಚಿನ್ನದ ಆಭರಣಗಳ ಖರೀದಿಯ ಮೇಲೆ ₹ 1000 ಮೊತ್ತದ ಗಿಫ್ಟ್ ವೋಚರ್ ನೀಡಲಾಗುವುದು. ವಜ್ರಾಭರಣ ಪ್ರಿಯರಿಗೆ ₹ 25 ಸಾವಿರ ಮೌಲ್ಯದ ಡೈಮಂಡ್, ಅನ್‌ಕಟ್ ಮತ್ತು ಅಮೂಲ್ಯ ರತ್ನಗಳ ಖರೀದಿಯ ಮೇಲೆ ₹ 1000 ಮೊತ್ತದ ಗಿಫ್ಟ್ ವೋಚರ್; ₹ 10 ಸಾವಿರ ಮೌಲ್ಯದ ಬೆಳ್ಳಿ ಸಾಮಗ್ರಿ ಖರೀದಿಯ ಮೇಲೆ ₹ 500 ಮೊತ್ತದ ಗಿಫ್ಟ್ ವೋಚರ್ ಬಹುಮಾನವಾಗಿ ನೀಡಲಾಗುತ್ತದೆ. ಎಸ್‌ಬಿಐ ಕಾರ್ಡ್ ಹೊಂದಿರುವವರಿಗೆ ಹೆಚ್ಚುವರಿಯಾಗಿ ಶೇಕಡ 5ರಷ್ಟು ಕ್ಯಾಶ್‌ಬ್ಯಾಕ್ ಗಳಿಸುವ ಅವಕಾಶ ಇದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ನವೆಂಬರ್ 5ರವರೆಗೆ ಇದು ಜಾರಿಯಲ್ಲಿ ಇರಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

‘ಆತ್ಮನಿರ್ಭರ ಭಾರತ್ ಸ್ವಯಂಪೂರ್ಣ ಗೋವಾ’ ಕಾರ್ಯಕ್ರಮ

ಗೋವಾ ಅಭಿವೃದ್ಧಿಗೆ ಡಬಲ್ ಎಂಜಿನ್ ಸರ್ಕಾರ: ಮೋದಿ ಮನವಿ

ಪಣಜಿ (ಪಿಟಿಐ): ಗೋವಾ ರಾಜ್ಯವನ್ನು ಸ್ವಾವಲಂಬಿಯಾಗಿ ಅಭಿವೃದ್ಧಿಪಡಿಸಲು 'ಡಬಲ್ ಎಂಜಿನ್' ಸರ್ಕಾರದ ಆಡಳಿತವನ್ನು ಮುಂದುವರಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಕೋರಿದರು.



'ಆತ್ಮನಿರ್ಭರ ಭಾರತ್ ಸ್ವಯಂಪೂರ್ಣ ಗೋವಾ' ಕಾರ್ಯಕ್ರಮದ ಫಲಾನುಭವಿಗಳ ಜೊತೆಗೆ ವಿಡಿಯೊ ಕಾನ್ಫರೆನ್ಸ್ ಮೂಲಕ ಸಂವಾದವನ್ನು ನಡೆಸುವ ವೇಳೆ ಈ ಮಾತು ಹೇಳಿದರು.

ಕೇಂದ್ರ ಮತ್ತು ರಾಜ್ಯ ಎರಡೂ ಕಡೆಯೂ ಬಿಜೆಪಿ ನೇತೃತ್ವದ ಸರ್ಕಾರವೇ ಅಧಿಕಾರದಲ್ಲಿ ಇರಬೇಕು ಎಂಬುದಕ್ಕೆ ಉಪಮೆಯಾಗಿ ಅವರು 'ಡಬಲ್ ಎಂಜಿನ್' ಪದವನ್ನು ಬಳಸಿದರು.

ಆದಾಯ ಮತ್ತು ಅಭಿವೃದ್ಧಿಯ ಸಾಧ್ಯತೆಗಳ ಪೂರ್ಣ ಬಳಕೆಯಾದಾಗ ಮಾತ್ರವೇ ಗೋವಾ ರಾಜ್ಯವು ಸ್ವಾವಲಂಬಿ ಆಗುವುದು ಸಾಧ್ಯ. ಸ್ವಯಂಪೂರ್ಣ ಗೋವಾ ಎಂದರೆ ಜನರ ಆಶೋತ್ತರಗಳಿಗೆ ಸ್ಪಂದಿಸುವುದೇ ಆಗಿದೆ ಎಂದರು.

ಗೋವಾದಲ್ಲಿ ಮುಂದಿನ ವರ್ಷ ಸಾರ್ವತ್ರಿಕ ಚುನಾವಣೆ ನಡೆಯಲಿದೆ. ಸ್ಥಳೀಯರಿಗೆ ಸ್ವಯಂ ಉದ್ಯೋಗ ಅವಕಾಶಗಳನ್ನು ಒದಗಿಸುವುದು ಸ್ವಯಂಪೂರ್ಣ ಗೋವಾ ಕಾರ್ಯಕ್ರಮದ ಉದ್ದೇಶವಾಗಿದೆ.

'ಈ ಕಾರ್ಯಕ್ರಮ ಐದು ತಿಂಗಳು, ಅಥವಾ ಐದು ವರ್ಷದ್ದಲ್ಲ. 25 ವರ್ಷದ ದೂರದೃಷ್ಟಿಯುಳ್ಳ ಅವಧಿಯ ಮೊದಲ ಹಂತದ ಕಾರ್ಯಕ್ರಮ. ಇದೇ ಕಾರಣಕ್ಕೆ ರಾಜ್ಯಕ್ಕೆ ಡಬಲ್ ಎಂಜಿನ್ ಸರ್ಕಾರದ ಅಗತ್ಯವಿದೆ' ಎಂದು ಹೇಳಿದರು.

ಈ ಕಾರಣದಿಂದ ಕರಾವಳಿ ರಾಜ್ಯಕ್ಕೆ ಹೀಗಿರುವಂತೆಯೇ ಉತ್ಸಾಹಿ ನಾಯಕತ್ವದ ಅಗತ್ಯವಿದೆ. ಇಡೀ ಗೋವಾದ ಜನರ ಆಶೀರ್ವಾದದೊಮದಿಗೆ ನಾವು ರಾಜ್ಯವನ್ನು ಸ್ವಾವಲಂಬಿ ಮಾಡೋಣ ಎಂದು ಹೇಳಿದರು.

ಗೋವಾ: 28ರಂದು ಮಮತಾ ಭೇಟಿ

ಪಣಜಿ (ಪಿಟಿಐ): ಗೋವಾದಲ್ಲಿ ಆಡಳಿತರೂಢ ಬಿಜೆಪಿಯನ್ನು ಸೋಲಿಸಲು ರಾಜಕೀಯ ಪಕ್ಷಗಳು, ಪ್ರಮುಖರು ತೃಣಮೂಲ ಕಾಂಗ್ರೆಸ್ ಜೊತೆಗೆ ಕೈಜೋಡಿಸಬೇಕು ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ, ತೃಣಮೂಲ ಕಾಂಗ್ರೆಸ್ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಅವರು ಕೋರಿದ್ದಾರೆ.

ಗೋವಾಗೆ ಇದೇ 28ರಂದು ತಾವು ಭೇಟಿ ನೀಡುವುದಾಗಿಯೂ ಅವರು ಪ್ರಕಟಿಸಿದರು. ಮುಂದಿನ ವರ್ಷ ನಡೆವ ಗೋವಾ ವಿಧಾನಸಭೆ ಚುನಾವಣೆಗೆ ತೃಣಮೂಲ ಕಾಂಗ್ರೆಸ್ ಸ್ಪರ್ಧಿಸಲಿದೆ ಎಂದು ಪಕ್ಷ ಈಗಾಗಲೇ ಪ್ರಕಟಿಸಿದೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, '28 ರಂದು ಗೋವಾ ಭೇಟಿಗೆ ಸಿದ್ಧತೆ ನಡೆದಿದೆ. ಬಿಜೆಪಿ ಮತ್ತು ಅದರ ವಿಭಜನೆಯ ಕಾರ್ಯಸೂಚಿ ಸೋಲಿಸಲು ಪಕ್ಷಗಳು, ಎಲ್ಲರೂ ಕೈಜೋಡಿಸಬೇಕು. ಕಳೆದ 10 ವರ್ಷಗಳಲ್ಲಿ ಗೋವಾದ ಜನರು ಸಾಕಷ್ಟು ಕಷ್ಟ ಅನುಭವಿಸಿದ್ದಾರೆ' ಎಂದು ಮಮತಾ ಅವರು ಟ್ವೀಟ್ ಮಾಡಿದ್ದಾರೆ.

'ಗೋವಾದಲ್ಲಿ ಒಟ್ಟಾಗಿ ನಾವು ರಚಿಸಲಿರುವ ನೂತನ ಸರ್ಕಾರವು, ಖಂಡಿತವಾಗಿ ಜನರ ಸರ್ಕಾರವಾಗಿರಲಿದೆ. ಅವರ ಆಶೋತ್ತರಗಳನ್ನು ಈಡೇರಿಸಲಿದೆ. ಅದಕ್ಕೆ ನಾವು ಬದ್ಧವಾಗಿದ್ದೇವೆ' ಎಂದೂ ಹೇಳಿದ್ದಾರೆ.

'ಗೋವಾ ಸಿಎಂ ಬದಲಿಸಲಿದೆ ಬಿಜೆಪಿ'

ನವದೆಹಲಿ (ಪಿಟಿಐ): ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ನೇತೃತ್ವದ ರಾಜ್ಯ ಸರ್ಕಾರದ ಆಡಳಿತ ವೈಖರಿಗೆ ಜನರು ಬೇಸತ್ತಿರುವುದನ್ನು ಮನಗಂಡಿರುವ ಬಿಜೆಪಿ, ಮುಂದಿನ ವರ್ಷ ಎದುರಾಗಲಿರುವ ವಿಧಾನಸಭಾ ಚುನಾವಣೆ ವೇಳೆಗೆ ಮುಖ್ಯಮಂತ್ರಿಯನ್ನು ಬದಲಾವಣೆ ಮಾಡಲು ನಿರ್ಧರಿಸುವುದು ನಂಬಲರ್ಹ ಮೂಲಗಳಿಂದ ತಿಳಿದು ಬಂದಿದೆ ಎಂದು ಎಎಪಿ ಶನಿವಾರ ಹೇಳಿಕೊಂಡಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಎಎಪಿ ಹಿರಿಯ ನಾಯಕ ಮನೀಶ್ ಸಿಸೋಡಿಯಾ, ಸಾವಂತ್ ನಾಯಕತ್ವದಲ್ಲಿ ರಾಜ್ಯದಲ್ಲಿ ಚುನಾವಣೆಗೆ ಹೋಗುವುದು ಕಷ್ಟ ಎನ್ನುವುದನ್ನು ಅರ್ಥಮಾಡಿಕೊಂಡಿರುವ ಬಿಜೆಪಿ, ಹೊಸ ಮುಖ್ಯಮಂತ್ರಿಯನ್ನು ನೇಮಿಸಲು ನಿರ್ಧರಿಸಿದೆ ಎಂದು ಹೇಳಿದ್ದಾರೆ.

ಇದಕ್ಕೆ ಬಿಜೆಪಿ ತಕ್ಷಣಕ್ಕೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.



ಜಮ್ಮುವಿನಲ್ಲಿ ಸುರಿದ ಭಾರಿ ಮಳೆಯಲ್ಲಿ ಮಹಿಳೆಯೊಬ್ಬರು ಛತ್ರಿ ಹಿಡಿದು ರಸ್ತೆ ದಾಟಿದರು —ಪಿಟಿಐ ಚಿತ್ರ

ಮಳೆಯಿಂದ ಮಣ್ಣು ಕುಸಿತ, ಶ್ರೀನಗರದಲ್ಲಿ ಮೂವರು ಸಾವು

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಪುಲ್ವಾಮಾ ಜಿಲ್ಲೆಯಲ್ಲಿ ನಿರಂತರ ಮಳೆಯಿಂದಾಗಿ ಮಣ್ಣು ಕುಸಿತ ಉಂಟಾಗಿ ಇಬ್ಬರು ಮಹಿಳೆಯರು ಸೇರಿ ಮೂವರು ಅಲೆಮಾರಿಗಳು ಮೃತಪಟ್ಟಿದ್ದಾರೆ. ಮತ್ತೊಬ್ಬರು ಗಾಯಗೊಂಡಿದ್ದಾರೆ.

ಭಾರಿ ಮಳೆಯಿಂದ ಟ್ರಾಲ್‌ನ ನೂರ್‌ಪೋರಾ ಪ್ರದೇಶದಲ್ಲಿ ಮಣ್ಣು ಕುಸಿದಿದೆ. ಜಮ್ಮುವಿನ ರಿಯಾಸಿ ಜಿಲ್ಲೆಗೆ ಸೇರಿದ ಅಲೆಮಾರಿಗಳ ಶಿಬಿರ ಮಣ್ಣಿನಲ್ಲಿ ಹೂತು ಹೋಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಣ್ಣಿನಡಿ ಸಿಲುಕಿದ್ದ ಒಬ್ಬರನ್ನು ರಕ್ಷಿಸಲಾಗಿದೆ. ಅವರ ಸ್ಥಿತಿ ಚಿಂತಾಜನಕವಾಗಿದೆ.

ಶಿಬಿರದಲ್ಲಿದ್ದ ಇತರ ಮೂವರೂ ಸಾವನ್ನಪ್ಪಿದ್ದಾರೆ. ಹೆಚ್ಚಿನ ಮಾಹಿತಿ ನಿರೀಕ್ಷಿಸಲಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದರು.

ಉತ್ತರಾಖಂಡ: ಮತ್ತಿಬ್ಬರು ಚಾರಣಿಗರ ಮೃತದೇಹ ಪತ್ತೆ

ಡೆಹ್ರಾಡೂನ್/ಉತ್ತರಕಾಶಿ (ಪಿಟಿಐ): ಉತ್ತರಾಖಂಡದಲ್ಲಿ ನಾಪತ್ತೆಯಾಗಿದ್ದ 11 ಚಾರಣಿಗರ ಪೈಕಿ ಮತ್ತಿಬ್ಬರ ಮೃತದೇಹಗಳು ಶನಿವಾರ ಪತ್ತೆಯಾಗಿದ್ದು, ಮೃತಪಟ್ಟವರ ಸಂಖ್ಯೆ ಏಳಕ್ಕೆ ಏರಿದೆ.

ಉತ್ತರಕಾಶಿ ಜಿಲ್ಲೆಯಲ್ಲಿ ಚಾರಣಕ್ಕೆ ತೆರಳಿದ್ದ 11 ಜನರ ತಂಡವು ಕಾಣೆಯಾಗಿತ್ತು. ಅವರಲ್ಲಿ ಐವರ ಮೃತದೇಹಗಳನ್ನು ಶುಕ್ರವಾರ ಹೊರತೆಗೆಯಲಾಗಿತ್ತು.

ಶುಕ್ರವಾರವೇ ಪತ್ತೆಯಾದ ಮತ್ತಿಬ್ಬರ ಮೃತದೇಹಗಳನ್ನು, ಪ್ರತಿಕೂಲ ಹವಾಮಾನದಿಂದ ಹೊರತೆಗೆಯಲು ಆಗಿರಲಿಲ್ಲ. ರಕ್ಷಣಾ ಪಡೆಯ ಸಿಬ್ಬಂದಿ ಶನಿವಾರ ಅವುಗಳನ್ನು ಹೊರತೆಗೆದಿದ್ದಾರೆ. ಮೃತರನ್ನು ಉತ್ತರಕಾಶಿಯ ಉಪೇಂದ್ರ ಸಿಂಗ್ (37) ಮತ್ತು ಕೋಲ್ಕತ್ತದ ರಿಚರ್ಡ್ ಮಂಡಲ್(30) ಎಂದು ಗುರುತಿಸಲಾಗಿದೆ ಎಂದು ಜಿಲ್ಲಾ ವಿಪತ್ತು ನಿರ್ವಹಣಾ ಅಧಿಕಾರಿ ದೇವೇಂದ್ರ ಪಟ್ವಾಲ್ ಅವರು ತಿಳಿಸಿದ್ದಾರೆ.

ಇದೇ ಅ.17ರಿಂದ ಇಲ್ಲಿಯವರೆಗೆ ಉತ್ತರಾಖಂಡದಲ್ಲಿ ಸುರಿದ ಭಾರಿ ಮಳೆಯಿಂದ ಮೃತಪಟ್ಟಿರುವವರ ಸಂಖ್ಯೆ 75ಕ್ಕೆ ಏರಿದೆ.

ಲಸಿಕೆ ಉತ್ಪಾದನೆಗೆ ಭಾರತದ ಜೊತೆ ಸಹಯೋಗ: ಡಿಎಫ್‌ಸಿ

ವಾಷಿಂಗ್ಟನ್ (ಪಿಟಿಐ): ಭಾರತವು 'ಲಸಿಕೆ ಉತ್ಪಾದಕ ಶಕ್ತಿ ಕೇಂದ್ರವಾಗಿದ್ದು, ಜನರ ಜೀವ ಉಳಿಸಲು ಲಸಿಕೆ ಉತ್ಪಾದನೆಗೆ ಅಮೆರಿಕವು ಭಾರತದ ಜೊತೆಗೂಡಿ ಕಾರ್ಯನಿರ್ವಹಿಸಲಿದೆ' ಎಂದು ಅಮೆರಿಕದ ಅಂತರರಾಷ್ಟ್ರೀಯ ಅಭಿವೃದ್ಧಿ ಹಣಕಾಸು ಮಂಡಳಿಯ (ಡಿಎಫ್‌ಸಿ) ಮುಖ್ಯಸ್ಥ ಡೇವಿಡ್ ಮಾರ್ಚಿಕ್ ಹೇಳಿದ್ದಾರೆ.

ಭಾನುವಾರದಿಂದ (ಅ.24) ಮೂರು ದಿನ ಭಾರತ ಪ್ರವಾಸ ಕೈಗೊಳ್ಳುವ ಉನ್ನತಾಧಿಕಾರ ನಿಯೋಗದ ನೇತೃತ್ವ ವಹಿಸಿರುವ ಅವರು, ಲಸಿಕೆ ಉತ್ಪಾದನೆ ಕುರಿತಂತೆ ಪ್ರವಾಸ ಪೂರ್ವದಲ್ಲಿ ಮಾತನಾಡಿದರು.

ಅಮೆರಿಕದ ಅಂತರರಾಷ್ಟ್ರೀಯ ಅಭಿವೃದ್ಧಿ ಹಣಕಾಸು ಮಂಡಳಿಯು (ಡಿಎಫ್‌ಸಿ), ವಿಶ್ವದಾದ್ಯಂತ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಹೂಡಿಕೆ ಮಾಡುತ್ತಿದೆ.

ಹೂಡಿಕೆಗೆ ಸಂಬಂಧಿಸಿ ಭಾರತವು ಡಿಎಫ್‌ಸಿಯ ಪ್ರಮುಖ ಹಾಗೂ ಮಹತ್ವದ ಪಾಲುದಾರ ರಾಷ್ಟ್ರವಾಗಿದೆ. ಮಂಡಳಿಯು ಭಾರತದಲ್ಲಿ ₹1,724.85 ಕೋಟಿ (2.3 ಬಿಲಿಯನ್ ಡಾಲರ್) ಹೂಡಿಕೆ ಮಾಡಿದೆ. ಒಟ್ಟಾರೆ ಡಿಎಫ್‌ಸಿಯ ಒಟ್ಟು ಹೂಡಿಕೆಯ ಶೇ 8ರಷ್ಟಾಗಿದೆ ಎಂದು ವಿವರಿಸಿದರು.

'ಅಮೆರಿಕ ಮತ್ತು ಭಾರತ ಸಹಭಾಗಿತ್ವವನ್ನು ಬಲಪಡಿಸಲು ಹಾಗೂ ಆರ್ಥಿಕಾಭಿವೃದ್ಧಿ ನಿಟ್ಟಿನಲ್ಲಿ ಕಾರ್ಯನಿರ್ವಹಿಸಲು ನಾವು ಉತ್ಸುಕರಾಗಿದ್ದೇವೆ' ಎಂದು ಮಾರ್ಚಿಕ್ ಇತ್ತೀಚೆಗೆ ಹೇಳಿದ್ದರು.

ಕೋವಿಡ್ ಲಸಿಕೆ ತಯಾರಿಕಾ ಕಂಪನಿಗಳ ಪ್ರತಿನಿಧಿಗಳನ್ನು ಭೇಟಿಯಾದ ಪ್ರಧಾನಿ

ನವದೆಹಲಿ (ಪಿಟಿಐ): ದೇಶದಾದ್ಯಂತ ನೂರು ಕೋಟಿ ಡೋಸ್ ಕೋವಿಡ್–19 ಲಸಿಕೆ ನೀಡಿದ ಬೆನ್ನಲ್ಲೇ ಪ್ರಧಾನಿ ನರೇಂದ್ರ ಮೋದಿ ಅವರು ಲಸಿಕೆ ತಯಾರಿಕಾ ಕಂಪನಿಗಳ ಪ್ರತಿನಿಧಿಗಳನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ, ಭಾರತ್ ಬಯೋಟೆಕ್, ಡಾ.ರೆಡ್ಡೀಸ್ ಲ್ಯಾಬೋರೇಟರೀಸ್, ಜೈಡಸ್ ಕ್ಯಾಡಿಲಾ, ಬಯಾಲಾಜಿಕಲ್ ಇ, ಜೆನೋವಾ ಬಯೋಫಾರ್ಮಾ ಮತ್ತು ಪ್ಯಾನೇಸಿಯಾ ಬಯೋಟೆಕ್ ಪ್ರತಿನಿಧಿಗಳನ್ನು ಮೋದಿ ಭೇಟಿ ಮಾಡಿದ್ದಾರೆ. ಲಸಿಕೆ ವಿಚಾರದಲ್ಲಿ ಇನ್ನಷ್ಟು ಸಂಶೋಧನೆ ಸೇರಿದಂತೆ ಅನೇಕ ವಿಷಯಗಳ ಬಗ್ಗೆ ಅವರ ಜತೆ ಮಾತುಕತೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ, ಆರೋಗ್ಯ ಇಲಾಖೆಯ ರಾಜ್ಯ ಖಾತೆ ಸಚಿವೆ ಭಾರತೀ ಪ್ರವೀಣ್ ಪವಾರ್ ಸಹ ಮಾತುಕತೆ ವೇಳೆ ಪ್ರಧಾನಿ ಜತೆಗಿದ್ದರು. ಗುರುವಾರ ದೇಶದಲ್ಲಿ ಕೋವಿಡ್–19 ಲಸಿಕೆ ವಿತರಣೆ 100 ಕೋಟಿ ದಾಟಿತ್ತು. ದೇಶದಾದ್ಯಂತ 18 ವರ್ಷ ಮೇಲ್ಪಟ್ಟ ಶೇ 75ಕ್ಕೂ ಹೆಚ್ಚು ಮಂದಿಗೆ ಮೊದಲ ಡೋಸ್ ಲಸಿಕೆ ನೀಡಲಾಗಿದೆ ಎಂದು ಆರೋಗ್ಯ ಸಚಿವಾಲಯ ಹೇಳಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	450

ರಾಮನಗರ ರೇಷ್ಮೆ

ಮಿಶ್ರತಳಿ	256-499
ದ್ವಿತಳಿ	303-555

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	12900	1270	12975	199.85 ಸೆಂಟ್ಸ್
ಎಸಿ	6325	5000	5300	
ಆರ್‌ಪಿ	6000	6000	6250	
ಆರ್‌ಸಿ	3510	3400	3625	2135 ಡಾಲರ್ಸ್

ಎನ್‌ಸಿಬಿ ಕಚೇರಿಗೆ ಶಾರುಕ್ ಖಾನ್ ಮ್ಯಾನೇಜರ್ ಭೇಟಿ

ಮುಂಬೈ (ಪಿಟಿಐ): ಬಾಲಿವುಡ್ ನಟ ಶಾರುಕ್ ಖಾನ್ ಅವರ ವ್ಯವಸ್ಥಾಪಕಿ ಪೂಜಾ ದದ್ಲಾನಿ, ಎನ್‌ಸಿಬಿ ಕಚೇರಿಗೆ ಶನಿವಾರ ಭೇಟಿ ನೀಡಿದ್ದರು ಎಂದು ಮೂಲಗಳು ತಿಳಿಸಿವೆ.

ಪೂಜಾ ಅವರು ಲಕೋಟೆ ಹಿಡಿದು ಬೆಳಿಗ್ಗೆ ಸುಮಾರು 10 ಗಂಟೆಗೆ ಕಚೇರಿ ಒಳಗೆ ಹೋದರು. ಸುಮಾರು ಒಂದು ಗಂಟೆ ಬಳಿಕ ಕಚೇರಿಯಿಂದ ಹೊರಬಂದ ಅವರ ಪ್ರತಿಕ್ರಿಯೆ ಪಡೆಯಲು ಸುದ್ದಿಗಾರರು ಪ್ರಯತ್ನಿಸಿದರು. ಆದರೆ, ಅವರು ಏನನ್ನೂ ಮಾತನಾಡದೇ ಅಲ್ಲಿಂದ ಹೊರಟರು ಎನ್ನಲಾಗಿದೆ.

ಶುಕ್ರವಾರವಷ್ಟೇ ಶಾರುಕ್ ಖಾನ್ ಅಂಗರಕ್ಷಕ ಎನ್‌ಸಿಬಿ ಕಚೇರಿಗೆ ತೆರಳಿ ಕೆಲವು ದಾಖಲೆಗಳಿದ್ದ ಮೊಹರು ಮಾಡಿರುವ ಲಕೋಟೆಯನ್ನು ಹಸ್ತಾಂತರಿಸಿದ್ದರು.

ತಪ್ಪಾಗಿ ಅರ್ಥೈಸಲಾಗುತ್ತಿದೆ: ಹಡಗಿನಲ್ಲಿ ವಶಪಡಿಸಿಕೊಂಡ ಮಾದಕದ್ರವ್ಯದ ಪ್ರಕರಣದಲ್ಲಿ ನನ್ನನ್ನು ಸಿಲುಕಿಸಲು, ನಾನು ಈ ಹಿಂದೆ ಮಾಡಿದ್ದ ವಾಟ್ಸ್‌ಆ್ಯಪ್ ಸಂದೇಶಗಳನ್ನು ತಪ್ಪಾಗಿ ಅರ್ಥೈಸಲಾಗುತ್ತಿದೆ' ಎಂದು ಆರ್ಯನ್ ಖಾನ್ ಬಾಂಬೆ ಹೈಕೋರ್ಟ್‌ಗೆ ಸಲ್ಲಿಸಿರುವ ಜಾಮೀನು ಅರ್ಜಿಯಲ್ಲಿ ತಿಳಿಸಿದ್ದಾರೆ. ತನಿಖಾ ಅಧಿಕಾರಿಗಳು ವಾಟ್ಸ್‌ಆ್ಯಪ್ ಸಂದೇಶಗಳನ್ನು ಅರ್ಥೈಸಿರುವ ರೀತಿ ಸರಿಯಲ್ಲ ಮತ್ತು ನ್ಯಾಯ ಬದ್ಧವಲ್ಲ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ಸಾಕ್ಷ್ಯ ಇಲ್ಲದಿದ್ದಲ್ಲಿ ಮಲಿಕ್ ಆರೋಪಿಸುತ್ತಿರಲಿಲ್ಲ (ಥಾಣೆ): 'ಎನ್‌ಸಿಬಿ ಮುಂಬೈ ವಲಯ ನಿರ್ದೇಶಕ ಸಮೀರ್ ವಾಂಖೆಡೆ ವಿರುದ್ಧ ನವಾಬ್ ಮಲಿಕ್ ಅವರಿಗೆ ಪ್ರಮುಖ ಸಾಕ್ಷ್ಯಗಳು ದೊರಕಿರಬಹುದು. ಅದಿಲ್ಲದೇ ಅವರು ವಾಂಖೆಡೆ ವಿರುದ್ಧ ಹೇಳಿಕೆಗಳನ್ನು ನೀಡುತ್ತಿರಲಿಲ್ಲ' ಎಂದು ಮಹಾರಾಷ್ಟ್ರ ಎನ್‌ಸಿಪಿ ಘಟಕದ ಮುಖ್ಯಸ್ಥ ಮತ್ತು ರಾಜ್ಯ ಸಚಿವ ಜಯಂತ್ ಪಾಟೀಲ್ ಹೇಳಿದ್ದಾರೆ. ಸದ್ಯದಲ್ಲೇ ಈ ಕುರಿತು ಸ್ಪಷ್ಟ ಚಿತ್ರಣ ದೊರಕಲಿದೆ ಎಂದಿದ್ದಾರೆ.

ಎನ್‌ಸಿಬಿ ಅಧಿಕಾರಿಗಳು ನಡೆಸಿದ ದಾಳಿ ಬಗ್ಗೆ ಮೊದಲಿನಿಂದಲೂ ಮಲಿಕ್ ಟೀಕೆ ನಡೆಸುತ್ತಿದ್ದಾರೆ. 'ವಾಂಖೆಡೆ ಒಬ್ಬ ನಕಲಿ ಅಧಿಕಾರಿ. ಅವರ ವಿರುದ್ಧದ ಸಾಕ್ಷ್ಯಗಳು ಬಹಿರಂಗವಾದರೆ ಅವರು ಸರ್ಕಾರಿ ಹುದ್ದೆಯಲ್ಲಿ ಮುಂದುವರಿಯುವುದಿಲ್ಲ' ಎಂದು ಇತ್ತೀಚೆಗೆ ಮಲಿಕ್ ಹೇಳಿಕೆ ನೀಡಿದ್ದರು.

ಲಖಿಂಪುರ ಹಿಂಸಾಚಾರ: ಮತ್ತೆ ಮೂವರ ಬಂಧನ

ಲಖಿಂಪುರ ಖೇರಿ (ಉತ್ತರ ಪ್ರದೇಶ) (ಪಿಟಿಐ): ಲಖಿಂಪುರ ಖೇರಿಯಲ್ಲಿ ಅ.3ರಂದು ನಡೆದ ಹಿಂಸಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೆ ಮೂವರನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಬಂಧಿತರ ಸಂಖ್ಯೆ ಇದೀಗ 13ಕ್ಕೆ ಏರಿದಂತಾಗಿದೆ. ಬಂಧಿತರಲ್ಲಿ ಕೇಂದ್ರ ಗೃಹಖಾತೆ ರಾಜ್ಯ ಸಚಿವ ಅಜಯ್ ಮಿಶ್ರಾ ಪುತ್ರ ಆಶೀಶ್ ಮಿಶ್ರಾ ಸಹ ಸೇರಿದ್ದಾರೆ.

ಬಂಧಿತರನ್ನು ಸಿಂಗಾಹಿ ಪಟ್ಟಣದ ಮೋಹಿತ್ ತ್ರಿವೇದಿ, ಬರ್ಸೋಲಾ ಕಲಾನ್‌ನ ರಂಕು ರಾಣಾ ಮತ್ತು ಟಿಕೊನಿಯಾ ಕೊಟ್ವಾಲಿ ಠಾಣಾ ವ್ಯಾಪ್ತಿಯಲ್ಲಿರುವ ಚಿಮ್ಮ ತಾಂಡದ ಧರ್ಮೇಂದ್ರ ಎಂದು ಗುರುತಿಸಲಾಗಿದೆ.

ಪೊಲೀಸ್ ಕಸ್ಟಡಿಯಲ್ಲಿರುವ ಇತರ ಆರೋಪಿಗಳು ವಿಚಾರಣೆಯ ಸಮಯದಲ್ಲಿ ಈ ಮೂವರ ಹೆಸರನ್ನು ಹೇಳಿದ್ದರು. ಅದನ್ನು ಆಧರಿಸಿ ಪೊಲೀಸರು ಬಂಧಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಪಾಕಿಸ್ತಾನ ಮತ್ತು ಭಾರತದ ಅಭಿಮಾನಿಗಳು –ರಾಯಿಟರ್ಸ್ ಚಿತ್ರ

ಭಾರತ–ಪಾಕಿಸ್ತಾನ ಮುಖಾಮುಖಿ; ಕೊಹ್ಲಿ ನಾಯಕತ್ವಕ್ಕೆ ಸೆಡ್ಡು ಹೊಡೆಯುವರೇ ಬಾಬರ್?

ಅಜೇಯ ಇತಿಹಾಸದ ಪರಂಪರೆ ಮುಂದುವರಿಸುವ ಸವಾಲು

ದುಬೈ (ಪಿಟಿಐ): ಭಾರತ ತಂಡಕ್ಕೆ ವಿಶ್ವಕಪ್ ಟೂರ್ನಿಗಳಲ್ಲಿ ಅಜೇಯ ಇತಿಹಾಸದಪರಂಪರೆಯನ್ನುಉಳಿಸಿಕೊಳ್ಳುವ ಛಲ. ವಿರಾಟ್ ಕೊಹ್ಲಿ ಬಳಗದ ಆಟಕ್ಕೆ ತಡೆಯೊಡ್ಡಿ ಹೊಸ ಇತಿಹಾಸ ನಿರ್ಮಿಸುವ ಕನಸು ಬಾಬರ್ ಆಜಂ ಬಳಗದ್ದು.

ಭಾನುವಾರ ನಡೆಯಲಿರುವ ಕ್ರಿಕೆಟ್ ಜಗತ್ತಿನ ಈ ಬದ್ಧ ಎದುರಾಳಿಗಳ ಹಣಾಹಣಿಯನ್ನು ಕಣ್ಮನ ತುಂಬಿಕೊಳ್ಳಲು ಲಕ್ಷಾಂತರ ಅಭಿಮಾನಿಗಳು ಕಾದಿದ್ದಾರೆ.

ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಇದೇ ಮೊದಲ ಸಲ ವಿರಾಟ್ ಕೊಹ್ಲಿ ನಾಯಕತ್ವದಲ್ಲಿ ಭಾರತ ತಂಡವು ಪಾಕ್ ತಂಡವನ್ನು ಎದುರಿಸುತ್ತಿದೆ.

ಉಭಯ ದೇಶಗಳ ನಡುವಣ ಹದಗೆಟ್ಟಿರುವ ರಾಜಕೀಯ ಸಂಬಂಧಗಳಿಂದಾಗಿ ಕ್ರೀಡಾ ತಂಡಗಳು ಮುಖಾಮುಖಿಯಾಗುವುದು ಅಪರೂಪವಾಗಿದೆ. ಎರಡೂ ತಂಡಗಳ ನಡುವೆ ಹಲವು ವರ್ಷಗಳಿಂದ ದ್ವಿಪಕ್ಷೀಯ ಸರಣಿಗಳು ನಡೆದಿಲ್ಲ. ವಿಶ್ವಕಪ್ ವೇದಿಕೆಗಳಲ್ಲಿ ಮಾತ್ರ ಈ ತಂಡಗಳು ಸೆಣಸುವುದರಿಂದ ಅಭಿ ಮಾನಿಗಳಲ್ಲಿ ರೋಚಕತೆ ಬಿಸಿಯೇರುತ್ತದೆ.

‘ಎಲ್ಲ ಪಂದ್ಯಗಳಂತೆ ಇದೂ ಒಂದು’ ಎಂದು ವಿರಾಟ್ ಸೇರಿದಂತೆ ಕೆಲವು ಆಟಗಾರರು ಹೇಳಿಕೆ ನೀಡಿದ್ದಾರೆ. ಆದರೂ ಈ ಹಿಂದಿನ ಹಲವು ಮುಖಾಮುಖಿಗಳಲ್ಲಿ ಅನುಭವಿಸಿದ ಸಿಹಿ–ಕಹಿ ಘಟನೆಗಳು ಜನರಲ್ಲಿ ಹಾಸುಹೊಕ್ಕಾಗಿವೆ. ಅವು ಈಗ ಸಾಮಾಜಿಕ ಜಾಲತಾಣಗಳಲ್ಲಿ ವಿವಿಧ ರೂಪದಲ್ಲಿ ಹರಿದಾಡುತ್ತಿವೆ.

ಈ ಬಾರಿ ಎರಡೂ ತಂಡಗಳನ್ನು ಹೋಲಿಕೆ ಮಾಡಿದರೆ ಬಹಳಷ್ಟು ವಿಷಯಗಳಲ್ಲಿ ಭಾರತವೇ ಬಲಾಢ್ಯ.

ಪಾಕ್ ತಂಡದ ನಾಯಕ ಬಾಬರ್ ಆಜಂ ಉತ್ತಮ ಬ್ಯಾಟರ್. ಶಾಂತಚಿತ್ತದ ನಾಯಕತ್ವ ವಹಿಸುವುದರಲ್ಲಿ ನಿಸ್ಸೀಮರು. ರಿಜ್ವಾನ್, ಹ್ಯಾರಿಸ್ ರವೂಫ್, ಫಕರ್ ಜಮಾನ್ ಪಂದ್ಯ ಗೆಲ್ಲಿಸಿಕೊಡಬಲ್ಲ ಆಟಗಾರರು. ಅಲ್ಲದೇ ಯುಎಇಯು ಪಾಕಿಸ್ತಾನ ತಂಡಕ್ಕೆ ಎರಡನೇ ತವರು. ತಮ್ಮ ದೇಶದ ಆಂತರಿಕ ಅಭದ್ರತೆಯ ಕಾರಣಗಳಿಂದಾಗಿ ಕಳೆದ ಕೆಲವು ವರ್ಷಗಳಲ್ಲಿ ದುಬೈ, ಅಬುಧಾಬಿಯನ್ನು ತನ್ನ ತಟಸ್ಥ ತಾಣವನ್ನಾಗಿ ಪಾಕ್ ಮಾಡಿಕೊಂಡಿದೆ. ಆದ್ದರಿಂದ ಆ ಅನುಭವವು ತಂಡಕ್ಕೆ ನೆರವಾಗಬಹುದು.


ವಿರಾಟ್ ಕೊಹ್ಲಿ –ಎಎಫ್‌ಪಿ ಚಿತ್ರ

ಬಾಬರ್ ಆಜಂ –ಎಎಫ್‌ಪಿ ಚಿತ್ರ

ಧೋನಿ ಅಂದು–ಇಂದು

2007ರಲ್ಲಿ ಮೊದಲ ಬಾರಿ ಟಿ20 ವಿಶ್ವಕಪ್ ಟೂರ್ನಿ ನಡೆದಿತ್ತು. ಮಹೇಂದ್ರಸಿಂಗ್ ಧೋನಿ ನಾಯಕತ್ವದ ತಂಡವು ಪ್ರಶಸ್ತಿ ಗೆದ್ದಿತು. ಆ ಟೂರ್ನಿ ಮತ್ತು ನಂತರದ ಟೂರ್ನಿಗಳಲ್ಲಿ ಪಾಕಿಸ್ತಾನ ತಂಡದ ಎದುರು ಭಾರತ ಒಮ್ಮೆಯೂ ಸೋತಿಲ್ಲ. ವಿಶೇಷವೆಂದರೆ ಆ ಎಲ್ಲ ಟೂರ್ನಿಗಳಲ್ಲಿಯೂ ಭಾರತಕ್ಕೆ ಮಹೇಂದ್ರಸಿಂಗ್ ಧೋನಿಯೇ ನಾಯಕರಾಗಿದ್ದರು.

ಇದೀಗ ಧೋನಿ, ವಿರಾಟ್ ಕೊಹ್ಲಿ ಬಳಗಕ್ಕೆ ‘ಮೆಂಟರ್’ ಆಗಿ ತಂಡಕ್ಕೆ ಮರಳಿದ್ದಾರೆ. ಹೋದ ವರ್ಷ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದ ಧೋನಿ ಐಪಿಎಲ್‌ನಲ್ಲಿ ಮಾತ್ರ ಆಡುತ್ತಿದ್ದಾರೆ. ಇತ್ತೀಚೆಗಷ್ಟೇ ಮುಕ್ತಾಯವಾದ ಐಪಿಎಲ್‌ನಲ್ಲಿ ಅವರ ನಾಯಕತ್ವದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಚಾಂಪಿಯನ್ ಆಗಿತ್ತು.

ಧೋನಿ ಮೊದಲ ಬಾರಿಗೆ ತಂಡದ ನಾಯಕರಾಗಿ ಕಣಕ್ಕಿಳಿದ ವಿಶ್ವಕಪ್ ಟೂರ್ನಿಯಲ್ಲಿಯೇ ಜಯಭೇರಿ ಬಾರಿಸಿದ್ದರು. ಇದೀಗ ಮೊದಲ ಬಾರಿ ಮೆಂಟರ್ ಆಗಿ ತಂಡದೊಂದಿಗೆ ಕಣಕ್ಕಿಳಿಯುತ್ತಿರುವ ಅವರ ತಂತ್ರಗಾರಿಕೆಗೆ ಜಯ ಒಲಿಯುವುದೇ ಎಂಬ ಕುತೂಹಲ ಗರಿಗೆದರಿದೆ.

ಅಂತರರಾಷ್ಟ್ರೀಯ ಟಿ20 ಸಾಧನೆ

ವಿರಾಟ್ ಕೊಹ್ಲಿ

ಪಂದ್ಯ	ರನ್
90	3,159
ಗರಿಷ್ಠ	ಸರಾಸರಿ
94*	52.65
ಸ್ಟ್ರೈಕ್‌ರೇಟ್	ಅರ್ಧಶತಕ
139.04	28
ಬೌಂಡರಿ	ಸಿಕ್ಸರ್
285	90

ಬಾಬರ್ ಆಜಂ

ಪಂದ್ಯ	ರನ್	
61	2,204	
ಗರಿಷ್ಠ	ಸರಾಸರಿ	
122	46.89	
ಸ್ಟ್ರೈಕ್‌ರೇಟ್	ಶತಕ	ಅರ್ಧಶತಕ
130.64	1	20
ಬೌಂಡರಿ	ಸಿಕ್ಸರ್	
231	33	

ಐಪಿಎಲ್‌ನಲ್ಲಿ ಆಡಿ ಬಂದಿರುವ ವಿರಾಟ್, ರೋಹಿತ್, ಜಡೇಜ, ಆರ್. ಅಶ್ವಿನ್ ಮತ್ತು ಶಾರ್ದೂಲ್ ಠಾಕೂರ್ ಅವರನ್ನು ಎದುರಿಸುವುದು ಕಠಿಣ ಸವಾಲು. ರೋಹಿತ್ ಜೊತೆಗೆ ಕೆ.ಎಲ್. ರಾಹುಲ್ ಇನಿಂಗ್ಸ್ ಆರಂಭಿಸುವುದು ಬಹುತೇಕ ಖಚಿತ. ಹಾರ್ದಿಕ್ ಪಾಂಡ್ಯ ಅವರಿಗೆ ಅವಕಾಶ ಸಿಗುವ ಬಗ್ಗೆ ಖಚಿತತೆ ಇಲ್ಲ. ಆದ್ದರಿಂದ ಠಾಕೂರ್ ಕಣಕ್ಕಿಳಿಯುವ ಸಾಧ್ಯತೆ ಹೆಚ್ಚಿದೆ.

ಟಿ20 ವಿಶ್ವಕಪ್ ಟೂರ್ನಿಗಳಲ್ಲಿ ಭಾರತ–ಪಾಕಿಸ್ತಾನ

ದಿನಾಂಕ	ಸ್ಥಳ	ಫಲಿತಾಂಶ
2007,ಸೆ.14	ಡರ್ಬನ್	ಪಂದ್ಯ ಟೈ (ಬಾಲ್ ಔಟ್‌ನಲ್ಲಿ ಭಾರತಕ್ಕೆ ಜಯ)
2007,ಸೆ.24	ಜೋಹಾನ್ಸ್‌ಬರ್ಗ್	ಭಾರತಕ್ಕೆ ಐದು ರನ್‌ಗಳ ಜಯ
2012, ಸೆ.30	ಕೊಲಂಬೊ	ಭಾರತಕ್ಕೆ ಎಂಟು ವಿಕೆಟ್‌ಗಳ ಜಯ
2014, ಮಾ.21	ಢಾಕಾ	ಭಾರತಕ್ಕೆ ಏಳು ವಿಕೆಟ್‌ಗಳ ಜಯ
2016, ಮಾ.19	ಕೋಲ್ಕತ್ತ	ಭಾರತಕ್ಕೆ ಆರು ವಿಕೆಟ್‌ಗಳ ಜಯ

ಏಕದಿನ ವಿಶ್ವಕಪ್‌ನಲ್ಲಿ ಭಾರತ–ಪಾಕಿಸ್ತಾನ ಮುಖಾಮುಖಿ

ಇಸವಿ	ಆತಿಥೇಯ ದೇಶ	ಸ್ಥಳ	ಫಲಿತಾಂಶ	ಅಂತರ
1992	ಆಸ್ಟ್ರೇಲಿಯ/ನ್ಯೂಜಿಲೆಂಡ್	ಸಿಡ್ನಿ	ಭಾರತಕ್ಕೆ ಜಯ	43 ರನ್
1996	ಭಾರತ/ಪಾಕಿಸ್ತಾನ/ಶ್ರೀಲಂಕಾ	ಬೆಂಗಳೂರು	ಭಾರತಕ್ಕೆ ಜಯ	39 ರನ್
1999	ಇಂಗ್ಲೆಂಡ್/ಸ್ಕಾಟ್ಲೆಂಡ್/ಐರ್ಲೆಂಡ್	ಮ್ಯಾಂಚೆಸ್ಟರ್	ಭಾರತಕ್ಕೆ ಜಯ	47 ರನ್
2003	ದಕ್ಷಿಣ ಆಫ್ರಿಕಾ/ಜಿಂಬಾಬ್ವೆ/ಕೆನ್ಯಾ	ಸೆಂಚುರಿಯನ್	ಭಾರತಕ್ಕೆ ಜಯ	6 ವಿಕೆಟ್
2011	ಭಾರತ/ಶ್ರೀಲಂಕಾ/ಬಾಂಗ್ಲಾದೇಶ	ಮೊಹಾಲಿ	ಭಾರತಕ್ಕೆ ಜಯ	29 ರನ್
2015	ಆಸ್ಟ್ರೇಲಿಯಾ/ನ್ಯೂಜಿಲೆಂಡ್	ಅಡಿಲೇಡ್	ಭಾರತಕ್ಕೆ ಜಯ	76 ರನ್
2019	ಇಂಗ್ಲೆಂಡ್	ಮ್ಯಾಂಚೆಸ್ಟರ್	ಭಾರತಕ್ಕೆ ಜಯ	89 ರನ್

ಆ್ಯರನ್ ಫಿಂಚ್ ಬಳಗಕ್ಕೆ ಮಣಿದ ದಕ್ಷಿಣ ಆಫ್ರಿಕಾ ತಂಡ

ಆಸ್ಟ್ರೇಲಿಯಾ ಜಯಭೇರಿ

ಅಬುಧಾಬಿ (ಎಎಫ್‌ಪಿ): ಎದುರಾಳಿ ದಕ್ಷಿಣ ಆಫ್ರಿಕಾವನ್ನು ಸಾಧಾರಣ ಮೊತ್ತಕ್ಕೆ ನಿಯಂತ್ರಿಸಿದ ಆಸ್ಟ್ರೇಲಿಯಾ ತಂಡ ಸೂಪರ್ 12ರ ಹಂತದ ಮೊದಲ ಪಂದ್ಯದಲ್ಲಿ ಐದು ವಿಕೆಟ್‌ಗಳ ಜಯಭೇರಿ ಮೊಳಗಿಸಿತು.

ಶನಿವಾರ ನಡೆದ ಒಂದನೇ ಗುಂಪಿನ ಪಂದ್ಯದಲ್ಲಿ 119 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಆ್ಯರನ್ ಫಿಂಚ್ ಬಳಗ ಒಂದು ಹಂತದಲ್ಲಿ ಆತಂಕ ಎದುರಿಸಿತು. ಆದರೆ ಮಾರ್ಕಸ್ ಸ್ಟೋಯಿನಿಸ್ ಮತ್ತು ಮ್ಯಾಥ್ಯೂ ವೇಡ್ ಅವರು ದಿಟ್ಟ ಆಟವಾಡಿ ತಂಡವನ್ನು ದಡ ಸೇರಿಸಿದರು.

ಡೇವಿಡ್ ವಾರ್ನರ್ ಮತ್ತು ನಾಯಕ ಆ್ಯರನ್ ಫಿಂಚ್ ಒಳಗೊಂಡಂತೆ ಅಗ್ರ ಕ್ರಮಾಂಕದ ಬ್ಯಾಟರ್‌ಗಳು ಕ್ರೀಸ್‌ನಲ್ಲಿ ನೆಲೆಯೂರಲು ವಿಫಲರಾದರು. 15ನೇ ಓವರ್‌ನಲ್ಲಿ ಸ್ಟೀವ್ ಸ್ಮಿತ್ ಮತ್ತು ನಂತರದ ಓವರ್‌ನಲ್ಲಿ ಗ್ಲೆನ್ ಮ್ಯಾಕ್ಸ್‌ವೆಲ್ ಅವರ ವಿಕೆಟ್ ಉರುಳಿದಾಗ ತಂಡ 81 ರನ್‌ಗಳಿಗೆ ಐದು ವಿಕೆಟ್ ಎಂಬ ಸ್ಥಿತಿಯಲ್ಲಿತ್ತು. ಈ ಸಂದರ್ಭದಲ್ಲಿ ಸ್ಟೋಯಿನಿಸ್ ಮತ್ತು ವೇಡ್ ತಂಡಕ್ಕೆ ಆಸರೆಯಾದರು. ಮುರಿಯದ ಆರನೇ ವಿಕೆಟ್‌ಗೆ ಇವರಿಬ್ಬರು 40 ರನ್ ಸೇರಿಸಿದರು.

ಟಾಸ್ ಗೆದ್ದ ಆಸ್ಟ್ರೇಲಿಯಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭದಲ್ಲಿ ನಾಯಕ ತೆಂಬಾ ಬವುಮಾ ಸತತ ಬೌಂಡರಿಗಳ ಮೂಲಕ ಮಿಂಚಿದರು. ಆದರೆ ಗ್ಲೆನ್ ಮ್ಯಾಕ್ಸ್‌ವೆಲ್ ಮತ್ತು ಜೋಶ್ ಹ್ಯಾಜಲ್‌ವುಡ್ ಅವರ ಮ್ಯಾಜಿಕ್‌ನಿಂದಾಗಿ ಆಸ್ಟ್ರೇಲಿಯಾ ಮೇಲುಗೈ ಸಾಧಿಸಿತು. ಏಡನ್ ಮರ್ಕರಮ್ ಏಕಾಂಗಿ ಹೋರಾಟ ನಡೆಸಿ ಮೊತ್ತವನ್ನು ನೂರರ ಬಳಿ ತಲುಪಿಸಿದರು. ಕಗಿಸೊ ರಬಾಡ ನೆಲಕಚ್ಚಿ ಆಡಿ ಮೊತ್ತವನ್ನು ಮೂರಂಕಿ ದಾಟಿಸಿದರು.



ಮಾರ್ಕಸ್ ಸ್ಟೋಯಿನಿಸ್ –ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ದಕ್ಷಿಣ ಆಫ್ರಿಕಾ 9ಕ್ಕೆ 118 (20 ಓವರ್)
ಬವುಮಾ ಬಿ ಮ್ಯಾಕ್ಸ್‌ವೆಲ್ 12 (7ಎ, 4X2), ಡಿಕಾಕ್ ಬಿ ಹ್ಯಾಜಲ್‌ವುಡ್ 7 (12ಎ, 4X1), ಡಸೆನ್ ಸಿ ವೇಡ್ ಬಿ ಹ್ಯಾಜಲ್‌ವುಡ್ 2 (3ಎ), ಮರ್ಕರಂ ಸಿ ಮ್ಯಾಕ್ಸ್‌ವೆಲ್ ಬಿ ಸ್ಟಾರ್ಕ್ 40 (36ಎ, 4X3, 6X1), ಕ್ಲಾಸೆನ್ ಸಿ ಸ್ಮಿತ್ ಬಿ ಕಮಿನ್ಸ್ 13 (13ಎ, 4X2), ಮಿಲ್ಲರ್ ಎಲ್‌ಬಿಡಬ್ಲ್ಯು ಜಂಪಾ 16 (18ಎ), ಪ್ರಿಟೋರಿಯಸ್ ಸಿ ವೇಡ್ ಬಿ ಜಂಪಾ 1 (2ಎ), ಮಹಾರಾಜ್ ರನೌಟ್ (ಮ್ಯಾಕ್ಸ್‌ವೆಲ್/ವೇಡ್) 0 (2ಎ), ರಬಾಡ ಔಟಾಗದೆ 19 (23ಎ, 4X1, 6X1), ನಾರ್ಕಿಯಾ ಸಿ ಫಿಂಚ್ ಬಿ ಸ್ಟಾರ್ಕ್ 2 (3ಎ), ತಬ್ರೇಜ್ ಔಟಾಗದೆ 0 (1ಎ)
ಇತರೆ (ಬೈ 2, ಲೆಗ್‌ವೈ 3, ವೈಡ್ 1) 6
ವಿಕೆಟ್ ಪತನ: 1–13 (ತೆಂಬಾ ಬವುಮಾ, 1.3), 2–16 (ರಸ್ಸಿ ವ್ಯಾನ್ ಡರ್ ಡಸೆನ್, 2.1), 3–23 (ಕ್ವಿಂಟನ್ ಡಿ ಕಾಕ್, 4.1), 4–46 (ಹೆನ್ರಿಚ್ ಕ್ಲಾಸೆನ್, 7.6), 5–80 (ಡೇವಿಡ್ ಮಿಲ್ಲರ್, 13.3), 6–82 (ಡ್ವೇನ್ ಪ್ರಿಟೋರಿಯಸ್, 13.6), 7–83 (ಕೇಶವ್ ಮಹಾರಾಜ್, 14.3), 8– 98 (ಏಡನ್ ಮರ್ಕರಂ, 17.1), 9–115 (ಎನ್ರಿಚ್ ನಾರ್ಕಿಯಾ, 19.4).
ಬೌಲಿಂಗ್: ಮಿಚೆಲ್ ಸ್ಟಾರ್ಕ್ 4–0–32–2, ಗ್ಲೆನ್ ಮ್ಯಾಕ್ಸ್‌ವೆಲ್ 4–0–24–1, ಜೋಶ್ ಹ್ಯಾಜಲ್‌ವುಡ್ 4–1–19–2, ಪ್ಯಾಟ್ ಕಮಿನ್ಸ್ 4–0–17–1, ಆ್ಯಡಂ ಜಂಪಾ 4–0–21–2

ಆಸ್ಟ್ರೇಲಿಯಾ 5ಕ್ಕೆ 121 (19.4 ಓವರ್)
ವಾರ್ನರ್ ಸಿ ಕ್ಲಾಸೆನ್ ಬಿ ರಬಾಡ 14 (15ಎ, 4X3), ಫಿಂಚ್ ಸಿ ರಬಾಡ ಬಿ ನಾರ್ಕಿಯಾ 0 (5ಎ), ಮಾರ್ಷ್ ಸಿ ಡಸೆನ್ ಬಿ ಮಹಾರಾಜ್ 11 (17ಎ, 4X1), ಸ್ಮಿತ್ ಸಿ ಮರ್ಕರಂ ಬಿ ನಾರ್ಕಿಯಾ 35 (34ಎ, 4X3), ಮ್ಯಾಕ್ಸ್‌ವೆಲ್ ಬಿ ತಬ್ರೇಜ್ 18 (21ಎ, 4X1), ಸ್ಟೋಯಿನಿಸ್ ಔಟಾಗದೆ 24 (16ಎ, 4X3), ವೇಡ್ ಔಟಾಗದೆ 15 (10ಎ, 4X2).
ಇತರೆ (ಲೆಗ್‌ಬೈ 1, ವೈಡ್ 3) 4
ವಿಕೆಟ್ ಪತನ: 1–4 (ಆ್ಯರನ್ ಫಿಂಚ್, 1.5), 2–20 (ಡೇವಿಡ್ ವಾರ್ನರ್, 4.3), 3–38 (ಮಿಚೆಲ್ ಮಾರ್ಷ್, 7.5), 4–80 (ಸ್ಟೀವನ್ ಸ್ಮಿತ್, 14.5), 5–81 (ಗ್ಲೆನ್ ಮ್ಯಾಕ್ಸ್‌ವೆಲ್, 15.2)
ಬೌಲಿಂಗ್: ಕಗಿಸೊ ರಬಾಡ 4–0–28–1, ಎನ್ರಿಚ್ ನಾರ್ಕಿಯಾ 4–0–21–2, ಕೇಶವ್ ಮಹಾರಾಜ್ 4–0–23–1, ತಬ್ರೇಜ್ ಶಂಸಿ 4–0–22–1, ಡ್ವೇನ್ ಪ್ರಿಟೋರಿಯಸ್ 3.4–0–26–1.

ಫಲಿತಾಂಶ: ಆಸ್ಟ್ರೇಲಿಯಾಗೆ ಐದು ವಿಕೆಟ್‌ಗಳ ಜಯ



ಪಾಕ್ ಅಭಿಮಾನಿ ಧೋನಿ ಪ್ರೀತಿ

ದುಬೈ: ಭಾರತ ತಂಡದ ಮಾರ್ಗದರ್ಶಕರಾಗಿ ಮಹೇಂದ್ರ ಸಿಂಗ್ ಧೋನಿ ನೇಮಕವಾಗಿರುವುದು ಅವರ ಅಭಿಮಾನಿ ಮೊಹಮ್ಮದ್ ಬಶೀರ್ ಬೊಝ್ಯು ಅವರಿಗೆ ಅತೀವ ಸಂತಸ ತಂದಿದೆ.

ಪಾಕಿಸ್ತಾನ ಮೂಲದ ಬಶೀರ್ ದುಬೈನಲ್ಲಿ ಭಾನುವಾರ ಭಾರತ–ಪಾಕ್ ಪಂದ್ಯ ವೀಕ್ಷಿಸಲು ಬಂದಿಳಿದಿದ್ದಾರೆ. ‘ಪಂದ್ಯದಲ್ಲಿ ಪಾಕಿಸ್ತಾನ ಗೆಲ್ಲಲಿದೆ. ಆದರೆ, ಐ ಲವ್ ಯೂ ಧೋನಿ’ ಎಂದು ಹೇಳಿರುವ ಬಶೀರ್ ತಮ್ಮ ವಿಡಿಯೊವನ್ನು ಟ್ವಿಟರ್‌ನಲ್ಲಿ ಹಾಕಿದ್ದಾರೆ.

‘ಕೋವಿಡ್ ನಿಯಮದಿಂದಾಗಿ ಧೋನಿ ಭೇಟಿ ಸಾಧ್ಯವಿಲ್ಲ. ಆದರೆ ಧೋನಿ ಖಂಡಿತವಾಗಿಯೂ ಟಿಕೆಟ್ ಕೊಡಿಸಲಿದ್ದಾರೆ’ ಎಂದು ಚಾಚಾ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಭಾರತ ಹಾಗೂ ಪಾಕಿಸ್ತಾನ ನಡುವಣ ಪಂದ್ಯ ವೀಕ್ಷಣೆಗಾಗಿ ಜೆರ್ಸಿಯನ್ನು ವಿಶಿಷ್ಟ ರೂಪದಲ್ಲಿ ವಿನ್ಯಾಸಗೊಳಿಸಿದ್ದಾರೆ. ದೇಹದ ಬಲಭಾಗದಲ್ಲಿ ಭಾರತ ಹಾಗೂ ಎಡಭಾಗದಲ್ಲಿ ಪಾಕಿಸ್ತಾನ ಜೆರ್ಸಿಯನ್ನು ವಿನ್ಯಾಸಗೊಳಿಸಿದ್ದಾರೆ. ಅಲ್ಲದೆ 'ವೆಲ್‌ಕಮ್ ಬ್ಯಾಕ್ ಧೋನಿ' ಎಂದು ಬರೆದುಕೊಂಡಿದ್ದಾರೆ.


ಲಂಕಾಕ್ಕೆ ಬಾಂಗ್ಲಾ ಎದುರಾಳಿ

ಶಾರ್ಜಾ (ಪಿಟಿಐ): ಬಾಂಗ್ಲಾದೇಶ ವಿರುದ್ಧ ಭಾನುವಾರ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯ ಒಂದನೇ ಗುಂಪಿನ ಪಂದ್ಯದಲ್ಲಿ ಶ್ರೀಲಂಕಾ ತನ್ನ ಬೌಲರ್‌ಗಳ ಮೇಲೆ ನಿರೀಕ್ಷೆ ಇರಿಸಿಕೊಂಡಿದೆ.

ಮೊದಲ ಸುತ್ತಿನ ಗುಂಪು ಹಂತದ ಪಂದ್ಯಗಳಲ್ಲಿ ಶ್ರೀಲಂಕಾ ಬ್ಯಾಟಿಂಗ್ ವಿಭಾಗ ನಿರೀಕ್ಷೆಗೆ ತಕ್ಕಂತೆ ಆಡಲಿಲ್ಲ. ಮೊದಲ ಪಂದ್ಯದಲ್ಲೇ ಸ್ಕಾಟ್ಲೆಂಡ್ ವಿರುದ್ಧ ಸೋತಿದ್ದ ಬಾಂಗ್ಲಾ ಟೂರ್ನಿಯಿಂದ ಹೊರ ಬೀಳುವ ಆತಂಕದಲ್ಲಿತ್ತು. ನಂತರ ಪ್ರಯಾಸದಿಂದ ಅರ್ಹತೆ ಗಳಿಸಿತ್ತು.

ಶ್ರೀಲಂಕಾ ಅಗ್ರ ಕ್ರಮಾಂಕದ ಬ್ಯಾಟರ್‌ಗಳ ವೈಫಲ್ಯದಿಂದಾಗಿ ಚಿಂತೆಗೆ ಒಳಗಾಗಿದೆ. ಪಥುಮ್ ನಿಸಾಂಕ, ಆವಿಷ್ಕಾ ಫರ್ನಾಂಡೊ, ಭನುಕ ರಾಜಪಕ್ಷೆ ಮತ್ತು ನಾಯಕ ದಾಸುನ್ ಶಾನಕ ಅವರು ಲಯ ಕಂಡುಕೊಳ್ಳಬೇಕಾಗಿದೆ.

ಲಾಹಿರು ಕುಮಾರ, ಚಮಿಕ ಕರುಣರತ್ನೆ ಮತ್ತು ದುಷ್ಮಂತ ಚಮೀರ ಅವರನ್ನು ಒಳಗೊಂಡ ಅನುಭವಿ ಬೌಲಿಂಗ್ ವಿಭಾಗಕ್ಕೆ ಆಫ್ ಸ್ಪಿನ್ನರ್ ಮಹೀಶ್ ತೀಕ್ಷಣ ಮತ್ತು ಲೆಗ್ ಬ್ರೇಕ್ ಪರಿಣಿತ ವಾನಿಂದು ಹಸರಂಗ ಅವರ ಬಲವೂ ಇದೆ.


ಮಹೀಶ್ ತೀಕ್ಷಣ

ಬಾಂಗ್ಲಾದೇಶಕ್ಕೂ ಬ್ಯಾಟಿಂಗ್ ವಿಭಾಗದ ವೈಫಲ್ಯದ್ದೇ ಚಿಂತೆ. ಮೊಹಮ್ಮದ್ ನಯೀಮ್, ಲಿಟನ್ ದಾಸ್, ಆರಿಫ್ ಹೊಸೇನ್ ಅವರಲ್ಲಿ ಪ್ರತಿಭೆ ಇದ್ದರೂ ಶಕೀಬ್ ಅಲ್ ಹಸನ್, ನಾಯಕ ಮೊಹಮ್ಮದುಲ್ಲಾ ಮತ್ತು ಮುಷ್ಫಿಕುರ್ ರಹೀಂ ಅವರ ಹೆಗಲ ಮೇಲೆ ಭಾರಿ ದೊಡ್ಡ ಜವಾಬ್ದಾರಿ ಇದೆ. ಶಕೀಬ್ ಮತ್ತು ಮೆಹದಿ ಹಸನ್ ಅವರನ್ನು ಒಳಗೊಂಡ ಸ್ಪಿನ್ ವಿಭಾಗ ತಂಡದ ಪ್ರಮುಖ ಅಸ್ತ್ರವಾಗಿದೆ.

ಆರಂಭ: ಸಂಜೆ 3.30 (ಭಾರತೀಯ ಕಾಲಮಾನ)

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಫುಟ್‌ಬಾಲ್: ಭಾರತಕ್ಕೆ ಒಮನ್ ಸವಾಲು

ದುಬೈ (ಪಿಟಿಐ): ಭಾರತದ ಪುರುಷರ ಫುಟ್‌ಬಾಲ್ ತಂಡವು ಎಎಫ್‌ಸಿ ಕಪ್ 23 ವರ್ಷದೊಳಗಿನವರ ಅರ್ಹತಾ ಟೂರ್ನಿಯ ಮೊದಲ ಪಂದ್ಯದಲ್ಲಿ ಒಮನ್ ತಂಡಕ್ಕೆ ಭಾನುವಾರ ಮುಖಾಮುಖಿಯಾಗಲಿದೆ.

ಭಾರತ ತಂಡವು ಇದೇ 20ರಂದು ಇಲ್ಲಿಗೆ ಬಂದಿದ್ದು ಮರುದಿನ ಅಭ್ಯಾಸ ಆರಂಭಿಸಿತ್ತು. ಭಾರತ, ಯುನೈಟೆಡ್ ಅರಬ್ ಎಮಿರೇಟ್ಸ್, ಒಮನ್ ಹಾಗೂ ಕಿರ್ಗಿಸ್ ಗಣರಾಜ್ಯ ತಂಡಗಳು ‘ಇ’ ಗುಂಪಿನಲ್ಲಿವೆ.

‘ಅರ್ಹತಾ ಟೂರ್ನಿಯ ಮೂರು ಪಂದ್ಯ ನಮ್ಮ ಆಟಗಾರರ ಸಾಮರ್ಥ್ಯ ಅಳೆಯುವ ವೇದಿಕೆಗಳಾಗಿವೆ. ಬಲಿಷ್ಠ ತಂಡಗಳ ಎದುರು ಆಡುವ ಮೂಲಕ ಅವರು ಅನುಭವ ಪಡೆದುಕೊಳ್ಳಲಿದ್ದಾರೆ‘ ಎಂದು ಭಾರತ ತಂಡದ ಮುಖ್ಯ ಕೋಚ್ ಇಗರ್ ಸ್ಟಿಮ್ಯಾಚ್ ಹೇಳಿದ್ದಾರೆ.

ಇತ್ತೀಚೆಗೆ ಕೊನೆಗೊಂಡ ಸ್ಯಾಫ್ ಚಾಂಪಿಯನ್‌ಷಿಪ್‌ನಲ್ಲಿ 23 ವರ್ಷದೊಳಗಿನ ಐವರು ಆಟಗಾರರು ಭಾರತ ಸೀನಿಯರ್ ತಂಡದಲ್ಲಿ ಆಡಿದ್ದರು.

ರೇಸಿಂಗ್ ಚಾಂಪಿಯನ್‌ಷಿಪ್: ರುಹಾನ್, ಅನೀಶ್‌ಗೆ ಜಯ

ಕೊಯಮತ್ತೂರು: ಬೆಂಗಳೂರಿನ ಸೋಹಿಲ್ ಶಾ, ರುಹಾನ್ ಆಳ್ವಾ ಹಾಗೂ ಹುಬ್ಬಳ್ಳಿಯ ಅನೀಶ್ ದಾಮೋದರ ಶೆಟ್ಟಿ ಅವರು ಅವರು ಎಫ್‌ಎಂಎಸ್‌ಸಿಐ ರಾಷ್ಟ್ರೀಯ ರೇಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಮಿಂಚಿದರು.

ಶನಿವಾರ ನಡೆದ ಚಾಂಪಿಯನ್‌ಷಿಪ್‌ನ ಎಲ್‌ಜಿಬಿ4 ವಿಭಾಗದ ಮೊದಲ ರೇಸ್‌ನಲ್ಲಿ ಸೋಹಿಲ್ ಅಗ್ರಸ್ಥಾನ ಗಳಿಸಿದರೆ, ರುಹಾನ್ ನೊವೈಸ್ ಕಪ್ ವಿಭಾಗದಲ್ಲಿ ಮೊದಲ ಸ್ಥಾನ ಪಡೆದರು.

ಆರ್‌ಇ ಕಾಂಟಿನೆಂಟಲ್ ಜಿಟಿ ಕಪ್ ಮೊದಲ ರೇಸ್‌ನಲ್ಲಿ ಹುಬ್ಬಳ್ಳಿಯ ಅನೀಶ್ ದಾಮೋದರ ಶೆಟ್ಟಿ ಅಗ್ರಸ್ಥಾನ ತಮ್ಮದಾಗಿಸಿಕೊಂಡರು.

ಫಲಿತಾಂಶಗಳು: ಫಾರ್ಮುಲಾ ಎಲ್‌ಜಿಬಿ4: ಸೋಹಿಲ್ ಶಾ (ಬೆಂಗಳೂರು)–1, ಕಾಲ: 23 ನಿ.:26.923 ಸೆ., ಆರ್ಯ ಸಿಂಗ್ (ಕೋಲ್ಕತ್ತ)–2, ದಿಲ್‌ಜೀತ್ ಟಿ.ಎಸ್ (ತ್ರಿಶ್ಶೂರ್)–3.

ನೊವೈಸ್ ಕಪ್: ರುಹಾನ್ ಆಳ್ವಾ (ಬೆಂಗಳೂರು)–1, ಕಾಲ: 14:22.061, ಆದಿತ್ಯ ಪರಶುರಾಮ್ (ಚೆನ್ನೈ)–2, ಗೌರವ್ ಕೊಚಾರ್ (ಕೂನೂರ್)–3.

ಆರ್‌ಇ ಕಾಂಟಿನೆಂಟಲ್ ಜಿಟಿ ಕಪ್: ಅನೀಶ್ ದಾಮೋದರ ಶೆಟ್ಟಿ (ಹುಬ್ಬಳ್ಳಿ)–1, ಕಾಲ: 14:07.754, ಅಲ್ವಿನ್ ಕ್ಸೇವಿಯರ್ (ತ್ರಿಶ್ಶೂರ್)–2, ಜಯಂತ್ ಪ್ರತಿಪಾತಿ (ಹೈದರಾಬಾದ್)–3.


ಅನೀಶ್ ದಾಮೋದರ ಶೆಟ್ಟಿ

ಡೆಲ್ಲಿಗೆ ಗೆಲುವು

ಬೆಂಗಳೂರು: ಡೆಲ್ಲಿ ಎಫ್‌ಸಿ ತಂಡ ಐ–ಲೀಗ್ ಫುಟ್‌ಬಾಲ್ ಅರ್ಹತಾ ಟೂರ್ನಿ ಯಲ್ಲಿ ಭರ್ಜರಿ ಜಯ ಗಳಿಸಿತು. ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಶನಿವಾರ 6–0 ಗೋಲುಗಳಿಂದ ಮದನ್ ಮಹಾರಾಜ್ ಎಫ್‌ಸಿ ಎದುರು ಗೆದ್ದರು.

ಡೆಲ್ಲಿ ಎಫ್‌ಸಿ ಪರ ನಿಖಿಲ್ ಮಾಳಿ ಮತ್ತು ಗಗನದೀಪ್ ಬಾಲಿ ತಲಾ ಎರಡು ಗೋಲು ದಾಖಲಿಸಿದರು. ಸೆರ್ಜಿಯೊ ಬಾರ್ಬಜಾ ಹಾಗೂ ಅನ್ವರ್ ಅಲಿ ತಲಾ ಒಂದು ಬಾರಿ ಯಶಸ್ಸು ಸಾಧಿಸಿದರು.

ಮದನ್ ಮಹಾರಾಜ್ ತಂಡಕ್ಕೆ ಒಂದು ಗೆಲುವು ಕೂಡ ಒಲಿದಿಲ್ಲ.

ರಾಜಸ್ಥಾನ್ ಯುನೈಟೆಡ್‌ಗೆ ಅರ್ಹತೆ: ಕೆಂಕ್ರೆ ಎಫ್‌ಸಿ ಎದುರು ಗೋಲು ರಹಿತ ಡ್ರಾ ಸಾಧಿಸಿದ ರಾಜಸ್ಥಾನ್ ಯುನೈಟೆಡ್ ತಂಡ ಐ–ಲೀಗ್ ಮುಖ್ಯ ಸುತ್ತಿಗೆ ಮೊದಲ ಬಾರಿ ಅರ್ಹತೆ ಗಳಿಸಿತು. ಆಡಿದ ಮೂರು ಪಂದ್ಯಗಳಿಂದ ರಾಜಸ್ಥಾನ್ ತಂಡ ಏಳು ಪಾಯಿಂಟ್ಸ್ ಕಲೆಹಾಕಿತು. ಇದರೊಂದಿಗೆ ಪಟ್ಟಿಯಲ್ಲಿ ಅಗ್ರಸ್ಥಾನ ಗಳಿಸಿತು.


ಆದಿಲ್ ರಶೀದ್ ಅವರನ್ನು ಅಭಿನಂದಿಸಿದ ಸಹ ಆಟಗಾರರು –ರಾಯಿಟರ್ಸ್ ಚಿತ್ರ

ಇಂಗ್ಲೆಂಡ್‌ಗೆ ಮಣಿದ ವಿಂಡೀಸ್

ದುಬೈ (ಪಿಟಿಐ): ಹಾಲಿ ಚಾಂಪಿಯನ್ ವೆಸ್ಟ್ ಇಂಡೀಸ್ ತಂಡವು ಶನಿವಾರ ನಡೆದ ಇಂಗ್ಲೆಂಡ್ ವಿರುದ್ಧ ಪಂದ್ಯದಲ್ಲಿ ಹೀನಾಯವಾಗಿ ಸೋತಿತು.

ಟಾಸ್ ಗೆದ್ದ ಇಂಗ್ಲೆಂಡ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಇಂಗ್ಲೆಂಡ್ ತಂಡದ ಮೋಯಿನ್, ಟೈಮಲ್ ಮಿಲ್ಸ್ ಮತ್ತು ಆದಿಲ್ ರಶೀದ್ ದಾಳಿ ಮುಂದೆ ವಿಂಡೀಸ್ 55 ರನ್‌ಗಳಿಗೆ ಕುಸಿಯಿತು.

ಗುರಿ ಬೆನ್ನಟ್ಟಿದ ಇಂಗ್ಲೆಂಡ್ 8.2 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 56 ರನ್ ಗಳಿಸಿತು. 6 ವಿಕೆಟ್‌ಗಳಿಂದ ಗೆದ್ದು ಒಂದನೇ ಗುಂಪಿನಲ್ಲಿ ಶುಭಾರಂಭ ಮಾಡಿತು. ವಿಂಡೀಸ್ ಸಿಡಿಲಬ್ಬರದ ಶೈಲಿಯ ಬ್ಯಾಟ್ಸ್‌ಮನ್ ಕ್ರಿಸ್ ಗೇಲ್ (13 ರನ್) ಅವರನ್ನು ಬಿಟ್ಟರೆ ಉಳಿದ ಯಾರೂ ಎರಡಂಕಿ ತಲುಪಲಿಲ್ಲ. ಈಚೆಗೆ ಐಪಿಎಲ್‌ನಲ್ಲಿ ಉತ್ತಮವಾಗಿ ಆಡಿದ್ದ ಡ್ವೇನ್ ಬ್ರಾವೊ, ಕೀರನ್ ಪೊಲಾರ್ಡ್, ಶಿಮ್ರೊನ್ ಹೆಟ್ಮೆಯರ್ ಕೂಡ ವಿಫಲರಾದರು. ಆ್ಯಂಡ್ರೆ ರಸೆಲ್ ಲಯ ಕಂಡುಕೊಳ್ಳದೇ ಸೊನ್ನೆ ಸುತ್ತಿದರು. ವಿಂಡೀಸ್ ಇನಿಂಗ್ಸ್‌ನಲ್ಲಿ ಕೇವಲ ಒಂದು ಸಿಕ್ಸರ್ ದಾಖಲಾಯಿತು. ಆರಂಭಿಕ ಬ್ಯಾಟ್ಸ್‌ಮನ್ ಎವಿನ್ ಲೂಯಿಸ್ ಹೊಡೆದರು.

ಇಂಗ್ಲೆಂಡ್ ತಂಡದ ಆರಂಭಿಕ ಆಟಗಾರ ಜೋಸ್ ಬಟ್ಲರ್ (ಔಟಾಗದೆ 24; 22ಎ) ಮಿಂಚಿದರು. ವಿಂಡೀಸ್ ತಂಡದ ಅಕೀಲ್ ಹೊಸೇನ್ ಎರಡು ವಿಕೆಟ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ವೆಸ್ಟ್ ಇಂಡೀಸ್: 14.2 ಓವರ್‌ಗಳಲ್ಲಿ 55ಕ್ಕೆ ಆಲೌಟ್ (ಕ್ರಿಸ್ ಗೇಲ್ 13; ಮೋಯಿನ್ ಅಲಿ 17ಕ್ಕೆ2, ಕ್ರಿಸ್ ವೋಕ್ಸ್ 12ಕ್ಕೆ1, ಟೈಮಲ್ ಮಿಲ್ಸ್ 17ಕ್ಕೆ2, ಕ್ರಿಸ್ ಜೋರ್ಡಾನ್ 7ಕ್ಕೆ1, ಆದಿಲ್ ರಶೀದ್ 2ಕ್ಕೆ4); ಇಂಗ್ಲೆಂಡ್: 8.2 ಓವರ್‌ಗಳಲ್ಲಿ 4ಕ್ಕೆ 56 (ಜೇಸನ್ ರಾಯ್ 11, ಜೋಸ್ ಬಟ್ಲರ್ 24; ಅಕೀಲ್ ಹೊಸೇನ್ 24ಕ್ಕೆ2). ಫಲಿತಾಂಶ: ಇಂಗ್ಲೆಂಡ್‌ಗೆ 6 ವಿಕೆಟ್‌ಗಳ ಗೆಲುವು.

ಕೋಲ್ಕತ್ತ ರೇಸ್

ಆಲ್ ಅಟ್ರ್ಯಾಕ್ಟಿವ್ ಡರ್ಬಿ ಗೆಲ್ಲುವ ನಿರೀಕ್ಷೆ

ಬೆಟ್‌ಇಂಡಿಯಾರೇಸಸ್.ಕಾಮ್ ಕೋಲ್ಕತ್ತ ಮಳೆಗಾಲದ ಡರ್ಬಿ ಭಾನುವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಆಲ್ ಅಟ್ರ್ಯಾಕ್ಟಿವ್ ಡರ್ಬಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 12.45ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಡಿಸ್ಕವರ್ 2, ಟಾಹೊ 4, ಮೆರಿನಾ ಬೇ 5
2ನೇ ರೇಸ್: ಮೆಲೋಡಿ 7, ಚೋಯಿಗ್ಯಾಲ್ 6, ಟ್ರೆಸ್ ಬೀನ್ 1
3ನೇ ರೇಸ್: ಶಿವಾಲಿಕ್ ಗೋಲ್ಡ್ 6, ಟಾಪ್‌ನಾಚ್ 2, ಲೆ ಮಾರ್ಕ್ 5
4ನೇ ರೇಸ್: ಸೀ ಆಫ್ ಕಾರ್ಟೆಜ್ 6, ಮಾಲ್ವ 1, ರೋಮ ವಿಕ್ಟರ್ 3
5ನೇ ರೇಸ್: ಶೆರ್ವಿನ್ 1, ಯುಫ್ರೆಟಸ್ 4, ಜಾನಿ ಬ್ರಾವೊ 6
6ನೇ ರೇಸ್: ಆಲ್ ಅಟ್ರ್ಯಾಕ್ಟಿವ್ 1, ಡೆಲ್ಫಿನಿ 9, ಒಯಾಸಿಸ್ 5
7ನೇ ರೇಸ್: ಎಕ್ಸಾಟಿಕ್ ಕ್ವೀನ್ 2, ದಂಡಿ ಸತ್ಯಾಗ್ರಹ 9, ಈಸ್ಟ್ ಸೈಡ್ 4
8ನೇ ರೇಸ್: ಸಮ್ಮರ್ ಏರ್ 1, ಸೆಂಚೂರಿಯನ್ 2, ಶಿವಾಲಿಕ್ ಸಿಲ್ಕ್ 8

ಉತ್ತಮ ಬೆಟ್: ಎಕ್ಸಾಟಿಕ್ ಕ್ವೀನ್

ಜಾಕ್‌ಪಾಟ್	ಮಿನಿ ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	5,6,7,8	1,2,3	3,4,5	6,7,8

ರಾಷ್ಟ್ರೀಯ ಜೂನಿಯರ್, ಸಬ್‌ಜೂನಿಯರ್ ಈಜು ಚಾಂಪಿಯನ್‌ಷಿಪ್: ಧೀನಿಧಿ, ನೀನಾ ಮಿಂಚು

ಕರ್ನಾಟಕ ತಂಡಕ್ಕೆ ಸಮಗ್ರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ತಂಡವು ಶನಿವಾರ ಮುಕ್ತಾಯವಾದ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನ ಜೂನಿಯರ್ ಮತ್ತು ಸಬ್‌ಜೂನಿಯರ್ ಎರಡೂ ವಿಭಾಗಗಳಲ್ಲಿ ಸಮಗ್ರ ಪ್ರಶಸ್ತಿ ಗೆದ್ದುಕೊಂಡಿತು.

ಬಸವನಗುಡಿ ಈಜು ಕೇಂದ್ರದಲ್ಲಿ ನಡೆದ ಚಾಂಪಿಯನ್‌ಷಿಪ್‌ನ ಸಬ್ ಜೂನಿಯರ್ ವಿಭಾಗದಲ್ಲಿ ರಾಜ್ಯ ತಂಡವು ಒಟ್ಟು 456 ಪಾಯಿಂಟ್ಸ್ ಕಲೆ ಹಾಕಿದರೆ, ಜೂನಿಯರ್ ವಿಭಾಗದಲ್ಲಿ 517 ಪಾಯಿಂಟ್ಸ್ ಸಂಗ್ರಹಿಸಿತು. ವಾಟರ್‌ಪೋಲೊ ಬಾಲಕರ ವಿಭಾಗದಲ್ಲಿ ಬಂಗಾಳ ಮತ್ತು ಬಾಲಕಿಯರ ವಿಭಾಗದಲ್ಲಿ ಕೇರಳ ಚಾಂಪಿಯನ್ ಆದವು. ಡೈವಿಂಗ್‌ನಲ್ಲಿ ಎಸ್‌ಎಸ್‌ಬಿಸಿ ಮತ್ತು ಮಹಾರಾಷ್ಟ್ರ ತಂಡಗಳು ಪಾರಮ್ಯ ಮೆರೆದವು. ಕರ್ನಾಟಕದ ಧೀನಿಧಿ ದೇಶಿಂಗು ಹಾಗೂ ನೀನಾ ವೆಂಕಟೇಶ್ ಶನಿವಾರ ನೂತನ ದಾಖಲೆ ಬರೆದರು.



ರಾಷ್ಟ್ರೀಯ ಜೂನಿಯರ್ ಮತ್ತು ಸಬ್‌ಜೂನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಜಯಿಸಿದ ಕರ್ನಾಟಕ ತಂಡ– ಪ್ರಜಾವಾಣಿ ಚಿತ್ರ

ಐದನೇ ಮತ್ತು ಕೊನೆಯ ದಿನದ ಫಲಿತಾಂಶಗಳು: ಬಾಲಕರು: 400 ಮೀ. ಮೆಡ್ಲೆ: ಎರಡನೇ ಗುಂಪು: ಪವನ್ ಧನಂಜಯ್ (ಕರ್ನಾಟಕ)–1, ಕಾಲ: 4:57.42, ಕ್ರಿಶ್ ಶಿವಕುಮಾರ್ (ಕರ್ನಾಟಕ)–2, ರಿಷವಂತ್ ಎಂ.ಎಸ್. (ತಮಿಳುನಾಡು)–3. 100 ಮೀ. ಫ್ರೀಸ್ಟೈಲ್: ಮೂರನೇ ಗುಂಪು: ಅಕ್ಷಜ್ ಠಾಕೂರಿಯಾ (ಕರ್ನಾಟಕ)–1, ಕಾಲ: 1:02.77, ಯಜ್ಞ ಸಾಯಿ ಎಂ. (ಆಂಧ್ರಪ್ರದೇಶ)–2, ದೇವಜೀತ್ ದೆಂಕಿ (ಬಂಗಾಳ)–3. 200 ಮೀ. ಬ್ಯಾಕ್‌ಸ್ಟ್ರೋಕ್: ಎರಡನೇ ಗುಂಪು: ಸುಹಾಸ್ ಪ್ರೀತಮ್ (ತೆಲಂಗಾಣ)–1, ಕಾಲ: 2:18.12, ರಿಷಭ್ ದಾಸ್ (ಮಹಾರಾಷ್ಟ್ರ)–2, ಕ್ರಿಶ್ ಜೈನ್ (ಹರಿಯಾಣ)–3. 50 ಮೀ. ಫ್ರೀಸ್ಟೈಲ್: ಒಂದನೇ ಗುಂಪು: ವಿಕ್ರಂ ಚಾಂಗ್ಮಯಿ (ಅಸ್ಸಾಂ)–1, ಕಾಲ:25.22, ಹರ್ಷ ಸರೋಹಾ (ಹರಿಯಾಣ)–2, ಸಂಭವ್ ಆರ್. (ಕರ್ನಾಟಕ)–3. ಎರಡನೇ ಗುಂಪು: ಜನಂಜಯ್ ಹಜಾರಿಕಾ (ಅಸ್ಸಾಂ)–1, ಕಾಲ: 26.64, ರಾಬಿನ್ ಸೇನ್ (ದೆಹಲಿ)–2, ಹೀರ್ ಪಿತ್ರೋಡಾ (ಗುಜರಾತ್)–3. ನಾಲ್ಕನೇ ಗುಂಪು: ಆಕಾಶ್ ಚೌಹಾನ್ (ಉತ್ತರ ಪ್ರದೇಶ)–1, ಕಾಲ: 30.57, ಕಾಬಿಲನ್ ಟಿ. (ತಮಿಳುನಾಡು)–2, ಸಮರ್ಥ ಗೌಡ (ಕರ್ನಾಟಕ)–3. ಐದನೇ ಗುಂಪು: ಜಾಸ್ ಸಿಂಗ್ (ಕರ್ನಾಟಕ)–1, ಕಾಲ: 31.90, ಅಜೀತ್ ಯಾದವ್ (ಉತ್ತರ ಪ್ರದೇಶ)–2, ಮೋನಿಶ್ ನಾಯ್ಡು ಪಿ. (ತಮಿಳುನಾಡು)–3. 50 ಮೀ. ಬ್ರೆಸ್ಟ್‌ಸ್ಟ್ರೋಕ್: ಮೂರನೇ ಗುಂಪು: ನಿತೀಶ್ ಎಂ.ಎಸ್. (ತಮಿಳುನಾಡು)–1,ಕಾಲ:35.19, ಆಯುಷ್ ಬೋರಾ (ಅಸ್ಸಾಂ)–2, ಶುಭಂ ಚೌಹಾನ್ (ಉತ್ತರಪ್ರದೇಶ)–3. 100 ಮೀ. ಫ್ರೀಸ್ಟೈಲ್: ಒಂದನೇ ಗುಂಪು:ಸಂಭವ್ ಆರ್. (ಕರ್ನಾಟಕ)–1, ಕಾಲ: 51.39, ವೀರ್ ಖಾತ್ಕರ್ (ಹರಿಯಾಣ)–2, ವೇದಾಂತ್ ಮಾಧವನ್ (ಮಹಾರಾಷ್ಟ್ರ)–3.ಎರಡನೇ ಗುಂಪು: ಪ್ರಾಂಜಲ್ ಪಾಂಡೆ (ಮಧ್ಯಪ್ರದೇಶ)–1 ಕಾಲ: 56.70, ಸುಹಾಸ್ ಪ್ರೀತಂ (ತೆಲಂಗಾಣ)–2, ಹೀರ್ ಪಿತ್ರೋಡಾ (ಗುಜರಾತ್)–3.

ಬಾಲಕಿಯರು: 100 ಮೀ. ಫ್ರೀಸ್ಟೈಲ್: ನಾಲ್ಕನೇ ಗುಂಪು: ಧೀನಿಧಿ ದೇಶಿಂಗು (ಕರ್ನಾಟಕ)–1, ಕಾಲ: 1:01.52 (ಸಬ್‌ಜೂನಿಯರ್ ನೂತನ ದಾಖಲೆ), ತನಿಶಾ ಗುಪ್ತಾ (ಕರ್ನಾಟಕ)–2, ಅದಿತಿ ಹೆಗ್ಡೆ (ಮಹಾರಾಷ್ಟ್ರ)–3 (1:02.77: ಈ ಹಿಂದಿನ ದಾಖಲೆಯನ್ನು 2017ರಲ್ಲಿ ಮಹಾರಾಷ್ಟ್ರದ ವೇದಿಕಾ ಅಮಿನ್ ಸ್ಥಾಪಿಸಿದ್ದರು). 400 ಮೀ. ಮೆಡ್ಲೆ: ಒಂದನೇ ಗುಂಪು: ಶಕ್ತಿ ಬಾಲಕೃಷ್ಣನ್ (ತಮಿಳುನಾಡು)–1, ಕಾಲ: 5:15.69, ಕನ್ಯಾ ನಾಯರ್ (ಮಧ್ಯಪ್ರದೇಶ)–2, ಎ.ಜೆದಿದಾ (ಕರ್ನಾಟಕ)–3. 200 ಮೀ. ಬ್ಯಾಕ್‌ಸ್ಟ್ರೋಕ್: ಎರಡನೇ ಗುಂಪು: ರಿಧಿಮಾ ವೀರೇಂದ್ರಕುಮಾರ್ (ಕರ್ನಾಟಕ)–1, ಕಾಲ: 2:24.26, ಶಾಲಿನಿ ದೀಕ್ಷಿತ್ (ಕರ್ನಾಟಕ)–2, ಶ್ರೀ ನಿತ್ಯಾ ಸಾಗಿ (ತೆಲಂಗಾಣ)–3. 50 ಮೀ. ಫ್ರೀಸ್ಟೈಲ್: ನಾಲ್ಕನೇ ಗುಂಪು: ಜೋಯಾ ಜನ್ನತ್ (ಬಂಗಾಳ)–1, ಕಾಲ:31.61, ತ್ರೀಶಾ ಸಿಂಧು (ಕರ್ನಾಟಕ)–2, ಅಲಿಸಾ ರೆಗೊ (ಕರ್ನಾಟಕ)–3. ಐದನೇ ಗುಂಪು: ಲಾಸ್ಯ ಶ್ರೀ ಕೆ. (ಆಂಧ್ರಪ್ರದೇಶ)–1, ಕಾಲ: 33.52, ಆಡ್ರಿಜಾ ಚೇಟಿಯಾ (ಅಸ್ಸಾಂ)–2, ಶ್ರೇಯಾ ಬಿನಿ (ಕೇರಳ)–3. 50 ಮೀ. ಬಟರ್‌ಫ್ಲೈ: ಒಂದನೇ ಗುಂಪು: ನೀನಾ ವೆಂಕಟೇಶ್ (ಕರ್ನಾಟಕ)–1, ಕಾಲ: 28.51 (ಜೂನಿಯರ್ ನೂತನ ದಾಖಲೆ), ಆಸ್ಥಾ ಚೌಧರಿ (ಅಸ್ಸಾಂ)–2, ನಿಲಬ್ಜಾ ಘೋಷ್ (ಬಂಗಾಳ)–3. (28.93; ಈ ಹಿಂದಿನ ದಾಖಲೆಯನ್ನು ನೀನಾ ವೆಂಕಟೇಶ್ ಇದೇ ಚಾಂಪಿಯನ್‌ಷಿಪ್‌ನ ಹೀಟ್ಸ್‌ನಲ್ಲಿ ದಾಖಲಿಸಿದ್ದರು). ಗುಂಪು 2: ರಿಷಿಕಾ ಮಂಗಳೆ (ಕರ್ನಾಟಕ)–1, ಕಾಲ: 29.55, ಮಾನವಿ ವರ್ಮಾ (ಕರ್ನಾಟಕ)–1, ಅರ್ಷಪ್ರೀತ್ ಕೌರ್ (ಪಂಜಾಬ್)–3. 50 ಮೀ. ಬ್ರೆಸ್ಟ್‌ಸ್ಟ್ರೋಕ್: ಗುಂಪು 4: ಔರೇಲಿಯಾ ದಿಯಾಸ್ (ಕರ್ನಾಟಕ)–1, ಕಾಲ: 39.35, ಅನನ್ಯಾ ಚಕ್ರವರ್ತಿ (ಕರ್ನಾಟಕ)–2, ಅಹವ್ಯೆ ಗಾಂಧಿ (ಮಹಾರಾಷ್ಟ್ರ)–3. 100 ಮೀ. ಫ್ರೀಸ್ಟೈಲ್: ಗುಂಪು 2: ರಿಧಿಮಾ ವೀರೇಂದ್ರ ಕುಮಾರ್ (ಕರ್ನಾಟಕ)–1, ಕಾಲ: 1:00.80, ಜಾಹ್ನವಿ ಕಶ್ಯಪ್ (ಅಸ್ಸಾಂ)–2, ಕ್ಷಮಾ ಅಯ್ಯರ್ (ಮಹಾರಾಷ್ಟ್ರ)–3. ಒಂದನೇ ಗುಂಪು: ಜಾಹ್ನವಿ ಚೌಧರಿ (ಬಂಗಾಳ)–1, ಕಾಲ: 59.16, ನೀನಾ ವೆಂಕಟೇಶ್ (ಕರ್ನಾಟಕ)–2, ಅನ್ಯಾ ವಾಲಾ (ಮಹಾರಾಷ್ಟ್ರ)–3.

ಅಥ್ಲೀಟ್ ಗುಂಡಿಗೆ ಬಲಿ

ಕ್ವಿಟೊ (ಎಎಫ್‌ಪಿ): ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದಿದ್ದ ಇಕ್ವಡೋರ್‌ನ ಅಥ್ಲೀಟ್ ಅಲೆಕ್ಸ್ ಕ್ವಿನೊನೆಜ್ ಶಂಕಾಸ್ಪದ ರೀತಿಯಲ್ಲಿ ಸಾವಿಗೀಡಾಗಿದ್ದಾರೆ ಎಂದು ಕ್ರೀಡಾ ಸಚಿವಾಲಯ ಶನಿವಾರ ತಿಳಿಸಿದೆ.

32 ವರ್ಷದ ಕ್ವಿನೊನೆಜ್ ಅವರ ಮೃತದೇಹ ಬಂದರು ನಗರವಾದ ಗುಯಾಕ್ವಿಲ್‌ನಲ್ಲಿ ಪತ್ತೆಯಾಗಿದೆ ಎಂದು ವಿವರಿಸಲಾಗಿದೆ.

ತಮ್ಮ ವಾಸದ ವಿವರ ನೀಡದ ಕಾರಣ ಕ್ವಿನೊನೆಜ್ ಅವರಿಗೆ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳಲು ಅವಕಾಶ ನಿರಾಕರಿಸಲಾಗಿತ್ತು.

ಅಮೃತ ಕ್ರೀಡಾ ದತ್ತು: 75 ಮಂದಿ ಅಥ್ಲೀಟ್‌ಗಳ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ಯಾರಿಸ್ ಒಲಂಪಿಕ್ಸ್‌ಗೆ ರಾಜ್ಯದ ಕ್ರೀಡಾಪಟುಗಳನ್ನು ಸಜ್ಜುಗೊಳಿಸಲು ‘ಅಮೃತ ಕ್ರೀಡಾ ದತ್ತು ಯೋಜನೆ’ ಅಡಿಯಲ್ಲಿ ತರಬೇತಿ ನೀಡುವುದಕ್ಕಾಗಿ ಗಾಲ್ಫ್ ಪಟು ಅದಿತಿ ಅಶೋಕ್, ಈಕ್ವೆಸ್ಟ್ರಿಯನ್ ಕ್ರೀಡಾಪಟು ಫವಾದ್ ಮಿರ್ಜಾ, ಈಜುಪಟು ಶ್ರೀಹರಿ ನಟರಾಜ್ ಸೇರಿದಂತೆ 75 ಮಂದಿಯನ್ನು ಆಯ್ಕೆ ಮಾಡಲಾಗಿದೆ.

ಪ್ಯಾರಾ ಪವರ್ ಲಿಫ್ಟರ್ ಶಕೀನಾ ಖಾತೂನ್, ಬ್ಯಾಡ್ಮಿಂಟನ್ ಆಟಗಾರ್ತಿ ಅಶ್ವಿನಿ ಪೊನ್ನಪ್ಪ, ಅಥ್ಲೀಟ್ ಎಂ.ಆರ್. ಪೂವಮ್ಮ, ಪ್ಯಾರಾ ಈಜುಪಟು ನಿರಂಜನ್ ಮುಕುಂದನ್, ಹಾಕಿ ಆಟಗಾರ ಸುನೀಲ್ ಕೂಡ ಪಟ್ಟಿಯಲ್ಲಿದ್ದಾರೆ. ಈ ಪಟ್ಟಿಯಲ್ಲಿ ಆರು ಮಂದಿ ಅಂಗವಿಕಲ ಕ್ರೀಡಾಪಟುಗಳಿಗೆ ಅವಕಾಶ ನೀಡಲಾಗಿದೆ. 20 ಕ್ರೀಡಾಪಟುಗಳ ಕಾಯ್ದಿರಿಸಿದ ಪಟ್ಟಿಯನ್ನೂ ಪ್ರಕಟಿಸಲಾಗಿದೆ.



ಅದಿತಿ ಅಶೋಕ್

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಪ್ರಯುಕ್ತ ‘ಅಮೃತ ಕ್ರೀಡಾ ದತ್ತು ಯೋಜನೆ’ ಜಾರಿಗೊಳಿಸಲಾಗಿದೆ. ಕ್ರೀಡೆ ಮತ್ತು ಯುವ ಸಬಲೀಕರಣ ಸಚಿವ ಕೆ.ಸಿ. ನಾರಾಯಣ ಗೌಡ ಅಧ್ಯಕ್ಷತೆಯಲ್ಲಿ ಸೆಪ್ಟೆಂಬರ್ 28ರಂದು ನಡೆದ ಉನ್ನತ ಮಟ್ಟದ ಸಭೆಯಲ್ಲಿ ತರಬೇತಿಗಾಗಿ ಕ್ರೀಡಾಪಟುಗಳನ್ನು ಆಯ್ಕೆ ಮಾಡಲಾಗಿತ್ತು. ಶುಕ್ರವಾರ ಈ ಸಂಬಂಧ ಆದೇಶ ಹೊರಡಿಸಲಾಗಿದೆ.

ಒಬ್ಬ ಗಾಲ್ಫ್ ಪಟು, ಐವರು ಈಜು ಪಟುಗಳು, 12 ಮಂದಿ ಅಥ್ಲೀಟ್‌ಗಳು, ಎಂಟು ಮಂದಿ ಸೈಕ್ಲಿಸ್ಟ್‌ಗಳು, ಏಳು ಮಂದಿ ಬ್ಯಾಸ್ಕೆಟ್ ಬಾಲ್ ಪಟುಗಳು, ನಾಲ್ವರು ಕುಸ್ತಿ ಪಟುಗಳು, ಒಂಬತ್ತು ಮಂದಿ ಬ್ಯಾಡ್ಮಿಂಟನ್ ಪಟುಗಳು, ಐವರು ಹಾಕಿ ಪಟುಗಳು ಪಟ್ಟಿಯಲ್ಲಿದ್ದಾರೆ.

‘ತರಬೇತಿಗೆ ಆಯ್ಕೆಯಾದವರಿಗೆ ವಾರ್ಷಿಕ ₹ 5 ಲಕ್ಷ ನೆರವು ನೀಡಲಾಗುವುದು. ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ ಖಾಸಗಿ ಕಂಪನಿಗಳಿಂದ ನೆರವು ದೊರಕಿಸುವ ಪ್ರಯತ್ನವನ್ನೂ ಮಾಡಲಾಗುತ್ತಿದೆ. 150 ಕಂಪನಿಗಳಿಗೆ ಪತ್ರ ಬರೆದಿದ್ದು, 50 ಕಂಪನಿಗಳು ಸಕಾರಾತ್ಮಕವಾಗಿ ಸ್ಪಂದಿಸಿವೆ’ ಎಂದು ನಾರಾಯಣ ಗೌಡ ತಿಳಿಸಿದ್ದಾರೆ.

ಟೆನಿಸ್: ನಿಕ್ಷೇಪ್ ಜೋಡಿಗೆ ಸೋಲು

ಬೆಂಗಳೂರು: ಭಾರತದ ಬಿ.ಆರ್. ನಿಕ್ಷೇಪ್ ಹಾಗೂ ಶಹಬಾಜ್ ಖಾನ್ ಜೋಡಿಯು ಕತಾರ್‌ನ ದೋಹಾದಲ್ಲಿ ನಡೆದ ಐಟಿಎಫ್ ಎಂ15 ಟೆನಿಸ್ ಟೂರ್ನಿಯಲ್ಲಿ ಸೋಲು ಅನುಭವಿಸಿದರು.

ಡಬಲ್ಸ್ ವಿಭಾಗದಲ್ಲಿ ಸ್ಪರ್ಧಿಸಿದ್ದ ಈ ಜೋಡಿಯು ಶುಕ್ರವಾರ ರಾತ್ರಿ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 3-6,0-6ರಿಂದ ಚೀನಾದ ಹ್ಯಾನ್‌ವೆನ್ ಲೀ ಹಾಗೂ ಮು ತಾವೊ ಎದುರು ಎಡವಿತು.